ಸಮಕಾಲೀನ ಬದುಕಿನ ಸಂವಾದಕ್ಕಾಗಿ

ಶೂದ್ರ

ಸಂಪಾದಕ : ಶೂದ್ರ ಶ್ರೀನಿವಾಸ್



ಎಂ.ಎಫ್. ಹುಸೇನ್ ಇಪ್ಪತ್ತನೆಯ ಶತಮಾನದ ಬಹು ದೊಡ್ಡ ಕೊಡುಗೆ.
ಬದುಕಿನ ಮತ್ತು ಪರಂಪರೆಯ ಸೂಕ್ಷ್ಮ ಸಂವೇದನೆಗಳನ್ನು ಎಷ್ಟೊಂದು ವಿಧದಲ್ಲಿ
ತಮ್ಮ ಕಲೆಯ ಕ್ಯಾನ್‌ವಾಸ್‌ನಲ್ಲಿ ವಿಸ್ತರಿಸುತ್ತ ಹೋದರು. ಎರಡು ದಶಕಗಳ
ಹಿಂದೆ ಬೆಂಗಳೂರಿನಲ್ಲಿ ನಡೆದ 'ಕಲಾಮೇಳ'ದಲ್ಲಿ ತುಂಬ ಲವಲವಿಕೆಯಿಂದ
ಭಾಗವಹಿಸಿದ್ದರು. ಇಂಥ ಮಹಾನ್ ಕಲಾವಿದ ಕೆಲವು ತಿಂಗಳ ಹಿಂದೆ
ನಿಧನರಾದರು. ಅವರಿಗೆ ಶೂದ್ರ ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

– ಸಂ.

ಸಂಪಾದಕ :

ಶೂದ್ರ ಶ್ರೀನಿವಾಸ್

ಸಹಾಯಕ ಸಂಪಾದಕರು :

ಕೆ.ಎನ್. ಅರುಣ

ಎಸ್. ಪ್ರೀತಿ

ಹುಳಮಾವು ಲೋಕೇಶ್

ಪಾನ್ಯಂ ನಟರಾಜ್

ಬಿ.ವೈ. ಲಲಿತಾಂಬ

ಆರ್. ಬಾಬು, ಬಾಣಸವಾಡಿ

ಜೇನುಗೂಡು ಮಹೇಶ್

ಆದೂರು ಪ್ರಕಾಶ್

ಮುಖಪುಟದ ಚಿತ್ರ :
ರೋಂ ನಗರದ ವೈಭವದ
ಪಳೆಯುಳಿಕೆ

ಸಮಕಾಲೀನ ಬದುಕಿನ ಸಂವಾದಕ್ಕೆ

ಶೂದ್ರ

"ಹೇಗೆ ಕಳೆಯಲಿ, ಎಲ್ಲರೆದುರೇ ಸ್ವಂತಿಕೆಯ ನಾನು? ಕಬ್ಬಿಣದ ಕಡಲೆಯನು"
ಕುದಿಸಬಹುದೆ ಒಳ-ಒಲೆಯೊಳುರಿಯುತ್ತಿರುವ ಬೆಂಕಿ ಕಾವು?
ಬಂದ ಅಭ್ಯಾಗತರ ಬರಿಗೈಯಿಂದ ಕಳಸಲಾರೆ, ಪ್ರತಿಭೆಯ ಪಾತಿವ್ರತ್ಯವನು
ಪರೀಕ್ಷಿಸಲೆಂದೇ ಕಾದಿರಬಹುದು ಕಮಂಡಲದ ಜಲವು"

– ಆನಂದ ಝುಂಜರವಾಡ

ಸಂಪುಟ – 39
ಅಕ್ಟೋಬರ್ – ಡಿಸೆಂಬರ್ 2011

ಶೂದ್ರ ಶ್ರೀನಿವಾಸ್
'ಕಾವಿಮನೆ', ಮಾನಸ ವಿದ್ಯಾಕೇಂದ್ರ
ಜೆ.ಪಿ.ನಗರ 6ನೇ ಹಂತ, ಬೆಂಗಳೂರು – 78.
ದೂರವಾಣಿ : 22451762
ಇ-ಮೇಲ್ : **shudrasrinivas@gmail.com**

ಅಕ್ಷರ ಜೋಡಣೆ : ಶ್ರೀ ಸ್ವರ ಗ್ರಾಫಿಕ್ಸ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು-76.
ದೂರವಾಣಿ : 41215662

ಮುದ್ರಕರು : ಜಿ.ಕೆ. ಆಫ್‌ಸೆಟ್ ಪ್ರಿಂಟಿಂಗ್ ಪ್ರೆಸ್
ಆಡುಗೋಡಿ, ಬೆಂಗಳೂರು-560030.
ದೂರವಾಣಿ : 22239872

ಈ ಶೂದ್ರ ಎಂಬ ಗೂಡಿನಲ್ಲಿ ಒಂದಷ್ಟು ಚಿಲಿಪಿಲಿ.....

ಕೃಪೆ : ಕೆ.ಎಸ್. ರಾಜಾರಾಂ

ಚಿಲಿಪಿಲಿಗುಡಬೇಕಾದ ಈ ಸಂಚಿಕೆ ಕಳೆದ ಜುಲೈ ಮೊದಲ ವಾರದಲ್ಲಿ ಬರಬೇಕಾಗಿತ್ತು. ಜೂನ್‌ನಲ್ಲಿ ಒಂದಷ್ಟು ದಿವಸ ಯುರೋಪ್‌ನ ಕೆಲವು ದೇಶಗಳನ್ನು ಸುತ್ತಿಕೊಂಡು ಬಂದೆ. ಸುಮಾರು ಒಂಬತ್ತು ಸಾವಿರ ಕಿ.ಮೀಟರ್ ಅರಮನೆ ರೀತಿಯ ತಾಜ್ ಕೋಚ್‌ನಲ್ಲಿ ಎಷ್ಟು ಆರಾಮವಾಗಿ ಸುತ್ತಾಡಿದೆ. ಒಟ್ಟು ಪ್ರಯಾಣ ಎಷ್ಟು ಆಪ್ಯಾಯಮಾನವಾಗಿತ್ತು. ಆ ಗುಂಗಿನಲ್ಲಿಯೇ ಇನ್ನೂ ತೇಲಾಡುತ್ತಿರುವಾಗ; ಒಂದು ಬೆಳಿಗ್ಗೆ ವಾಕ್ ಹೋಗಿ ಬಂದು ಮನೆಯಲ್ಲಿ ಜಾರಿ ಬಿದ್ದೆ. ನಡುವಿನ ಬಳಿ ಕೂದಲೆಳೆಯಷ್ಟು ಫ್ರ್ಯಾಕ್ಚರ್ ಆಯಿತು. ಸುಮ್ಮನೆ ಕಸಕಡ್ಡಿ ಓದುತ್ತ ಏನೇನೋ ಸಂಗೀತ ಕೇಳುತ್ತ ಕೊಠಡಿಯ ರೂಫನ್ನ ನೋಡುತ್ತ ಬದುಕಿನ ಏರುಪೇರುಗಳಿಗೆ ಒಂದಷ್ಟು ಅಂಕಗಳನ್ನು ಕೊಡುವುದರಲ್ಲಿ ಎಂತೆಂಥದೋ ಮನಸ್ಥಿತಿ ಬಂದು ಹೋಗಿತ್ತು. ಇಂಥ ಸಮಯದಲ್ಲಿ ಕೂತು ನಾಲ್ಕು ವಾಕ್ಯವೂ ಬರೆಯಲು ಸಾಧ್ಯವಾಗದಿದ್ದಾಗ ಪ್ರೊ. ಸಿ.ಎನ್.ಆರ್. ಅವರ ಸಲಹೆಯ ಮೇರೆಗೆ ಎದೆಯ ಮೇಲೆ ನೋಟ್ ಬುಕ್ ಇಟ್ಟುಕೊಂಡು ಒಂದಷ್ಟು ಗಜಲ್ ಬರೆಯಲು ಸಾಧ್ಯವಾಯಿತು. ಮೋನಾಲಿಸಳನ್ನು ಕುರಿತು ಒಂದು ಕವನ ರಚಿಸಲು ಸಾಧ್ಯವಾಯಿತು. ಹಾಗೆ ನೋಡಿದರೆ ಈ ಬಾರಿ 'ಕನಸಿಗೊಂದು ಕಣ್ಣು' ಅಂಕಣಕ್ಕೆ ಪುಣೆಯ ರಾಜಾ ದಿನಕರ್ ಕೇಲ್ಕರ್ ಮ್ಯೂಸಿಯಂನ ವೈಭವವನ್ನು ಕುರಿತು ಬರೆಯಲು ಟಿಪ್ಪಣಿ ಮಾಡಿಕೊಂಡಿದ್ದೆ. ಇದರ ಜೊತೆಗೆ ಮುಂಬಯಿಯನ್ನು ಕುರಿತು ಬರೆಯಬೇಕೆಂದು ಟಿಪ್ಪಣಿ ಮಾಡಿಕೊಂಡಿದ್ದೆ. ನನ್ನ ಮನಸ್ಸಿನ ನಾಯಕ ಆಟಗಾರ ಸಚಿನ್ ಅವರ ಮನೆಯನ್ನು ಹುಡುಕಿಕೊಂಡು ಹೋದೆ. ನನ್ನ ಮೊಮ್ಮಗ ದೀಪಾಂಕುರ್ ಸಚಿನ್ ಮನೆಯನ್ನು ನೋಡಲೇಬೇಕೆಂದು ಹಠ ಹಿಡಿದಿದ್ದ. ಮನೆ ಹುಡುಕುವಾಗ ದೊಡ್ಡವರು ಸರಿಯಾಗಿ ವಿಳಾಸ ಹೇಳದಿದ್ದಾಗ ಇಬ್ಬರು ಪಿಳ್ಳೆ ಹುಡುಗರು ಸೈಕಲ್ ತುಳಿಯುತ್ತಿದ್ದರು "ಬನ್ನಿ ತೋರಿಸ್ತೀವಿ" ಎಂದು ಗುಬ್ಬಚ್ಚಿಗಳ ರೀತಿಯಲ್ಲಿ ಸೈಕಲ್ ಮೇಲೆ ಹಾರಾಡುತ್ತ ಎರಡು ಕಿ.ಮೀ. ದೂರದ ಮನೆಯನ್ನು ತೋರಿಸಿ ಪುನೀತರಾದವರಂತೆ

ನಿಂತರು. ಅವರನ್ನು ಅಪ್ಪಿಕೊಂಡು ಸಚಿನ್ ಮನೆಯ ಮುಂದೆ ನಿಂತು ಫೋಟೋ ತೆಗೆಸಿಕೊಂಡಿದ್ದೆವು. ಆದರೆ ಇವೆರಡರ ಬಗ್ಗೆ ಯಾವುದನ್ನು ಕುರಿತು ಬರೆಯುವುದು ಎಂದು ಯೋಚಿಸುತ್ತಿರುವಾಗ ನನ್ನ ಅಭಿಮಾನದ ಕವಿ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ; ಒಂದು ವಾರದ ನಂತರ ಕಂಬಾರರನ್ನು ಕುರಿತು ಏಳೆಂಟು ಪುಟ ನೆನಪುಗಳನ್ನು ದಾಖಲಿಸುವ ಮನಸ್ಸಾಯಿತು. ಆದರೆ ಎದೆಯ ಮೇಲೆ ನೋಟ್ ಬುಕ್ ಇಟ್ಟುಕೊಂಡು ಬರೆಯಲು ಕಂಬಾರರ ಬಗ್ಗೆ ಅಕ್ಷರಗಳು ಆಕಾರ ಪಡೆಯಲು ಒದ್ದಾಡತೊಡಗಿದವು. ನಿಂತಲ್ಲಿ ಕೂತಲ್ಲಿ ಅವರೇ ಆವರಿಸಿಕೊಂಡುಬಿಟ್ಟಿದ್ದರು. ಇದರ ಜೊತೆಗೆ ಮತ್ತೊಮ್ಮೆ ಒಂದಷ್ಟು ಅವರ ಸಾಹಿತ್ಯವನ್ನು ಓದುವಾಗ 'ಈ ಶಿವಾಪುರ ಎಲ್ಲಿದೆ?' ಎಂದು ಹುಡುಕಾಡುತ್ತಿರುವ ಕಂಬಾರರನ್ನು 'ಹೇಳತೇನ ಕೇಳ' ಎಂಬಲ್ಲಿಗೆ ನಿಲ್ಲಿಸಿ ಒಂದಷ್ಟು ಬರೆಯಬೇಕಾಯಿತು. ಅದು ಎಂಟು ಪುಟಗಳಿಂದ ಹದಿನಾರು ಪುಟಗಳನ್ನು ಮೀರಿ ಬೆಳೆಯಿತು. ಆದರೆ ಇನ್ನು ನನ್ನ ಖುಷಿಗಾಗಿ ಒಂದಷ್ಟು ಬರೆಯಬೇಕಾಗಿತ್ತು ಎಂಬ ಅತೃಪ್ತಿ ಕಾಡತೊಡಗಿತು. ಈ ಬದುಕಿಗೆ ತೀವ್ರವಾಗಿ ಹತ್ತಿರ ಎಳೆದುಕೊಂಡ ಲಂಕೇಶ್, ಅನಂತಮೂರ್ತಿ, ಕಂಬಾರ, ಕಿ.ರಂ., ಡಿ.ಆರ್. ನಾಗರಾಜ್ ಹಾಗೂ ಜಿ.ಎಸ್. ಶಿವರುದ್ರಪ್ಪ ಅಂಥವರ ಬಗ್ಗೆ ಬರೆಯುವ ತುಡಿತ ಏನೋ ಒಂದು ರೀತಿಯ ಖುಷಿ ಕೊಡುತ್ತದೆ. ಆ ಖುಷಿ ನಾಲ್ಕು ದಶಕಗಳ ಮೇಲಿನ ಕಾಲಘಟ್ಟದಲ್ಲಿ ಸುತ್ತಾಡಿಸಿ ಸ್ಮರಣೀಯ ಕೊಲ್ಯಾಜ್‌ಗಳನ್ನು ಸೃಷ್ಟಿಸಿಹೋಗಿರುತ್ತದೆ.

ಇರಲಿ, ಈ ಸಂಚಿಕೆಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಯು.ಆರ್. ಅನಂತಮೂರ್ತಿಯವರನ್ನು ಕುರಿತು ಒಂದು ಕೃತಿ ಸಿದ್ಧಪಡಿಸಿಕೊಟ್ಟೆ. ಅದರ ಮೊದಲನೆಯ ಭಾಗ 'ಒಂದು ಆಪ್ತ ಓದು' ಎಂಬ ಅಧ್ಯಾಯವನ್ನು ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಹೆಚ್. ಕೃಷ್ಣಯ್ಯ ಅವರು ಶೂದ್ರದಲ್ಲಿ ಪ್ರಕಟಿಸಲು ತಿಳಿಸಿದರು. ಹಾಗೆಯೇ ಕೆಲವು ಸ್ನೇಹಿತರು. ಈ ಸಂಚಿಕೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸುವ ಇಂಡಿಯನ್ ಲಿಟರೇಚರ್ ಎಂಬ ನಿಯತಕಾಲಿಕದಿಂದ 'ಇಂದಿರಾ ಗೋಸ್ವಾಮಿ'ಯವರ ಸಂದರ್ಶನವನ್ನು ಅನುವಾದಿಸಿ ಪ್ರಕಟಿಸುತ್ತಿರುವೆ. ಇದನ್ನು ಅನುವಾದಿಸಿ ವ್ಯವಸ್ಥೆ ಮಾಡಿದವರು ಪ್ರೊ.ಬಿ.ವೈ. ಲಲಿತಾಂಬ ಅವರು. ಇಂದಿರಾ ಗೋಸ್ವಾಮಿಯವರು ಒಬ್ಬ ಅಪ್ರತಿಮ ಲೇಖಕಿ. ಆದ್ದರಿಂದ ಅವರ ಸಂದರ್ಶನಕ್ಕೂ ಇಲ್ಲಿ ಹೆಚ್ಚಿನ ವ್ಯಾಪ್ತಿ ಇದೆ. ಇಂದಿರಾ ಗೋಸ್ವಾಮಿಯವರ ಶ್ರದ್ಧಾಂಜಲಿಯ ನೆಪದಲ್ಲಿ ಈ ಸಂದರ್ಶನವನ್ನು ಪ್ರಕಟಿಸುತ್ತಿದ್ದೇವೆ. 'ಸ್ಕ್ರೂ ಡ್ರೈವರ್' ಎಂಬ ಅನುವಾದಿತ ಉತ್ತಮ ಕತೆ ಇದೆ. ಇದನ್ನು ಡಾ॥ ಮೀರಾ ಮೂರ್ತಿಯವರು ಅನುವಾದಿಸಿಕೊಟ್ಟಿದ್ದಾರೆ. ಆರ್. ಚಲಪತಿಯವರ ಲೇಖನವಿದೆ. ಇದರ ಜೊತೆಗೆ ಡಿ.ಸಿ. ಗೀತಾ, ಎಸ್.ಪಿ. ಪದ್ಮಿನಿ ಮತ್ತು ಮಹಾಬಲೇಶ್ವರ ಕಾಟ್ರಹಳ್ಳಿ, ಜಯಶ್ರೀ ಕಂಬಾರ ಅವರ ಮಾರ್ಮಿಕ ಕವನಗಳಿವೆ. ಇದರ ಜೊತೆಗೆ ಪ್ರೊ.ಬಿ.ವೈ. ಲಲಿತಾಂಬ ಅವರು ಅಸ್ಸಾಮಿ 'ಬರಗೀತ್' ಕುರಿತು ಬರೆದುಕೊಟ್ಟಿದ್ದಾರೆ. ಯೂರೋಪ್ ಪ್ರವಾಸ ಸಂದರ್ಭದಲ್ಲಿ ಸ್ವಿಟ್ಜರ್ಲೆಂಡ್‌ನಲ್ಲಿ ಲುಗಾನೋ ಸರೋವರದ ಬಳಿ ಪರಿಚಯವಾದ ಡೋರಿಸ್ ಮತ್ತು ಪ್ಯಾರಿಸ್‌ನ ಲ್ಯಾವರೆ ಜಗತ್ಪ್ರಸಿದ್ಧ ಮ್ಯೂಸಿಯಂನಲ್ಲಿ ಮೊಯೆರಾ ಸೆಬಾ ಪರಿಚಯವಾದರು. ಅವರನ್ನು ಕುರಿತು ಎರಡು ಟಿಪ್ಪಣಿಗಳನ್ನು ದಾಖಲಿಸಿರುವೆ. ಈ ಬಾರಿ 'ಈಗ ಕಂಡ ಪುಸ್ತಕಗಳು' ಪರಿಚಯವಿಲ್ಲ. ಹಾಗೆಯೇ ಬೆಂಗಳೂರಿನ ದಿನಚರಿಗೆ ತುಂಬ ಪುಟಗಳನ್ನು ಮೀಸಲಿಟ್ಟಿದ್ದೆ. ಆದರೆ ಅವೆಲ್ಲ ನಾನು ನಾಲ್ಕೈದು ತಿಂಗಳು ಸುಮ್ಮನೆ ಮಲಗಿದ್ದರಿಂದ ಮಸುಕಾಗಿವೆ. ಈ ಸಂಚಿಕೆಯಲ್ಲಿ ನನಗೆ ತುಂಬ ಪ್ರಿಯವಾದ ನಗರ ವೆನಿಸ್ ಮತ್ತು ಲಂಡನ್‌ನ ಹೈಡ್ ಪಾರ್ಕ್ ಹಾಗೂ ಪೊಯೆಟ್ಸ್ ಕಾರ್ನರ್ ಕುರಿತು ಬರೆಯಬೇಕೆನಿಸಿತ್ತು. ಇದಕ್ಕಿಂತ ಮಿಗಿಲಾಗಿ ನಮ್ಮ ಪ್ರಯಾಣದ ತಾಜ್ ಕೋಚ್‌ನ ಡ್ರೈವರ್ ಗ್ರೀಕ್ ದೇಶದ 'ಸಾವೋ' ಕುರಿತು ದಾಖಲಿಸುವ ಆಸೆಯಿತ್ತು. ಆತ ನಮ್ಮ ಪ್ರಯಾಣದ ಚಕ್ರವರ್ತಿಯಾಗಿದ್ದ.

– ಶೂದ್ರ ಶ್ರೀನಿವಾಸ್

10–12–2011

ಈ ಸಂಚಿಕೆಯ ಗೂಡಿನಲ್ಲಿ

ಕೃಪೆ : ಪಲಾಝ್ಝೊ ದಿ ಬ್ರೆರ ಕೋರ್ಟ್ ಯಾರ್ಡ್‌ನ ಒಂದು ಅದ್ಭುತ ನೋಟ
ಮತ್ತು ನೆಪೋಲಿಯನ್‌ನ ಕಂಚಿನ ಪ್ರತಿಮೆ
ಕಲಾವಿದ : ಕನೋವ, ಇಟಲಿಯ ಮಿಲಾನ್ ನಗರ

ಇಂದಿರಾ ಗೋಸ್ವಾಮಿ ..... – ಸುಭಜಿತ್ ಭದ್ರ 6

ಯು.ಆರ್.ಅನಂತಮೂರ್ತಿ.... – ಶೂದ್ರ ಶ್ರೀನಿವಾಸ್ 21

ಬೆತ್ತಲು ಮತ್ತು ಬಯಲು – ಗೀತಾ ಡಿ.ಸಿ. 40

ನೀಲಾಂಜನೆಯರು – ಡಾ॥ ಎಸ್.ಪಿ. ಪದ್ಮಿನಿ ನಾಗರಾಜ್ 42

ಸ್ಕ್ರೂ ಡ್ರೈವರ್ – ರೆಜಿನಾಲ್ಡ್ ರೆನಾಲ್ಡ್ 44

ನನ್ನಲ್ಲಿಯ ಕವಿ, ನವ ದ್ರಷ್ಟಾರ – ಮಹಾಬಲೇಶ್ವರ ಕಾಟ್ರಹಳ್ಳಿ 50

ಭೂತ ಚೇಷ್ಟೆ – ಕ.ನಂ. ನಾಗರಾಜ್ 54

ಮತ್ತೊಂದು ವರ್ಷ – ಜಯಶ್ರೀ ಸಿ. ಕಂಬಾರ 63

ಜೀವ ಝುಲ್ಲರಿಯ ಕಥನ – ಆರ್.ಜಿ. ಹಳ್ಳಿ ನಾಗರಾಜ 65

ಅಸ್ಸಾಮ್ ಬರಗೀತ್ – ಪ್ರೊ. ಬಿ.ವೈ. ಲಲಿತಾಂಬ 67

ಸಾಹಿತ್ಯ ಮತ್ತು ಚರಿತ್ರೆಯ ನಂಟುಗಳು... – ಆರ್. ಚಲಪತಿ 72

ಎರಡು ವಿದೇಶಿ ವ್ಯಕ್ತಿಚಿತ್ರಗಳು – ಶೂದ್ರ ಶ್ರೀನಿವಾಸ್ 81

ಕನಸಿಗೊಂದು ಕಣ್ಣು – ಶೂದ್ರ ಶ್ರೀನಿವಾಸ್ 87

ಇಂದಿರಾ ಗೋಸ್ವಾಮಿಯವರೊಂದಿಗೆ ಒಂದು ಮಾತುಕತೆ

ಸಂದರ್ಶನ : ಸುಭಜಿತ್ ಭದ್ರ

ಕಥಾ ಸಾಹಿತ್ಯವನ್ನು ರಚಿಸಿ ಅಸ್ಸಾಂನ ಭೂಗೋಳವನ್ನೇ ವಿಸ್ತರಿಸಿದ ಅಪೂರ್ವ ಕಾದಂಬರಿಗಾರ್ತಿ, ಕತೆಗಾರ್ತಿ ಅಂದರೆ ಇಂದಿರಾ ಗೋಸ್ವಾಮಿಯವರು, ಆಕೆಯ ಲೇಖನಿ ಅತಿ ಸ್ವಂತದ್ದು, ಅಂತೆಯೇ ಓದುಗನಿಗೆ ಹುರುಪನ್ನು ನೀಡುವಂತಹದು, ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲೂ ಶಾಂತಿಗಾಗಿ ನಿರಂತರ ಹೊಡೆದಾಡುವ ಆಕೆ, ವೈಚಾರಿಕವಾಗಿ, ಕ್ರಿಯಾತ್ಮಕವಾಗಿ

ಅನು : ಪ್ರೊ॥ ಬಿ.ವೈ.ಲಲಿತಾಂಬ, 1304, 1ನೇ 'ಸಿ' ಮುಖ್ಯರಸ್ತೆ, ಎರಡನೆ ಹಂತ, 9ನೇ ವಿಭಾಗ, ನಾಗರಬಾವಿ ಬೆಂಗಳೂರು-72

ಸಮಾಜ ಸೇವೆಗಾಗಿ ಮುಡಿಪಾದ ವ್ಯಕ್ತಿತ್ವ. ಆಕೆ ಮುವತ್ತು ವರ್ಷಗಳಿಗಿಂತ ಹೆಚ್ಚು ಕಾಲ ದೆಹಲಿ ವಿಶ್ವವಿದ್ಯಾಲಯದ ಭಾರತೀಯ ಭಾಷಾ ವಿಭಾಗದಲ್ಲಿ ಅತ್ಯುತ್ತಮ ಹಾಗೂ ಸಫಲ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿದವರು. ಅವರ ಪ್ರದೇಶದಲ್ಲಿ ಆಕೆ ಮಾಮೋನಿರೈಸಂ ಗೋಸ್ವಾಮಿ ಎಂದೇ ಕರೆಸಿಕೊಂಡವರು. ಸಾಹಿತ್ಯ ಸಂಸ್ಕೃತಿಯ ಪರಿಸರದಲ್ಲಿ ಆಕೆಯನ್ನು ಮೆಚ್ಚಿಕೊಂಡವರೆಲ್ಲ ಬೈದೀ (ಬಡೀ ದೀದೀ ಎಂದರ್ಥ) ಎಂದೇ ಆತ್ಮೀಯವಾಗಿ ಕರೆಯುವುದು.

ರಾಷ್ಟ್ರದ ಅತಿ ಶ್ರೇಷ್ಠವೆಂದು ಪರಿಗಣಿಸಲಾಗಿರುವ ಸನ್ಮಾನ ಪುರಸ್ಕಾರಗಳೆಲ್ಲವೂ ಆಕೆಗೆ ಬಳುವಳಿಯಾಗಿ ಸಿಕ್ಕಿವೆ ಅಂದರೂ ತಪ್ಪೆನಿಸುವುದಿಲ್ಲ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಭಾರತೀಯ ಜ್ಞಾನಪೀಠ ಪುರಸ್ಕಾರ ಹಾಗೂ ಇತ್ತೀಚೆಗೆ ನೆದರ್‌ಲೆಂಡ್ಸ್‌ನ ಸರಕಾರ ತಮ್ಮ ದೇಶದ ಒಂದು ಶ್ರೇಷ್ಠ ಸನ್ಮಾನ ಪ್ರಿನ್ಸ್ ಕ್ಲಾಸ್ ಫೌಂಡೇಶನ್ ಅವಾರ್ಡ್‌ನ್ನೂ ನೀಡಿವೆ.

ಶ್ರೀ ಸುಭಜಿತ್ ಭದ್ರಾ ಅವರು ಬಿಸಿಲು ಗಾಲದ ಒಂದು ಸಂಜೆಯ ಸುಮಾರು 7 ಗಂಟೆಯ ವೇಳೆಗೆ ಆಕೆಯ ಮನೆಗೆ ಹೋಗಿ ತಲುಪಿದರು. ಆಕೆಯ ಅತಿಥಿಗಳ ಕೋಣೆಯಲ್ಲಿ ಕಾಲಿಟ್ಟೊಡನೆಯೇ ಆತನಿಗೆ ಅತಿ ಹಿತಕರ ಹಾಗೂ ಆಹ್ಲಾದಕಾರಿ ಅನುಭವವಾಗಿ ಬೌದ್ಧಿಕ ಊರ್ಜೆ ಮೆದುಳಿನಲ್ಲಿ ಸಂಚರಿಸತೊಡಗಿತು ಅಂತ ಆತ ವಿವರಿಸುತ್ತಾರೆ. ಕಳೆದ ಎಷ್ಟೋ ವರುಷಗಳಿಂದ ದೊಡ್ಡ ವ್ಯಕ್ತಿತ್ವಗಳೊಂದಿಗೆ ಆಕೆ ತೆಗೆಸಿಕೊಂಡಿರುವ ಭಾವ ಚಿತ್ರಗಳು, ಹಲವಾರು ಬಹುಮಾನಗಳು ಹಾಗೂ ಪ್ರಶಸ್ತಿ ಪತ್ರಗಳು, ಹರಡಿಕೊಂಡಿದ್ದ ಪುಸ್ತಕಗಳು, ಆ ಕೋಣೆಗೆ ವಿಶಿಷ್ಟವಾದ ಕಳೆ ತಂದುಕೊಟ್ಟಿದ್ದವೆನ್ನುತ್ತಾರೆ ಅವರು. ಇವೆಲ್ಲಕ್ಕಿಂತ ಹೆಚ್ಚಾಗಿ ಇಂದಿರಾ ಗೋಸ್ವಾಮಿಯವರು ಸ್ವತಃ ಮುಗುಳ್ನಕ್ಕು ಬಂದವರಿಗೆ ತೋರುತ್ತಿದ್ದ ಸಹೃದಯತೆ ಅವರ ಮೃದು ಸ್ವಭಾವ, ಸಂವಾದಕ್ಕೆ ಅರ್ಥ ನೀಡುವಂತಹುದಾಗಿತ್ತು. ಹಾಗೂ ಬೇರೆ ಬೇರೆ ಎರಡು ಬಾರಿ ಆಕೆಯೊಂದಿಗೆ ಕುಳಿತು ನಡೆಸಿದ ಮಾತುಕತೆಯಲ್ಲಿ ಆಕೆ ತೀವ್ರ ಪ್ರಾಮಾಣಿಕತೆಯಿಂದ ತನ್ನ ಜೀವನ ಹಾಗೂ ಸಾಹಿತ್ಯಾಭಿವ್ಯಕ್ತಿಯನ್ನು ಕುರಿತು ವಿವರಿಸಿದ್ದು ಆಕೆಯ ವ್ಯಕ್ತಿತ್ವಕ್ಕೆ ಮೆರುಗು ಕೊಟ್ಟಿತ್ತು ಎಂದವರು ಬರೆದಿದ್ದಾರೆ.

ಸಂದರ್ಶನ

ಸುಭಜಿತ್ ಭದ್ರ : ಹುಟ್ಟಿದ ಪ್ರತಿಯೊಂದು ಮಗುವೂ ಪ್ರೌಢನಾಗಿ ಬೆಳೆಯುತ್ತದೆಂದೂ ಅವನು / ಅವಳು ತನ್ನೊಳಗೇ ಆ ಎಳೆತನವನ್ನು ಕಳೆದುಕೊಂಡದ್ದನ್ನು ಅನುಭವಿಸುತ್ತದೆಂದೂ ಹೇಳುತ್ತಾರೆ. ಜೀವನವನ್ನು ರೂಪಿಸುವ ಆರಂಭದ ಘಟ್ಟ ಬಾಲ್ಯವಾದುದರಿಂದ ಅದು ಪ್ರತಿಯೊಬ್ಬ ಮನುಷ್ಯನ ಜೀವನದಲ್ಲೂ ಮಹತ್ವದ ಮಜಲಾಗಿರುತ್ತದೆ. ಒಬ್ಬ ಲೇಖಕನ ಜೀವನಕ್ಕಂತೂ ಈ ಮಜಲಿನ ಮಹತ್ವ ಅತಿ ಹೆಚ್ಚಿನದು. ನಿಮ್ಮ ಬಗ್ಗೆ ಅಂದರೆ ನೀವು ಇಲ್ಲಿಯವರೆವಿಗೂ ಒಂದು ಎಳೆ ವಯಸ್ಸಿನ ಮನಸ್ಸು, ವ್ಯವಹಾರವನ್ನು ಇಟ್ಟುಕೊಂಡಿದ್ದೀರಿ. ಅನ್ನುವುದು ಬಹಳ ಮುಖ್ಯವಾದ ಮಾತು. ನೀವು ಒಬ್ಬ ವ್ಯಕ್ತಿಯಾಗಿ ಉಳಿಯಲು, ಲೇಖಕಿಯಾಗಲು ನಿಮ್ಮ ಬಾಲ್ಯ ಎಷ್ಟರ ಮಟ್ಟಿಗೆ ಸಹಾಯಕವಾಯಿತೆಂದು ನಿಮಗನಿಸುತ್ತೆ?

ಇಂದಿರಾ ಗೋಸ್ವಾಮಿ : ನಾನು ಒಬ್ಬ ಮನುಷ್ಯಳಾಗಿ ಬೆಳೆಯುವುದಕ್ಕೆ ಲೇಖಕಿಯಾಗುವುದಕ್ಕೆ ನನ್ನ ಬಾಲ್ಯ ಬಹಳ ಮಹತ್ವದ ಪಾತ್ರ ವಹಿಸಿತು ಅಂತ ನನಗನಿಸುತ್ತೆ. ನನ್ನ ಬಾಲ್ಯ ನನಗೆ

ಯಾವಾಗಲೂ ಪ್ರೇರಣೆ ನೀಡುತ್ತಲೇ ಬಂದಿದೆ. ನಮ್ಮ ಪರಿವಾರ ಆರ್ಥಿಕವಾಗಿ ದಢೂತಿಯಾಗಿತ್ತು. ನಮ್ಮ ಪರಿವಾರ ಅಸ್ಸಾಂನ ದಕ್ಷಿಣ ಕಾಮರೂಪದ ಅಮರಾಂಗ ಸತ್ರದ 'ಅಧಿಕಾರಿ' ಗಳಾಗಿದ್ದವರು. ನಮ್ಮ ಬಳಿ ಎಷ್ಟೋ ಆನೆಗಳಿದ್ದವು. ರಸ್ತೆಗಳು ಬಹಳ ಕೆಟ್ಟ ಸ್ಥಿತಿಯಲ್ಲಿದ್ದಿದುದರಿಂದ ಈ ಆನೆಗಳು ನಮ್ಮ ಹಳ್ಳಿ ಸತ್ರಾದಲ್ಲಿ ನಮ್ಮ ಕಾರುಗಳನ್ನ ಎಳೆಯುತ್ತಿದ್ದವು. ನಾನು ಜೀವನದಲ್ಲಿ ಸಾಧಿಸಿರುವುದಕ್ಕೆಲ್ಲಾ ನನ್ನ ಬಾಲ್ಯವೇ ಕಾರಣವಾಗಿದೆ. ನಮ್ಮ ತಂದೆ ಅವರದ್ದೇ ರೀತಿಯಲ್ಲಿ ವಿದ್ವಾಂಸರಾಗಿದ್ದವರು. ಜೊತೆಗೆ ಅವಿಭಾಜ್ಯ ಆಸಾಂನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅವರು ನಿರ್ದೇಶಕರಾಗಿದ್ದರು. ಅವರಿಗೆ ನನ್ನ ಕಂಡರೆ ತುಂಬಾ ವಿಶ್ವಾಸ, ಪ್ರೀತಿ, ನಾನು ಒಬ್ಬ ಲೇಖಕಿಯಾಗಬೇಕು ಅಂತ ಕನಸು ಕಾಣುತಿದ್ದವಳು. ಕುರಾನ್ ಓದದೆ-ಬೈಬಲ್‌ನ ಓದದೆ-ತಿಳಿದುಕೊಳ್ಳದೆ ನಾನು ಒಳ್ಳೆಯ ಲೀಖಕಿ ಆಗಲು ಸಾಧ್ಯವೇ ಇಲ್ಲ ಅಂತ ನಮ್ಮ ತಂದೆ ಹೇಳುತ್ತಲೇ ಇದ್ದರು. ನಾನು ಕೆಲವು ಕವನಗಳನ್ನು ಬರೆದೆ, ಕ್ರಿಸ್ತನ ಕೆಲವು ಚಿತ್ರಗಳನ್ನೂ ಬರೆದೆ. ನಾನು ಒಬ್ಬ ಚಿತ್ರಕಲೆಗಾರ್ತಿ ಆಗಬೇಕು ಅಂತ ಕೂಡ ಬಯಸಿದ್ದೆ. ನಾನು ಕ್ರಿಶ್ಚಿಯನ್ ಧರ್ಮದ ತರಗತಿಗಳಿಗೆ ಸೇರಿಕೊಳ್ಳಬೇಕೆಂದಿದ್ದೆ. ಆದರೆ ಹಿಂದೂ-ಮುಸ್ಲಿಮರಿಗೆ ಆ ತರಗತಿಗಳಿಂದ ವಿನಾಯಿತಿ ಸಿಕ್ಕಿದೆ ಅಂತ ತಿಳಿಯಿತು. ಆದರೆ ನಾನು ಸ್ವೇಚ್ಛೆಯಿಂದ ಆ ತರಗತಿಗಳಿಗೆ ಸೇರಿಕೊಂಡೆ, ಎಲ್ಲಕ್ಕೂ ಮೊದಲು ನಾನು ಏಸುಕ್ರಿಸ್ತನ ವಿಷಯವಾಗಿ ತಿಳಿದುಕೊಂಡೆ. ಆಗ ನನ್ನ ವಯಸ್ಸು ಸುಮಾರು 9-10 ವರ್ಷ ಇದ್ದಿರಬೇಕು, ನನ್ನ ಅಧ್ಯಾಪಕರು ಏಸು ಕ್ರಿಸ್ತನ ರಕ್ತರಂಜಿತವಾದ ಬಟ್ಟೆಯ ವಿಷಯವಾಗಿ ಹೇಳುತ್ತಿದ್ದರು. ಆಗ ನಿಧಾನವಾಗಿ ನನ್ನ ಮನಸ್ಸು ಏಸುಕ್ರಿಸ್ತನ ಕಡೆಗೆ ವಾಲತೊಡಗಿತು. ನಮ್ಮ ತಂದೆ ನನ್ನನ್ನ ಸಮಾಧಾನಪಡಿಸುತ್ತಿದ್ದರು. ಆರ್ಥಿಕವಾಗಿ ನಾವು ಬಲವಾಗಿದ್ದರೂ ನಮ್ಮ ಜೀವನ ಶೈಲಿ ಬಹಳ ಸರಳವಾಗಿತ್ತು. ನಮ್ಮ ವ್ಯವಹಾರ ಕೂಡ ಅಷ್ಟೆ. ನಮ್ಮ ತಂದೆ ನನ್ನ ಹುಟ್ಟು ಹಬ್ಬವನ್ನಾಚರಿಸಲೂ ಬಿಡುತ್ತಿರಲಿಲ್ಲ. ನನ್ನ ಹತ್ತಿರ ಹೆಚ್ಚು ಒಳ್ಳೆಯ ಬಟ್ಟೆಗಳು ಕೂಡ ಇರಲಿಲ್ಲ. ನಮ್ಮ ತಂದೆ ಕಟ್ಟುನಿಟ್ಟಾಗಿ ಈ ನೀತಿಯನ್ನ ನಮ್ಮ ಮೇಲೆ ಹೊರಿಸಿದ್ದರು. ಜೀವನದ ಕಷ್ಟಸಂಕೋಲೆಗಳನ್ನ ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕೆಂದು ನಮ್ಮ ತಂದೆ ಈ ನಿಯಮಗಳನ್ನು ನಮಗೆ ಹೊರಿಸಿದ್ದರು, ಇದರಿಂದಲೇ ಮುಂದೆ ನಾನು ಬಡವರು, ತುಳಿತಕ್ಕೆ ಒಳಗಾದವರ ವಿಷಯವಾಗಿ ಬರೆಯಲು ಪ್ರೇರಣೆ ದೊರಕಿತು. ಎಸ್.ಎಸ್.ಎಂ. ಮತ್ತು ನಾನು ಲತಾಶೀಲ ಪ್ರಾಥಮಿಕ ಪಾಠಶಾಲೆಯಲ್ಲಿ ಓದುತ್ತಿದ್ದಾಗ ಆಸಾಮಿ ಬಹಳ ಕಡಿಮೆ ಕಲಿತಿದ್ದೆ. ಅದರಿಂದಾಗಿ ಎಸ್.ಎಸ್.ಎಲ್.ಸಿ. ಓದುವುದಕ್ಕಾಗಿ ಟಿ.ಸಿ. ಹೆಣ್ಣು ಮಕ್ಕಳ ಶಾಲೆಗೆ ಸೇರಲು ಹೋದಾಗ ಮೊದಲು ನನಗೆ ಆಸಾಮಿ ವರ್ಗಕ್ಕೆ ಪ್ರವೇಶ ಸಿಗಲಿಲ್ಲ. ಆಗ ಶ್ರೇಷ್ಠ ವ್ಯಕ್ತಿಯಾಗಿದ್ದ ಅಂಬಿಕಾಗಿರಿ ರಾಯ್‌ಚೌಧರಿ ಅವರ ಮಗಳು ಸುಚಿಬ್ರತರಾಯ್ ಚೌಧರಿ ಅವರು ಆ ಟಿ.ಸಿ. ಗರ್ಲ್ಸ್ ಹೈ ಸ್ಕೂಲಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕಿಯಾಗಿದ್ದರು, ಆಕೆ ಶಾಲೆಯ ಅಧಿಕಾರಿವರ್ಗವನ್ನ ನನಗೆ ಆಸಾಮಿ ಕೊಡಲು ಮನ ಒಲಿಸಿದರು. ನನ್ನ ಬಾಲ್ಯ ಕಠೋರವಾಗಿತ್ತು ಅಂತ ನಾನು ನೆನಪು ಮಾಡಿಕೊಳ್ಳುತ್ತಿಲ್ಲ. ನಮ್ಮ ತಂದೆ-ಚಿಕ್ಕಪ್ಪ ಇಬ್ಬರೂ ತೀರಿಕೊಂಡಿದ್ದರಿಂದ ನಾನು ಖಿನ್ನತೆಯಿಂದ ಬಹಳ ನರಳುತ್ತಿದ್ದೆ. ಅದರಿಂದ ನಾನು ಆ ದುಃಖಕರವಾದ ಸ್ಥಿತಿಯನ್ನ ನೆನಪು ಮಾಡಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಖಿನ್ನತೆ ನನಗೆ ಯಾವಾಗಲೂ ಇತ್ತು. ಆದರೆ ನಮ್ಮ ತಂದೆ ತೀರಿಕೊಂಡ ಮೇಲೆ ಅದು ತೀವ್ರರೂಪಕ್ಕೆ ತಿರುಗಿತ್ತು.

ಸುಭಜಿತ್ ಭದ್ರ : ನೀವು ಪಶ್ಚಿಮ ಆಸಾಂನ ಹೆಸರುವಾಸಿಯಾದ ಮನೆತನಕ್ಕೆ ಸೇರಿದವರು. ವಿದ್ಯೆ, ಪರಂಪರೆಯನ್ನ ಗೌರವಿಸುವುದು, ಒಳ್ಳೆಯ ಮೌಲ್ಯಗಳ ಬಗ್ಗೆ ಗೌರವಾದರ ಇಟ್ಟುಕೊಂಡು ಆರೋಗ್ಯಕರವಾದ ಜೀವನವನ್ನು ಅನುಭವಿಸಿದವರ ಗುಂಪಿನವರು. ನಿಮ್ಮ ಕೃತಿಗಳಲ್ಲಿ ಸತ್ರಾಗಳ ವಿಷಯವಾಗಿ ಬಹಳ ಕಡೆ ಹೇಳಿದ್ದೀರಿ. ಅವರ ಸಾಮಾಜಿಕ-ಸಾಂಸ್ಕೃತಿಕ ಪರಿವೇಶವನ್ನ ವರ್ಣಿಸುವಾಗ ಒಂದು ವಿಶಿಷ್ಟವಾದ ಸ್ಪಂದನ ಕಂಡುಬರುತ್ತೆ. ಇದೆಲ್ಲಾ ನಿಮ್ಮ ಬರವಣಿಗೆಗೆ ಎಷ್ಟರ ಮಟ್ಟಿಗೆ ಸಹಾಯ ಮಾಡಿತು, ನಿಮ್ಮ ಸೃಜನಕ್ಕೆ ಪ್ರೇರಕವಾಯಿತು ಅಂತ ಹೇಳುವಿರಾ?

ಇಂದಿರಾಗೋಸ್ವಾಮಿ : ಹೌದು ಅಂತಹ ಪರಿವಾರದಲ್ಲಿ ಹುಟ್ಟಲು ನಾನು ಪುಣ್ಯ ಮಾಡಿದ್ದೆ ಅಂತ ನನಗನಿಸುತ್ತೆ. ನಮ್ಮ ತಾಯಿ ಬಹಳ ಹೃದಯವಂತಳಾಗಿದ್ದವರು, ನಮ್ಮಮ್ಮ ಎಸ್.ಎಸ್.ಎಲ್.ಸಿ. ಕೂಡ ಪಾಸು ಮಾಡಿದ್ದವರಲ್ಲ. ಆದರೆ ಆಕೆಯ ವ್ಯವಹಾರ, ರೀತಿನೀತಿಗಳು ನನ್ನನ್ನ ಬಹಳ ಮಟ್ಟಿಗೆ ರೂಪಿಸಿದವು. ನನಗೆ ಕೇಳಿದಷ್ಟು ಸ್ವಾತಂತ್ರ್ಯವನ್ನು ಆಕೆ ನೀಡಿದರು. ಅದನ್ನ ನೋಡಿ ಎಷ್ಟೋ ಜನ ಬೆರಗಾದರು, ನಮ್ಮಮ್ಮ ಬಹಳ ಸುಂದರವಾಗಿದ್ದರು, ಪ್ರತಿಯೊಬ್ಬರೂ ಅವಳ ಸೌಂದರ್ಯವನ್ನ ಹಾಡಿ-ಹೊಗಳುತ್ತಿದ್ದರು. ನನಗೆ ಬೇಕೆನಿಸಿದ್ದನ್ನ ನಾನು ಮಾಡಿದೆ. ನಮ್ಮಪ್ಪ ನನಗೆ ಪ್ರೋತ್ಸಾಹ ಕೊಟ್ಟರು. ನಮ್ಮ ತಾಯಿಯ ಮನೆಯವರು ಅಗತ್ಯ ಬಿದ್ದು ಒಂದು ಟೀ ತೋಟವನ್ನೇ 300 ರೂಪಾಯಿಗಳಿಗೆ ಮಾರಬೇಕಾಗಿ ಬಂತು, ನಮ್ಮ ತಾಯಿ ಮದುವೆ ಸಂದರ್ಭದಲ್ಲಿ ಮುಸ್ಲಿಂ ಸ್ನೇಹಿತನೊಬ್ಬ ಅವರಿಗೆ ಹಣ ಕೊಟ್ಟು ಸಹಾಯ ಮಾಡಿದರು, ನನ್ನ ಕಂಡರೆ ಎಷ್ಟೋ ಜನ ಗಂಡು ಹುಡುಗರು ಆಕರ್ಷಿತರಾಗುತ್ತಿದ್ದರು, ಅವರ ವಿಷಯವಾಗಿ ಬರೆಯಹೊರಟರೆ ದೊಡ್ಡ ಸಂಪುಟವೇ ಸಿದ್ಧವಾಗುತ್ತೆ, ಸಮಯ ಕಳೆದ ಹಾಗೆಲ್ಲ ನನ್ನನ್ನ ಪ್ರೀತಿಸುವವರ ಸಂಖ್ಯೆ ಕೂಡ ದೊಡ್ಡದಾಗಿ ಬೆಳೆಯಿತು. ನಾನು ಚಿಕ್ಕವಳಾಗಿದ್ದಾಗ ಒಂದು ದೊಡ್ಡ ಪತ್ರಿಕೆಯ ಸಂಪಾದಕರೊಬ್ಬರು ನಮ್ಮ ಮನೆಯ ಎದುರಿಗೆ ವಾಸವಾಗಿದ್ದರು. ಅವರು ನನ್ನ ಸೃಜನ ಶೀಲತೆಯನ್ನ ಪರೀಕ್ಷಿಸಬೇಕೆಂದು ಒಂದು ಸಣ್ಣ ಕತೆ ಬರೆಯೆಂದು ಹೇಳಿ ಪ್ರೋತ್ಸಾಹಿಸಿದರು. ನಾನು ನನಗೆ ನಮ್ಮಣ್ಣ ಸತ್ಯಬ್ರತನಿಗೆ ಆಟವಾಡುವುದಕ್ಕೆ ಅಂತ ಕೊಟ್ಟಿದ್ದ ಅನೆಯನ್ನ ಕುರಿತು ಒಂದು ಕತೆ ಬರೆದೆ. ಆ ಮಾವುತನಿಗೆ ನನ್ನನ್ನ ಕಂಡರೆ ಬಹಳ ಪ್ರೀತಿ ಇತ್ತು. ಆತ ನನಗೆ ಅಫೀಮು ಮಾಡುವುದನ್ನು ತೋರಿಸಿಕೊಟ್ಟ. ನಾನು ಒಂದು ಸಾರಿ ಅದರ ರುಚಿ ನೋಡಿದೆ, ಜೊತೆಗೆ ಕುಡಿತದ ಕಡೆ ಕೂಡ ವಾಲಿದೆ, ಹೀಗೆ ಈ ವರ್ಣರಂಜಿತವಾದ ವಾತಾವರಣ, ನನ್ನ ಮನೆಯ ಪರಿಸರ ಇವೆಲ್ಲಾ ನನ್ನ ಬರವಣಿಗೆಗೆ ಸಾಕಷ್ಟು ಪ್ರೇರಕವಾದವು.

ಸುಭಜಿತ್ ಭದ್ರ : ಜೀವನದ ಬೇರೆ ಬೇರೆ ಸೆಲೆಗಳನ್ನ ನೀವು ಅನುಭವಿಸಿದ್ದೀರಿ. ಆ ಅನುಭವಗಳಿಂದೆಲ್ಲ ನಿಮ್ಮ ಸೃಜನ ಕರ್ಮಕ್ಕೆ ನೀವು ವಿಷಯಗಳನ್ನ ಹೀರಿಕೊಳ್ಳಲು ಸಾಧ್ಯವಾಗಿದೆ. ನೀವು ಚಿಕ್ಕಂದಿನಲ್ಲಿ ಭಯಂಕರವಾಗಿ ಖಿನ್ನತೆಯನ್ನ ಅನುಭವಿಸಿದ್ದು, ಕಷ್ಟಪಟ್ಟಿದ್ದು ಎಲ್ಲವನ್ನ ನಿಮ್ಮ 'ಅಧಾಯಿಖಾ ದಸ್ತಾವೇಜ್-ಅಸಂಪೂರ್ಣ ದಸ್ತಾವೇಜು' ಓದಿದವರಿಗೆ ಗೊತ್ತಿರುತ್ತೆ. ಆ ದುಃಖದಿಂದ ಕೂಡಿದ ದುರದೃಷ್ಟಕರವಾದ ಪರಿಸ್ಥಿತಿಯಿಂದಾಗಿ ಇಂದಿರಾಗೋಸ್ವಾಮಿ ಒಬ್ಬ ವ್ಯಕ್ತಿಯಾಗಿ ನಿಂತರು, ಒಬ್ಬ ನಿಷ್ಠುರ, ದೃಢ ಸಂಕಲ್ಪದ ಭದ್ರ ಹಾಗೂ ಮಾನವೀಯ ಸಂವೇದನೆಗಳ ಲೇಖಕಿಯಾದರು. ಜೊತೆಯಲ್ಲೇ ನಿಮ್ಮ ಸೃಜನ ಕ್ರಿಯೆ ಚೆನ್ನಾಗಿ ಅರಳಿ ದಿಂಗತಕ್ಕೇರಿತು. ನಿಮ್ಮ ಆ ಕಷ್ಟಕಾಲವನ್ನ ಕುರಿತ ಹಾಗೆ, ನೀವು ಅತಿಯಾಗಿ ಪ್ರೀತಿಸಿದ ವ್ಯಕ್ತಿಯನ್ನ ಮದುವೆಯಾಗಿ ಆತನನ್ನ ಕಳೆದುಕೊಂಡಿದ್ದರ ವಿಷಯವನ್ನ ವಿವರವಾಗಿ ದಯಮಾಡಿ ತಿಳಿಸಿ.

ಇಂದಿರಾ ಗೋಸ್ವಾಮಿ: ಎಷ್ಟೋ ಜನರ ವಿರೋಧ ಕಟ್ಟಿಕೊಂಡು ನಾನು ಒಬ್ಬ ಸಿವಿಲ್ ಇಂಜಿನಿಯರನ್ನ ಮದುವೆಯಾದೆ. ಆತ ದಕ್ಷಿಣ ಭಾರತದವರು ಮಾಧವನ್ ರೈಸೋಂ ಅಂತ, ನಮ್ಮದು ಪ್ರೇಮ ವಿವಾಹ, ನಾವು ಇಬ್ಬರೂ ಅಂತಃಕರಣದಿಂದ ಒಬ್ಬರನ್ನೊಬ್ಬರು ಪ್ರೀತಿಸಿದೆವು. ಅದರಿಂದ ನಮ್ಮಿಬ್ಬರ ಸಮಾಜ-ಸಂಸ್ಕೃತಿಯ ಹಿನ್ನಲೆ ತೀರ ಬೇರೆಯದಾಗಿತ್ತಾದರೂ ನಾವು ಹೊಂದಿಕೊಳ್ಳುವುದಕ್ಕೆ ಯಾವುದೇ ತರಹ ಕಷ್ಟವೂ ಆಗಲಿಲ್ಲ. ಮಧುವನ್ನ ಮದುವೆಯಾದ ಸ್ವಲ್ಪ ದಿನಗಳಂತೂ ನನ್ನ ಜೀವನದಲ್ಲಿ ಸ್ವರ್ಗ ಸುಖವನ್ನ ಅನುಭವಿಸಿದೆ. ಆದರೆ ಕಠೋರವಾದ ವಿಧಿ ಆವರಿಸಿ ಬಂತು. ಕಾಶ್ಮೀರದ ಗಧಮ್‌ಪುರದ ಬಳಿ ಒಂದು ರಸ್ತೆ ಅಪಘಾತದಲ್ಲಿ ಮಧು ಹತರಾದರು. ಆತನ ಸಾವಿನ ನಂತರ ನಾನು ಬಹಳ ಖಿನ್ನತೆ ಕ್ಷೋಭೆಗೆ ಒಳಗಾಗಿ ನರಳಿದೆ. ನನ್ನ ತುಂಡು-ತುಂಡಾದ ಜೀವನವನ್ನ ಪುನಃ ಜೋಡಿಸುವುದಕ್ಕೆ ಬಹಳ ಕಷ್ಟವಾಯಿತು. ಬಹಳ ದಿವಸಗಳವರೆಗೆ ನಾನು ತಲೆ ಎತ್ತಿ ಆಕಾಶ ನೋಡುವುದಕ್ಕಾಗಲಿಲ್ಲ, ಜೀವನದಲ್ಲಿ ಆಸಕ್ತಿಯನ್ನ ಪೂರ್ತಿಯಾಗಿ ಕಳೆದುಕೊಂಡೆ, ನನ್ನ ಜೀವನದ ಅತಿ ಪ್ರಿಯರಾದ ವ್ಯಕ್ತಿಯನ್ನ ಕಳೆದುಕೊಂಡಿದ್ದನ್ನೇ ಚಿಂತಿಸುತ್ತಾ ಇದ್ದೆ, ಎಲ್ಲೆಲ್ಲೂ ಆತನ ನೆರಳನ್ನೇ ಹುಡುಕಿಕೊಂಡು ತಿರುಗುತ್ತಿದ್ದೆ, ಕೊನೆಗೆ ಸಾವಿನ ನಂತರ ಏನೂ ಉಳಿದಿರಲ್ಲ ಅನ್ನುವುದು ನನ್ನ ಅನುಭವಕ್ಕೆ ಬಂತು, ಆ ಅವಧಿಯಲ್ಲಿ ಒಳ್ಳೆ ಸುಗಂಧಕ್ಕೆ ಬದಲಾಗಿ ನನ್ನ ಬ್ಯಾಗ್ ತುಂಬಾ ಸ್ಲೀಪಿಂಗ್ ಪಿಲ್ಸ್ (ನಿದ್ದೆ ಮಾತ್ರೆಗಳು) ಇರುತ್ತಿದ್ದವು. ನಾನು ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ಯೋಚಿಸುತ್ತಿದ್ದೆ. ಆದರೆ ದಿನಗಳೆದಂತೆ ನಾನು ಆ ಮಾನಸಿಕ ಒತ್ತಡದಿಂದ ಹೊರಕ್ಕೆ ಬಂದೆ, ಇನ್ನು ಏನೇ ಆದರೂ ಅಳಬಾರದು ಎಂದು ನಿರ್ಧರಿಸಿದೆ. ಆ ಕಾರ್ಗತ್ತಲ ಪರಿಸ್ಥಿತಿಯಿಂದ ಹೊರಕ್ಕೆ ಬಂದಿದ್ದು ಅಂದರೆ ಬಹಳ ಹೋರಾಡಬೇಕಾಯಿತು. ಅಳು, ಹೃದಯ ಹಿಂಡಿದ ರಕ್ತದ ರಭಸಗಳ ನಡುವಿನ ಹೋರಾಟವಾಗಿತ್ತು. ನಾನು ಬರವಣಿಗೆಯನ್ನ ರೂಢಿಸಿಕೊಳ್ಳಲು ನಿಶ್ಚಯಿಸಿದೆ, ನಂತರ ನನ್ನ ಲೇಖನಿ ನಿಲ್ಲಲೇ ಇಲ್ಲ.

ಸುಭಜಿತ್ ಭದ್ರ : ಆ ದುಃಸ್ಥಿತಿಯ ಕಾಲದಲ್ಲಿ ರಾಮಾಯಣದಿಂದ ನಿಮಗೆ ಬಹಳ ಶಾಂತಿ ಸಿಕ್ಕಿತು. ಆಗಿನಿಂದ ನೀವು ಜನರ ನಡುವೆ ಅದರ ಸಂದೇಶವನ್ನ ಸಾರುವುದರಲ್ಲಿ ಪೂರ್ತಿಯಾಗಿ ತೊಡಗಿಸಿಕೊಂಡಿದ್ದೀರಿ. ಅದು ಯಾವಾಗ ಹೇಗೆ ಎಂತಹ ಪರಿಸ್ಥಿತಿಯಲ್ಲಿ ನೀವು ರಾಮಾಯಣದ ಕಡೆಗೆ ಮೊಟ್ಟಮೊದಲು ಆಕರ್ಷಿತರಾಗಿದ್ದು?

ಇಂದಿರಾ ಗೋಸ್ವಾಮಿ: ಆರಂಭದಲ್ಲಿ ರಾಮಾಯಣ ನನಗೆ ಇಷ್ಟವಾದ ಗ್ರಂಥವಾಗಿರಲಿಲ್ಲ. ನನಗೆ ಆಗ ಅದರ ಬಗೆಗೆ ಕೆಲವು ಸಂಶಯಗಳಿದ್ದವು. ನನಗೆ ಆ ಮಹಾಪುರಾಣದ ಕೆಲವು ಘಟನೆಗಳು ಮನಸ್ಸಿನಲ್ಲಿ ಕೊರೆಯುತ್ತಿದ್ದವು. ರಾಮ ವಾಲಿಯನ್ನ ಬೆನ್ನಿಂದ ಹೊಡೆದು ಕೊಂದಿದ್ದು, ಶೂರ್ಪನಖಿಯನ್ನ ವಿಕೃತಗೊಳಿಸಿದ್ದು, ಶಂಭುಕ ಶೂದ್ರ ತಪಸ್ವಿ ಅನ್ನುವ ಕಾರಣಕ್ಕೆ ಕೊಂದಿದ್ದು, ಸೀತೆಯನ್ನ ಕಾಡಿಗೆ ದೂಡಿದ್ದು, ಇವೆಲ್ಲಾ ನನ್ನನ್ನ ಕಾಡುತ್ತಿದ್ದವು. ನನ್ನ ಪ್ರೀತಿಯ ಗಂಡನ ಸಾವಿನ ನಂತರ ಅಸ್ಸಾಂ ಸರಕಾರ ನನ್ನ ಪಿ.ಎಚ್.ಡಿಗಾಗಿ ಛಾತ್ರವೃತ್ತಿಯನ್ನ ನೀಡಿತು. ನಾನು ಸಾಹಿತ್ಯದಲ್ಲಿ ಪಿ.ಎಚ್.ಡಿ. ಪಡೆಯಬೇಕೆಂದು ಗೌಹತಿ ವಿಶ್ವವಿದ್ಯಾನಿಲಯದಲ್ಲಿ ನೊಂದಾಯಿಸಿಕೊಂಡೆ, ಆದರೆ ನಮ್ಮ ತಾಯಿ ರಾಮಾಯಣದ ಮೇಲೆ ಸಂಶೋಧನೆ ನಡೆಸು ಅಂತ ಒತ್ತಾಯ ಪಡಿಸಿದರು. ಅದು ಹಿಂದೂಗಳ ಪವಿತ್ರ ಗ್ರಂಥವಾಗಿತ್ತು ಅನ್ನುವುದೇ ಕಾರಣ. ನನ್ನ ಗುರುಗಳಾಗಿದ್ದ ಉಪೇಂದ್ರಚಂದ್ರ ಲೇಖಕರು ಕೂಡ ಅದನ್ನೇ ಬಯಸಿದರು. ಆಗಲೂ ರಾಮಾಯಣದ ಆ ಘಟನೆಗಳು ನನ್ನನ್ನ ಕಾಡುತ್ತಲೇ ಇದ್ದವು. ಈ ಬಾರಿ ನನ್ನ

ಗುರುಗಳು ಡಾ॥ ಫಾದರ್ ಕಾಮಿಲ್ ಬುಲ್ಕೆಗೆ ಜೆಸ್ಯೂಟ್ ಪಾದರಿಗೆ ಪತ್ರ ಬರೆಯಲು ಹೇಳಿದರು. ಯೆಹೂದಿ ಪಾದ್ರಿಗಳು ಕ್ಯಾಥೋಲಿಕ್‌ರಿಗಿಂತ ಸಂಕುಚಿತ ಮನೋಭಾವನೆ ಹೊಂದಿರುತ್ತಾರೆ. ಆತ ಮೂಲತಃ ಇಂಜಿನಿಯರ್ ಆಗಿದ್ದವರು. ಹಿಂದಿ ಕಲಿಯುವುದಕ್ಕಾಗಿ ಬೆಲ್ಜಿಯಂನಿಂದ ಭಾರತಕ್ಕೆ ಬಂದಿದ್ದರು. ಜೊತೆಗೆ ರಾಮಾಯಣದ ಮೇಲೆ ಪಿ.ಎಚ್.ಡಿ. ಮಾಡಿಕೊಂಡರು. ಅವರ 'ರಾಮಕಥಾ' ರಾಮಾಯಣದ ಗ್ರಂಥ ಪರಂಪರೆಯಲ್ಲೇ ಒಂದು ಶ್ರೇಷ್ಠವಾದ ಗ್ರಂಥ ಅಂತ ಅನ್ನಿಸಿಕೊಂಡಿದೆ, ಅದನ್ನ ಹಿಂದಿಯಲ್ಲಿ ಬರೆದಿದ್ದಾರೆ. ಅದರಲ್ಲಿ ಅವರು ಭಾರತದ, ವಿದೇಶದ ಬೇರೆ ಬೇರೆ ರಾಮಾಯಣಗಳನ್ನ ಕುರಿತು ಚರ್ಚಿಸುತ್ತಾರೆ, ಮೊದಲು ಆತ ನನ್ನನ್ನ ಭೇಟಿಯಾಗಬಿಡುವರೇ ಅಂತ ನನಗೆ ಸಂದೇಹವಿತ್ತು. ಆದರೆ ಅವರು ಒಂದು ವಾರದಲ್ಲೇ ನನಗೆ ಉತ್ತರ ಬರೆದು ನನಗೆ ಅಚ್ಚರಿಯನ್ನುಂಟು ಮಾಡಿದ್ದರು. ಆ ಪತ್ರವನ್ನ ನಾನು ಇನ್ನೂ ಇಟ್ಟುಕೊಂಡಿದ್ದೇನೆ. ಆತ ರಾಂಚಿಯ ಸೇಂಟ್ ಜೇವಿಯರ್ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದರು. ನಾನು ಅವರನ್ನ ಅಲ್ಲೇ ಭೇಟಿಯಾಗಲು ನಿರ್ಧರಿಸಿದೆ, ನಾನು ರಾಂಚಿಗೆ ಪ್ರಯಾಣ ಬೆಳೆಸಿದೆ. ನನ್ನ ಜೊತೆ ಆಗ 2003ರಲ್ಲಿ ತೀರಿಕೊಳ್ಳುವವರೆವಿಗೂ 30 ವರ್ಷಕಾಲ ನನ್ನ ಜೀವನ ಮಿತ್ರನಾಗಿದ್ದ ಕೈಕುವಾಸ ಬುರ್ಜೋರ್ ಸತಾರಾಪಾಲ ಕೂಡ ಪ್ರಯಾಣಿಸಿದ್ದ. ಆತ ಒಬ್ಬ ಪಾರ್ಸಿ ಇಂಜಿನಿಯರ್ ಆಗ ನನಗೆ 24 ವರ್ಷಗಳಾಗಿತ್ತು. ಕೈಕುವಾಸ ಜೊತೆ ಯಾತ್ರೆ ಕೈಗೊಂಡಿದ್ದು ಹಿತಕರವಾಗಿತ್ತು. ಬೆಳಿಗ್ಗೆ ನಾವು ಸೇಂಟ್ ಜೇವಿಯರ್ ಕಾಲೇಜಿನೊಳಕ್ಕೆ ಕಾಲಿಟ್ಟೆವು. ಅದೊಂದು ದೊಡ್ಡ ಸುಂದರವಾದ ತೋಟ, ಅಲ್ಲಿ ಡಾ॥ ಫಾದರ್ ಕಾಮಿಲ್ ಬುಲ್ಕೆಯವರು ಏನನ್ನೋ ಓದುತ್ತಾ ಕುಳಿತಿದ್ದರು. ನಾವು ಅವರನ್ನಲ್ಲಿ ಕಂಡೆವು. ನಾನು ಅವರ ಬಳಿ ನಿಂತಾಗ ನನ್ನನ್ನು ಕಂಡು ಆಶ್ಚರ್ಯಗೊಂಡು ಅವರು ನೀನೊಬ್ಬ ದೇವತೆಯ ಹಾಗೆ, ನನ್ನ ನಿವಾಸದೊಳಗೆ ಬಾ ಎಂದರು. ಅವರು ಕಾಫಿ ಮಾಡುತ್ತಿದ್ದಾಗ, ನಾನು ರಾಮಾಯಣದ ಬಗ್ಗೆ ನನಗಿದ್ದ ಸಂಶಯಗಳನ್ನು ಕುರಿತು ಹೇಳಿದೆ. ಅದಕ್ಕವರು, ಮಗಳೇ, ಇವು ಬರಿಯ ಪ್ರಕ್ಷೇಪಗಳಷ್ಟೇ' ಅಂದರು. ನಂತರ ಅವರು ಮೇಲೆ ಹಾರುತ್ತಿದ್ದ ಒಂದು ವಿಮಾನದ ಕಡೆ ಬೆರಳು ಮಾಡಿ ಅದರ ಗಾಳಿ ಧೂಳನ್ನು ಓಡಿಸಲಾಗದು ಎಂದು ಹೇಳಿದರು. ನಂತರ, 'ನಾನು 'ರಾಮಕಥಾ'ದಲ್ಲಿ ಈ ಪ್ರಕ್ಷೇಪಗಳನ್ನು ಕುರಿತು ವಿವರವಾಗಿ ಚರ್ಚಿಸಿದ್ದೇನೆ. ರಾಮಾಯಣದ ಒಂದು ಆವೃತ್ತಿಯಲ್ಲಿ ಮಾತ್ರ ಶಂಭುಕ ವಧೆಯ ಪ್ರಸ್ತಾಪ ಬರುತ್ತದೆ. ರಾಮಾಯಣದ ಮೂರು ಆವೃತ್ತಿಗಳಿವೆ, 1. ದಾಕ್ಷಿಣಾತ್ಯ 2. ಪೂರ್ವೋತ್ತರ 3. ಗೌಡೀಯ ಆವೃತ್ತಿ. ಇವುಗಳಲ್ಲಿ ಪೂರ್ವೋತ್ತರ ಗೌಡೀಯ ಆವೃತ್ತಿಯನ್ನನುಸರಿಸುತ್ತದೆ. ದಾಕ್ಷಿಣಾತ್ಯ ಆವೃತ್ತಿಯಲ್ಲಿ ಮಾತ್ರ ಶಂಭುಕ ವಧೆಯ ಪ್ರಸಂಗ ಬರುತ್ತದೆ. ಈಗಲೇ ಹೋಗಿ ರಾಮಾಯಣಕ್ಕೆ ಬದಲಾಯಿಸಿಕೋ' ಎಂದರು. ಹೀಗೆ ಅದು ನನ್ನ ಜೀವನಕ್ಕೆ ತಿರುವು ಕೊಟ್ಟ ಪ್ರಸಂಗ. ನಾನು ಮಂತ್ರ ಸಾಹಿತ್ಯವನ್ನು ಬಿಟ್ಟು ರಾಮಾಯಣಕ್ಕೆ ಬದಲಾಯಿಸಿಕೊಂಡೆ. ಮಧುರ ಮೋಹನ ಗೋಸ್ವಾಮಿ ಆಗ ಗೌಹತಿ ವಿಶ್ವವಿದ್ಯಾನಿಲಯದಲ್ಲಿ ಕುಲಪತಿಗಳಾಗಿದ್ದರು. ಅವರು ನಾನು ವಿಷಯವನ್ನು ಬದಲಾಯಿಸಿಕೊಳ್ಳಲು ಸಹಾಯ ಮಾಡಿದರು. ಆತನಿಗೆ ನನ್ನ ಹಿನ್ನೆಲೆ ಗೊತ್ತಿತ್ತು, ಜೊತೆಗೆ ಅವರು ನಮ್ಮ ತಂದೆಯ ಒಳ್ಳೆಯ ಸ್ನೇಹಿತರು ಆಗಿದ್ದರು.

ಸುಭಜಿತ್ ಭದ್ರ: ರಾಮಾಯಣ ಪವಿತ್ರಗ್ರಂಥವಷ್ಟೇ ಅಲ್ಲ, ಅದನ್ನ ಜೋರಾಗಿ ಓದಿ ಗೌರವ ಸಲ್ಲಿಸಿದರಷ್ಟೇ ಸಾಲದು ಅದು ಸಾಮಾಜಿಕ ಸಾಂಸ್ಕೃತಿಕ ಮೌಲ್ಯಗಳಿಗೆ ಒತ್ತು ನೀಡುವ ಗ್ರಂಥ. ನೀವು ಅದರ ಮಹತ್ವವನ್ನ ದೇಶ-ವಿದೇಶಗಳಲ್ಲಿ ವಿಚಾರ-ಸಂಕಿರಣ ಹಾಗೂ

ಅಧಿವೇಶನಗಳಲ್ಲಿ ಎತ್ತಿ ಹಿಡಿದಿದ್ದೀರೆಂಬುದರಲ್ಲಿ ಅತಿಶಯೋಕ್ತಿಯೇನಿಲ್ಲ ವಿದೇಶಗಳಲ್ಲಿ ರಾಮಾಯಣವನ್ನು ಕುರಿತಂತಹ ನಿಮ್ಮ ಅನುಭವಗಳು ಹಾಗೂ ರಾಮಾಯಣವನ್ನು ಕುರಿತು ಕಾರ್ಯ ಮಾಡಿರುವ ಪಾಶ್ಚಾತ್ಯ ವಿದ್ವಾಂಸರನ್ನು ಕುರಿತಂತೆ ದಯಮಾಡಿ ಪರಿಚಯ ನೀಡಿ.

ಇಂದಿರಾ ಗೋಸ್ವಾಮಿ : ರಾಮಾಯಣದಿಂದಾಗಿ ನಾನು ಭಾರತದ ಹೊರಗಣ ಪ್ರಪಂಚವನ್ನು ನೋಡಲು ಬಹಳ ಸಹಾಯವಾಯಿತು. ನಾನು ಮಾರಿಷಸ್‌ಗೆ ಅನೇಕ ಬಾರಿ ಹೋಗಿ ಬಂದೆ. ನಾನು ಟ್ರನಿಡಾಡ್ ಮುಂತಾದ ದೇಶಗಳ ಸೂರಿನಾಮ್‌ನ ಅಸಹಾಯಕ ದುಃಸ್ಥಿತಿಯಲ್ಲಿರುವ ಕಾರ್ಮಿಕರ ವಿಷಯವಾಗಿ ತಿಳಿದುಕೊಂಡೆ. ಫಿಜಿ, ಬರಿಟಿಷ್ ಗಯಾನ, ಸೂರಿನಾಮ್ ಮುಂತಾದ ದೇಶಗಳ ಕಾರ್ಮಿಕರ ಬಳಿ ಏನೊಂದು ಇರಲಿಲ್ಲವಂತೆ. ಆದರೆ ತಮ್ಮ ಜೊತೆ ರಾಮಚರಿತ ಮಾನಸವನ್ನ ಅವರು ಹೋದಲ್ಲೆಲ್ಲ ಕೊಂಡೊಯ್ದರು, ಸಂಜೆಯ ವೇಳೆ ದಿನದ ಪರಿಶ್ರಮ ಕಳೆದ ನಂತರ ಒಂದು ಮರದ ಕೆಳಗೆ ಅವರೆಲ್ಲ ಕುಳಿತು ರಾಮಚರಿತ ಮಾನಸವನ್ನ ಪಠಿಸುತ್ತಿದ್ದರಂತೆ. ಅದರಿಂದ ಅವರಿಗೆ ಬಹಳ ನಿರಾಳವೆನಿಸಿ ಸ್ಪೂರ್ತಿ ದೊರೆಯುತ್ತಿತ್ತಂತೆ. ಅವರು ರಾಮ ಕೂಡ ವನವಾಸಕ್ಕೆ ಹೋಗಿ ಅಲ್ಲಿಂದ ಊರಿಗೆ ಹಿಂದಿರುಗಲು ಕಾಯುತ್ತಿದ್ದುದನ್ನು, ಅವನ ಆ ದುಃಸ್ಥಿತಿಯೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುತ್ತಿದ್ದರಂತೆ. ಅವರು ತಮ್ಮ ದೇಶಕ್ಕೆ ಹಿಂದಿರುಗಬಯಸುತ್ತಿದ್ದರು. ಆದರೆ ಅದು ಆಗಲೇ ಇಲ್ಲ. ಇಂದು ಆ ಹಲ್ಲು ಕಿತ್ತ ಕೂಲಿ ಕಾರ್ಮಿಕರೇ ಎಷ್ಟೋ ದೇಶಗಳಲ್ಲಿ ಪ್ರಭುಗಳಾಗಿದ್ದಾರೆ. 1980ರಲ್ಲಿ ನಿಯಮಿತವಾಗಿ ರಾಮಾಯಣದ ಸತ್ರಗಳು ಮತ್ತು ಚರ್ಚೆ ನಡೆಯುತ್ತಿದ್ದವು. ಮಾರಿಷಸ್‌ನಲ್ಲಿ ಈಗಲೂ ರಾಮಾಯಣ ಹೆಚ್ಚಾಗಿ ಬಿಕ್ರಿಯಾಗುತ್ತಿದೆ, ರಾಮಕಥಾ ಕೂಡ ಅಲ್ಲಿ ಜನಪ್ರಿಯವಾಗಿದೆ. ನಾನು ಎಷ್ಟೋ ಜನ ರಾಮಾಯಣದ ವಿದೇಶೀ ವಿದ್ವಾಂಸರನ್ನು ಭೇಟಿಯಾದೆ. ಜಿಂಗ್ ಜಿಂಘ್ಣಾರಾಮಾಯಣವನ್ನ ಚೀನೀ ಭಾಷೆಗೆ ಭಾಷಾಂತರಿಸಿದ್ದಾರೆ. ಆತನನ್ನು ನಾನು ದೆಹಲಿಯಲ್ಲಿ ಭೇಟಿಯಾಗಿದ್ದೆ. ಬಾರಾನ್ನಿಕೋವ್ ನನ್ನ ದೆಹಲಿ ನಿವಾಸಕ್ಕೆ ಬಂದಿದ್ದರು. ಆತ ತನ್ನ ಶ್ರೇಷ್ಠ ವಿದ್ವಾಂಸನಾದ ತಂದೆಯ ವಿಷಯ ತಿಳಿಸಿದ್ದರು.

ಸುಭಜಿತ್ ಭದ್ರ : ಬಾರಾನ್ನಿಕೋವ್ 'ರಾಮಚರಿತಮಾನಸ'ವನ್ನ ರಷ್ಯನ್ ಭಾಷೆಗೆ ಅನುವಾದಿಸಿದ್ದಾರೆ. ಆ ಕಾಲದಲ್ಲಿ ಸಾಮಾನ್ಯವಾಗಿ ಭಾರತವನ್ನ ಪ್ರಾಚೀನಕಾಲದ ಅಣಕು ಆಟವೆಂದೂ, ಮೊಗಲರ ಆಕ್ರಮಣದ ನಂತರ ಭಾರತೀಯರ ಸೃಜನ ಶೀಲತೆ ಸ್ಥಗಿತಗೊಂಡಿದೆಯೆಂಬ ಭಾವನೆ ಪಾಶ್ಚಾತ್ಯ ಜಗತ್ತಿನಲ್ಲಿ ಆವರಿಸಿಕೊಂಡಿತ್ತು. ಮ್ಯಾಕ್ಸ್ ಮುಲ್ಲರ್‌ನಂತಹ ವಿದ್ವಾಂಸ ಕೂಡ ಇದೇ ವಾದವನ್ನ ಮಂಡಿಸಿದ್ದರು. ಭಾರತೀಯ ಭಾಷೆಗಳಿಂದ ಅನುವಾದಿಸಲು ಹೆಚ್ಚಿನ ಕೃತಿಗಳೇ ಇಲ್ಲವೆಂದಿದ್ದರು. ಬಾರಾನ್ನಿಕೋವ್ ಅವರು ಅದನ್ನು ಸವಾಲಾಗಿ ತೆಗೆದುಕೊಂಡು 'ರಾಮಚರಿತ ಮಾನಸ'ವನ್ನ ರಷ್ಯನ್ ಭಷೆಗೆ ಅನುವಾದಿಸಿ ಅದರೊಂದಿಗೆ ಅಡಿಟಿಪ್ಪಣಿಗಳನ್ನು ನೀಡಿದ್ದರು. ಅದರಲ್ಲಿ ಭಾರತದ ಬಗ್ಗೆ ಎಷ್ಟೋ ವಿಷಯಗಳ ವಿವರ ದೊರಕಿತ್ತು. ಈ ಪ್ರಯತ್ನದಿಂದ ದೊಡ್ಡ ಹಾದಿ ತೆರೆದಂತಾಗಿ ರಷ್ಯನ್ನರು ಭಾರತದ ಬಗ್ಗೆ ತಿಳಿಯಲು ಮುಂದಾದರು. ರಾಮಚರಿತ ಮಾನಸದಿಂದಾಗಿ ಹಾದಿ ತೆರೆದುಕೊಂಡಿತೆ ವಿನಹ ರಾಜಕೀಯ ಧುರೀಣರಿಂದಲ್ಲ ಎಂಬ ಮಾತನ್ನಿಲ್ಲಿ ಒತ್ತಿ ಹೇಳಬೇಕು. ಬಾರನ್ನಿಕೋವ್ ತೀರಿಕೊಂಡಾಗ ಆತನ ಸಮಾಧಿಯ ಮೇಲೆ ಆತನ ಅಂತಿಮ ಇಚ್ಛೆಯಂತೆ ರಾಮಚರಿತಮಾನಸದ ಕೆಲವು ಚೌಪಾಯಿಗಳನ್ನ ಬರೆದು ಇಡಲಾಯಿತು. ಅದು ಹೀಗಿದೆ

'ಒಳ್ಳೆಯ ಜನ ಒಳ್ಳೆಯದನ್ನೂ, ಕೆಟ್ಟವರು ಕೆಟ್ಟದನ್ನೂ ಮಾಡುತ್ತಾರೆ. ಅಮೃತ ಮತ್ತು ವಿಷದೊಡನೆ ಅದನ್ನು ಹೋಲಿಸಬಹುದು. ಅಮೃತ ಶಾಶ್ವತತೆಯನ್ನೂ ವಿಷ ಮೃತ್ಯುವನ್ನೂ ತರುತ್ತದೆ'. ಮೆಕ್ಸಿಕೋವ ಶ್ರೇಷ್ಠ ವಿದ್ವಾಂಸ ಮ್ಯೂರಾನನ್ನು ಕೂಡ ನಾನು ಭೇಟಿ ಮಾಡಿದೆ. ಥಾಯ್ ರಾಮಾಯಣದ ಶ್ರೇಷ್ಠ ವಿದ್ವಾಂಸನಾದ ರಾಮನ ಭಕ್ತನೂ ಆದ ಸ್ಟೋನ್ ಸುರಂಗಾ ಪೊರ್‌ಫಿಪಿಯಾನನ್ನೂ ನಾನು ಭೇಟಿಯಾದೆ ನಂತರದಲ್ಲಿ ಆತ ನನ್ನ ಆತ್ಮೀಯ ಮಿತ್ರನಾದ ರಾಮಾಯಣದ ಭಾರತೀಯ ವಿದ್ವಾಂಸರಷ್ಟೇ ಅಲ್ಲದೆ ನಾನು ಸತ್ಯದ್ರತ ಶಾಸ್ತ್ರಿ ಲಲ್ಲನ್‌ಪ್ರಸಾದ್‌ರಂತಹ ರಾಮಾಯಣದ ವಿದ್ವಾಂಸರನ್ನು ಕೂಡ ಭೇಟಿಯಾದೆ. ರಾಮಾಯಣದ ಜಪಾನಿ ವಿದ್ವಾಂಸರಾದ ತೋರಾರನ್ನೂ ನಾನು ಭೇಟಿಯಾದೆ.

ಸುಭಜಿತ್ ಭದ್ರ : ರಾಮಾಯಣವನ್ನು ಕುರಿತಾಗಿ ಹಿಂದೂ ವಿದ್ವಾಂಸರಷ್ಟೇ ಅಲ್ಲದೆ ಕೆಲವರು ಕ್ರಿಶ್ಚಿಯನ್ ಮತ್ತು ಮುಸ್ಲಿಂ ವಿದ್ವಾಂಸರು ವಿಶೇಷವಾಗಿ ಸಂಶೋಧನೆ ನಡೆಸಿದ್ದಾರೆಂದು ನೀವು ನಂಬುತ್ತೀರಿ. ಗೌಹತಿಯಲ್ಲಿ ನೀವು ರಾಮಾಯಣ ಸಂಶೋಧನಾ ಕೇಂದ್ರವೊಂದನ್ನು ಕೂಡ ಸ್ಥಾಪನೆ ಮಾಡಿದ್ದೀರಿ. ರಾಮಾಯಣದ ಈ ಜಾತ್ಯತೀತ ಪ್ರಕೃತಿ ಕುರಿತಂತೆ ತಮ್ಮ ಅಭಿಪ್ರಾಯವೇನು? ಜೊತೆಗೆ ನಿಮ್ಮ ಈ ಸಂಶೋಧನಾ ಕೇಂದ್ರ ಕುರಿತಂತೆ ತಮ್ಮ ಮುಂದಿನ ಯೋಜನೆಗಳೇನು?

ಇಂದಿರಾ ಗೋಸ್ವಾಮಿ : ರಾಮಾಯಣವನ್ನ ನಾನು ಜಾತ್ಯಾತೀತ ಗ್ರಂಥವೆಂದು ನಂಬಿದ್ದೇನೆ ಎಂಬುದಂತೂ ನಿಜ. ಪ್ರಾಚೀನ ಕಾಲದಿಂದಲೂ ಅದು ಅನೇಕ ಧರ್ಮಗಳ ಮೇಲೆ ತನ್ನ ಸಂದೇಶವನ್ನು ನೀಡಿ ಸಾಧಿಸಿದೆ ಎಂಬುದೂ ಸತ್ಯ. ಸರ್‌ಜಾರ್ಜ್ ಗ್ರಿಯರ್ಸನ್‌ರು ಹೇಳುವಂತೆ; ಬಂಗಾಳ, ಪಂಜಾಬ್, ಹಿಮಾಲಯ, ವಿಂಧ್ಯ ಮತ್ತು ಮಧ್ಯಪ್ರದೇಶದ ಮೇಲೆ ರಾಮಾಯಣ ಇಂಗ್ಲೆಂಡ್‌ನಲ್ಲಿ ಬೈಬಲ್ ಭಿತ್ತಿರುವ ಪ್ರಭಾವಕ್ಕಿಂತ ಹೆಚ್ಚಿನದ್ದಾಗಿದೆ, ವರ್ಷ ಇಡೀ ವಿದ್ವಾಂಸರು ಬಂದು ರಾಮಾಯಣದ ವಿವಿಧ ಮುಖಗಳನ್ನು ಕುರಿತು ವ್ಯಾಖ್ಯಾನ ನೀಡುತ್ತಿರುತ್ತಾರೆ. ಕೇಂದ್ರದಿಂದ ಪ್ರತಿವರ್ಷ ಕೊನೆಯ ಪಕ್ಷ ಎರಡಾದರೂ ರಾಮಾಯಣಕ್ಕೆ ಸಂಬಂಧಪಟ್ಟಂತಹ ಗ್ರಂಥಗಳನ್ನು ಪ್ರಕಟಪಡಿಸುತ್ತೇವೆ, ಗೌಹತಿ ವಿಶ್ವವಿದ್ಯಾನಿಲಯದಲ್ಲಿ ನೊಂದಣಿ ಪಡೆದು ರಾಮಾಯಣದ ಮೇಲೆ ಒಬ್ಬ ವಿದ್ವಾಂಸ ಪಿ.ಎಚ್.ಡಿ ಸಂಶೋಧನೆ ನಡೆಸುತ್ತಾನೆ.

ಸುಭಜಿತ್ ಭದ್ರ : ನೀವು ವೃಂದಾವನದಿಂದ ಘನತೆವೆತ್ತ ದೆಹಲಿ ವಿಶ್ವವಿದ್ಯಾನಿಲಯಕ್ಕೆ ಬಂದು ಸೇರಿದಿರಿ. ಅದರಿಂದ ನಂತರದಲ್ಲಿ ನಿಮ್ಮ ಸಜ್ಜು-ಸಾಧನವೂ ವಿಶೇಷ ತಿರುವು ಪಡೆಯಿತು. ದೆಹಲಿಗೆ ಹೋದದ್ದು ನಿಮ್ಮ ಜೀವನದಲ್ಲಿ ಒಂದು ನಿರ್ಣಯಾತ್ಮಕ ಘಟ್ಟವೆಂದನಿಸುತ್ತದೆಯೇನು ನಿಮಗೆ? ನಿಮ್ಮ ಶೈಕ್ಷಣಿಕ ಜೀವನವನ್ನು ನೀವು ಹೇಗಳೆಯುವಿರಿ? ಅವು ಒಂದಕ್ಕೊಂದು ಪೂರಕವಾಗಿ ಪರಿಣಮಿಸಿವೆಯೆಂದು ನಿಮಗನಿಸುತ್ತದೆಯೇ?

ಇಂದಿರಾಗೋಸ್ವಾಮಿ : ಅವು ಒಂದಕ್ಕೊಂದು ಪೂರಕವಾಗಿವೆ ಎಂಬುದು ಸತ್ಯ. ನಾನು ದೆಹಲಿ ವಿಶ್ವವಿದ್ಯಾನಿಲಯದ ಭಾರತೀಯ ಭಾಷಾ ವಿಭಾಗದಲ್ಲಿ 30 ವರ್ಷಗಳಿಗೂ ಹೆಚ್ಚು ಕಾಲ ಪಾಠ ಹೇಳಿದೆ. ದೆಹಲಿಗೆ ಹೋದದ್ದು ನನ್ನ ಜೀವನದ ಒಂದು ನಿರ್ಣಯಾತ್ಮಕ ಘಟ್ಟ. ಅಸ್ಸಾಂನಲ್ಲಿದ್ದುಕೊಂಡು ನಾನು ಇಂದು ಇರುವ ಸ್ಥಿತಿಗೆ ತಲುಪಲಾಗುತ್ತಿರಲಿಲ್ಲ. ನನ್ನ ಬರವಣಿಗೆಗೆ ನನ್ನ ಶೈಕ್ಷಣಿಕ ಜೀವನ ಸಹಾಯು ನೀಡಿದೆ. 'ದಾಸೋರಥೀ ಖೋಜ್' ಎಂಬ ಕಾದಂಬರಿಯೊಂದನ್ನು ನಾನು ನನ್ನ ಶೈಕ್ಷಣಿಕ ಜೀವನದ ಅನುಭವವನ್ನಾಧರಿಸಿ ಬರೆದಿದ್ದೇನೆ.

ಅದು ಕೇಂಬ್ರಿಜ್ ಗೌಹತಿಯಿಂದ 'ದ ಕ್ವೆಸ್ಟ್ ಆಫ್ ದೈ ಡಿವೈನ್' ಎಂಬ ಶೀರ್ಷಿಕೆಯಡಿಯಲ್ಲಿ ಹೊರಬರುತ್ತಿದೆ.

ಸುಭಜಿತ್ ಭದ್ರ : ನೀವು ಅಸ್ಸಾಮಿ ಸಾಹಿತ್ಯದಲ್ಲಿ ಬರೆಯಲಾರಂಭಿಸಿದಾಗ ಅಸ್ಸಾಮಿ ಸಾಹಿತ್ಯ ಅನೇಕ ಶ್ರೇಷ್ಠ ಸಾಹಿತಿಗಳಿಂದ ರಚಿತವಾದ ಸಾಹಿತ್ಯದಿಂದ ಕೂಡಿ ವಿಪುಲವಾಗಿತ್ತು. ನಿಮ್ಮ ಮೊದಲ ಪ್ರಮುಖ ಕೃತಿ ಎಲ್ಲಿಂದ ಯಾವಾಗ ಪ್ರಕಟಗೊಂಡಿತ್ತು? ನೀವು ಲೇಖಕಿಯಾದ್ದರಿಂದ ಅವರ ನಡುವೆ ನಿಮ್ಮ ಜಾಗವನ್ನ ಭದ್ರಗೊಳಿಸಿಕೊಳ್ಳುವುದಕ್ಕೆ ಕಷ್ಟವಾಗಲಿಲ್ಲವೆ?

ಇಂದಿರಾ ಗೋಸ್ವಾಮಿ : ನನ್ನ ಮೊದಲ ಪ್ರಮುಖ ಕೃತಿ 'ಚೇನಾ ಬೋರ್ ಸ್ರೋತ್ (ಕರಂಟ್ ಆಫ್ ಚೇನಾಬ್ ಇಂಗ್ಲೀಷ್ ಅನುವಾದ) ಎಂಬುದು, ಅದು ಕಾಶ್ಮೀರದ ಚೇನಾಬ್‌ನ ಕೂಲಿ ಕಾರ್ಮಿಕರ ಜೀವನವನ್ನು ಕುರಿತಾದ್ದು ಒಬ್ಬ ಮಹಿಳೆಯಾಗಿ, ಲೇಖಕಿಯಾಗಿ ಜಾಗ ಕಂಡುಕೊಳ್ಳಲು ನನಗೆ ಎಂದೂ ಕಷ್ಟವಾಗಲೇ ಇಲ್ಲ. ವೈಯಕ್ತಿಕವಾಗಿ ಹೇಳಬೇಕೆಂದರೆ ನಾನು ಆ ತರಹದ ಭೇದವನ್ನು ಒಪ್ಪುವುದೂ ಇಲ್ಲ. ಅಂದರೆ ಮಹಿಳೆ ತಡೆಗಳನ್ನು ಎದುರಿಸಬೇಕಾಗುವುದಿಲ್ಲ ಎಂದು ಕೂಡ ಹೇಳುವುದಿಲ್ಲ. ಆದರೆ ಅಂತಿಮವಾಗಿ ಸೃಜನಾತ್ಮಕತೆ ಒಂದೇ ಮುಖ್ಯ ಅಂತ ನನಗನಿಸುತ್ತದೆ.

ಸುಭಜಿತ್ ಭದ್ರ : ಕಳೆದ ನಲವತ್ತು ವರ್ಷಗಳಿಗಿಂತ ಹೆಚ್ಚಿನ ಕಾಲ ನೀವು ನಿಮ್ಮನ್ನ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದೀರಿ. ಅದರಿಂದ ಅಸ್ಸಾಂ ಬರವಣಿಗೆಯ ಅನೇಕ ಮುಖಗಳನ್ನೂ ಕಂಡಿದ್ದೀರಿ. ಅಸ್ಸಾಮಿ ಸಾಹಿತ್ಯದ ಹರದನ್ನ ನೀವು ದಿಗಂತಕ್ಕೇರಿಸಿದ್ದೀರಿ, ನೀವು ಗೋಳದ ಬೇರೆ-ಬೇರೆ ಕ್ಷೇತ್ರಗಳ ಒಳನುಗ್ಗಿ ಬೇರೆ-ಬೇರೆ ಸಮುದಾಯಗಳು-ಅವರ ಸಮಸ್ಯೆಗಳನ್ನು ಬೆಳಕಿಗೆ ತಂದಿದ್ದೀರಿ. ತಮ್ಮ 'ಅಹಿರೋ' 'ಚೇನಾ ಬೋರ್ ಸ್ರೋತ್' ಮತ್ತು 'ನೀಲಕಂಠೀ ಬ್ರಜ್' ಮುಂತಾದ ಕೃತಿಗಳಲ್ಲಿ ಈ ಅಂಶ ಸ್ಪಷ್ಟವಾಗಿ ಕಾಣಸಿಗುತ್ತದೆ, ನಿಮ್ಮ ಸೃಜನಕ್ಕೆ ಈ ಹೊರಗಣ ಪ್ರಯತ್ನಗಳು ಸಹಾಯ ಮಾಡಿದೆಯೇ? ನಿಮ್ಮ ಅನೇಕಾನೇಕ ಸಮಕಾಲೀನ ಅಸ್ಸಾಮಿ ಲೇಖಕರು ಅತಿ ಹೆಚ್ಚು ಕೋಪ ಮಂಡೂಕಗಳಾಗಿದ್ದಾರೆನಿಸುವುದಿಲ್ಲವೇ?

ಇಂದಿರಾ ಗೋಸ್ವಾಮಿ : ನಾನು ಭಾಗ್ಯಶಾಲಿ ಹೊರಕ್ಕೆ ಹೋಗುವ ಸಾಹಸ ಮಾಡಲು ಅವಕಾಶ ಸಿಕ್ಕಿತು ಎಂದು ಭಾವಿಸುತ್ತೇನೆ. ಮೂಲತಃ ನಾನು ಮಾನವತಾವಾದಿ. ಅದರಿಂದ ಭೌಗೋಳಿಕ ವಿಂಗಡಣೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಬಂಗಾಳದ ವಿಧವೆಯರ ಗೋಳನ್ನ ನಾನು 'ನೀಲಕಂಠೀ ಬ್ರಜ್' ನಲ್ಲಿ ಚಿತ್ರಿಸಿದಾಗ ನನಗೆ 24-25 ವಯಸ್ಸು. ಆಗ ನಾನು 'ಮಾದೊರೆ ಧೋರ ತೋರಾಮಲ್' 'ಚೇನಾ ಬೋರ್ ಸ್ರೋತ್' ಮತ್ತು 'ಅಹೀರೋರ್ ನಂತಹ' ಕಾದಂಬರಿಗಳನ್ನು ಕೂಲಿ ಕಾರ್ಮಿಕರ ಜೀವನದ ಸಮಸ್ಯೆಗಳನ್ನು ಕುರಿತಾಗಿ ಬರೆದೆ. ಅವರ ಶಿಬಿರಗಳಲ್ಲಿ ಇರುವ ಅವಕಾಶ ಸಿಕ್ಕಿತ್ತು. ನನ್ನ ಪತಿ ಚೇನಾಬನಲ್ಲಿದ್ದರು, ನಂತರ ಕೈಕೋಸ್ ಅಹೀರೊಂನಲ್ಲಿದ್ದರು. ಅವರುಗಳು ನನ್ನನ್ನ ಕೂಲಿ-ಕಾರ್ಮಿಕರ ನಡುವೆ ಇರಲು ಬಿಟ್ಟಿದ್ದರು. ನನ್ನ ಕೆಲವರು ಸಮಕಾಲೀನ ಲೇಖಕರು ಅನೇಕ ಶ್ರೇಷ್ಠ ಕೃತಿಗಳನ್ನ ರಚಿಸಿದ್ದರಾದರೂ ಅವರ ಅನುಭವವನ್ನ ವಿಸ್ತರಿಸಿಕೊಳ್ಳಬಹುದಾಗಿತ್ತೆಂದು ನನಗನಿಸುತ್ತದೆ. ನಿಜ ಅಸ್ಸಾಂನ ಗುಡ್ಡಗಾಡು ಜನಾಂಗದ ನಡುವೆ ಕೂಡ ಕತೆ-ಕಾದಂಬರಿಗಳಿಗೆ ಬೇಕಾದಷ್ಟೇ ಸಾಮಗ್ರಿ ಸಿಗುತ್ತಿತ್ತು. ಆದರೆ ಅವರಲ್ಲಿ ಯಾರಿಗೂ ಈ ರೀತಿಯ ಪರಿಶ್ರಮ ಪಡುವ ಇಚ್ಛೆ ಇರಲಿಲ್ಲ.

ಸುಭಜಿತ್ ಭದ್ರ : ನಿಮ್ಮ ಕೃತಿಗಳಲ್ಲಿ ಯಾವಾಗಲೂ ತುಳಿತಕ್ಕೆ ಒಳಗಾದವರ ಕಷ್ಟಗಳು–ಸಮಸ್ಯೆಗಳನ್ನ ಕುರಿತು ಕಾಳಜಿ ತೋರಿಸಿದ್ದೀರಿ. ಹೆಣ್ಣಿನ ಬಗ್ಗೆ ನಿಜವಾದ ತವಕ ನಿಮ್ಮ ನಿಲಕಂಠೀ ಬ್ರಜ್‌ದಲ್ಲಿದೆ, ಅದರಲ್ಲಿ ನೀವು ಕಷ್ಟದಲ್ಲಿ ಸಿಲುಕಿದ ಉಸಿರುಗಟ್ಟಿದ ವಾತಾವರಣದಲ್ಲಿ ಬದುಕುತ್ತಿರುವ ಕಾಶಿಯ ವಿಧವೆಯರ ಬಾಳನ್ನ ಚಿತ್ರಿಸಿದ್ದೀರಿ. ಜೊತೆಗೆ ಅಫೀಮು ತಿಂದು ದುರ್ವ್ಯಸನಕ್ಕೆ ಸಿಲುಕಿಕೊಂಡಿರುವ ಸತ್ರಾಗಳ ವಿವಿಧ ಗೋಸಾಯಿನಿಯರ ವಿಷಯ ದಂತಲ್ ಹಾಥೀರ್ ಏಂಯೆ ಖೋಮಾ ಹೆಂದಾ (ದ ಮಾತ್ ಈಟನ್ ಹಮ್ದಾ ಆಫ್ ಯ ಟಸ್ಕರ್, ಎ ಸಗಾ ಆಫ್ ಸೌತ್ ಕಾಮರೂಪ್) ಎಂಬುದರಲ್ಲಿ ತೋರಿಸಿದ್ದೀರಿ. ಮಹಿಳೆಯ ದುಃಸ್ಥಿತಿಯನ್ನ ಕುರಿತು ನೀವು ಬಾರಿ–ಬಾರಿ ಆಕರ್ಷಿತರಾದದ್ದು ಹೇಗೆ, ಮಹಿಳೆಯಾಗಿ ಅವರ ಸ್ಥಿತಿಯನ್ನ ನೀವು ಚೆನ್ನಾಗಿ ಚಿತ್ರಿಸಬಹುದೆಂದೇನಾದರೂ ಭಾವಿಸಿದಿರಾ?

ಇಂದಿರಾ ಗೋಸ್ವಾಮಿ : ಇದು ನಿಜ ಆದರೆ ನಾನು ಪುರುಷ ಪಾತ್ರಗಳನ್ನು ಕೂಡ ಅನುಕಂಪದಿಂದ ಸಂವೇದನೆಯಿಂದ ಚಿತ್ರಿಸಿದ್ದೇನೆ. ಹೆಣ್ಣಿನ ಮನಸ್ಥಿತಿಯನ್ನ ನಾನು ಹೆಚ್ಚಾಗಿ ಗ್ರಹಿಸಬಲ್ಲಳಾದೆ.

ಸುಭಜಿತ್ ಭದ್ರ : 'ದ ಮಾತ್ ಈಟನ್ ಹಮ್ದಾ ಆಫ್ ಯ ಟಸ್ಕರ್, ಎ ಸಗಾ ಆಫ್ ಸೌತ್ ಕಾಮರೂಪ್' ಇವು ಸಾಹಿತ್ಯ ಕ್ಷೇತ್ರದ ಅದ್ಭುತಗಳಷ್ಟೇ ಅಲ್ಲ, ಅವು ಕಳೆದ ನೂರು ವರ್ಷಗಳ ಸಾಮಾಜಿಕ–ಸಾಂಸ್ಕೃತಿಕ ನಡವಳಿಕೆಗಳ ಅಧಿಕಾರಿಕ ದಸ್ತಾವೇಜು ಕೂಡ ಆಗಿವೆ. 'ಅಮಿತವ್ ಘೋಷ' ಅವರ ಇತ್ತೀಚಿನ ಕಾದಂಬರಿ 'ಸೀ ಆಫ್ ಪಾಪೀಸ್' ನಲ್ಲಿ ಅಫೀಮಿನ ವ್ಯಾಪಾರವನ್ನು ಕುರಿತಾದ ರಹಸ್ಯಗಳನ್ನು ಹೆಕ್ಕಿ ತೆಗೆದು ಇಂಗ್ಲೀಷ್ ಅರ್ಥಿಕತೆಯ ಸ್ಥಿತಿಯನ್ನು ಅದ್ಭುತ ವಿದ್ವತ್ತಿನಿಂದ ಪ್ರದರ್ಶಿಸಿದ್ದಾರೆ. ನೀವು ಇದೇ ವಸ್ತುವನ್ನು ತೆಗೆದುಕೊಂಡು ಅಸ್ಸಾಮಿ ಸಮಾಜ ಅಫೀಮಿನ ದುರ್ವ್ಯಸನದಿಂದ ಹಾಳಾಯಿತು ಎಂಬ ವಿಷಯವನ್ನ ಬಹಳ ಹಿಂದೆಯೇ ದ ಮಾತ್ ಈಟನ್ ಹೌದಾ ಆಫ್ ಯ ಟಸ್ಕರ್‌ನಲ್ಲಿ ಚಿತ್ರಿಸಿದ್ದೀರಿ. ಅಂತಹ ಉದ್ದೇಶಗಳನ್ನು ನೀವು ರೂಪಿಸಿಕೊಂಡಿದ್ದು ಹೇಗೆ ಅದಕ್ಕೆ ಅಗತ್ಯವಾದ ಸಂಶೋಧನೆಗಳನ್ನ ಹೇಗೆ ಮಾಡಿದಿರಿ ಅನ್ನುವ ವಿಷಯವಾಗಿ ತಿಳಿಸಿಕೊಡಿ.

ಇಂದಿರಾ ಗೋಸ್ವಾಮಿ : ನನ್ನ ಪರಿವಾರದ ಸಂಬಂಧದಿಂದಲೇ ನನಗೆ ಅನುಯಾಯಿಗಳು ಸಿಕ್ಕರು. ಕಾದಂಬರಿಯ ಆ ಹಳ್ಳಿ ನಾನು ಸತ್ರಾದಲ್ಲಿ ಬಾಲ್ಯ ಕಳೆದ ಜಾಗದ್ದು. ಅಲ್ಲಿ ಬಡ ಜನ ನನಗೆ ಪ್ರೀತಿಯನ್ನ ಸುರಿದರು. ದೂರ ಅನ್ನುವುದು ಮನುಷ್ಯನ ಭಾವನೆಗಳನ್ನ ಪರಿಶುದ್ಧಗೊಳಿಸುತ್ತದೆ. ಅಂತ ನಾನು ಯಾವಾಗಲೂ ನಂಬುತ್ತೇನೆ. ಹಾಗಾಗಿ ನಾನು ದೆಹಲಿಯಲ್ಲಿ ಆ ಕಾದಂಬರಿಯನ್ನ ಬರೆದಾಗ ನಾನು ಬಿಚ್ಚು ಮನಸ್ಸಿನಿಂದ ಅವುಗಳ ಚಿತ್ರವನ್ನ ಬಿಡಿಸಲು ಸಾಧ್ಯವಾಯಿತು. ನಾನು ಆ ಜನರ ಪ್ರೀತಿಯನ್ನ ನೆನಪು ಮಾಡಿಕೊಂಡೆ ನನ್ನ ಆನೆಯನ್ನ ಮರೆಯಲಾಗಲಿಲ್ಲ. ಆ ಆನೆಗೆ ಹುಚ್ಚು ಹಿಡಿಯಿತು ಅಂದಾಗ ನಾನು ತೀವ್ರವಾಗಿ ನೋವು ಅನುಭವಿಸಿದೆ. ಅದು ಕೊಲೆಗಡುಕನಾಗಿ ಓಡಾಡಿ ಎಲ್ಲವನ್ನೂ ನಾಶಪಡಿಸಿತು. ಕೊನೆಗೆ ಸರ್ಕಾರಿ ಆದೇಶ ಪಡೆದು ಅದಕ್ಕೆ ಗುಂಡು ಹಾರಿಸಿ ಕೊಂದರು. ಕಮ್ಯೂನಿಸ್ಟರು ಸಂಪು ಹೂಡಿದ್ದು ಕೂಡ ನನಗೆ ನೆನಪಿದೆ. ಆದರೆ ತಪ್ಪು ಗ್ರಹಿಕೆಯಿಂದಾಗಿ ನಿಷ್ಪಾಪ ಇಂದ್ರನಾಥನಂತಹ ಜನ ಸಾವಿಗೀಡಾದರು.

ಆ ಸಂದರ್ಭದಲ್ಲಿ ಆಸಾಂನ ಅನೇಕ ಮಂದಿ ಹಳ್ಳಿಗರು ಅಫೀಂನ ಸೆರೆಯಲ್ಲಿ ಮುಳುಗಿದ್ದರು.

ಅದನ್ನ ಖುಲ್ಲಂ ಖುಲ್ಲಾ ಮಾರುತ್ತಿದ್ದರು. ನಮ್ಮ ತಂದೆ ನಮ್ಮ ಚಿಕ್ಕಪ್ಪ ಇಬ್ಬರೂ ಕೂಡಿ ಜನರ ಅಫೀಮಿನ ಚಟವನ್ನ ಬಿಡಿಸಬೇಕೆಂದು ಹೆಣಗಾಡಿದರು. ಎಷ್ಟೋ ಜನ ಅಫೀಮಿನ ಚಟದಿಂದಾಗಿ ತಮ್ಮ ಭೂಮಿ-ಕಾಣಿ ಮಾರಿಬಿಟ್ಟರು. ಈ ಸಂದರ್ಭದಲ್ಲಿ ಬ್ರಿಟಿಷರು ನಿರ್ಣಯಾತ್ಮಕವಾದ ಯಾವ ಕ್ರಮವನ್ನೂ ಕೈಗೆ ತೆಗೆದುಕೊಳ್ಳಲಿಲ್ಲ. ಅವರಿಗೆ ಮತ್ತೂ ಅಫೀಮ್ ಮಾರಲು ಲೈಸೆನ್ಸ್ ನೀಡಿದರು. ಆದರೆ ಕೊನೆಯಲ್ಲಿ ಶಿಬಿರಗಳನ್ನ ರಚಿಸುವಲ್ಲಿ ಅವರು ಸಹಾಯ ಮಾಡಿದರು.

ಸುಭಜಿತ್ ಭದ್ರ : ನೀವು ಕೂಲಂಕುಶವಾಗಿ ಸಂಶೋಧನೆ ನಡೆಸಿಯೇ ಯಾವಾಗಲೂ ಕಾದಂಬರಿಗಳನ್ನ ಬರೆದಿರುವಿರಿ. ಆಕರ್ಷಕವಾದ ವಸ್ತುವಿನ ಜೊತೆಗೆ ಸತ್ಯವನ್ನ ಬಿಚ್ಚಿ ತೋರಿಸಲೇಬೇಕೆಂಬ ದೃಢ ನಿರ್ಧಾರವನ್ನಿಟ್ಟುಕೊಂಡು ಬರೆದು ಕೆಲವೊಮ್ಮೆ ವಿವಾದಗಳಿಗೂ ಸಿಲುಕಿಕೊಂಡಿದ್ದೀರಿ. ಬೆಚ್ಚಿ ಬೀಳಿಸುವಂತಹ ಅದ್ಭುತವಾದ ನಿಮ್ಮ ಕಾದಂಬರಿ ಚಿನ್ನದುಸ್ತರ್ ಮಂನ್ಹೂಹು (ದ ಮ್ಯಾನ್ ಫ್ರಂ ಚಿನ್ನಮೊಂತ) ಬಹಳ ಜನರನ್ನ ರೊಚ್ಚಿಗೆಬ್ಬಿಸಿತು. ನೀವು ಆ ಕಾದಂಬರಿಯ ಚೌಕಟ್ಟನ್ನ ಹೇಗೆ ಯೋಜಿಸಿಕೊಂಡಿರಿ. ಅದರ ಪರಿಣಾಮಗಳನ್ನ ಕುರಿತು ದಯಮಾಡಿ ತಿಳಿಸಿ.

ಇಂದಿರಾ ಗೋಸ್ವಾಮಿ : ನನ್ನ ಬಾಲ್ಯ ಕಾಲದಿಂದಲೂ ನನಗೆ ಪ್ರಾಣಿಗಳೆಂದರೆ ಬಹಳ ಪ್ರೀತಿ. ನಮ್ಮ ಪರಿವಾರ ಪ್ರಾಣಿ ಬಲಿಯನ್ನಾಚರಿಸುತ್ತಿತ್ತು. ಅದರಿಂದ ನನಗೆ ಬಹಳ ನೋವಾಗುತ್ತಿತ್ತು. ಆ ನೋವು ಯಾವಾಗಲೂ ಒಳಗೇ ಕೊರೆಯುತ್ತಿತ್ತು. ರವೀಂದ್ರನಾಥ ಠಾಕೂರರ 'ವಿಸರ್ಜನ್' ಕೂಡ ನನ್ನ ಮೇಲೆ ಪ್ರಭಾವ ಬೀರಿತು. ಮಹಾತ್ಮ ಗಾಂಧಿಯವರ ನೀತಿಗಳೂ ನನ್ನ ಮೇಲೆ ಪರಿಣಾಮ ಬೀರಿದವು. ಇದರಿಂದ ನನಗನಿಸಿದ್ದನ್ನ ಹೊರಕ್ಕೆ ತರಬೇಕಾಗಿತ್ತು, ನನ್ನ ನೈಜ ಜೀವನದಿಂದ ನಾನು ವಸ್ತುಗಳನ್ನ ಪಡೆದೆ. ನನ್ನ ಕಾದಂಬರಿ ಡೊರೊತಿ ಬ್ರಾನ್‌ಗೆ ಆರ್ಥರ್ ಬ್ರೌನ್‌ನ ಹೆಂಡತಿಯನ್ನ ಆಧಾರವಾಗಿಸಿಕೊಂಡೆ. ಆತ ಆಗ ಕಾಟನ್ ಕಾಲೇಜ್ ಪ್ರಿನ್ಸಿಪಾಲ್ ಆಗಿದ್ದರು. ಆತನಿಗೆ ಒಬ್ಬ ಖಾಸ್ (ಅವರದ್ದೇ ಆದ) ಕೀಪ್ ಇದ್ದಳು. ನಮ್ಮ ತಂದೆ ಆರ್ಥರ್ ಬ್ರೌನ್‌ನ ಸ್ಟೂಡೆಂಟ್ ಆಗಿದ್ದರು. ನಂತರದಲ್ಲಿ ನಮ್ಮ ತಂದೆ ಕೂಡ ಕಾಟನ್ ಕಾಲೇಜಿನ ಪ್ರಿನ್ಸಿಪಾಲರಾದರು. ಆರ್ಥರ್ ಹೆಂಡತಿ ಆತನ ಖಾಸ್ ಹೆಂಗಸಿನಿಂದಾಗಿ ಯಾವ ರೀತಿಯ ಮನೋವ್ಯಥೆಯನ್ನ ಅನುಭವಿಸಿರಬೇಕು ಅಂತ ಊಹಿಸಿದೆ. ಆರ್ಥರ್ ಆ ಖಾಸ್ ಹೆಂಗಸನ್ನು ಮದುವೆಯಾದರೋ ಇಲ್ಲವೋ ಅನ್ನುವುದು ಸ್ಪಷ್ಟವಾಗಿ ಗೊತ್ತಿಲ್ಲ. ಆದರೆ ಮದುವೆ ಅನ್ನುವ ವಿಷಯ ಮುಖ್ಯವಾಯಿತು. ಡೊರೋತಿಯ ಪ್ರಕ್ಷುಬ್ಧತೆ ಅತಿ ಪ್ರಮುಖವಾಯಿತು, ಆರ್ಥರ್‌ನ ಚಾರಿತ್ರ್ಯದ ವಿಷಯವಾಗಿ ಆತ ನಮ್ಮ ತಂದೆಗೆ ಬರೆದಿದ್ದ ಕೆಲವು ಪತ್ರಗಳಿಂದ ಗುಣಿಸಿಕೊಂಡೆ. ಜಟಾಧಾರಿಯ ಪಾತ್ರಕ್ಕೆ ಆಕರವಾಗಿ ನಾನು ಕಾಮಾಖ್ಯಾಗೆ ಪೂಜಾರಿಗಳಾಗಿ ಬಂದ ಓದಿದ ಜನರನ್ನ ಬಳಸಿಕೊಂಡೆ. ನಾನು ಕಾಮಾಖ್ಯಾದಲ್ಲೇ ಸಾಕಷ್ಟು ದಿನ ಉಳಿದುಕೊಂಡು ಅಲ್ಲಿಯ ಜನರ ಮುಖಾಂತರ ಅಲ್ಲಿ ಏನಾಯಿತು ಅಂತ ತಿಳಿದುಕೊಂಡೆ. ಅನೇಕ ಸಾಧುಗಳ ಜೊತೆ ಮಾತು-ಕತೆ ನಡೆಸಿದೆ ಅಸ್ಸಾಮಿ ನಿಯತಕಾಲಿಕ ಗೋರಿಯೋಶಿನಲ್ಲಿ ಮೊದಲು ಸರಣಿಯಾಗಿ ಆ ಕಾದಂಬರಿ ಪ್ರಕಟವಾಯಿತು. ಆ ಕಾದಂಬರಿ ಅನೇಕ ವಿವಾದಗಳನ್ನು ಹುಟ್ಟಿಸಿತು. ಕೆಲವರು ನಾನು ಮಾನವ ಚಿಂತನೆ ಬಿಟ್ಟು ಪ್ರಾಣಿ ಪ್ರೇಮವನ್ನ ಬೆಳೆಸಿಕೊಂಡು ಬಿಟ್ಟಿದ್ದೇನೆ ಅಂತ ಕೂಡ ಅಂದರು. ಇನ್ನು ಕೆಲವರು ಇವಳು ಕೆಲವರನ್ನು ಕುರಿತು ಮಾತ್ರ ಬರೆದಿದ್ದಾಳೆ. ಮುಸಲ್ಮಾನರು ಪ್ರಾಣಿ ಹತ್ಯೆ ಮಾಡುವುದರ ವಿಷಯವಾಗಿ ಟೀಕೆ ಮಾಡಿಲ್ಲ ಅಂದರು. ಅನೂರಾಧ ಪೂಜಾರಿ ಆ ವಾರ ಪತ್ರಿಕೆ ಸಾದೀನ್ ಸಂಪಾದಕಿ ಕಾದಂಬರಿಯ

ಪರ–ವಿರೋಧ ಕುರಿತು ಬರೆದಿದ್ದ ಪತ್ರಿಕೆಗಳನ್ನು ಪ್ರಕಟಪಡಿಸಿದರು. ಸನ್ಯಾಸಿಗಳು ಕುಪಿತಗೊಂಡು ಪ್ರಾಣಿಬಲಿಯನ್ನ ನಿಲ್ಲಿಸಬಾರದು. ಅದು ಹಿಂದೂ ಧರ್ಮದ ಆಂತರಿಕ ಸಂಸ್ಕಾರ ಕಾಲಿಕಾಪುರೋಯಿ ಪ್ರಾಣಿಬಲಿಯನ್ನ ಸಮರ್ಥಿಸುತ್ತದೆ. ಆದರೆ ಒಂದು ಹೂ ಹಾರವನ್ನ ಸಮರ್ಪಿಸಿ ಕೂಡ ವೈಕುಂಠವನ್ನ ತಲುಪಬಹುದೆಂದು ಹೇಳುತ್ತದೆ. ಕಾದಂಬರಿಯನ್ನ ಪ್ರತಿಬಂಧಿಸಬೇಕು ಅಂತ ಬೀದಿಗಳಲ್ಲಿ ವಿರೋಧ ಪ್ರದರ್ಶನ ಕೂಡ ನಡೆಸಿದರು. ಆದರೆ ನೂರಕ್ಕೆ 75 ಮಂದಿ ಯುವ ಪೀಳಿಗೆ ನನಗೆ ಬೆಂಬಲ ಸೂಚಿಸಿದರು, ಜೊತೆಗೆ ಕಾಮಾಖ್ಯಾದಲ್ಲಿ ಪ್ರಾಣಿ ಬಲಿಯನ್ನ ನಿಷೇಧಿಸಬೇಕು ಅಂತ ಒತ್ತಾಯ ಪಡಿಸಿದರು. ನನಗೆ ಬಹಳ ಒಳ್ಳೆಯ ಜಯ ಸಿಕ್ಕಿತು, ಕೆಲವರು ಯುವ ಪೀಳಿಗೆಯವರ ಮನಸ್ಸಿನ ಮೇಲೆ ಪರಿಣಾಮ ಬೀರಿ ಈ ಪ್ರಾಣಿಬಲಿಯನ್ನವರು ತಡೆದುಕೊಳ್ಳಲಾರದೆ ಹೋದರು, ಈ ತೆರನಾದ ಪ್ರಾಣಿ ಬಲಿಯಿಂದ ಪ್ರತಿಭಟನೆಗೆ ಅವಕಾಶವಾಯಿತು ಎಂದರು ಕೆಲವರು. ಪ್ರಕಾಶಕನೊಬ್ಬ ನನ್ನ ಮನೆಗೆ ಬಂದು ನನ್ನ ಟೇಬಲ್ ಮೇಲೆ 50 ಸಾವಿರಗಳನ್ನಿಟ್ಟು ಈ ಕಾದಂಬರಿಯ ಹಕ್ಕುಗಳನ್ನ ಆತನಿಗೆ ನೀಡಬೇಕೆಂದು ಒತ್ತಾಯಿಸಿದ. ಕೆಲವು ಕಾಲದ ನಂತರ ಆತ ತನ್ನ ಮಾತನ್ನ ಹಿಂದಕ್ಕೆ ತೆಗೆದುಕೊಂಡು ತಾನೊಂದು ಕನಸ ಕಂಡೆನೆಂದು ಹೇಳಿದ. ಆತ ಹಣ ಹಿಂದಕ್ಕೆ ಬೇಡ, ಆದರೆ ಬೇರೆ ಪುಸ್ತಕವನ್ನ ಬರೆದುಕೊಡಿ ಅಂತ ಕೇಳಿದ. ನಮ್ಮ ಕುಟುಂಬದವರು ಹೆದರಿಕೊಂಡು ನನ್ನನ್ನ ಮನೆಯಿಂದ ಹೊರಗೆ ಹೋಗದಿರುವಂತೆ ತಡೆದರು ಸ್ವಲ್ಪ ಸಮಯ ಕಳೆದ ನಂತರ ನಾನು ಪುನಃ ದೆಹಲಿಗೆ ಹೋದೆ.

ಸುಭಜಿತ್ ಭದ್ರ : 1984ರಲ್ಲಿ ಸಿಖ್ ಜನಾಂಗದ ಕಗ್ಗೊಲೆಯನ್ನ ಕಣ್ಣಾರೆ ಕಂಡಿದ್ದೀರಿ. ಮನುಷ್ಯರನ್ನ ಸಾರಾಸಗಟಾಗಿ ಹತ್ಯೆಮಾಡಿ ಲೂಟಿ ಮಾಡಿದ್ದು ಕುಖ್ಯಾತಿಯ ಕೆಲಸ. ದೆಹಲಿಯ ವಿಷಯವಾಗಿ ಬರೆದ ನಿಮ್ಮ ಕಾದಂಬರಿ 'ಪೇಜಸ್ ಸ್ಟೆಂಡ್ ವಿಥ್ ಬ್ಲಡ್' ನಲ್ಲಿ ಆ ಅಸಾಧಾರಣ ನಗರದ ಒಳನೋಟವನ್ನ ಕುಶವಂತಸಿಂಹರ ಅದೇ ಶೀರ್ಷಿಕೆಯ ಅದೇ ಸಮಯದ ಒಳನೋಟ ನೀಡುವ ಕಾದಂಬರಿಯಷ್ಟೇ ಸುಂದರವಾಗಿ ಮೂಡಿ ಬಂದಿದೆ. ನೀವು ಈ ಮಹಾನ್ ನಗರದಿಂದ ಹೊರಟು ಹೋಗಿದ್ದೀರಿ, ಈ ನಗರ ನಿಮಗೆ ಸಾಕಷ್ಟು ನೀಡಿದೆ ಶಾರೀರಿಕವಾಗಿ ಅಲ್ಲದಿದ್ದರೂ, ಮಾನಸಿಕವಾಗಿಯದರೂ ಈ ನಗರಕ್ಕೆ ಹಿಂದಿರುಗಬೇಕೆಂದು ನಿಮ್ಮ ಮನಸ್ಸು ಕಾಡುವುದಿಲ್ಲವೇ?

ಇಂದಿರಾ ಗೋಸ್ವಾಮಿ : ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರ ಹತ್ಯೆಯ ನಂತರ ನಾನು ಭಯಂಕರವಾದ ಹಿಂಸಾಚಾರವನ್ನ ಕಣ್ಣಾರೆ ಕಂಡಿದ್ದು ನಿಜ, ನಾನು ತೊಂದರೆಗೀಡಾದ ಪ್ರದೇಶಗಳಿಗೆ ಖುದ್ದಾಗಿ ಹೋಗಿ ನೋಡಿದೆ. ಮನೆಗಳನ್ನ ಸುಟ್ಟು ಹಾಕಿದ್ದರು, ಲೂಟಿ ಸಿಕ್ಕಾಪಟ್ಟೆ ಮಾಡಿದ್ದರು, ನನ್ನ ಜೊತೆಯಲ್ಲಿ ಸೇಂಟ್ ಸ್ಟೀಫನ್ಸ್ ಕಾಲೇಜಿನ ಇಬ್ಬರು ಅಸ್ಸಾಮಿ ವಿದ್ಯಾರ್ಥಿಗಳನ್ನ ಕರೆದುಕೊಂಡು ಹೋಗಿದ್ದೆ. ಆ ಇಬ್ಬರಲ್ಲಿ ಒಬ್ಬ ಪವನ್ ಬರ್ತಾಕುರ್ ಅನ್ನುವವನು ನಂತರದಲ್ಲಿ ಐ.ಎ.ಎಸ್. ಅಧಿಕಾರಿಯಾದ ಇನ್ನೊಬ್ಬ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾನೆ. ನಾವು ಜಹಾಂಗೀರಪುರಿಗೆ ಹೋದೆವು. ಮಿಕ್ಕ ತೊಂದರೆಗೊಳಗಾದ ಪ್ರದೇಶಗಳಿಗೂ ಹೋದೆವು. ಅದು ಅಸಹನೀಯವಾದ ದೃಶ್ಯವಾಗಿತ್ತು. ಕೆಲವರು ಸಿಖ್ಖರು ತಮ್ಮ ಟರ್ಬನ್‌ನ್ನು ಬಿಚ್ಚಿ ರಕ್ತದಿಂದ ತೊಯ್ದು ಬಟ್ಟೆ ಕಲೆಗಳನ್ನ ತೋರಿಸಿದರು, ಮನೆಗಳನ್ನ ನೆಲಸಮ ಮಾಡಿ ಹಾಕಿದ್ದರು. ಎಲ್ಲಿ ನೋಡಿದರೂ ರಕ್ತ ರೋಷನಾರಾಬಾಗ್‌ನ ಶವಾಗಾರದಲ್ಲಿ ಹೆಣಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸಬ್ಜೀ ಮಂಡಿಯಲ್ಲಿ ಹಿಂದೂಗಳು ರಕ್ಷಾಗೃಹಗಳನ್ನು ರಚಿಸಿದ್ದರು. ಅಲ್ಲಿ ಅನೇಕ

ಮುಂದೆ ತಂದೆ-ತಾಯಿಯನ್ನು ಕಳೆದುಕೊಂಡ ಮಕ್ಕಳಿದ್ದರು. ಆ ದೃಶ್ಯವಂತೂ ಕರುಣಾಜನಕವಾಗಿತ್ತು. ಈ ಕಾದಂಬರಿಯನ್ನ ಬರೆಯುವುದಕ್ಕೆ ಮುಂಚೆ ನಾನು ವಿವರವಾಗಿ ಪರಿಸ್ಥಿತಿಯ ಅಧ್ಯಯನ ಮಾಡಿದ್ದೆ. ಲೂಟಿ ಮಾಡಿದ ಪದಾರ್ಥಗಳನ್ನ ಕೊಳಚೆ ಪ್ರದೇಶಗಳಲ್ಲಿ ಪೇರಿಸಿದ್ದಿದ್ದನ್ನ ನೋಡಿದೆ, ಇಂದಿರಾ ಗಾಂಧಿಯವರ ಶವವನ್ನ ನೋಡಬೇಕೆಂಬ ಕನಸಿತ್ತು. ಆದರೆ ಸೆಕ್ಷನ್ 144 ನಗರದಲ್ಲಿ ಬಹಳ ಕಡೆ ಹಾಕಿ ಬಿಟ್ಟಿದ್ದರು. ಆ ನಗರಕ್ಕೆ ಆಗಾಗ್ಗೆ ಹೋಗಬೇಕೆಂದು ನನಗೆ ಇಷ್ಟವಾಗುತ್ತೆ. ಆದರೆ ನನ್ನ ಮಾತೃಭೂಮಿಯ ಬಗ್ಗೆ ಕೂಡ ನನ್ನ ಕರ್ತವ್ಯ ನಿರ್ವಹಿಸಲೇಬೇಕಾಗಿತ್ತು. ಪ್ರಿನ್ಸ್ ಕ್ಲಾಸ್ ಪೌಂಡೇಷನ್‌ನಿಂದ ನನಗೆ ಬಂದಿದ್ದ ಅರವತ್ತು ಲಕ್ಷ ರೂಪಾಯಿಗಳನ್ನ ನಾನು ದಾನವಾಗಿ ನೀಡಿದೆ. ನೆದರ್‌ಲೆಂಡ್ಸ್‌ನಿಂದ ಬಂದ ಬಹುಮಾನದ ಹಣವನ್ನ ನಾನು ದಕ್ಷಿಣ ಕಾಮರೂಪದ ಮಿರ್ಜಾ ಬಳಿ ಇದ್ದ ಅಮರಂಗಾನ ಆಸ್ಪತ್ರೆಗೆ ಕೊಟ್ಟೆ. ಅಸ್ಸಾಂನಲ್ಲಿ 7ನೇ ಶತಮಾನದ ನಂತರದ ರಾಮಾಯಣದ ಬೃಹತ್ ಸಂಪುಟವಿರುವುದರಿಂದ ನಾನು ದಕ್ಷಿಣ ಏಷ್ಯಾ ರಾಮಾಯಣ ಸಂಶೋಧನಾ ಕೇಂದ್ರವನ್ನ ಸ್ಥಾಪಿಸಿದೆ.

ಸುಭಜಿತ್ ಭದ್ರ : ಬಹಳ ವಿಶಿಷ್ಟ ಮಹತ್ವದ ಕಾದಂಬರಿಕಾರ್ತಿಯಾಗುವುದಷ್ಟೇ ಅಲ್ಲದೇ ನೀವು ಬಹಳ ಒಳ್ಳೆಯ ಕತೆಗಾರ್ತಿ ಹೆಸರಾಂತ ಕವಯಿತ್ರಿ ಕೂಡ ಆಗಿರುವಿರಿ. ಇಂಗ್ಲೀಷಿನಲ್ಲಿ ನೀವು ಪೈನ್ ಅಂಡ್ ಫ್ಲೆಷ್ ಎಂಬ ಕವನ ಸಂಕಲನವನ್ನೂ ಹೊರತಂದಿದ್ದೀರಿ. ಅದರಲ್ಲಿ ನಿಮ್ಮ ಎಡಪಂಥೀಯ ದೋರಣೆಗಳು ನಗರದ ವಾತಾವರಣದಲ್ಲಿ ಮೂಡಿ ಬಂದಿದ್ದು ನಿಮ್ಮ ಕವಿ ಹೃದಯದ ಸಂವೇದನೆಗಳು ಅದರಲ್ಲಿ ಎದ್ದು ಕಾಣುತ್ತದೆ. ಈ ಬೇರೆ ಬೇರೆ ಸಾಹಿತ್ಯ ಪ್ರಕಾರಗಳ ನಡುವೆ ನೀವು ಒಂದು ಅಳತೆಗೋಲನ್ನಿಟ್ಟುಕೊಂಡಿದ್ದು ಹೇಗೆ ಪ್ರತಿಯೊಂದು ಪ್ರಕಾರದಲ್ಲಿಯೂ ನಿಮ್ಮದೇ ಆದ ವಿಶೇಷ ಠಸ್ಸೆ ಅವಕ್ಕಿವೆಯಲ್ಲಾ.

ಇಂದಿರಾ ಗೋಸ್ವಾಮಿ : ಇದಕ್ಕೆ ಮೊದಲು ಕೂಡ ಎಷ್ಟೋ ಜನ ನನ್ನನ್ನ ಇದೇ ಪ್ರಶ್ನೆ ಕೇಳಿದ್ದಾರೆ, ನನಗೆ ಜ್ಞಾನಪೀಠ ಪುರಸ್ಕಾರ ದೊರೆತಾದ ಮೇಲೆ ನಾನು ಕವನ ಸಂಕಲನವನ್ನ ಪ್ರಕಟಪಡಿಸಿದೆ. ನನ್ನ ಗದ್ಯಕ್ಕೆ ನಾನು ಕವನಗಳನ್ನ ಅಡಿ ಟಿಪ್ಪಣಿಗಳು ಅಂತ ಭಾವಿಸುತ್ತೇನೆ. ನಾನು ಬದುಕಿರುವಾಗ ನನ್ನ ಕವನಗಳನ್ನ ಪ್ರಕಟಪಡಿಸಬೇಕು, ಜನ ನನ್ನನ್ನ ಒಬ್ಬ ಕವಯಿತ್ರಿಯಾಗಿ ಗುರುತಿಸಲಿ ಅಂತ ನನಗೆ ಯಾವಾಗಲೂ ಆಸೆ ಇತ್ತು. ರಾಮದಿಯ್ಯಾನಲ್ಲಿ ಹಿಂದೆ ಒಂದೆರಡು ನನ್ನ ಕವನಗಳು ಪ್ರಕಟವಾಗಿದ್ದವು. ಬಿರೇಂದ್ರ ಕುಮಾರ ಭಟ್ಟಾಚಾರ್ಯ ಅವರು ಅದರ ಸಂಪಾದಕರಾಗಿದ್ದರು, 'ಪೈನ್ ಅಂಡ್ ಫ್ಲೆಷ್'ಗೆ ನಮ್ಮ ಕುಟುಂಬ ಮಿತ್ರ ದೊಡ್ಡ ಕಲಾವಿದರಾದ ಜನೀನ್ ಹಜಾಃರಿಕಾ ಅವರು ಚಿತ್ರಗಳನ್ನ ಬರೆದುಕೊಟ್ಟರು. ನಾನು ಏಳನೇ ತರಗತಿಯಲ್ಲಿ ಓದುತ್ತಿದ್ದಾಗಿನಿಂದ ಸಣ್ಣ ಕತೆಗಳನ್ನ ಬರೆಯುತ್ತಿದ್ದೆ. ಆಗಿನಿಂದ ನಾನು ಇಲ್ಲಿಯವರೆವಿಗೆ ನೂರಾರು ಸಣ್ಣ ಕತೆಗಳನ್ನ ಬರೆದಿದ್ದೇನೆ. ಬೇರೆ-ಬೇರೆ ಸಾಹಿತ್ಯ ಪ್ರಕಾರಗಳಲ್ಲಿ ಬರೆಯಲು ಕಷ್ಟವಾಗಲೇ ಇಲ್ಲ ಅಂತ ಹೇಳಲು ಆಶ್ಚರ್ಯವಾಗುತ್ತೆ, ನಾನು ಕೆಲವು ರೇಡಿಯೋ ನಾಟಕಗಳನ್ನು ಕೂಡ ಬರೆದೆ. ನಾನು ಯಾವಾಗಲೂ ಹೆಮ್ಮಿಂಗ್‌ವೇನ ಶೈಲಿಯಲ್ಲಿ ಬರೆದೆ. ಅತ ಬಹಳ ಸರಾಗವಾಗಿ ಬರೆಯುತ್ತಿದ್ದ ವ್ಯಕ್ತಿ. ನನಗೆ ಅಸ್ತಿತ್ವವಾದ ಗೊತ್ತು. ಸರ್ ರಿಯಲಿಸಂ (ಅತಿ ವಾಸ್ತವತಾವಾದ) ಮತ್ತು ಇತರ ಕಲಾತ್ಮಕವಾದ ಸಾಹಿತ್ಯಾಂದೋಳನಗಳ ಬಗ್ಗೆ ಬಲ್ಲೆ. ಆದರೆ ಬರೆಯುವುದಕ್ಕೆ ನನ್ನ ಒಲವುಗಳನ್ನೇ ಬಳಸಿಕೊಂಡೆ. ನಂತರದಲ್ಲಿ ನಮ್ಮ ಭೂಮಿಯ ಮಿಕ್ಕ ಲೇಖಕರು ಕೂಡ ಈ ಶೈಲಿಯನ್ನ ಬಳಸಿಕೊಂಡರು.

ಸುಭಜಿತ್ ಭದ್ರ : ನಿಮಗೆ ಪುರಸ್ಕಾರಗಳು-ಸನ್ಮಾನಗಳು ಎಲ್ಲಾ ಮೂಲೆಗಳಿಂದಲೂ ಹೇರಳವಾಗಿ ದೊರೆತಿವೆ. ಸನ್ಮಾನಗಳ ವಿಶಿಷ್ಟತೆಗಳಿಂದಾಗಿ ನಿಮ್ಮ ರಾಜ್ಯ ಹಾಗೂ ದೇಶಕ್ಕೆ ಗೌರವವನ್ನ ತಂದಿದ್ದೀರಿ. ಏನಾದರೂ ಸಾಧಿಸಲಿಲ್ಲ ಅನ್ನುವ ಕಾರಣಕ್ಕೆ ನಿಮಗೆ ಕೊರಗೇನಾದರೂ ಇದೆಯೇ?

ಇಂದಿರಾ ಗೋಸ್ವಾಮಿ : ಖಂಡಿತ ಇಲ್ಲ. ನಾನು ಎಂದೂ ಪಶ್ಚಾತ್ತಾಪ ಪಡುವವಳೇ ಅಲ್ಲ. ಸಾಮಾನ್ಯ ಜನ ನೀಡಿರುವ ಪ್ರೀತಿ ವಿಶ್ವಾಸದಿಂದ ನನಗೆ ಯಾವಾಗಲೂ ಹೆಮ್ಮೆ ಅನಿಸಿದೆ. ನೆದರ್‌ಲೆಂಡ್ ಸರ್ಕಾರ ನನಗೆ ಸನ್ಮಾನ ನೀಡಿ ಪ್ರೀತಿ ತೋರಿಸಿದ್ದರ ವಿಷಯವಾಗಿ ಕೂಡ ನನಗೆ ಹೆಮ್ಮೆ ಅನಿಸುತ್ತೆ.

ಸುಭಜಿತ್ ಭದ್ರ : ನೀವು ಇತ್ತೀಚೆಗೆ ಬರೆಯುತ್ತಿರುವ ಕಾದಂಬರಿಯಲ್ಲಿ ಅಸ್ಸಾಂಗೆ ಒಂದು ಸಮಾಂತರವಾದ ಚರಿತ್ರೆ ನೀಡುತ್ತಿರುವ ಹಾಗೆ ಅನಿಸುತ್ತೆ. ಅದರಲ್ಲಿ ಒಬ್ಬ ಬೋಡೋ ಮಹಿಳೆಯ ಜೀವನವನ್ನ ಎತ್ತಿ ತೋರಿಸುತ್ತಿದ್ದೀರಿ. ನೀವು ಈ ಬರೆಹಕ್ಕೆ ಹೇಗೆ ಯಾವ ತಿರುವನ್ನ ಕೊಡಬೇಕೆಂದುಕೊಂಡಿದ್ದೀರಿ, ನಿಮ್ಮ ರಚನಾತ್ಮಕ ಜೀವನ ಕುರಿತು ನಿಮ್ಮ ಭವಿಷ್ಯದ ಯೋಜನೆಗಳೇನು?

ಇಂದಿರಾ ಗೋಸ್ವಾಮಿ : ಅಸ್ಸಾಂನ ಗಿರಿಜನರ ನಡುವೆ ಎಷ್ಟೋ ತರಹದ ಕತೆಗಳು ಹರಡಿಕೊಂಡಿವೆ. ಯಾವ ಲೇಖಕ/ಕಿ ಕೂಡ ಅವುಗಳನ್ನ ಬಳಸಿಕೊಂಡಿಲ್ಲ. ನನ್ನ ಜೀವನ ಕಾಲದ ವರ್ಷಗಳು ನಾನು ಅಸ್ಸಾಂನಿಂದ ಹೊರಗೇ ಇದ್ದು ಬಿಟ್ಟೆ. ಚಿಕ್ಕಂದಿನಲ್ಲಿ ನಾನು ಕೆಳಗಣ ಅಸ್ಸಾಂನ ಜಿಜನಿಯಲ್ಲಿ ಸ್ವಲ್ಪ ಕಾಲ ಕಳೆದಿದ್ದೆ. ಆಶ್ಚರ್ಯದ ವಿಷಯ ಅಂದರೆ ಅಹೋಂಗಳು 600 ವರ್ಷಗಳ ಕಾಲ ಅಸ್ಸಾಂನ ಎಲ್ಲಾ ಭಾಗಗಳಲ್ಲೂ ಆಳಿದ್ದವರು, ಆದರೆ ಈ ಭಾಗದಲ್ಲೆಂದೂ ಅವರು ಆಳಲಿಲ್ಲ ಅನ್ನುವುದು. ಅವರು ಒಂದು ರೀತಿಯಲ್ಲಿ ಅಸ್ಸಾಂನ ಒಗ್ಗೂಡಿಸಿದವರು. ಜಿಜನಿಯ ರಾಜ ಮನೆತನಕ್ಕೆ ನಮ್ಮ ಪರಿವಾರದೊಂದಿಗೆ ಸ್ನೇಹ ಬೆಳೆದಿತ್ತು. ನಾವು ಆನೆಯ ಮೇಲೆ ಕುಳಿತುಕೊಂಡು ಜಿಜನಿಯಲ್ಲಿ ಅಲೆದಾಡುತ್ತಿದ್ದೆವು. ಆಗ ನನಗೆ ಥೆಂಗ್ ಫಖ್ರಿನ್ನ ಕುರಿತಂತೆ ನೃತ್ಯ ನಾಟಕಗಳು ಕೇಳಿಬರುತ್ತಿದ್ದವು. ಆಕೆ ಬ್ರಿಟಿಷರ ಕಾಲದ ಭಾರತದಲ್ಲಿ ಮೊಟ್ಟ ಮೊದಲ ರೆವೆನ್ಯೂ ಕಲೆಕ್ಟರ್ ಆಗಿದ್ದ ಮಹಿಳೆ. ನಾನು ಅವಳ ವ್ಯಕ್ತಿತ್ವವನ್ನು ಕುರಿತ ಹಾಗೆ ಮನಸ್ಸಿನಲ್ಲೇ ಕಲ್ಪನೆ ಮಾಡಿಕೊಳ್ಳುತ್ತಿದ್ದೆ, ಕಾಲಾನಂತರ ಅವಳ ಜೀವನವನ್ನು ಆಧಾರವಾಗಿಟ್ಟುಕೊಂಡು ಒಂದು ಕಾದಂಬರಿಯನ್ನ ಬರೆಯಬೇಕು ಅಂತ ನಿರ್ಧಾರ ಮಾಡಿಕೊಂಡೆ. ಆದರೆ ಅದಕ್ಕೆ ಬೇಕಾದಷ್ಟು ಸಾಮಗ್ರಿ ಇರಲಿಲ್ಲ ದೆಹಲಿಯಿಂದ ಗೌಹತಿಗೆ ಹಿಂದಿರುಗಿದ ಮೇಲೆ ನಾನು ಬೇರೆ ಬೇರೆ ಮೂಲಗಳಿಂದ ಸಾಮಗ್ರಿಯನ್ನ ಸಂಗ್ರಹಿಸತೊಡಗಿದೆ, ಥಂಗ್ ಫಕ್ರಿಯ ಕಾಲದಲ್ಲಿ ಕಡೆಗಣಿಸಲಾದ ಮಹಿಳೆಯ ಸ್ಥಿತಿ-ಗತಿಗಳ ವಿಷಯವಾಗಿ ಸಂಶೋಧನೆ ನಡೆಸಿದೆ. ಕೆಳಗಣ ಅಸ್ಸಾಂ ವಿಷಯವಾಗಿ ಯಾವ ಲಿಖಿತ ಪುರಾವೆಯೂ ಇರಲೇ ಇಲ್ಲ. ಹೇಳಿ ಕೇಳಿದ ಮಾತುಗಳಷ್ಟೇ ಇದ್ದಿದ್ದು. ಬೋಡೋಗಳು ನನಗೆ ತೀವ್ರವಾಗಿ ಸಹಾಯ ಮಾಡಿದರು. ಥೆಂಗ್ ಫಖ್ರಿ ಎಲ್ಲೆಲ್ಲಿ ಇದ್ದಳೋ ಆ ಜಾಗಗಳನ್ನೆಲ್ಲಾ ಅವರು ತೋರಿಸಿದರು. ಆಮೇಲೆ ನಾನು ಬತೀರಾಂ ಬೋಡೋನ ಭೇಟಿಯಾದೆ ಆತನಿಗೆ ನೂರು ವರ್ಷಗಳಿಗಿಂತ ಹೆಚ್ಚಾಗಿತ್ತು. ಅನುಭವಿ ನಾನು ಅವನೊಂದಿಗೆ ಮಾತನಾಡಿದೆ. ಆತ ಥೆಂಗ್ ಫಖ್ರಿಯನ್ನು ನೋಡಿದ್ದನಂತೆ. ಅಲ್ಲಿಯ ಜನರನ್ನ ಕೂಡಿಸಿಕೊಂಡು ನಾನು ಒಂದು ನಿರ್ದಿಷ್ಟವಾದ ಹಳ್ಳಿಗೆ

ಹೋದ ಜೊತೆಗೆ ನಾನು ಕಾಲಾನುಕ್ರಮದ ವಿಷಯವಾಗಿ ಹಿಡಿತ ಸಾಧಿಸಬೇಕೆಂಬ ಕಾರಣದಿಂದ ಇತಿಹಾಸದ ಪುಸ್ತಕಗಳನ್ನು ಓದಲಾರಂಭಿಸಿದೆ. ಈಗ ನಾನು ಈ ಕಾದಂಬರಿಯನ್ನ ಬರೆದು ಮುಗಿಸಬೇಕು.

ಸುಭಜಿತ್ ಭದ್ರ : ನಿಮಗೆ ಅತಿ ಮೆಚ್ಚುಗೆಯಾದ ಲೇಖಕರು ಯಾರು ? ನಿಮ್ಮ ಮೆಚ್ಚಿನ ಪುಸ್ತಕಗಳು ಯಾವುವು?

ಇಂದಿರಾ ಗೋಸ್ವಾಮಿ : ವಿದ್ಯಾರ್ಥಿದೆಸೆಯಿಂಲೂ ಹೆಮ್ಮಿಂಗ್ ವೇನ ಕಂಡರೆ ನನಗೆ ಬಹಳ ಅಚ್ಚುಮೆಚ್ಚು. ಆತನ ಕಾದಂಬರಿಗಳಾದ ಫಾರ್ ಹೂಂದ ಬೆಲ್ ಟೋಲ್ಸ್ ಮತ್ತು 'ಎ ಫೇರ್‌ವೆಲ್ ಟು ಆರ್ಮ್ಸ್'ಗಳು ನನಗೆ ಯಾವಾಗಲೂ ಪ್ರೇರಣೆ ನೀಡಿವೆ. ನಾನು ದಾಸ್ತಾವಸ್ಕಿಯ ಪುಸ್ತಕಗಳ ಇಂಗ್ಲಿಷ್ ಅನುವಾದವನ್ನ ಕೂಡ ಓದುತ್ತೀನಿ. ಜಪಾನಿ ಲೇಖಕ ಯೋಕೀಯೋ ಮಿಷಿಮಾನ 'ದ ಗೋಲ್ಡನ್ ಪೆವಿಲಿಯನ್' ನನಗೆ ಅತಿ ಶ್ರೇಷ್ಠವಾದ ಕೃತಿ ಆಗಿದೆ, ಭಾರತದ ಲೇಖಕರಲ್ಲಿ ಫಣೀಶ್ವರನಾಥ ರೇಣುವಿನ 'ಮೈಲಾ ಆಂಚಲ್' ನನಗೆ ಬಹಳ ಇಷ್ಟವಾಯಿತು ಶೋಹನ್ ಸಿಂಹ್ ಶೀತಲ್‌ನ' ಜುಗ್ ಬದಲ್ ಗಯಾ ಮತ್ತೆ ಯು. ಆರ್. ಅನಂತ ಮೂರ್ತಿಯವರ 'ಸಂಸ್ಕಾರ' ನಾನು ಇಷ್ಟಪಡುವ ಪುಸ್ತಕಗಳು.

ಸುಭಜಿತ್ ಭದ್ರ : ನಿಮ್ಮ ಜೀವನದ ಅತೀವ ಆನಂದಕರವಾದ ಕ್ಷಣ ಅಂದರೆ ಯಾವುದು? ಇಂದಿನ ಯುವ ಲೇಖಕರಿಗೆ ಅವರ ಸೃಜನ ಕಲೆಗೆ ಮೆರುಗು ಕೊಡಲು ನೀವು ಸಂದೇಶ ಅಥವಾ ಹಿತ ನುಡಿ ಏನು ಹೇಳಬೇಕೆಂದು ಇಷ್ಟ ಪಡುತ್ತೀರಿ?

ಇಂದಿರಾ ಗೋಸ್ವಾಮಿ : ನಮ್ಮ ತಾಯಿಯೊಂದಿಗೆ ನಾನು ಯಾವಾಗಲೂ ನನ್ನ ಅನಂದದ ಕ್ಷಣಗಳನ್ನ ಹಂಚಿಕೊಳ್ಳ ಬಯಸಿದ್ದುಂಟು. ನನಗೆ ಜ್ಞಾನಪೀಠ ಮತ್ತು ಪ್ರಿನ್ಸ್‌ಕ್ಲಾಸ್ ಫೌಂಡೇಶನ್‌ನ ಬಹು ಮಹತ್ವದ ಸನ್ಮಾನಗಳು ಬಂದಾಗ ನಮ್ಮ ತಾಯಿ ಈ ಪ್ರಪಂಚದಲ್ಲಿರಲಿಲ್ಲ. ಅತಿ ಹೆಚ್ಚು ಆನಂದ ಕೊಟ್ಟ ಗಳಿಗೆ ಅಂದರೆ ನನ್ನ ಗಂಡ ನನ್ನೊಡನೆ ಮದುವೆಗೆ ಕರೆ ನೀಡಿದ್ದು, ಮತ್ತು ನನ್ನ ಜೀವನದಲ್ಲಿ ನೋಡಿದ ಅತಿ ಸುಂದರ ಮಹಿಳೆ ನೀನು ಅಂತ ಹೇಳಿದಾಗ. ಆಗ ನನಗೆ ಬಹಳ ಚಿಕ್ಕ ವಯಸ್ಸು. ಮಾನವೀಯತೆಯನ್ನ ನಾನು ಯಾವಾಗಲೂ ಪರಿಗಣಿಸುತ್ತೇನೆ. ನಾನು ಮಹಿಳಾವಾದಿ ಅಲ್ಲ ಮಾನವೀಯ ತುಡಿತದವಳು. ಇಂದಿನ ಯುವ ಲೇಖಕರು ಎಲ್ಲಕ್ಕಿಂತ ಮೊದಲು ಮಾನವೀಯತೆಯನ್ನು ಕುರಿತು ಮಹತ್ವ ನೀಡಬೇಕು. ವಿಜ್ಞಾನ, ಆಧ್ಯಾತ್ಮ ಇವೆರಡೂ ಜೊತೆ ಜೊತೆಯಲ್ಲಿ ಮುಂದುವರಿದಾಗ ಮಾತ್ರ ನಾವು ಎಲ್ಲ ತರಹೆಯ ಅನಾಹುತಗಳನ್ನು ತಡೆಯಲು ಸಾಧ್ಯವಾದೀತು.

ಕೃಪೆ – ಕೇಂದ್ರ ಸಾಹಿತ್ಯ ಅಕಾಡೆಮಿಯ ನಿಯತಕಾಲಿಕ ಪತ್ರಿಕೆಯಾದ
'ಇಂಡಿಯನ್ ಲಿಟರೇಚರ್'

●

ಒಂದು ಆಪ್ತ ಓದಿನ ಸುತ್ತ.....

– ಶೂದ್ರ ಶ್ರೀನಿವಾಸ್



"ವಾಲ್ಮೀಕಿ ವ್ಯಾಧ ಸ್ಥಿತಿಯಲ್ಲೂ ಇಲ್ಲ; ಹಾಗಿದ್ದುದನ್ನು ಮರೆತುಬಿಟ್ಟವನೂ ಅಲ್ಲ. ಆದ್ದರಿಂದ ಅವನಿಗೆ ಕನಿಕರವೂ ಇದೆ. ಕೋಪವೂ ಇದೆ. ಹಕ್ಕಿಯನ್ನು ವ್ಯಾಧ ಆಹಾರಕ್ಕಾಗಿಯೂ ಕೊಂದಿರಬಹುದು. ವಿಹಾರಕ್ಕಾಗಿಯೂ ಕೊಂದಿರಬಹುದು. ಋಷಿಯ ಶಾಪದ ಉಗ್ರತೆ ಅನಗತ್ಯವಾಗಿ ಅಧಿಕವಾಗಿರಬಹುದು. ಆದರೆ ವೇದನೆಯಲ್ಲಿ ಹೊಮ್ಮಿದ ಮಾತು ಲಯ ಬದ್ಧವಾಗಿದ್ದು, ಕವಿಗೆ ಉಲ್ಲಾಸವನ್ನೂ ತರುವಂತೆ ಇದೆ. ಇಂತಹ ಸ್ಥಿತಿಯ ಸೂಕ್ಷ್ಮವನ್ನು ನಾವು ಅರಿಯಬೇಕು."

ಈ ಲೇಖನವು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜ್ಞಾನಪೀಠ ಪ್ರಶಸ್ತಿ ಮಾಲೆಯ ಯು.ಆರ್. ಅನಂತಮೂರ್ತಿ ಕುರಿತ ಕೃತಿಯಿಂದ ತೆಗೆದುಕೊಂಡಿದೆ. ಇದನ್ನು ನಾನು ಅಕಾಡೆಮಿಗೆ ಸಿದ್ಧಪಡಿಸಿಕೊಟ್ಟೆ. ಈ ಲೇಖನವನ್ನು ಇಲ್ಲಿ ಪ್ರಕಟಿಸಲು ಅಕಾಡೆಮಿ ಅಧ್ಯಕ್ಷರಾದ ಪ್ರೊ. ಎಂ.ಹೆಚ್. ಕೃಷ್ಣಯ್ಯನವರು ಹಾಗು ಕೆಲವು ಸ್ನೇಹಿತರು ಸೂಚಿಸಿದರು. ಪ್ರಕಟಿಸಲು ಅನುಮತಿ ಕೊಟ್ಟಿದ್ದಕ್ಕೆ ರಿಜಿಸ್ಟ್ರಾರ್ ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ನಾನು ಋಣಿಯಾಗಿದ್ದೇನೆ.

– ಶೂದ್ರ ಶ್ರೀನಿವಾಸ್

ಮೇಲಿನ ವಾಕ್ಯಗಳು ಅನಂತಮೂರ್ತಿ ಅವರ 'ವಾಲ್ಮೀಕಿಯ ನೆವದಲ್ಲಿ' ಎಂಬ ಲೇಖನದ ಸಾಲುಗಳು. ತುಂಬ ಇಷ್ಟಪಟ್ಟು ಓದಿಕೊಂಡ ಲೇಖನ. ಇದರ ಮೂಲಕ ಅನಂತ ಮೂರ್ತಿ ಅವರಂಥ ಮಹಾನ್ ಲೇಖಕನೊಬ್ಬನ ಸೃಜನಶೀಲ ಮನಸ್ಸನ್ನು ತಿಳಿಯಲು ಗ್ರಾಸವಾಗಿದೆ. ಅವರ ಸೃಜನಶೀಲ ಮನಸ್ಸು ಕೇವಲ ಕಾವ್ಯ, ಕಾದಂಬರಿ, ಕಥೆ ಮತ್ತು ವಿಮರ್ಶೆಗೆ ಮಾತ್ರ ಮೀಸಲಾದದ್ದಲ್ಲ. ಒಟ್ಟು ಸೃಷ್ಟಿಕ್ರಿಯೆಯ ಹತ್ತಾರು ಸಂಗತಿಗಳಿಗೆ ತೆರೆದಿಟ್ಟಿರುವಂಥದ್ದು. 'ಎಂದೆಂದೂ ಮುಗಿಯದ ಕಥೆ' ಕಥಾ ಸಂಕಲನ ಬಂದಾಗಲಿಂದ ಇಲ್ಲಿಯವರೆವಿಗೂ ಸೃಜನಶೀಲ ಕ್ರಿಯೆ ಕುರಿತಂತೆ ಮತ್ತು ಅದರ ಬೇರೆ ಬೇರೆ ಚಿಂತನೆಗಳನ್ನು ಕುರಿತಂತೆ ನಾನಾ ರೀತಿಯಲ್ಲಿ ಚರ್ಚೆಗೆ ಕೇಂದ್ರ ಬಿಂದುವಾಗಿದ್ದಾರೆ. ಅವರೊಬ್ಬ ಗುಡಿಗುಡಿ ಸಾಹಿತಿಯಾಗಿರದೆ ದಾರ್ಶನಿಕ ಗುಣಗಳನ್ನು ಪಡೆದಿರುವಂಥವರು. ಅದು ನಿರಂತರ ಅನನ್ಯ ಆಯಾಮಗಳನ್ನು ಕಂಡುಕೊಳ್ಳುವಲ್ಲಿ ಗಾಂಧೀಜಿ, ಲೋಹಿಯಾ, ಮಾರ್ಕ್ಸ್, ಅಂಬೇಡ್ಕರ್ ಹಾಗೂ ಪಶ್ಚಿಮದ ಅಪ್ರತಿಮ ಲೇಖಕರ ಚಿಂತನೆಗಳಿಂದ ಪ್ರಣೀತಗೊಂಡವರು. ಎಲ್ಲವನ್ನು ಸಾವಧಾನದಿಂದ ನೋಡುವ ಮತ್ತು ಪ್ರತಿಕ್ರಿಯಿಸುವ ಕ್ರಿಯೆ ವಾಲ್ಮೀಕಿಯ ನೆವದಿಂದ ರೂಢಿಸಿಕೊಂಡವರು. ಇಲ್ಲಿ ದಕ್ಕಿರುವುದನ್ನು ಒಟ್ಟು ಚಿಂತನೆಗೆ ಸಮಾಗಮಗೊಳಿಸುವ ಜಾಣ್ಮೆ ಹಾಗೂ ತಾಳ್ಮೆ ಅವರಲ್ಲಿ ದಟ್ಟವಾಗಿ ಆವೃತಗೊಂಡಿದೆ. ಆದ್ದರಿಂದಲೇ ಅವರ ಒಟ್ಟು ಸೃಷ್ಟಿ ಆಪ್ತ ಅನ್ನಿಸುವುದು. ಇದಕ್ಕೆ ಮತ್ತೊಂದು ಮುಖ್ಯ ಕಾರಣ: ಒಬ್ಬ ಪ್ರತಿಭಾವಂತ ಕಲಾವಿದ ತನ್ನ ಚಿತ್ರದ ಸಣ್ಣಸಣ್ಣ ವಿವರಗಳನ್ನು ಗಂಭೀರವಾಗಿ ತೆಗೆದುಕೊಳ್ಳುವ ರೀತಿಯಲ್ಲಿ ತಮ್ಮ ಕಥೆಗಳಲ್ಲಿ, ಕಾದಂಬರಿಗಳಲ್ಲಿ ಹಾಗೂ ಲೇಖನಗಳಲ್ಲಿ ತಮ್ಮ ಅನುಭವದ ವಿವರಗಳನ್ನು ಶಬ್ದಗಳಲ್ಲಿ ಕಲಾತ್ಮಕಗೊಳಿಸುತ್ತಾರೆ. ಇದನ್ನು ಬರೆಯುವ ಕಾಲಕ್ಕೆ ಲಂಕೇಶ್ ಅವರು ಯಾವಾಗಲೂ ಹೇಳುತ್ತಿದ್ದ ಮತ್ತು ಗಾಢವಾಗಿ ನಂಬಿದ್ದರೂ ಒಂದು ನೆನಪಿಗೆ ಬರುತ್ತಿದೆ: "ಲೇಖಕನಾದವನು ತನ್ನ ಬರವಣಿಗೆಯಲ್ಲಿ ವಿವರಗಳ ಕುಸುರಿ ಕೆಲಸದಲ್ಲಿ ಜಿಪುಣನಾಗಬಾರದು; ಹಾಗೆಯೇ ತಾನು ಸೃಷ್ಟಿಸುವ ಶಬ್ದಗಳನ್ನು ಕುರಿತಂತೆ ನೀಚತನದ 'ಅಹಂ' ಇರಕೂಡದು. ಆಗ ಮಾತ್ರ ಅನುಭವದ ಹತ್ತಿರ ಪ್ರಾಮಾಣಿಕವಾಗಿರಲು ಸಾಧ್ಯ" ಎಂಬ ಮಾತು ಯಾವುದೇ ಉತ್ತಮ ಕೃತಿಯನ್ನು ಓದುವಾಗಲೆಲ್ಲ ನೆನಪಿಗೆ ಬರುತ್ತಿರುತ್ತದೆ.

ಯು.ಆರ್. ಅನಂತಮೂರ್ತಿ ಅವರನ್ನು ನಾನು ಈ ರೀತಿಯ ಚಿಂತನೆಯ ಹಂಬಲದಿಂದ ಓದಿಕೊಂಡು ಬಂದವನು. ಎಷ್ಟು ಬಾರಿ ಓದಿದರೂ ಜೀವನದ ಏನೇನೋ ಒಳಗುಟ್ಟುಗಳು ಗೋಚರಿಸುತ್ತಲೇ ಹೋಗುತ್ತಿರುತ್ತವೆ. ಅವರ 'ಸೂರ್ಯನ ಕುದುರೆ' ಕಥೆಯನ್ನು ಓದಿದ ಮೇಲಂತೂ; ಅದರ ನೆರಳಲ್ಲಿ ಪ್ರಶ್ನೆ, ಘಟಶ್ರಾದ್ಧ, ಮೌನಿ, ಪ್ರಸ್ತ ಹಾಗೂ ಎಂದೆಂದೂ ಮುಗಿಯದ ಕಥೆಗಳಂಥವು ಮನಸ್ಸಿನ ತುಂಬ ಥಳಥಳಗೊಂಡಿವೆ. ಹಾಗೆಯೇ ನನ್ನ ಮನದ ತುಂಬ ಅವು ಆಪ್ತವಾಗಿ ಓಡಾಡತೊಡಗಿವೆ. ಈ ದೃಷ್ಟಿಯಿಂದ ಹಡೆ ವೆಂಕಟನಂತೂ 'ಸೂರ್ಯನ ಕುದುರೆ'ಯ ಮೂಲಕ ಒಟ್ಟು ಬಾಲ್ಯಕಾಲವನ್ನು ಬೊಗಸೆಯಲ್ಲಿಟ್ಟುಕೊಂಡು ಅವಲೋಕಿಸಿ ಕೊಳ್ಳುವಂತೆ ಮಾಡಿದ್ದಾನೆ. ಈ ಪಾತ್ರದ ಮೂಲಕ ಎಷ್ಟೊಂದು ಬಾಲ್ಯಕಾಲದ ಪಾತ್ರಗಳು ಮುಗ್ಧತೆಯಿಂದ ಮುಖಾಮುಖಿಯಾಗುತ್ತವೆ. ಈ ರೀತಿ ಮಾಡಿಸುವುದೇ ಒಂದು ಸಾರ್ಥಕ ಕೃತಿಯ ಹೆಚ್ಚುಗಾರಿಕೆ ಆಗಿರುತ್ತದೆ.

ಅನಂತಮೂರ್ತಿಯವರು ನಮ್ಮ ಸಾಹಿತ್ಯಲೋಕಕ್ಕೆ ಇಂಥ ತಾದಾತ್ಮ್ಯತೆಯನ್ನು ತಂದು ಕೊಟ್ಟ ಕೆಲವೇ ಮುಖ್ಯ ಲೇಖಕರಲ್ಲಿ ಒಬ್ಬರು. ಈ ದೃಷ್ಟಿಯಿಂದ ಕಳೆದ ನಲವತ್ತು ವರ್ಷಗಳಿಂದ ನನ್ನ ಗ್ರಹಿಕೆಯನ್ನು ವಿಸ್ತರಿಸುತ್ತಲೇ ಬಂದಿದ್ದಾರೆ. ಹಾಗೆ ನೋಡಿದರೆ 'ಸಾಕ್ಷಿ' ತ್ರೈಮಾಸಿಕ

ಸಾಹಿತ್ಯಕ ಪತ್ರಿಕೆಯಲ್ಲಿ 'ಪ್ರಜ್ಞೆ ಮತ್ತು ಪರಿಸರ' ಲೇಖನ ಪ್ರಕಟವಾದಾಗ ಎಂತೆಂಥ ಚರ್ಚೆ ಮತ್ತು ಸಂವಾದಗಳಿಗೆ ಬಾಗಿಲು ತೆರೆಯಿತು. ಇದರಿಂದ ಅವರ ಒಟ್ಟು ಸಾಹಿತ್ಯವನ್ನು ವಿವಿಧ ಹಂತಗಳಲ್ಲಿ ಅವಲೋಕಿಸಿಕೊಳ್ಳಲು ಸಾಧ್ಯವಾಗಿದೆ. ಈ ಅವಲೋಕನ ಕೇವಲ ಅನಂತಮೂರ್ತಿಯವರಿಗೆ ಮಾತ್ರ ಒಳಗೊಂಡದ್ದಲ್ಲ. ಲಂಕೇಶ್ ಅಂಥವರನ್ನು ಓದುವುದಕ್ಕೆ ಒಂದು ಸಿದ್ಧತೆಯನ್ನು ಕೊಟ್ಟಿದೆ. ಅದರಿಂದ ನಮ್ಮ ಅರಿವು ಸದಾ ಆರೋಗ್ಯಪೂರ್ಣರಾಗಿರಲು ಅನುಕೂಲವಾಗಿದೆ. ನಮ್ಮ ಸಾಂಸ್ಕೃತಿಕ 'ಸ್ಕೂಲ್ ಆಫ್ ಥಾಟ್'ಗಳು ಚೇತೋಹಾರಿಯಾಗಿರುವಂತೆ ಕೆಲಸ ಮಾಡಿವೆ. ಈ ಮೂರು ನಾಲ್ಕು ದಶಕಗಳು ನಮ್ಮಂಥವರಿಗೆ ಲಂಕೇಶ್ ಹಾಗೂ ಅನಂತಮೂರ್ತಿಯಂಥವರ ಒಡನಾಟವನ್ನು ಕೊಟ್ಟು ಸಾರ್ಥಕ್ಯವನ್ನು ಬೆಳೆಸಿದೆ. ಯಾಕೆಂದರೆ ವಾಗ್ವಾದಗಳು ಮತ್ತು ಸಂವಾದಗಳು ಈ ಇಬ್ಬರು ಪ್ರಮುಖ ಲೇಖಕರ ಬೆನ್ನಿಗೆ ಅಂಟಿಕೊಂಡೇ ಬಂದಿದ್ದರಿಂದ ಒಟ್ಟು ಸಾಂಸ್ಕೃತಿಕ ಪರಿಸರ ಅದ್ಭುತವಾದ ಲವಲವಿಕೆಯನ್ನು ಪಡೆದಿದೆ. ಇಲ್ಲಿಂದ ಎಂತೆಂಥ ಮನಸ್ಸುಗಳು ಅರಳಲು ಸಾಧ್ಯವಾಗಿದೆ. ನಮ್ಮ ಸಾಮಾಜಿಕ ಸಂದರ್ಭದ ಚೇತೋಹಾರಿ ವಾತಾವರಣಕ್ಕೆ ಇವರಿಬ್ಬರೂ ಕಾರಣರಾಗಿದ್ದಾರೆ.

ಹಿಂದೆ ಫ್ರಾನ್ಸ್‌ನ ರಾಜಕೀಯ ಮತ್ತು ಸಾಹಿತ್ಯಕ ವಾತಾವರಣವನ್ನು ಕುರಿತಂತೆ ಮಾತಾಡುವಾಗ ಆಗಿನ ಅಧ್ಯಕ್ಷ ಜನರಲ್ ಡಿಗಾಲೆ ಮತ್ತು ಅದ್ಭುತ ಚಿಂತಕ ಮತ್ತು ಲೇಖಕ ಜೀನ್‌ಪಾಲ್ ಸಾರ್ತ್ರೆ ಇಬ್ಬರನ್ನು ಸೇರಿಸಿ ಮಾತಾಡುತ್ತಿದ್ದರು. ಸಾರ್ತ್ರೆ ಜಗತ್ತಿನ ವಿದ್ಯಮಾನಗಳ ಬಗ್ಗೆ ಎಷ್ಟು ಕ್ರಿಯಾಶೀಲರಾಗಿದ್ದರೋ ಅಷ್ಟೇ ಚುರುಕು ಮತ್ತು ಸಂವೇದನಾಶೀಲತೆಯನ್ನು ಫ್ರಾನ್ಸ್ ಕುರಿತಂತೆ ಸಾರ್ತ್ರೆ ಹೊಂದಿದ್ದರು. ಇದನ್ನು ಕುರಿತಂತೆ ಜನರಲ್ ಡಿಗಾಲೆ ಮುಕ್ತಮನಸ್ಸಿನಿಂದ ಸಾರ್ತ್ರೆಗೆ ಸಂಬಂಧಿಸಿದಂತೆ ಮಾತಾಡಿದ್ದಾರೆ: ನಮ್ಮ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭದ ನಿಜವಾದ ವಿರೋಧಪಕ್ಷದ ನಾಯಕರೆಂದು ಕನ್ನಡದ ನೆಲದ ದೃಷ್ಟಿಯಿಂದ ಅನಂತಮೂರ್ತಿ ಅವರು ಮತ್ತು ಲಂಕೇಶ್ ಅವರು ಈ ಕೆಲಸವನ್ನು ತುಂಬ ಮಾರ್ಮಿಕವಾಗಿ ಮಾಡಿದವರು. ಇದನ್ನು ಉತ್ಪ್ರೇಕ್ಷೆಯಾಗಿ ನೋಡಬಾರದು. ಒಂದು ರೀತಿಯಲ್ಲಿ ಎಲ್ಲ ರೀತಿಯ ಸಂವೇದನೆಗಳಿಗೆ ಮುಖಾಮುಖಿಯಾಗುತ್ತ ನಾನಾ ರೀತಿಯ ಒಳನೋಟಗಳನ್ನು ವಿಸ್ತರಿಸಿದವರು. ಇದರಿಂದ ದಿಟ್ಟತನದ ಕವಚ ಆಲಿಂಗನಗೊಂಡಿತು. ಪ್ರಗತಿ ಮತ್ತು ಸುಧಾರಣೆಯನ್ನು ಭಾವನಾತ್ಮಕವಾಗಿ ಒಪ್ಪಿಕೊಳ್ಳದೇ ಚಿಕಿತ್ಸಾ ಭಾವನೆಯಿಂದ ನೋಡಿದಾಗ ಒಂದು ಕಾಲಘಟ್ಟದ ಹೆಚ್ಚುಗಾರಿಕೆ ಸ್ಪಷ್ಟವಾಗುತ್ತದೆ.

ಅನಂತಮೂರ್ತಿಯವರು ಈ ಐದಾರು ದಶಕಗಳಲ್ಲಿ ಪ್ರಜ್ಞೆ ಮತ್ತು ಪರಿಸರ, ಸನ್ನಿವೇಶ, ಸಮಕ್ಷಮ, ಪೂರ್ವಾಪರ, ಸದ್ಯ ಮತ್ತು ಶಾಶ್ವತ, ವಾಲ್ಮೀಕಿಯ ನೆವದಲ್ಲಿ ಹಾಗೂ ಕಾಲಮಾನ ಕೃತಿಗಳಲ್ಲಿ ನಡೆಸಿರುವ ಚರ್ಚೆ ಮಹತ್ವಪೂರ್ಣವಾದದ್ದು. ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಹಾಗೂ ಸಾಹಿತ್ಯಕವಾಗಿ ಅವರು ಎತ್ತುತ್ತ ಬಂದಿರುವ ಕೆಲವು ಮೂಲಭೂತ ಪ್ರಶ್ನೆಗಳು; ಸಾಕ್ಷಿಪ್ರಜ್ಞೆಯ ವಿಸ್ತರಣೆಯ ದೃಷ್ಟಿಯಿಂದ ಅನನ್ಯವಾದವು. ಲಂಕೇಶ್ ಅವರು ತಮ್ಮ ಟೀಕೆ ಟಿಪ್ಪಣಿ ಮತ್ತು ಇತರೆ ಬರವಣಿಗೆಯ ಮೂಲಕ ಎಚ್ಚರಿಕೆಯ ಅಥವಾ ಅಭಿರುಚಿಯನ್ನು ಕಾಪಾಡಿಕೊಂಡು ಹೋಗುವುದರತ್ತ ಅಮೂಲ್ಯ ಕೆಲಸವನ್ನು ಮಾಡಿದವರು. ಅನಂತಮೂರ್ತಿ ಅವರು ಈಗಲೂ ಸುಮ್ಮನೆ ಕೂರುವವರಲ್ಲ. ನಮ್ಮ ಸಂದರ್ಭದ ಸೂಕ್ಷ್ಮ ಸಂವೇದನೆಯ ಚಿಂತಕ ಮತ್ತು ವಿಮರ್ಶಕ ಜಿ. ರಾಜಶೇಖರ್ ಅವರು ಹೇಳುವ ರೀತಿಯಲ್ಲಿ: "ಅನಂತಮೂರ್ತಿ, ತನ್ನ ಪಾಡಿಗೆ ತಾನಿರುವ ಲೇಖಕರಲ್ಲ, ಈ ಕಾಲದ ಎಲ್ಲ ಉಪದ್ವಾಪ್ಯಗಳನ್ನು ಹಚ್ಚಿಕೊಂಡು

ಸಾರ್ವಜನಿಕ ವಿದ್ಯಮಾನಗಳಿಗೆ ಮೊದಲಿನಿಂದಲೂ ಪ್ರತಿಕ್ರಿಯೆ ನೀಡುತ್ತಲೇ ಬಂದಿರುವ ಬುದ್ಧಿಜೀವಿ ಅವರು ಪಬ್ಲಿಕ್ ಇಂಟಲೆಕ್ಚುಯಲ್". ಇದು ಬೇರೆಯವರಿಗೆ ಅಪ್ರಿಯವೆನ್ನಿಸಿದರೂ ಅದನ್ನು ಎಂದೂ ಲೆಕ್ಕಕ್ಕೆ ತೆಗೆದುಕೊಳ್ಳದೇ ತಾವು ನಂಬಿದ ಧೋರಣೆಗಳಿಗೆ ಬದ್ಧರಾಗಿ ಹೋರಾಡುತ್ತಿರುವಂಥವರು. ಅದು ಭಾಷೆಯ ವಿಷಯವಿರಬಹುದು, ಶಿಕ್ಷಣದ ವಿಷಯವಿರಬಹುದು, ಗಣಿಗಾರಿಕೆಯ ವಿಷಯವಿರಬಹುದು; ಇತ್ತೀಚಿನ ದಿನಗಳಲ್ಲಿ ಹಂಪಿ ವಿಶ್ವವಿದ್ಯಾಲಯ ಭೂಹಗರಣದ ವಿಷಯವಿರಬಹುದು. ಯಾರ್‍ಯಾರನ್ನೋ ಸಂಪರ್ಕಿಸಿ ಧ್ವನಿಯನ್ನು ಸಂಘಟಿಸಲು ತಮ್ಮ ಅನಾರೋಗ್ಯವನ್ನು ಮುಂದಿಟ್ಟುಕೊಂಡವರಲ್ಲ. ಮಾನವ ಹಕ್ಕುಗಳ ರಕ್ಷಣೆಯ ದೃಷ್ಟಿಯಿಂದ; ಅದು ವ್ಯಕ್ತಿಗತ ವಿಷಯವಿರಬಹುದು, ಸಾಮೂಹಿಕ ವಿಷಯ ವಿರಬಹುದು; ತಮ್ಮ ನಿಲುವನ್ನು ದಾಖಲಿಸಲು ಎಂದೂ ಹಿಂಜರಿದವರಲ್ಲ. ಅವರಿಗೆ 'ಇದು ಅಥವಾ ಅದು' ಸರಿಯೆನ್ನಿಸದಿದ್ದರೆ ಯಾವುದಾದರೂ ಒಂದು ರೂಪದಲ್ಲಿ ತಮ್ಮ ಧ್ವನಿಯನ್ನು ದಾಖಲಿಸುವಂಥವರು. ಅದಕ್ಕೆ ಯಾರ್‍ಯಾರನ್ನೋ ಕಣಿ ಕೇಳುತ್ತ ಹೋದವರಲ್ಲ, ಪ್ರಜ್ವಲ ಮನಸ್ಸಿನಿಂದಲೇ ಹೋರಾಟಕ್ಕೆ ಪ್ರವೇಶವನ್ನು ನಿರ್ಮಿಸಿಕೊಳ್ಳುವಂಥವರು.

ನನಗೆ ತುಂಬ ಪ್ರಿಯರಾದ ಅಪೂರ್ವ ರಾಜಕೀಯ ಚಿಂತಕ ಎಸ್.ವೆಂಕಟರಾಂ ಅವರು ಎಪ್ಪತ್ತು-ಎಂಬತ್ತರ ದಶಕದಲ್ಲಿ ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಯನ್ನು ಕುರಿತು ಚರ್ಚಿಸಿದ್ದಾರೆ. ಆ ಸಂದರ್ಭದಲ್ಲಿಯ ಈ ಪ್ರತಿಕ್ರಿಯೆಯನ್ನು ಇಲ್ಲಿ ದಾಖಲಿಸುತ್ತಿರುವೆ: "ಕಾದಂಬರಿಯಲ್ಲಿ ಒಂದು ದಾರ್ಶನಿಕ ಅರಾಜಕತೆಯಿದೆ. ಅದರಲ್ಲಿ ಮಾರ್ಕ್ಸ್, ಸಾರ್ತ್ರೆ, ಲೋಹಿಯಾ ಒಬ್ಬರನ್ನೊಬ್ಬರು ತಳ್ಳಾಡುತ್ತಾರೆ. ಒಂದೊಂದು ಕಡೆ ಒಬ್ಬೊಬ್ಬರ ದರ್ಬಾರು ಇದೆ. ಇದಂತೂ ಅತ್ಯಂತ ಸ್ವಾಗತಾರ್ಹ. ಏಕೆಂದರೆ ಈ ಮೂವರು ನೀಡಬಲ್ಲ ಮಹತ್ವಪೂರ್ಣ ವಾದ ಒಳನೋಟಗಳಿವೆ. ಈ ಮೂವರನ್ನು ಸಮಗ್ರೀಕರಿಸುವ ಹೊಸ ದರ್ಶನ, ಇತಿಹಾಸಕ್ಕೆ ತಿರುವು ಕೊಡಬಲ್ಲ ಒಬ್ಬ ಹೊಸ ದಾರ್ಶನಿಕನಿಂದ ಮಾತ್ರ ಸಾಧ್ಯ. ಅಂಥ ಸಮಗ್ರೀಕರಣ ಇನ್ನೂ ದೂರವಿದೆ. ಆದರೆ ಅನಂತಮೂರ್ತಿ ಅವರು ಈ ಮೂವರು ದಾರ್ಶನಿಕರು ನೀಡುವ ಬೆಳಕಿನಲ್ಲಿ ಮಾನವನ ಪಾಡನ್ನು ಶೋಧಿಸಬಲ್ಲ ಸಾಮರ್ಥ್ಯ ಉಳ್ಳವರು." ಈ ವಾಕ್ಯಗಳನ್ನು ಕುರಿತು ಅವಲೋಕಿಸುವಾಗ ಅನಂತಮೂರ್ತಿಯವರ ಚಿಂತನೆಯ ವ್ಯಾಪ್ತಿ ಮತ್ತಷ್ಟು ವಿಸ್ತಾರಗೊಂಡಿದೆ. ಒಟ್ಟು ಜೀವನಾನುಭವಗಳನ್ನು ವರ್ತಮಾನಕ್ಕಿಟ್ಟು ನೋಡುವಾಗ 'ಋಷಿ ಸದೃಶ' ನೋಟ ವ್ಯಾಪ್ತಗೊಂಡಿದೆ. ಯಾಕೆಂದರೆ ಈ ಮೂರು ನಾಲ್ಕು ದಶಕಗಳಲ್ಲಿ ಅನಂತಮೂರ್ತಿಯವರ ಮಾನಸಿಕ ಪರಿಧಿಯಲ್ಲಿ ಮಾರ್ಕ್ಸ್, ಸಾರ್ತ್ರೆ ಮತ್ತು ಲೋಹಿಯಾ ಬದಲಾಗಿದ್ದಾರೆ. ಅಷ್ಟೇ ಏಕೆ ಗಾಂಧೀಜಿ, ಬುದ್ಧ ಮತ್ತು ಬುದ್ಧನಂಥ ಮಹಾನುಭಾವರು ಹೊಸ ಅರ್ಥಗಳಿಗೆ ಮತ್ತು ವ್ಯಾಖ್ಯಾನಕ್ಕೆ ಒಳಗಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣ: ವಾಲ್ಮೀಕಿ ಮತ್ತು ವ್ಯಾಸನಂಥ ಮಹರ್ಷಿಗಳು ಮನುಷ್ಯ ಸಂಬಂಧಗಳ ಏಳುಬೀಳುಗಳನ್ನು ಕಾವ್ಯಾಭಿವ್ಯಕ್ತಿ ಯಲ್ಲಿ ಸಂಭ್ರಮಿಸುವುದನ್ನು ಹೆಚ್ಚು ಹೆಚ್ಚು ತಮ್ಮೊಳಗೆಯೇ ಆಪ್ತವಾಗಿ ಬಿಟ್ಟುಕೊಂಡಿದ್ದಾರೆನ್ನುವುದು ಸೂಕ್ಷ್ಮವಾಗಿ ಅವಲೋಕಿಸಿದರೆ ಗೋಚರಿಸುತ್ತದೆ. ಹೌದು ಈ ಜಗತ್ತು ಏಳುಬೀಳುಗಳ ನಡುವೆ ಸುಧಾರಣೆ ಕಾಣಬೇಕು. ಆದರೆ ಆ ಸುಧಾರಣೆಯೆನ್ನುವುದು ನಿಂತ ನೀರಲ್ಲ; ನಿರಂತರ ಪ್ರಕ್ರಿಯೆ. ಆದ್ದರಿಂದಲೇ ಮಾನವ ಸ್ವಭಾವದ ಬೌದ್ಧಿಕ ಚಿಂತನೆಗಳು ಏನೇನೋ ಆಯಾಮಗಳನ್ನು ಪಡೆಯುತ್ತ ಮುಂದಿನ ಆವಿಷ್ಕಾರಕ್ಕೂ ರಂಗವನ್ನು ಸಜ್ಜುಗೊಳಿಸುತ್ತ ಮೌನವಾಗಿ ಮುಂದೆ ಹೋಗುತ್ತಲೇ ಇರುತ್ತದೆ. ಈ ದೃಷ್ಟಿಯಿಂದ ನಮ್ಮ ನಿನ್ನೆಯ ಓದು ಇಂದಿನ ಓದಲ್ಲ. 'ಮರು ಓದು ಮತ್ತು ಮರು ಚಿಂತನೆ' ಎಂಬುದು ಜೀವನವನ್ನು ವ್ಯಾಖ್ಯಾನಿಸುವುದಕ್ಕೂ ಬೇಕಾಗುತ್ತದೆ.

ಮಹಾಕೃತಿಗಳನ್ನು ಮರುಪರಿಶೀಲನೆಗೆ ಒಳಪಡಿಸುವುದಕ್ಕೂ ಬೇಕಾಗುತ್ತದೆ. ಜಗತ್ತಿನ ಶ್ರೇಷ್ಠ ಕೃತಿಗಳೆಲ್ಲ, ನೋಟಗಳೆಲ್ಲ ಹೊಸ ಓದಿಗೆ ಮತ್ತು ಹೊಸ ನೋಟಕ್ಕೆ ನಮ್ಮನ್ನು ದಬ್ಬುತ್ತಲೇ ಇರುತ್ತವೆ. ಬದುಕಿನ ನವದ್ವಾರಗಳು ಮತ್ತು ನರಕದ್ವಾರಗಳು ನಿರಂತರ 'ಆಯಾಸ' ಎಂಬುದನ್ನು ಮುಂದಿಟ್ಟುಕೊಳ್ಳದೆ ಸೂಕ್ಷ್ಮಗೊಳ್ಳುತ್ತ ಹೋಗುತ್ತಿರುವುದು. ಇಂಥ ಸಮಯದಲ್ಲೆಲ್ಲ ಸೃಷ್ಟಿಕರ್ತ ಮತ್ತು ಸೃಷ್ಟಿಯನ್ನು ಅನುಭವಿಸುವುದರ ನಡುವೆ ಒಂದು ರೀತಿಯ ಅನನ್ಯ ತಾದಾತ್ಮ್ಯ ಇರಲೇಬೇಕಾಗುತ್ತವೆ. ಅದರಲ್ಲೂ ನಮ್ಮಂಥ ಬಹುಮುಖೀ ಸಮಾಜದಲ್ಲಿ ದಿನನಿತ್ಯದ ಕ್ಷುಲ್ಲಕ ಹಾಗೂ ಗುಮಾನಿಗಳ ಮೂಲಕ ನನ್ನ ಮುಂದಿರುವ ಬಯಲು ಅರ್ಥಾತ್ ಜೀವನ ಕಿಂಚಿತ್ತು ಗೊತ್ತಾಗುವುದಿಲ್ಲ. ಋಷಿ ಸದೃಶ ಎನ್ನುವುದು ಕೇವಲ ಋಷಿಗೆ ಮಾತ್ರವಲ್ಲ ಋಷಿಯನ್ನು ಮನದೊಳಗೆ ಬಿಟ್ಟುಕೊಳ್ಳುವವನಿಗೆ ಅನಂತವಾದ ಅಭಿರುಚಿ ಪ್ರೇರಿತ ಅಂತಃಶಕ್ತಿ ಧಾರಣಗೊಂಡಿರಬೇಕು ಅನ್ನಿಸುತ್ತದೆ. ಇಲ್ಲದಿದ್ದರೆ ನಾವು ಅಥವಾ ನಾನು ಏಕಮುಖಿತ್ವದಲ್ಲಿ ಸಿಕ್ಕಿಕೊಂಡು ಬಹುಮುಖಿತ್ವ ಕೊಡುವ ಸಂಭ್ರಮದಲ್ಲಿ ಪಾಲುದಾರನಾಗದೇ ಹೋಗಬಹುದು. ಅನಂತಮೂರ್ತಿ ಅವರಂಥ ಲೇಖಕರು ತಮ್ಮ ಒಟ್ಟು ಸೃಷ್ಟಿಕ್ರಿಯೆಯನ್ನು ಅರ್ಥೈಸುತ್ತಲೇ ಬಹುಮುಖಿಯತ್ತ ಕೊಂಡೊಯ್ಯುತ್ತಿರುತ್ತಾರೆ.

ಅನಂತಮೂರ್ತಿಯವರು ಯಾವಾಗಲೂ ಕಾವ್ಯದ ಸಂದರ್ಭದಲ್ಲಿ ಒತ್ತುಕೊಟ್ಟು ಹೇಳುವ: 'ಓದಿಕೊಳ್ಳುವ–ಓದುವ' ಈ ಎರಡು ಶಬ್ದಗಳ ಅರ್ಥತೆಯ ಸಂಭಾವ್ಯತೆಯನ್ನು ಕುರಿತು ನಾನಾ ರೀತಿಯಲ್ಲಿ ಯೋಚಿಸಲು ಪ್ರಯತ್ನಿಸಿರುವೆ. ಯಾಕೆಂದರೆ ಇದು ನಮ್ಮ ನಮ್ಮ ಬದುಕಿಗೆ ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲೂ ಕೆಲಸ ಮಾಡುತ್ತಿರುತ್ತದೆ. ಎಲ್ಲವನ್ನು ನಾವು ಒಳಗೆ ಬಿಟ್ಟುಕೊಳ್ಳಲು ಆಗುವುದಿಲ್ಲ. ಇದಕ್ಕೆ ಮುಖ್ಯ ಕಾರಣ: ನಮ್ಮ ಜೀರ್ಣಕ್ರಿಯೆಯಲ್ಲಿಯೇ ನಾನಾ ರೀತಿಯ ತೊಡಕುಗಳಿರುತ್ತವೆ. ಆದ್ದರಿಂದ 'ಓದುವ' ಎನ್ನುವ ಮತ್ತು ನೋಡುವ ಎಂಬುದರ ಮುಂದೆ ವಿಚಾರಪ್ರಿಯತೆ ಎಂಬುದು ನಿಜವಾಗಿಯೂ ಕೆಲಸ ಮಾಡಬೇಕಾಗುತ್ತದೆ. ನನ್ನ ಕಾಲಘಟ್ಟದಲ್ಲಿ ಅನಂತಮೂರ್ತಿಯಂಥವರು, ಲಂಕೇಶ್ ಅಂಥವರು ಇದನ್ನು ಕೊಟ್ಟಿದ್ದಾರೆ ಮತ್ತು ವಿಸ್ತರಿಸಿದ್ದಾರೆ. 'ಸೂರ್ಯನ ಕುದುರೆ'ಯ ಹಡೆ ವೆಂಕಟ ಒಂದು ಕಥೆಯ ಮಹಾಪಾತ್ರ ಮಾತ್ರವಲ್ಲ. ನಮ್ಮ ಬದುಕಿನ ಬಾಲ್ಯ ಕಾಲವನ್ನು ನಿರಂತರ 'ಫ್ರೆಷ್' ಆಗಿ ನೋಡಿಸುವ ಪಾತ್ರ, ಹಡೆ ವೆಂಕಟನನ್ನು ಒಂದು ಕಥೆಯ ಪಾತ್ರವಾಗಿ, ಅನಂತಮೂರ್ತಿಯವರ ಜೀವನಾನುಭವದ ಪಾತ್ರವಾಗಿ ನೋಡುವುದು ಬೇರೆ. ಆದರೆ ವೆಂಕಟನಂಥವರು ಮೈಕೊಡವಿಕೊಂಡು, ಸಟೆದು ನಿಂತು ಬದುಕುವಂಥವರಲ್ಲ. ಒಂದು ಸಾಮಾಜಿಕ ಪರಿಸ್ಥಿತಿಯಲ್ಲಿ ಇಂಥ ಪಾತ್ರಗಳು ನಿಚ್ಚಳವಾಗಿ ನಮ್ಮ ಮುಂದೆ ಓಡಾಡಿಕೊಂಡಿರುತ್ತವೆ. ತುಂಬ ಮುಗ್ಧ ಜನ ಏನೇನು ವಂಚನೆಯನ್ನು ಅರಿಯದವರು. ಬದುಕಿನ ದಾರಿ ಕಂಡುಕೊಳ್ಳುವ ಸಮಯದಲ್ಲಿ ಒತ್ತಾಸೆಯನ್ನು ಪಡೆಯದವರು. ಇವಕ್ಕೆ ಮುಖ್ಯ ಕಾರಣ: ನಮ್ಮ ಕುಟುಂಬ ವ್ಯವಸ್ಥೆ ಹೇಗೋ ಬದುಕಿ ಬಂದುಬಿಟ್ಟವೆ. ಹಾಗೆಯೇ ಹೇಗೋ ಬದುಕಿ ಹೋಗುತ್ತಾರೆ. ಇವರಲ್ಲ ರಚನಾತ್ಮಕತೆಗೆ ಪಕ್ಕಾಗುವುದಿಲ್ಲ. ಕಥೆಗಾರ ಅನಂತಮೂರ್ತಿ ಅವರು ತಾವು ಮೇಲು ಎಂಬುದನ್ನು ಮರೆತು ಹಡೆ ವೆಂಕಟನ ಕುಟುಂಬವನ್ನು ವಿಮರ್ಶಾಭಾವದಿಂದ 'ಸಿಂಪಥೆಟಿಕ್' ಆಗಿ ನೋಡುವುದಿದೆಯಲ್ಲ; ಅದು ಮಹತ್ವಪೂರ್ಣವಾದದ್ದು. ಇಲ್ಲಿ ಕಥೆಗಾರ ಕರುಣೆಯನ್ನು ಧಾರೆಯೆರೆಯಲು ಬಂದಿಲ್ಲ. ಅವನ ಕುಟುಂಬದ ವಿಷಾದ ದುಃಖ ಮತ್ತು ಸಂಕಟದ ಏಳುಬೀಳುಗಳನ್ನು ಮುಚ್ಚಿಟ್ಟುಕೊಳ್ಳಲು ಒಲ್ಲದ ಲವಲವಿಕೆಯನ್ನು ತುಂಬಿಕೊಳ್ಳುವನು. ಆ ಲವಲವಿಕೆ ಅವನಿಗೆ ಆ ಕ್ಷಣಕ್ಕೆ

ಜೀವನಾಧಾರವಾದದ್ದು. ಹೌದು, ಈ ಕುಟುಂಬ ನನಗೆ ಅಂಟಿಕೊಂಡಿದೆ. ಹೇಗೋ ಕಾಲ ಕಳೆದು 'ಕಣ್ಣು' ಮುಚ್ಚಬೇಕು ಎಂಬುದು ಪರಾರಿತನವಲ್ಲ. ಅದಕ್ಕೆ ಹಾಗೆ ಆರೋಪಿಸಿಕೊಂಡು ಬದುಕಬೇಕಾಗುತ್ತದೆ. ಯಾಕೆಂದರೆ ಈ ರೀತಿಯ ಅವ್ಯವಸ್ಥೆ ಸಮಾಜದಲ್ಲಿ ಇಂಥ ಸಾವಿರಾರು ಕುಟುಂಬಗಳನ್ನು ನೋಡಬಹುದು. ಎಂತೆಂಥ ಹಡೆ ವೆಂಕಟರು ಅಸಹಾಯಕರಾಗಿ ಓಡಾಡಿಕೊಂಡಿರುತ್ತಾರೆ. 'ಸೂರ್ಯನ ಕುದುರೆ' ಮತ್ತೆ ಮತ್ತೆ ಓದುವ ಪರಿಕಲ್ಪನೆ ದಟ್ಟವಾಗಿ ಉಳಿಯುವುದು ಒಂದು 'ಎಪಿಕ್' ಕಲಾಕೃತಿ ಬಯಸುವುದನ್ನೆಲ್ಲ ಹಿಂದೆ ಲಂಕೇಶ್ ಅವರು ಹೇಳಿರುವುದನ್ನು ಪ್ರಸ್ತಾಪಿಸಿದಂತೆ ವಿವರಗಳ ವಲಯವನ್ನು ವಿಸ್ತರಿಸುವಲ್ಲಿ ಸೃಜನಶೀಲ ಲೇಖಕರಾಗಿ ಜುಗ್ಗಾ ಆಗದಿರುವುದು. ಹಾಗೆಯೇ 'ಸೂರ್ಯನ ಕುದುರೆ' ಮತ್ತೆ ಮತ್ತೆ ಓದಿದಂತೆಲ್ಲ; ವೆಂಕಟನಂಥವರು 'ಹೆಳವನ ಹೆಗಲ ಮೇಲೆ ಕೂತ ಕುರುಡನಂಥವರು' ಎಂಬ ಭಾವನೆ ವಿಸ್ತಾರಗೊಳ್ಳುತ್ತದೆ, ಕ್ಷೀಣಿಸುವುದಿಲ್ಲ.

ಅನಂತಮೂರ್ತಿಯವರು ಒಬ್ಬ ಗಂಭೀರ 'ಕ್ರಿಟಿಕಲ್ ಇನ್‌ಸೈಡರ್' ಆಗಿ ತಮ್ಮ ಸೃಷ್ಟಿಕ್ರಿಯೆಯ ಪಾತ್ರಗಳನ್ನೆಲ್ಲ ಬೊಗಸೆಯಲ್ಲಿಟ್ಟುಕೊಂಡು ನೋಡುತ್ತಿದ್ದರೂ ಅದಕ್ಕೊಂದು ಅಂತರವಿದೆ. ಅದಕ್ಕೇ ಹಡೆ ವೆಂಕಟನಂಥ, ಅವಸ್ಥೆಯ ಕೃಷ್ಣಪ್ಪನಂಥ, ಭಾರತೀಪುರದ ಜಗನ್ನಾಥನಂಥವರು ಹಾಗೂ ಘಟಶ್ರಾದ್ಧದ ಯಮುನಕ್ಕನಂಥವರು ಸಂಸ್ಕಾರದ ಪ್ರಾಣೇಶಾಚಾರ್ಯರಂಥವರು ಜೀವಂತವಾಗಿ ನಮ್ಮ ಮುಂದೆಯೇ ಓಡಾಡಿಕೊಂಡಿರುವ ರೀತಿಯಲ್ಲಿ ಭಾಸವಾಗುತ್ತದೆ. ಇವರೆಲ್ಲ ಮಹಾನ್‌ಕೃತಿಗಳಲ್ಲಿ ಕಳೆದು ಹೋದವರಲ್ಲ ಜೀವಂತವಾಗಿ ಓಡಾಡಿಕೊಂಡಿರುವವರೇ ಆಗಿದ್ದಾರೆ. ಯಾಕೆಂದರೆ ಯಾವುದೇ ಸಮಾಜ; ಸತ್ತ ಸಮಾಜವಲ್ಲ. ಸುಖವೋ ದುಃಖವೋ ಬದುಕನ್ನು ಅಪ್ಪಿಕೊಂಡೇ ಇರುತ್ತದೆ. ಇಂಥ ಸಮಯದಲ್ಲಿ ಸೂಕ್ಷ್ಮ ಪ್ರಜ್ಞೆಯ ಲೇಖಕನಾದವನು 'ಕ್ರಿಟಿಕಲ್ ಇನ್‌ಸೈಡರ್' ಆಗಿಯೇ ಇರುತ್ತಾನೆ ಅನ್ನಿಸುತ್ತದೆ. ಇಲ್ಲದಿದ್ದರೆ ಬದುಕಿನ ಅಥವಾ ತನ್ನ ಅನುಭವದ ತೆಕ್ಕೆಗೆ ಬಂದ ಯಾವುದೂ ಆಪ್ತಸೃಷ್ಟಿಯಾಗಲೂ ಸಾಧ್ಯವಿಲ್ಲ. ಇಂಥ ಸಮಯದಲ್ಲಿಯೇ ಅತ್ಯಂತ ಸೂಕ್ಷ್ಮ ಸಂವೇದನೆಯ ಲೇಖಕಿ ಮತ್ತು ಚಿಂತಕಿ ಸಿಮೋನ್ ವೇಲ್ ಬಗ್ಗೆ ಬರೆಯುತ್ತ: "ಆಳವಾದ ಧ್ಯಾನ, ಸತ್ಯದ ಗಮನ ಈ ಮಿಥ್ಯಾಲೋಕದಲ್ಲಿ ಬದುಕುವ ನಮಗೆ ಯಾವಾಗ ಹೇಗೆ ಸಾಧ್ಯ? ಎಂದು ಸೀಮೋನ್ ವೇಲ್ ಕೇಳುತ್ತಾಳೆ. ಹುಡುಕುವ ಆತುರ ನಮಗಿರಬಾರದು. ಏನನ್ನ ನಾವು ಉದ್ದೇಶಪೂರ್ವಕವಾಗಿ ನಿರೀಕ್ಷಿಸಬಾರದು. ಸುಮ್ಮನಿದ್ದು ನಮ್ಮ ಒಳಗೆ ಜ್ಞಾನ ಪ್ರವಹಿಸುವಂತೆ ನಿರಪೇಕ್ಷೆಯಲ್ಲಿ ನಾವು ಕಾದಿರಬೇಕು. ನಾವು ಬರಿದಾಗಬೇಕು. ನನ್ನದಾಗಬೇಕು. ಈ ಬಗೆಯ ಧ್ಯಾನವೆಂದರೆ ಪೂರ್ಣಶ್ರದ್ಧೆಯ ಪ್ರಾರ್ಥನೆಯಾಗಿರುತ್ತದೆ......." ಹೀಗೆಯೇ ಮುಂದುವರಿದು "ಮಾನವ ಸ್ಥಿತಿಯಲ್ಲಿನ ಮೂಲ ವಿರೋಧವೆಂದರೆ, ಅವನು ಕಡ್ಡಾಯಗಳಿಗೆ ಒಳಗಾಗಿದ್ದಾನೆ. ಆದರೆ ನ್ಯಾಯಕ್ಕಾಗಿ ಹಂಬಲಿಸುತ್ತಾನೆ. ನಿಯತಿಯಲ್ಲಿ ಅವನು ನಿರ್ಬಂಧಿತ; ಆದರೆ ಒಳಿತಿಗಾಗಿ ಹಾತೊರೆಯುತ್ತಾನೆ. ಅವನ ದೇಹ ಮಾತ್ರವಲ್ಲ, ಅವನ ಯೋಚನೆಗಳೂ ಹೀಗೆ ಸಿಕ್ಕಿಬಿದ್ದಿವೆ. ಆದರೂ ಒಳಿತಿಗಾಗಿ ಸತತ ಶ್ರಮಿಸುವುದೇ ಅವನ ಅಸ್ತಿತ್ವದ ಜೀವಾಳವಾಗಿದೆ. ಆದ್ದರಿಂದಲೇ ನಾವೆಲ್ಲರೂ ನಿಯತಿಗೂ ಒಳಿತಿಗೂ ನಡುವೆ ಸಂಬಂಧವಿದೆಯೆಂದು ನಂಬುತ್ತೇವೆ." ಈ ಸಾಲುಗಳ ಅರ್ಥಸಂಬಂಧವನ್ನು ಹುಡುಕುವಾಗ ಕೇವಲ ಸಿಮೋನ್ ವೇಲ್ ಮಾತ್ರವಲ್ಲ. ಅನಂತಮೂರ್ತಿ ಅವರು ಸೃಷ್ಟಿಸಿರುವ ಬಹಳಷ್ಟು ಪಾತ್ರಗಳು ಎದುರುಬದುರಾಗುತ್ತವೆ. ಸಿಮೋನ್ ವೇಲ್ ಹಿಂಸೆಯನ್ನು ಅನುಭವಿಸಿದವಳು. ಒತ್ತಾಯಕ್ಕೆ ಎಷ್ಟೆಷ್ಟನ್ನು ನುಂಗಿಕೊಂಡಳು. ಘಟಶ್ರಾದ್ಧದ ಯಮುನಕ್ಕ ನುಂಗಿಕೊಂಡಂತೆ. ಹಾಗೆ ನೋಡಿದರೆ ಬಹುಪಾಲು ಮಂದಿ ಈ ಸಮಾಜದಲ್ಲಿ ತಮ್ಮ ತಮ್ಮ

ಅನಿಸಿಕೆಗಳನ್ನು ನುಂಗಿಕೊಂಡೇ ಬದುಕುತ್ತಿರುವಂಥವರು. ಹೀಗೆ ಬದುಕುವಾಗ ಎಷ್ಟೋ ಜನ ಮಾತಾಡಲಾಗದ್ದನ್ನು ಅನಂತಮೂರ್ತಿಯವರಂಥ ಸೃಜನಶೀಲ ಲೇಖಕ ಮಾತಾಡಲು ಹೊರಟಾಗ ಅಲ್ಲೆಲ್ಲ ತಮ್ಮನ್ನು ಗುರ್ತಿಸಿಕೊಳ್ಳುವ ಮಂದಿ ಸಮಾಧಾನಚಿತ್ತತೆಯನ್ನು ಆರೋಪಿಸಿ ಕೊಳ್ಳುವರು. ಈ ಆರೋಪಿಸಿಕೊಳ್ಳುವಿಕೆ ಮುಂದಿನ ದಿನಗಳಿಗೆ ಬದುಕುವುದಕ್ಕಾಗಿಯಾದರೂ ಬೇಕಾಗಿದೆ. ಇದೆಲ್ಲವನ್ನು ಅನಂತಮೂರ್ತಿ ಅವರು ನಮಗೆ ಮಂಡಿಸುತ್ತ ಹೋಗುತ್ತಿರುವುದು ನಮ್ಮ ಅರಿವಿನ ವಿಸ್ತಾರ ಸದಾ ಜಾಗೃತವಾಗಿರುವುದೇ ಆಗಿದೆ.

ನಮ್ಮೆಲ್ಲ ಚಿಂತನಾ ಕ್ರಮಗಳಿಗೆ ಒಂದು ಚಾವಡಿಯಾಗಿ ಸಾಂಸ್ಕೃತಿಕ ಒಳ ಹೊರಗುಗಳನ್ನು ಧಾರೆಯೆರೆಯುತ್ತಲೇ ಬಂದಿದ್ದಾರೆ. ಚಿಕ್ಕವರು–ದೊಡ್ಡವರು ಎಂಬ ಯಾವುದೇ ಭಾವನೆಯಿಲ್ಲದೆ ಕೇಳಿಸಿಕೊಳ್ಳುವ ಮತ್ತು ಹೇಳುವ ದೊಡ್ಡ ಗುಣವನ್ನು ಹೊಂದಿರುವುದರಿಂದಲೇ ಎಲ್ಲ ಬಹುಮುಖೀ ಮನಸ್ಥಿತಿಯವರಿಗೆ ವೇದಿಕೆಯಾಗುತ್ತಾರೆ. ಹೀಗೆ ವೇದಿಕೆಯಾಗುವ ಸಮಯದಲ್ಲಿ ಎಲ್ಲವನ್ನು ಕಾವ್ಯಾತ್ಮಕವಾಗಿ, ರೂಪಕವಾಗಿ ಮಂಡಿಸಬಲ್ಲರು: "ಅರಬ್ಬರು ಮರಳುಗಾಡಿನವರು ಬರೀ ತರಕಾರಿ ತಿಂದು ಬದುಕುವ ಸಾಧ್ಯತೆಯೇ ಅವರಿಗಿಲ್ಲ. ಆದ್ದರಿಂದ ಪ್ರವಾದಿ ಮಹಮ್ಮದ್ ಕಾಲದ ಜನರಿಗೆ ಪ್ರಾಣಿಗಳನ್ನು ತಿನ್ನಲೇಬೇಕಿತ್ತು. ತಿನ್ನುವುದಕ್ಕಾಗಿ ಅವುಗಳನ್ನು ಕೊಲ್ಲಲೇಬೇಕಿತ್ತು. ಅದಕ್ಕಾಗಿ ಪ್ರಾಣಿಗಳನ್ನು ಹೇಗೆ ಕೊಲ್ಲಬೇಕು ಎಂದು ಪ್ರವಾದಿ ಮಹಮ್ಮದ್ ಯೋಚನೆ ಮಾಡಿದ್ದರು. ಕೊಲ್ಲುವುದಕ್ಕಾಗಿ ಚೂರಿಯನ್ನು ಹರಿತ ಮಾಡುವುದನ್ನು ಆಹಾರಕ್ಕೆ ಬಳಕೆ ಯಾಗುವುದನ್ನು ಪ್ರಾಣಿ ನೋಡಬಾರದು ಎಂಬ ನಿಷೇಧವನ್ನು ಸೂಚಿಸಿದ್ದರು. ಒಂದು ಪ್ರಾಣಿಯನ್ನು ಆಹಾರಕ್ಕಾಗಿ ಕೊಲ್ಲುವಾಗ ಅದನ್ನು ಇನ್ನೊಂದು ಪ್ರಾಣಿ ನೋಡುವುದು ನಿಷಿದ್ಧ. ಕೊಲ್ಲುವ ಕ್ರಿಯೆ ಆದಷ್ಟು ಕಡಿಮೆ ನೋವಾಗದಂತೆ ಇರಬೇಕು. ಇದು ಸಂಸಾರಿಯ ಆಯ್ಕೆ." ಇಂಥದನ್ನೆಲ್ಲ ಅನಂತಮೂರ್ತಿ ಅವರು ಹೇಳುವಾಗ, ಬರೆಯುವಾಗ ಒಂದು ರೂಪಕಶಕ್ತಿಯಾಗಿ ನಮ್ಮ ಮನಸ್ಸಿನಲ್ಲಿ ನೆಲೆಸಿರುತ್ತದೆ. ಯಾಕೆಂದರೆ ಪ್ರವಾದಿ ಮಹಮದ್ ಇಷ್ಟನ್ನು ಮಾಡಬೇಕಾದರೂ; ಮೊದಲಿನಿಂದಲೂ ಇದ್ದ ಒಂದು ಕ್ರೂರ ಸಂಪ್ರದಾಯವನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಲು ಎಷ್ಟು ತಿಣುಕಾಡಿರಬಾರದು. ಕೊನೆಗೂ ಒಬ್ಬ ಸೃಜನಶೀಲ ಲೇಖಕನಾದವನು ಈ ರೀತಿಯ ರೂಪಕಗಳನ್ನು ವಿಸ್ತರಿಸುತ್ತಲೆ ಅನುಭವದ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಿರುತ್ತಾನೆ ಮತ್ತು ತನ್ನ ಒಟ್ಟು ಪರಿಸರದಲ್ಲಿ ಇಲ್ಲಿಯವರೆವಿಗೂ ಕಂಡುಂಡ ಸಂಗತಿಗಳನ್ನೆಲ್ಲ ಮಾನಸಿಕ ತೆಕ್ಕೆಗೆ ತೆಗೆದುಕೊಂಡು ಬರವಣಿಗೆಯ ರೂಪ ಕೊಡುವುದು ಅಪೂರ್ವವಾದದ್ದಾಗಿರುತ್ತದೆ.

ಮೇಲಿನ ವಾಕ್ಯಗಳಿಗೆ ಮತ್ತೊಂದು ತುದಿಯಾಗಿ ಅನಂತಮೂರ್ತಿ ಅವರ ಮನಸ್ಥಿತಿಯನ್ನು ಅರಿಯಲು ದಾಖಲಿಸುತ್ತಿರುವೆ: "ಒಂದು ಸಂತೆಯಲ್ಲಿ ನಾವು ಬದುಕ್ತಾ ಇದ್ದೀವಿ. ಈ ಆತ್ಮಾಹುತಿ ಮಾಡಿಕೊಳ್ಳುವವರು, ಮತೀಯ ಹಿಂಸೆ ಪರಭಾಷಾ ಹಿಂಸೆ ಸ್ತ್ರೀಯರ ಮೇಲೆ ಅತ್ಯಾಚಾರ, ಸ್ತ್ರೀ ಭ್ರೂಣಹತ್ಯೆ ಇವೆಲ್ಲದರ ನಡುವೆ ನಾವು ಬದುಕ್ತಾ ಇದ್ದೀವಿ. ಹೀಗೆ ಬದುಕ್ತಾ ಇದ್ದಾಗ ಅವಕ್ಕೆಲ್ಲ ಸ್ಪಂದಿಸಬೇಕು. ಆದರೆ ಸ್ಪಂದಿಸುವಾಗ ಆಳದಲ್ಲಿ ಸ್ಪಂದಿಸುವುದು ಹೇಗೆ ಅನ್ನೋದು ಒಂದು ಸಮಸ್ಯೆ". ಮುಂದುವರಿದು ಅನಂತಮೂರ್ತಿ ಅವರು ಹೀಗೆ ಬರೆಯುತ್ತಾರೆ: "ಸತ್ಯದ ಹುಡುಕಾಟ ಅಂದ್ರೆ ಅದು ಯಾವ ಚೌಕಟ್ಟಿಗೂ ಒಳಪಡದೇನೆ ಇದನ್ನ ನಾನು ಹೇಗೆ ನಿರ್ವಹಿಸಬೇಕು ಅನ್ನೋದು. ಯಾವ ರೀತಿಯ ರೂಪಕಗಳ ಮುಖಾಂತರ, ಯಾವ ರೀತಿಯ

ಕಟ್ಟುವಿಕೆಯ ಮುಖಾಂತರ ಇದನ್ನು ನಿರ್ವಹಿಸಬೇಕು ಅನ್ನೋದು. ಇದನ್ನ ತನ್ನ ಕಾಲದಲ್ಲಿ ಕುವೆಂಪು ಮಾಡಿದ್ದಾರೆ, ಬೇಂದ್ರೆ ತನ್ನ ಕಾಲದಲ್ಲಿ ಮಾಡಿದ್ದಾರೆ, ಅಡಿಗರು ಮಾಡಿದ್ದಾರೆ, ಕಾರಂತರು ಮಾಡಿದ್ದಾರೆ. ಇವರೆಲ್ಲ ತಮ್ಮ ಕಾಲದ ಸ್ಪಂದನಗಳಿಗೆ ಮಾರ್ಗಗಳನ್ನು ಕಂಡುಕೊಂಡಿದ್ದಾರೆ" ಎಂದು ಹೇಳುವುದರ ಮೂಲಕ ಒಟ್ಟು ಸಮಾಜದ ಆಗುಹೋಗುಗಳನ್ನು ಹೇಗೆ ಕ್ರಮಿಸಬೇಕು ಎಂಬುದನ್ನು ನಮಗೆ ಸೂಚಿಸುತ್ತಾರೆ. ಯಾಕೆಂದರೆ ಒಬ್ಬ ಸೂಕ್ಷ್ಮ ಪ್ರಜ್ಞೆಯ ದೊಡ್ಡ ಲೇಖಕನಿಗೆ ಸಮಾಜದ ಯಾವುದೇ ಘಟನೆ ಪರಕೀಯವಲ್ಲ. ಅಷ್ಟರಮಟ್ಟಿಗೆ ಅನಂತಮೂರ್ತಿ ಅವರು ತಮ್ಮ ಈ ದೀರ್ಘಕಾಲದ ಚಿಂತನೆಯ ಬದುಕಿನಲ್ಲಿ ಎಂತೆಂಥ ವಿಷಯಗಳಿಗೆ ಸ್ಪಂದಿಸಿದ್ದಾರೆ. ಅವರಿಗೆ ಕಾವ್ಯ, ಕಥೆ, ಕಾದಂಬರಿ ಮತ್ತು ವಿಮರ್ಶೆಯಷ್ಟೇ ಗಂಭೀರವಾದದ್ದು ದಿನನಿತ್ಯದ ಸಾಮಾಜಿಕ ಹಳವಂಡಗಳು. ಎಷ್ಟೋ ಬಾರಿ ಯೋಚಿಸಿರುವೆ; ಗೋಪಾಲಕೃಷ್ಣ ಅಡಿಗರ "ಭೂಮಿಗೀತ" ಸಂಕಲನಕ್ಕೆ ಬರೆದ ಮುನ್ನುಡಿ ಕಾವ್ಯದ ವಿಸ್ತರಣೆಯ ದೃಷ್ಟಿಯಿಂದ ಮತ್ತು ಅಡಿಗರನ್ನು 'ಮಹಾನ್' ಕವಿ ಎಂದು ಪರಿಚಯಿಸಿವುದಕ್ಕಾಗಿಯೇ ಅನಂತಮೂರ್ತಿ ಅವರ ಮುನ್ನುಡಿ ಸತ್ಯಾರ್ಥದ ಚೌಕಟ್ಟಿನಲ್ಲಿ ಒಂದು ಪ್ರಮಾಣಪತ್ರದ ರೀತಿಯಲ್ಲಿ ದಾಖಲಾಗಿರುವಂಥದ್ದು.

ಇತ್ತೀಚೆಗೆ ಮತ್ತೆ ಭೂಮಿಗೀತದ ಮುನ್ನುಡಿಯನ್ನು ಏಟ್ಸ್ ಕವಿಯನ್ನು ಕುರಿತ ದೀರ್ಘ ಪ್ರಸ್ತಾವನೆ ಹಾಗೂ ಬ್ರೆಕ್ಟ್‌ನ ಕಾವ್ಯವನ್ನು ಕುರಿತು ಲೇಖನಗಳನ್ನು ಓದಿಕೊಂಡು ಸಂಭ್ರಮಿಸಿದ್ದೇನೆ. ಕಾವ್ಯವೆಂದರೆ ಮೈಕೊಡವಿಕೊಂಡು ಎದ್ದು ಕೂರುವ ಅನಂತಮೂರ್ತಿ ಅವರು ಎಂದೂ ಆಯಾಸಗೊಂಡವರಲ್ಲ. ಒಂದು ರೀತಿಯಲ್ಲಿ ಸಾತ್ವಿಕ ದೇವತೆ ಮೈಮೇಲೆ ಬಂದವರ ರೀತಿಯಲ್ಲಿ ಉಲ್ಲಸಿತರಾಗುತ್ತಾರೆ. ಹಾಗೆ ನೋಡಿದರೆ ಅವರ ಒಟ್ಟು ಕಥಾ ಲೋಕದಲ್ಲಿಯೇ ಕಾವ್ಯದ ಸಂಭ್ರಮ ತುಂಟ ಹುಡುಗಿಯಂತೆ ಪುಟಿಯುತ್ತದೆ. ಆದ್ದರಿಂದಲೇ ಅವರ ಶ್ರೇಷ್ಠ ಕಥೆಗಳಾದ ಎಂದೆಂದೂ ಮುಗಿಯದ ಕಥೆ, ಪ್ರಶ್ನೆ, ಮೌನಿ, ಪ್ರಕೃತಿ, ಘಟಶ್ರಾದ್ಧ ಮತ್ತು ಸೂರ್ಯನ ಕುದುರೆಯಂಥ ಕಥೆಗಳು ಖಂಡ ಕಾವ್ಯಗಳ ರೀತಿಯಲ್ಲಿ ಒಳನೋಟ ಮತ್ತು ವಿಷಾದವನ್ನು ಜಿನುಗಿಸುತ್ತಲೇ ಇರುತ್ತದೆ. ಅದರಲ್ಲೂ ಗ್ರಾಮಾಂತರ ಪ್ರದೇಶದಿಂದ ಬಂದು ನಗರಗಳಲ್ಲಿ ಬದುಕನ್ನು ಕಳೆದುಕೊಂಡವರಿಗಂತೂ ಜೀವನದ ಸೆಳೆತ ಅವ್ಯಕ್ತ ವಿಷಾದದ ಮೊತ್ತವನ್ನು ಕಣ್ಮುಂದೆ ತಂದು ಕೂರಿಸುತ್ತದೆ. ಆದ್ದರಿಂದ ಈ ರೀತಿಯ ದಟ್ಟ ಅನುಭವಗಳನ್ನು ನಮಗೆ ಕೊಟ್ಟ ಅನಂತಮೂರ್ತಿ ಅವರು ತಮ್ಮ ಈ ಉದ್ದನೆಯ ಬದುಕಿನಲ್ಲಿ ಕಥೆ ಹೇಳುತ್ತ ಯಾವು ಯಾವುದಕ್ಕೋ ಸ್ಪಂದಿಸುತ್ತ; ಮುಂದೆ ಕೂತಿರುವವರನ್ನು ತಮ್ಮ ತಮ್ಮ ಬದುಕನ್ನು ಹಿಂದಿರುಗಿ ನೋಡಿಕೊಳ್ಳುವಂತೆ 'ಮೌನಿ'ಗಳಾಗಿ ಮಾಡುತ್ತಾರೆ. ಇದು ಈ ಸಮಾಜಗಳ 'ಪ್ರಕೃತಿ' ಎಂದು ಶಬ್ದಾರ್ಥಗಳನ್ನು ಸೃಷ್ಟಿಸಿಬಿಡುತ್ತಾರೆ. ಹೀಗೆ ಸೃಷ್ಟಿಸುವಾಗ ಅವರಿಗೆ ಕುವೆಂಪು, ಬೇಂದ್ರೆ, ಅಡಿಗ, ಕಾರಂತ ಅಷ್ಟೇ ಏಕೆ ಮಹಾಕಾವ್ಯಗಳ ಯಜಮಾನರಾದ ವಾಲ್ಮೀಕಿ, ವ್ಯಾಸ, ಕುಮಾರವ್ಯಾಸ, ಬ್ಲೇಕ್, ಷೇಕ್ಸ್‌ಪಿಯರ್‌ನನ್ನು ಕುರಿತು ಮಾತಾಡದಿದ್ದರೆ ಅವರಿಗೆ ತೃಪ್ತಿಯೇ ಇಲ್ಲ. ಅವರು ಅತೃಪ್ತಿಯನ್ನು ಕಲಾತ್ಮಕವಾಗಿ ಹಂಚುತ್ತಲೇ ಹೋಗುತ್ತಾರೆ. ಈ ಕಾರಣಕ್ಕಾಗಿಯೇ ಅನಂತಮೂರ್ತಿ ಅವರು ಇಂದಿಗೂ ಹೇಳಿದ್ದನ್ನೇ ಹೇಳುವ ಕಿಸುಬಾಯಿದಾಸರಂತಲ್ಲ. ನನ್ನ ಕಾಲದ ಅಪ್ರತಿಮ ವ್ಯಕ್ತಿಗಳಾದ ಓಶೋ ಮತ್ತು ಜೆ. ಕೃಷ್ಣಮೂರ್ತಿಯವರ ಮಾತನ್ನು ನೆನಪಿಸುವ ಅಥವಾ ಧ್ವನಿಸುವ ನುಡಿ ಸಂಪತ್ತು ನನ್ನ ಮುಂದೆ ಕೂರುತ್ತದೆ. ಒಂದು ಹಂತದಲ್ಲಿ ಅವರಿಗಿಂತ ಹೆಚ್ಚು ತಾದಾತ್ಮ್ಯತೆಯನ್ನು ತುಂಬಿಕೊಂಡಂಥವರು. ಯಾಕೆಂದರೆ ಒಬ್ಬ ಗ್ರೇಟ್ ಕ್ರಿಯೇಟಿವ್ ಲೇಖಕನಿಗೆ ಎಲ್ಲವನ್ನು ಸೂಕ್ಷ್ಮವಾಗಿ ಗ್ರಹಿಸುವ ಮತ್ತು ಋಷಿಯ ರೀತಿಯಲ್ಲಿ ಹೇಳುವ

ಗುಣ ಸ್ವಾಭಾವಿಕವಾಗಿಯೇ ಆವರಿಸಿಕೊಂಡಿರುತ್ತದೆ. ಇದಿಲ್ಲದಿದ್ದರೆ ಹಿಂದೆ ಪ್ರಸ್ತಾಪಿಸಿದ ರೀತಿಯಲ್ಲಿ ತಲೆಮಾರುಗಳು ಉರುಳಿದರೂ ಅವರ ಕೃತಿಗಳು ಮತ್ತೆ ಏನನ್ನೋ ಸ್ಫುರಿಸುತ್ತಲೇ ಇರುತ್ತಿರಲಿಲ್ಲ. ಈ ದೃಷ್ಟಿಯಿಂದ ತಕ್ಷಣದ ಉದಾಹರಣೆಗಾಗಿ ನನ್ನ ಕಣ್ಣ ಮುಂದೆ ಮೌನಿ ಕಥೆಯಲ್ಲಿ ಕೊನೆಯ ಘಟ್ಟದಲ್ಲಿ ಜಗಲಿಯ ಮೇಲೆ ಕೂತ ಅಪ್ಪಣ್ಣಭಟ್ಟ ಮತ್ತು ಕುಪ್ಪಣ್ಣಭಟ್ಟ ಅವರ ಚಿತ್ರ ಎಷ್ಟು ಬೃಹದಾಕಾರವಾಗಿ ನಿಲ್ಲುತ್ತದೆಂದರೆ; ನಿಜವಾಗಿಯೂ ಗಾಬರಿಯಾಗುತ್ತದೆ. ಅದು ಜಗತ್ತಿನ ಎಲ್ಲ ಸಮಾಜಗಳ 'ಕುಟುಂಬಗಳ ಛಿದ್ರಗೊಂಡ ಚಿತ್ರ. ಕೊನೆಗೂ ಈ ಸಮಾಜದಲ್ಲಿ ಅಂದರೆ ಎಲ್ಲಾ ಸಮಾಜದಲ್ಲೂ ಶತ್ರು ಮತ್ತು ಮಿತ್ರರೆಂಬುದನ್ನು ಹೇಗೆ ಅರ್ಥೈಸುವುದು? ಅವರೆಲ್ಲ ಈ ವ್ಯವಸ್ಥೆಯ ಒತ್ತಡಗಳಿಂದ ರೂಪಿತರಾದವರೇ ಎಂಬ ಅಭಿಪ್ರಾಯ. ಬಂದರೂ ಆ ಅಭಿಪ್ರಾಯ ಕೊನೆಗೂ ಸರಳವಾಗೇನು ಉಳಿಯುವುದಿಲ್ಲ. ಯಾಕೆಂದರೆ ಇಂಥದ್ದು ಇಂದು ಆಗಿ ನಾಳೆಗೆ ಮುಗಿದು ಹೋಗುವಂಥದ್ದಲ್ಲ. ಬೇರೆ ಬೇರೆ ಗೂಢಾರ್ಥಗಳನ್ನು ತುಂಬಿಕೊಂಡು ಹುತ್ತದಲ್ಲಿ ಸರ್ಪ ತೆಕ್ಕೆಗೊಂಡಂತೆ ಅನ್ನಿಸುತ್ತದೆ. ಇಲ್ಲದಿದ್ದರೆ ನಮ್ಮ ನಮ್ಮ ಬದುಕಿನ ಭ್ರಾಮಕ ಲೋಕಗಳು, ಚಕ್ರಾಧಿಪತ್ಯಗಳನ್ನು ಕಟ್ಟಿಕೊಳ್ಳುವುದು, ಉರುಳಿಸುವುದು ನಿರಂತರ ನಡೆಯುತ್ತಲೇ ಇರುತ್ತಿರಲಿಲ್ಲ. ಇತಿಹಾಸ ಚಕ್ರದಲ್ಲಿ ಕ್ರಿಸ್ತ, ಬುದ್ಧ, ಗಾಂಧಿ, ಬಸವಣ್ಣ, ಅಲ್ಲಮ, ಷೇಕ್ಸ್‌ಪಿಯರ್, ಬ್ಲೇಕ್, ನೆಹರೂ, ಅಂಬೇಡ್ಕರ್, ಲೋಹಿಯಾ ಮುಂತಾದವರು ಜೋಡಿ ಆಟದ ಚಮತ್ಕಾರಿಗಳಾಗುತ್ತಿರಲಿಲ್ಲ. ಆದ್ದರಿಂದ ಈ ಕಾಲದ ಕುವೆಂಪು, ಅಡಿಗ, ಲಂಕೇಶ ಮತ್ತು ಅನಂತಮೂರ್ತಿ ಅವರು ಆ ರೀತಿಯಲ್ಲಿ ಅರ್ಥಪೂರ್ಣ ಆಟಗಾರರೇ ಆಗಿದ್ದಾರೆ. ಹೀಗಿರುವುದರಿಂದಲೇ ಒಂದು ಸಂಸ್ಕೃತಿಗೆ ಚಾಲನೆಯೆನ್ನುವುದು ಸ್ಥಗಿತಗೊಳ್ಳದೆ ನಿರಂತರತೆಯೆನ್ನುವುದು ಪ್ರವಾಹದ ರೀತಿಯಲ್ಲಿಯೇ ಇರುವುದು. ನಾವು ಈ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದವರೂ ಆಗಿರುತ್ತೇವೆ; ಈಜಿ ದಡ ಸೇರಿ ಪ್ರವಾಹದ ದುರಂತಮುಖವನ್ನು ವರ್ಣಿಸುವವರೂ ಆಗಿರುತ್ತೇವೆ. ಈ ದೃಷ್ಟಿಯಿಂದ ತಮ್ಮ ಒಟ್ಟು ಸಾಹಿತ್ಯ ಸಾಧನೆಯಲ್ಲಿ 'ಅಸಮಾಧಾನವನ್ನು ಹಾಗೂ ಧನ್ಯತೆ'ಯನ್ನು ಹೊಂದಿರುವ ಸಾಹಿತಿ. ಈ ಚಿಂತನಾಕ್ರಮವಿರುವುದರಿಂದಲೇ ಈಗಲೂ ಜ್ಞಾನದ ಮೂಲಗಳನ್ನು ವಿನಯಪೂರ್ವಕವಾಗಿ ತಡಕಾಡುತ್ತಿರುವ ಅಪರೂಪದ ಸಾಹಿತಿ. ಇದನ್ನು ಅವರ ಲೇಖನಗಳ ಮೂಲಕ ಹಾಗೂ ಉಪನ್ಯಾಸಗಳ ಮೂಲಕ ಅಷ್ಟೇ ಏಕೆ ಅವರ ಹರಟೆಗಳ ಮೂಲಕವೂ ಇದನ್ನು ಅರಿಯಬಹುದು. ಅಲ್ಲೆಲ್ಲ ಗಟ್ಟಿಯಾಗಿ ಧ್ವನಿಸುವುದು ವಿಷಾದಯೋಗವೇ.

ಗೋಪಾಲಕೃಷ್ಣ ಅಡಿಗರು ಅನಂತಮೂರ್ತಿ ಅವರ ಮೊದಲನೆಯ ಸಂಕಲನವಾದ 'ಎಂದೆಂದೂ ಮುಗಿಯದ ಕಥೆ'ಗೆ ಮಹತ್ವಪೂರ್ಣವಾದ ಮುನ್ನುಡಿ ಬರೆದಿದ್ದಾರೆ. ಹತ್ತೊಂಬತ್ತು ನೂರು ಐವತ್ತೈದರಲ್ಲಿ ಬರೆದಿರುವಂಥದ್ದು. ಅಲ್ಲಿಯ ಪ್ರಾರಂಭದ ವಾಕ್ಯಗಳು ಹೀಗಿವೆ: "ಅತ್ಯುತ್ತಮವಾದ ವ್ಯವಸ್ಥೆಯೂ ಕೂಡಾ ಸಡಿಲಿ ಅವನತಿ ಪರವಾಗಿ ಮಾನವ ಕುಲ ಪಡಬಾರದ ಪಾಡುಪಟ್ಟು ಮತ್ತೆ ತನ್ನ ಅಗ್ನಿದಿವ್ಯದಿಂದ ಹೊರಬಿದ್ದು ಪುನಃ ತನ್ನ ಸಮತೂಕಕ್ಕೆ ಬೇಕಾದ ಧರ್ಮವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಇದೂ ಮತ್ತೆ ಮತ್ತೆ ನಡೆಯುವ ಕೆಲಸ. ಆದ ಕಾರಣ ಮಾನವ ಕುಲದ ಸಮಸ್ಯೆಗಳೆಲ್ಲವೂ ಎಲ್ಲ ಕಾಲದಲ್ಲೂ ಬಹುಶಃ ತತ್ವತಃ ಒಂದೇ ಜೀವನದಲ್ಲಿ ಕಾಣುವ ದ್ವಂದ್ವ ಅಥವಾ ಬಹುತ್ವ – ಇವೇ ಎಲ್ಲ ಕಾಲದ ಸಮಸ್ಯೆಗಳ ತಾಯಿಬೇರು: ಜನ್ಮ, ಮೃತ್ಯು, ಸುಖ, ದುಃಖ, ದೇಹ, ಆತ್ಮ, ಇಹ, ಪರ; ವ್ಯಕ್ತಿ, ಸಮಾಜ, ಸಮಗ್ರ ಮಾನವಕುಲ; ಮಾನವ ಲೋಕ, ವಿಶ್ವ ಈ ದ್ವಂದ್ವಗಳನ್ನೆಲ್ಲ ಒಂದೇ ಸ್ಥಾಯಿಯಲ್ಲಿ, ಒಂದೇ ಮುಹೂರ್ತದಲ್ಲಿ ಏಕಕಾಲಕ್ಕೆ ಕಾಣುವ ದ್ವಂದ್ವಾತೀತ ಶಕ್ತಿ ಮನುಷ್ಯನಲ್ಲಿ ಇಲ್ಲದಿರುವುದೇ

ನಮ್ಮ ಎಲ್ಲ ತೊಂದರೆಗಳಿಗೂ ಕಾರಣ ಎಂದು ತೋರುತ್ತದೆ. ಈ ದ್ವಂದ್ವಗಳನ್ನು ಒಂದೊಂದಾಗಿ ಗೆಲ್ಲುತ್ತ ಬರುವುದೇ ಪ್ರಗತಿ ಎನ್ನಬಹುದು. ಈಗ ಅನೇಕ ಶತಮಾನಗಳಿಂದ ಭಾರತದ ಸತ್ವ ಸುಪ್ತವಾಗಿದ್ದ ಕಾಲದಲ್ಲಿ ಪಾಶ್ಚಾತ್ಯಲೋಕ ಎಚ್ಚೆತ್ತು ವ್ಯಕ್ತಿಧರ್ಮವನ್ನೇ ಎತ್ತಿ ಹಿಡಿದು, ಅದೃಶ್ಯ ಶಕ್ತಿಗಳನ್ನು ಬೀಳ್ಗಳೆದು ಸಮಾಜಧರ್ಮವನ್ನು ರೂಢಿಸಿಕೊಳ್ಳದೆ, ಇಂದ್ರಿಯ ಗಮ್ಯವಾದ ಪದಾರ್ಥ ಲೋಕವೊಂದನ್ನೇ ನೆಚ್ಚಿ ವಿಜ್ಞಾನದ ಮಂತ್ರಕಂಬದ ಮೇಲೆ ಕುಳಿತು ಮೈದಾಸನ ಸ್ವರ್ಣ ಹಸ್ತದಿಂದ ಮುಟ್ಟಿದ್ದನ್ನೆಲ್ಲ ಚಿನ್ನ ಮಾಡುವೆನೆಂದು ಹೊರಟಿತು. ಅದರ ಸಾಧನೆ ಬೆರಗುಗೊಳಿಸುವಂಥದಾದರೂ ಅದರ ಸಿದ್ಧಿಯಲ್ಲಿ ಮನುಷ್ಯ ಅಂತರಂಗಲೋಕದ, ಧರ್ಮಲೋಕದ, ಅದೃಶ್ಯಲೋಕದ ಅರಿವಿನ ಅಭಾವ ವಿಜ್ಞಾನ ಧರ್ಮಮಾರಕವಾಗಲೂ ಕಾರಣವಾಯಿತು". ಈ ವಾಕ್ಯಗಳ ವಿವರಿಸುವ ಅಥವಾ ವ್ಯಾಖ್ಯಾನಿಸುವ ರೀತಿಯಲ್ಲಿ ಅನಂತಮೂರ್ತಿಯವರ ಲೇಖನಗಳಲ್ಲಿ ನೇರವಾಗಿ ಬರುವುದುಂಟು. ಆದರೆ ಅದಕ್ಕಿಂತ ಮಿಗಿಲಾಗಿ ಅನಂತಮೂರ್ತಿ ಅವರ ಐದು ದಶಕದ ಕಥೆಗಳು ಬಹುಪಾಲು ಮಟ್ಟಿಗೆ ಇದನ್ನೇ ಧ್ವನಿಸುತ್ತವೆ. ಆದ್ದರಿಂದಲೇ ಒಂದೊಂದು ಕಥೆಯನ್ನು ಓದಿ ಮುಗಿಸುವಾಗಲೆಲ್ಲ ಮೈಹಿಡಿದು ಗಡಗಡ ನಡುಗಿಸುವ ಜೀವನವೆಂದರೆ ಕೊನೆಗೂ ಇಷ್ಟೇನಾ ಎಂಬ ಭಾವಲೋಕ ದಟ್ಟೈಸುತ್ತದೆ. ನೂರಾರು ವರ್ಷಗಳಿಂದ ಬಾಳಿ ಬದುಕಿದ ಒಂದೊಂದು ಕುಟುಂಬವು ಛಿದ್ರಾವಸ್ಥೆಗೆ ತಲುಪಿದಾಗ ಸಂಕಟ ವಿಚಿತ್ರ ರೀತಿಯಲ್ಲಿ ಆವರಿಸಿಕೊಳ್ಳುತ್ತದೆ. ಇದು ಜಗತ್ತಿನ ಯಾವುದೇ ಭಾಷೆಯ ಶ್ರೇಷ್ಠ ಕಲಾಕೃತಿಯನ್ನು ಓದಿದಾಗ ಅಥವಾ ಮಹೋನ್ನತಾ ಸ್ಮಾರಕವನ್ನು ನೋಡಿದಾಗ ನಮಗೆ ಅನ್ನಿಸಬಹುದು. ಯಾಕೆಂದರೆ ನಮಗೆ ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ಆ ಪರಂಪರೆಯ ಮೂಲದ್ರವ್ಯವನ್ನು ಹೊತ್ತು ಬದುಕುತ್ತಿರುತ್ತೇವೆ. ಅಡಿಗರ ದೀರ್ಘವಾದ ಮುನ್ನುಡಿ ಒಂದು ದೃಷ್ಟಿಯಿಂದ ಒಟ್ಟು ಸಮಗ್ರ ಕಥೆಗಳ ನಾಡಿ ಹಿಡಿದು ಬರೆದಂತಿದೆ. ಹಾಗೆಯೇ ಇದಕ್ಕೆ ಹಿನ್ನುಡಿಯಾಗಿ ರಾಜೀವ ತಾರಾನಾಥರು ಪ್ರಶ್ನೆ ಕಥಾಸಂಕಲನಕ್ಕೆ ಹತ್ತೊಂಬತ್ತು ನೂರು ಅರವತ್ತೆರಡರಲ್ಲಿ ಬರೆದ ಮುನ್ನುಡಿಯು ಮತ್ತೊಂದು ರೀತಿಯಲ್ಲಿ ಇವಕ್ಕೆ ಪೂರಕವಾಗಿಯೇ ಇದೆ. ರಾಜೀವ ತಾರಾನಾಥರು ಕೇವಲ ಶ್ರೇಷ್ಠ ಸರೋದ್ ವಾದಕರು ಮಾತ್ರವಲ್ಲ, ಸಮಕಾಲೀನ ಸಾಹಿತ್ಯದ ಸಂದರ್ಭದಲ್ಲಿ ಗಂಭೀರವಾಗಿ ಪ್ರತಿಕ್ರಿಯಿಸಬಲ್ಲ ಧೀಮಂತ ಚಿಂತಕ ಕೂಡ. ಅವರ ಪ್ರತಿಕ್ರಿಯೆ ಹೀಗಿದೆ: "ಸತ್ಯ ಕತೆಯು ತೀವ್ರ ರೀತಿಯ ಸೂಕ್ಷ್ಮವೇದಿತ್ವವನ್ನು ಪಡೆದುಕೊಂಡ ಮತ್ತು ಅದಕ್ಕೆ ಬಲಿಯಾದ ಈ ಯುಗದ ಒಂದು ಫಲ. ಈ ಸೂಕ್ಷ್ಮ ವೇದನೆ ಒಂದು ದಿಕ್ಕಿನಲ್ಲಿ ನಮ್ಮ ಅತ್ಯುತ್ತಮ ಕವಿಗಳ ಸ್ವಪ್ರಜ್ಞೆಯಾಗಿ, ಅಲ್ಲದೆ ಇನ್ನೊಂದು ದಿಕ್ಕಿನಲ್ಲಿ ಅಸಂಖ್ಯಾತ ಜನರ ದ್ವಂದ್ವ-ವ್ಯಕ್ತಿತ್ವ, ಚಿತ್ತೋನ್ಮಾದದಂತಹ ಮನೋವಿಕಾರಗಳಾಗಿ ಕಾಣಿಸಿಕೊಂಡಿವೆ. ಒಂದೇ ಮೂಲವಾದ ಉದ್ಭವವಾದ ಈ ವೈಪರೀತ್ಯಗಳು ಬೇರೆ ಬೇರೆಯಾಗಿಯೇ ಉಳಿಯಬೇಕೆಂದಿಲ್ಲ; ಒಂದು ಇನ್ನೊಂದಾಗಿ ಪರಿಣಮಿಸಬಹುದು. ಒಂದರ ವೇಷದಲ್ಲಿ ಇನ್ನೊಂದು ಪ್ರಚ್ಛನ್ನವಾಗಿ ಇರಬಹುದು. ಸೂಕ್ಷ್ಮವೇದನೆಯಿಂದ ಒದಗಿದ ಈ ಸ್ವಪ್ರಜ್ಞೆ ಮತ್ತು ಮನಸ್ಸಿನ ಅಸ್ವಸ್ಥತೆಗಳ ವಿಚಿತ್ರ ಮಿಶ್ರಣ ಸಾಹಿತಿಗೊಂದು ವಿಶೇಷ ಸಮಸ್ಯೆಯಾಗಿದೆ. ಸಾಹಿತ್ಯಕ್ಕೊಂದು ಹರಿತವಾದ ದೃಷ್ಟಿಯನ್ನು ತಂದಿದೆ. ಪರಿಣಾಮವಾಗಿ ಮೊಂಡುಬಿದ್ದ ಸಾಹಿತ್ಯ-ಪ್ರಕಾರಗಳ ಮತ್ತು ಭಾವನೆಗಳ ರೂಢಿ ಜಾಡ್ಯ ನಾಶವಾಗಿದೆ." ಹೀಗೆ ಹೇಳುತ್ತ ರಾಜೀವ ತಾರಾನಾಥರು ಅನಂತಮೂರ್ತಿ ಅವರ ಕಥಾಲೋಕದ ಜೀವನ ಸಂವೇದನೆಗಳನ್ನು ಗುರುತಿಸಿದ್ದಾರೆ. ಅಡಿಗರು ಮತ್ತು ರಾಜೀವ ತಾರಾನಾಥರು ಅರ್ಥೈಸುವ ರೀತಿಯಲ್ಲಿ ಎಂಥ ಆತ್ಮೀಯವಾದ ಒನಪು ವಿಸ್ತೀರ್ಣಗೊಂಡಿದೆ.

ಅನಂತಮೂರ್ತಿ ಅವರ ಸಾಹಿತ್ಯಲೋಕಕ್ಕೆ ಯಾವಾಗಲೂ ಸಂಭ್ರಮದಿಂದ ಪ್ರವೇಶಿಸುವ ಲಂಕೇಶ್ ಅವರು ಪ್ರೀತಿ, ವಾತ್ಸಲ್ಯ ಮತ್ತು ಅಸೂಯೆಯನ್ನು ತುಂಬಿಕೊಂಡೇ ಓದುತ್ತಿದ್ದವರು. ಕಥೆಗಳಲ್ಲಿ ಜೀವನವನ್ನು ಮಂಡಿಸುವುದಕ್ಕೆ ಅನಂತಮೂರ್ತಿಯವರ ಕ್ರಾಫ್ಟ್‌ಮನ್‌ಷಿಪ್ ಬಗ್ಗೆ ಎಲ್ಲಿಲ್ಲದ ಮೆಚ್ಚುಗೆ. ಅನಂತಮೂರ್ತಿ ಅವರು ಜಗತ್ತೆಲ್ಲ ಓಡಾಡುವುದನ್ನು ನಿಲ್ಲಿಸಿ ಹೆಚ್ಚು ಬರೆಯಬೇಕೆಂಬುದು ಲಂಕೇಶ್ ಅವರ ಆಶಯವಾಗಿತ್ತು. ಈ ಆಶಯದ ಹಿಂದೆ ಸ್ವಲ್ಪ ಮಟ್ಟಿಗೆ ಸವತಿ ಮಾತ್ಸರ್ಯವಿದ್ದರೂ. (ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಲಂಕೇಶ್ ಅವರು ಮತ್ತು ಅನಂತಮೂರ್ತಿ ಅವರು ಕನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಸವತಿಗಳಿದ್ದಂತೆ ಎಂಬುದನ್ನು ಹತ್ತೊಂಬತ್ತುನೂರು ಎಪ್ಪತ್ನಾಲ್ಕರಲ್ಲಿಯೇ ಮತ್ತೊಬ್ಬ ಶ್ರೇಷ್ಠ ಕಥೆಗಾರ ದೇವನೂರು ಮಹಾದೇವ ಅವರು ಷರಾ ಎಳೆದುಬಿಟ್ಟಿದ್ದಾರೆ. ಈ 'ಸವತಿಗಳು' ಎಂಬ ಗುಣವಾಚಕದ ಬಗ್ಗೆಯೇ ಈಗಾಗಲೇ ನಾನಾ ಸಂದರ್ಭಗಳಲ್ಲಿ ಚರ್ಚೆಯಾಗಿದೆ. 'ಶೂದ್ರ'ದಲ್ಲಿಯೇ ಸಾಕಷ್ಟು ಪ್ರಕಟಿಸಿರುವೆ. ಆದರೆ ಸಂವಾದದ ದೃಷ್ಟಿಯಿಂದ ಒಟ್ಟು ಸಾಹಿತ್ಯ ಚರ್ಚೆಯಲ್ಲಿ ಗುಣಾತ್ಮಕತೆ ಗೌಣವಾಗದೆ ಚರ್ಚೆಯ ಲವಲವಿಕೆಯನ್ನು ಪ್ರತಿಷ್ಠಿಸಿದೆ. ಶ್ರೇಷ್ಠವಾದದ್ದು ಬರುವುದನ್ನು ಕುರಿತಂತೆ ಲಂಕೇಶ್ ಅವರು ಸದಾ ತೆರೆದ ಹೃದಯದವರಾಗಿದ್ದರು. ಆದ ಕಾರಣ ಡಿ.ಆರ್. ನಾಗರಾಜ್ ಮತ್ತು ನನ್ನ ಬಳಿ "ಅನಂತ್‌ಮೂರ್ತಿ ಅವರಿಗೆ ತಿಳಿಸ್ರೋ ಓಡಾಟ ಕಡಿಮೆಮಾಡಿ ಹೆಚ್ಚು ಬರೆಯಲು" ಎಂದು ಸಾಕಷ್ಟು ಬಾರಿ ಹೇಳಿದ್ದಾರೆ. ಅದನ್ನು ವಿವಿಧ ಪಾನೀಯಗಳ ಬಣ್ಣಗಳ ನಡುವೆ ರಾಯಭಾರ ಕೆಲಸವನ್ನು ಮುಗಿಸಿದ್ದೇವೆ. ಇದಕ್ಕೆ ಸಂಬಂಧಿಸಿ ಅವರಿಗೆ ಒಂದು ಪತ್ರವನ್ನು ಬರೆದಿದ್ದೆ. ಆದರೆ ಪ್ರತಿಕ್ರಿಯಿಸದೆ ನಗುತ್ತಲೇ ಸ್ವೀಕರಿಸಿದವರು. ತಮ್ಮ ಸೃಜನಶೀಲತೆಯ ಮನಸ್ಸಿನಲ್ಲಿ ನೂರಾರು ಲೇಖಕರನ್ನು ಚಿಂತಕರನ್ನು ಹಾಗೂ ಸ್ಥಳಗಳನ್ನು ಭೇಟಿಯಾಗುತ್ತಲೇ 'ಸೂರ್ಯನ ಕುದುರೆ'ಯಂಥ ಅಪ್ರತಿಮ ಕಥೆಯ ಶಿಶುವನ್ನು ಮನಸ್ಸಿನ ಗರ್ಭದಲ್ಲಿ ಕಾಪಿಟ್ಟುಕೊಂಡು ಬೆಳೆಸಿದವರು. ಇದನ್ನು ಒಂದು ಮುಖ್ಯ ಕಾರಣಕ್ಕಾಗಿ ಪ್ರಸ್ತಾಪಿಸುತ್ತಿರುವೆ: 'ಸೂರ್ಯನ ಕುದುರೆ' ಕಥೆ ಪ್ರಕಟವಾದಾಗ ಅದನ್ನು ಓದಿ ಲಂಕೇಶ್‌ರವರು ಎಷ್ಟು ಮೌನಿಯಾಗಿದ್ದರೆಂದರೆ: ಅಷ್ಟೊಂದು ಅವರನ್ನು ಡಿಸ್ಟರ್ಬ್ ಮಾಡಿತ್ತು ಆ ಕತೆಯ ಘನತೆ. ಆ ಕಥೆಯನ್ನು ನನಗೆ ಓದಲು ಹೇಳಿ; ಏನೂ ಮಾತಾಡದೆ ಒಂದೆರಡು ಗಂಟೆ ವಿಸ್ಕಿಯನ್ನು ಆಸ್ವಾದಿಸಿ ಅವರ ಕೊಠಡಿಯನ್ನು ಬಿಟ್ಟಿದ್ದೆ. ಲಂಕೇಶ್ ಅವರಿಗೆ ಈ ಪಾಟಿ ಸಂವೇದನೆ ಮತ್ತು ಮೆಚ್ಚುಗೆಯಿದ್ದುದರಿಂದ ಅನಂತಮೂರ್ತಿ ಅವರಿಗೆ ಜ್ಞಾನಪೀಠ ಬಂದಾಗ 'ಟೀಕೆ ಟಿಪ್ಪಣಿ'ಯಲ್ಲಿ ಬರೆದ ಈ ಸಾಲುಗಳು ಎಲ್ಲಾ ಕಾಲಕ್ಕೂ ಮನನ ಮಾಡುವಂಥದ್ದು. ಸ್ವಲ್ಪ ದೀರ್ಘ ಅನ್ನಿಸಿದರೂ ಇಲ್ಲಿ ದಾಖಲಿಸಲು ಬಯಸುವೆ: "ಮನುಷ್ಯನ ಕಾಮದ ವೈವಿಧ್ಯಮಯ ಮುಖಗಳನ್ನು ಕೊಡುತ್ತಲೇ ದೇಹದ ಸಮಾಜದ ವಿವಿಧ ಬಗೆಯ ವಾಸ್ತವಗಳನ್ನು ಹೇಳುವ ಈ ಕಥೆಯ ವೈಶಿಷ್ಟ್ಯವೇನೆಂದರೆ ಕಲಾವಿದ ಅನಂತಮೂರ್ತಿ ಮುಟ್ಟಿದ್ದೆಲ್ಲ ಇಲ್ಲಿ ಮೈಜುಮ್ಮೆನ್ನಿಸುವ ಚುಂಬಕ ವಾಗುತ್ತದೆ. "ತಲೆಯ ಮೇಲೆ ಬಿಳಿ ಸೆರಗು ಹೊದ್ದು ಮೈಮುಡಿ ಕಟ್ಟಿ ಹಾಲು ಕರೆಸುತ್ತಿರುವ ಶಾರದೆ, ಅಮೃತಶಿಲೆಯ ಮಂದರವಾದ ಗೋರಿ, ಬೆಳ್ದಿಂಗಳಲ್ಲಿ ದೂರ ನಿಂತು ನೋಡಬೇಕು (ಹಾಗೆ ನೋಡಿದಾಗ ಒಮ್ಮೆ 'ದೇವರ ಧಾತು ಎಷ್ಟು ಬೆಳ್ಳಗೆ !' ಅನ್ನಿಸುತ್ತದೆ.) ಎರಡು ಕಣ್ಣು ಸಾಲದು, ಯಾಕುಂದೇಂದು ತುಷಾರ ಹಾರಧವಳಾ ಯಾ ಶುಭ್ರವಸ್ತ್ರಾನ್ವಿತಾ, ಬಿಳಿಯ ಕುಂದ ಪುಷ್ಪ, ಬಿಳಿಚಂದ್ರ, ಬೆಳ್ಳಗಿನ ನೊರೆಹಾರ, ಮೈಮೇಲೆ ಬಿಳಿಯದೊಂದುದುಕೂಲ...." ಎಂದು ಮುಂತಾಗಿ ಶಾರದೆಯನ್ನು ವರ್ಣಿಸುವ ನಾಯಕನ ಕೈಯಲ್ಲಿ ಇದು ಕೇವಲ ಸ್ತ್ರೀವರ್ಣನೆಯಾಗಿ ಉಳಿಯದೆ ಇಡೀ ಕತೆ ವೈವಿಧ್ಯಮಯ

ಕಾಳಜಿ ಡೋಲಾಯಮಾನ ಸ್ಥಿತಿಯನ್ನು ನೇವರಿಸಿಬಿಡುತ್ತದೆ. ಎರಡು ಕಾಲು ಎರಡು ಕೈಗಳ ಮೇಲೆ ನಿಂತು ಸಂಭೋಗಿಸುವ ಹೆಣ್ಣು ಆಕಳು ಕಾಲಿನಂತೆಯೂ ಹೌದು, ಅಕ್ಕಮಹಾದೇವಿಯಂತೆ ಶಾರದಾಮಣಿಯಂತೆಯೂ ಹೌದು, ಹಡೆದು ಬಾಣಂತಿಯಾಗಿ ಶೀಸೆ ಹಿಡಿದು ವೈದ್ಯರ ಅಂಗಡಿ ಎದುರು ಕ್ಯೂಸಲ್ಲಿ ನಿಲ್ಲುವ ಬಡವಿಯೂ ಹೌದು. ಪ್ರೇಮದ ಸಾಮಾಜಿಕ ಮುಖ್ಯ ಅಸಂಗತ ರೂಪಗಳನ್ನು ತೋರುತ್ತಲೇ ಪ್ರೇಮದ ಸಂಜೀವಿನಿಯ ಬಗ್ಗೆ ಬರೆದು ಕಡ ಪಡೆದದ್ದು ಕೂಡ ಜೀರ್ಣವಾಗಿ ಹೋಗುವುದು ಇಲ್ಲಿ. ಈ ದೃಷ್ಟಿಯಿಂದ 'ಪ್ರಶ್ನೆ' ಅನಂತಮೂರ್ತಿಯವರ ಮುಖ್ಯಗುಣವೊಂದನ್ನು ಅರ್ಥಮಾಡಿ ಕೊಳ್ಳುವಲ್ಲಿ ಸಹಾಯಕ. ಲೇಖಕರ ಅರಿತು ಆತನ ಸಂವೇದನೆಯಾದಾಗ ಹೇಗಿರುತ್ತದೆ ಎಂಬುದನ್ನು ಇಲ್ಲಿ ತೋರುತ್ತದೆ. 'ಪ್ರಶ್ನೆ' ತರಹದ ಕಥೆಗಳನ್ನು ಇಟ್ಟುಕೊಂಡು ಹೇಳುವುದಾದರೆ ದೇಹ ಮತ್ತು ಆತ್ಮದ ಬೇಡಿಕೆಗಳನ್ನು ಮಂಡಿಸುತ್ತಲೇ ತೀರಾ ವಾಸ್ತವದ ತಿಳಿವಳಿಕೆಗಳನ್ನು ಕತೆಯ ಭಾಗವಾಗಿ, ಕಲಾತ್ಮಕವಾಗಿ ಮೂಡುವ ಅಮೂರ್ತವೆನಿಸುವಂಥದ್ದನ್ನು ಯಕ್ಷಣಿ ಮಾಡಿದಂತೆ ಮೂರ್ತಗೊಳಿಸುವ ಇಲ್ಲಿಯ ಕಲೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಪರೂಪದ್ದು, ವಿರಳವಾದದ್ದು. ಈ ನನ್ನ ಮಾತನ್ನು ಪರೀಕ್ಷಿಸಲು ಸಾಹಿತ್ಯದ ವಿದ್ಯಾರ್ಥಿಗಳು ಈ ಕಥೆಯನ್ನು ವಿವರವಾಗಿ ನೋಡಬಹುದು. ಇಲ್ಲಿ ಎಷ್ಟು ಲಾರೆನ್ಸ್, ಫ್ರಾಯ್ಡ್, ಶಾಕುಂತಲ, ಏಟ್ಸ್ ಎಂದು ಕಂಡುಹಿಡಿದರೂ 'ಪ್ರಶ್ನೆ'ಯ ಸ್ವಾರಸ್ಯಕ್ಕೆ ಧಕ್ಕೆ ಬರುವುದಿಲ್ಲ. ಅನಂತಮೂರ್ತಿ ಅವರ 'ಪ್ರಶ್ನೆ' ಕತೆಯನ್ನು ನೋಡಿದಾಗಲೇ ಅವರಿಗಿಂತ ದೊಡ್ಡ ಲೇಖಕರಲ್ಲಿ ಕಚ್ಚಾ ಸರಕು ಕಾದಂಬರಿಯ ಕಲೆಯಾಗುವುದು ಗೋಚರವಾಗುತ್ತದೆ. ಲೇಖಕ ದೊಡ್ಡವನಾಗುವುದು ಸರಕುಗಳಿಂದ ಅಲ್ಲ, ಆದರೆ ಈ ಸರಕುಗಳಿಲ್ಲದ ಸಾಹಿತಿ ಎಷ್ಟೇ ಯಾಂತ್ರಿಕತೆ ತೋರಿದರೂ ಮಹಾನ್ ಲೇಖಕನಾಗುವುದಿಲ್ಲ. ಟಾಲ್‌ಸ್ಟಾಯ್ ಕೈಯಲ್ಲಿ ನೆಪೋಲಿಯನ್ ಯುದ್ಧ ಕೃಷಿಯ ವಿವರಗಳು, ಅರಸೊತ್ತಿಗೆಯ ನಡಾವಳಿಗಳು, ಧರ್ಮದ ಸಾಕ್ಷಿಗಳು, ಪ್ರೇಮ ಮತ್ತು ಕುಟುಂಬದ ಮಾಹಿತಿಗಳು ಎಲ್ಲವೂ 'ವಾರ್ ಅಂಡ್ ಪೀಸ್'ನ ಅವಿಭಾಜ್ಯ ಅಂಗವಾಗಿ ಅರ್ಥಪೂರ್ಣವಾಗುವುದರಿಂದಲೇ ಆತನ ವಿಸ್ತಾರ ಮತ್ತು ಎತ್ತರ ಅಗಾಧ. ಈ ದೃಷ್ಟಿಯಿಂದ ಅನಂತಮೂರ್ತಿ ತಮ್ಮ ಸಾಹಿತ್ಯ ಬದುಕಿನ ಒಂದು ಘಟ್ಟದಲ್ಲಿ ಮಂತ್ರ ದಂಡ ಹಿಡಿದು ಎಸಗಿದ್ದು ವಿಚಿತ್ರವಾಗಿದೆ. ಇದು ಸಾಹಿತಿಯೊಬ್ಬ ತನ್ನ ಕಲೆಯ ಸಂಜೀವಿನಿಯನ್ನು ಹಿಂಜರಿಯಿಲ್ಲದೆ ಪರೀಕ್ಷಿಸಿ ಗೆಲ್ಲುವ ರೀತಿ ಇದೇ" ಸೃಷ್ಟಿಕಾರ್ಯ 'ಸಂಸ್ಕಾರ'ದಲ್ಲಿ ಮುಂದುವರಿದಾಗ ಉದ್ವೇಗ ಕಡಿಮೆಯಾಗಿ ಆತ್ಮವಿಶ್ವಾಸದಿಂದ ಕಡೆ ತೆರೆದುಕೊಳ್ಳುವುದು ಕಂಡುಬರುತ್ತದೆ. 'ಪ್ರಶ್ನೆ' ಕತೆಯ ಮೂಲದ್ರವ್ಯ ಇಲ್ಲಿಯೂ ಇದೆ. ಲಂಕೇಶ್ ಅವರು ಇಷ್ಟೊಂದು ಸಂಭ್ರಮದಿಂದ ಬರೆಯುವಂಥವರು, 'ಸೂರ್ಯನ ಕುದುರೆ' ಬಂದಾಗ ಭಾವನಾತ್ಮಕವಾಗಿ 'ಇಂಥ ಉತ್ತಮ ಕಥೆ'ಯನ್ನು ಬರೆದಿದ್ದಾರಲ್ಲ ಎಂದು ಸ್ವೀಕರಿಸಿದವರು ಅದನ್ನು ಕುರಿತು ಬರೆಯುವಾಗ ಹಡೆ ವೆಂಕಟನ ಜೊತೆಗೆ ಅನಂತುವನ್ನಿಟ್ಟು ನೋಡಲು ಪ್ರಯತ್ನಿಸುತ್ತಾರೆ. ಇದರಿಂದ ಕಥೆ ಸ್ವಲ್ಪ ದುರ್ಬಲವಾಗಿದೆ ಎಂದು ಭಾವಿಸುತ್ತಾರೆ. ಒಂದು ದೃಷ್ಟಿಯಿಂದ ಅನಂತು ಪಾತ್ರವಿಲ್ಲದೆ 'ಸೂರ್ಯನ ಕುದುರೆ'ಯಲ್ಲಿ ಹಡೆ ವೆಂಕಟ ಮತ್ತಷ್ಟು ತನ್ನ ಸಂಕಷ್ಟಗಳ ಮೂಲಕ ಆ ರೀತಿಯ ಕುಟುಂಬಗಳ ಚಿತ್ರದಲ್ಲಿ ಆಳಕ್ಕಿಳಿದು ಗಟ್ಟಿಗೊಳ್ಳುತ್ತಿದ್ದನೇನೋ. ಈಗ ಡಿಸ್ಟರ್ಬ್ ಮಾಡುವುದಕ್ಕಿಂತ ದುಪ್ಪಟ್ಟು ನಮ್ಮನ್ನು ಆವರಿಸಿಕೊಳ್ಳುತ್ತಿದ್ದನೇನೋ ಎಂಬ ಪುಟ್ಟ ಅನ್ನಿಸಿಕೆ ಗೋಡೆ ಮರೆಯಲ್ಲಿ ನಿಂತು ಇಣಿಕು ನೋಡುವಂತಾಗಿದೆ. ಇಷ್ಟಾದರೂ ಇದಕ್ಕೆ ಇನ್ನೊಂದು ಮುಖ ಇದ್ದೇ ಇದೆ. ಆಧುನಿಕ ಸಮಾಜದಲ್ಲಿ ಸ್ವಲ್ಪ ಏರುಪೇರು ಕಂಡಿದ್ದರೂ ವೆಂಕಟನ ಜಾಗದಲ್ಲಿ ಅನಂತು ಪಾತ್ರವು

ಇರಲು ಸಾಧ್ಯವಿತ್ತು. ಏನೇನೋ ಹೊರದಾರಿಗಳು ಸೃಷ್ಟಿಯಾಗಿ ಹಳ್ಳಿಯಿಂದ ನಗರಕ್ಕೆ ಬಂದಿರಬಹುದು. ಆದರೆ ಈ ನಗರವೆಂಬ ನರಕದಲ್ಲಿಯೂ ಎಂತೆಂಥ ಹಡೆ ವೆಂಕಟ ರೀತಿಯವರು ಓಡಾಡಿಕೊಂಡಿದ್ದಾರೆ. ತುಂಬ ನಿಸ್ಸಹಾಯಕರಾಗಿದ್ದಾರೆ. ಆಶ್ರಯವನ್ನು ಕಂಡುಕೊಳ್ಳಲು ಹಿಂಜರಿಯುವವರೂ ಇದ್ದಾರೆ. ಗಾರ್ಮೆಂಟ್ಸ್ ಫ್ಯಾಕ್ಟರಿಗಳಿಗೆ ಹೋಗುವ ಮತ್ತು ಮನೆಕೆಲಸಗಳಿಗೆ ಹೋಗುವ ಸಾವಿರಾರು ಹೆಂಗಸರು ಕೇವಲ ತುಂಬ ಕೆಳವರ್ಗದವರಿಂದ ಬಂದವರು ಮಾತ್ರವಲ್ಲ. ಮಧ್ಯಮವರ್ಗದವರಿಂದ ಬಂದವರೂ ಇದ್ದಾರೆ. ಅಂಥವರೆಲ್ಲ ಮನೆಗಳಲ್ಲಿ ಹಡೆ ವೆಂಕಟನಷ್ಟು ಮಾನವ ಪ್ರೀತಿಯನ್ನು ಪಡೆದವರು ಕಾಣುವುದಿಲ್ಲ. ತಂದೆಯಿಂದ ಮಗನವರೆವಿಗೂ ಸುಬ್ಬನ ರೀತಿಯಲ್ಲಿಯೇ ಕ್ರೌರ್ಯವನ್ನು ತುಂಬಿಕೊಂಡವರು ಇದ್ದಾರೆ.

ಇದನ್ನೆಲ್ಲ ಅರಿತ ಅನಂತಮೂರ್ತಿಯವರು ಎಂದೆಂದಿಗಿಂತ ಹೆಚ್ಚಾಗಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಸಮಾಜಮುಖಿಯಾದಾಗ; ಅತೃಪ್ತಿ, ವಿಷಾದ ಮತ್ತು ಸಿಟ್ಟನ್ನು ಒಬ್ಬ ಸಂತನಂತೆ ನುಂಗಿಕೊಂಡು ತಮ್ಮ ಒಟ್ಟು ಮಾತುಗಳಿಗೆ ಮತ್ತು ಲೇಖನಗಳಿಗೆ ಆತ್ಮೀಯತೆಯನ್ನು ಆರೋಪಿಸಿಕೊಳ್ಳುತ್ತಾರೆ. ಇದು ಅಗತ್ಯವೂ ಕೂಡ. ಇಲ್ಲದಿದ್ದರೆ ಷೇಕ್ಸ್‌ಪಿಯರ್‌ನ ಲಿಯರ್ ರೀತಿಯ ಪಾತ್ರಗಳಾಗುವ ಗಾಬರಿ ಯಾವಾಗಲೂ ನಮ್ಮ ಮುಂದೆ ಸ್ಥಾಯಿಯಾಗಿ ನಿಂತು ಬಿಡುವ ಸಾಧ್ಯತೆ ಇರುತ್ತದೆ. ಇದು ಮೂಲಭೂತವಾಗಿ ಗಾಂಧಿಯಂಥವರಿಂದ ಪ್ರಣೀತಗೊಂಡ ಸೂಕ್ಷ್ಮ ಸಂವೇದನೆಯ ಲೇಖಕರನ್ನು ಬಾಧಿಸುವ ಗುಣವಾಗಿದೆ. ಈಗಲೂ ನಮ್ಮ ಲೇಖಕ ಸಮುದಾಯದಲ್ಲಿ ಬರವಣಿಗೆ, ಪ್ರಶಸ್ತಿ ಮತ್ತು ವೇದಿಕೆಗಳಿಗಾಗಿ ಪರದಾಡುವ; ಸಣ್ಣಪುಟ್ಟದ್ದಕ್ಕೆಲ್ಲ ಗೋಗರೆಯುವ ಮಂದಿ ಇದ್ದಾರೆ. ಒಂದು ರೀತಿಯಲ್ಲಿ ಪೀಡೆಗಳ ರೀತಿಯಲ್ಲಿ ಕಾಣಿಸಿ ಕೊಳ್ಳುತ್ತಿರುತ್ತಾರೆ. ಆಗ ಕುವೆಂಪು, ಕಾರಂತ, ಅಡಿಗ, ಅನಂತಮೂರ್ತಿ, ಬೇಂದ್ರೆ, ಮಾಸ್ತಿ, ಲಂಕೇಶ್ ಅವರಂಥವರನ್ನು ಕುರಿತಂತೆ ನಮ್ಮ ಪಾಡಿಗೆ ನಾವು ಭಾವನಾತ್ಮಕವಾಗಿ ಮಾತಾಡಿಕೊಳ್ಳುತ್ತಲೇ ಹೋಗಬೇಕಾಗುತ್ತದೆ. ಯಾಕೆಂದರೆ ಇಂಥವರನ್ನು ಆಸ್ವಾದಿಸುವ ಮತ್ತು ಬಯಸುವ ಮಂದಿ ಇದ್ದಾರೆ. ಅವರಿಗೇನು ಕೊರತೆಯಿಲ್ಲ. ಆಗ ಅನಂತಮೂರ್ತಿ ಅಂಥವರು "ನಾವು ಭಾರತೀಯರು ಕರ್ಮವನ್ನು ನಂಬುತ್ತೇವೆ. ಕರ್ಮಕ್ಕೆ ತಕ್ಕ ಫಲ ಸಿಗುತ್ತದೆ ಎಂದು ತಿಳಿಯುತ್ತೇವೆ. ವರ್ಲ್ಡ್ ಟ್ರೇಡ್ ಸೆಂಟರ್‌ನ್ನು ದುಷ್ಕರ್ಮಿಗಳು ನಾಶಮಾಡಿದ ಹಿನ್ನೆಲೆಯಲ್ಲಿ ಅಮೇರಿಕಾದ ಹಲವು ಪಾಪಕೃತ್ಯಗಳು ಇವೆ. ಪಾಲೆಸ್ಟೀನ್, ಚಿಲಿ, ಹಿರೋಷಿಮಾ, ನಾಗಸಾಕಿ ಒಂದೇ ಎರಡೇ? ಹಲವು ಮುಗ್ಧರು ಅಮೆರಿಕಾದಲ್ಲಿ ಸತ್ತರು. ಹಲವು ಬಡಪಾಯಿಗಳು ಪಾಲಿಸ್ಟೇನಿನಲ್ಲಿ ಸತ್ತರು, ಚಿಲಿಯಲ್ಲಿ ಸತ್ತರು. ಮುಸ್ಲಿಮ್ ದೊರೆಗಳು ನವಾಬರು ಬಲವಾದರು. ಇದರಿಂದ ಅಮೆರಿಕಾ ಕಲಿತದ್ದೇನು? ಬದಲಾಗಿ, ಟೆರರಿಸಂನ್ನು ನಾಶಮಾಡುವ ನೆವದಲ್ಲಿ ಅಮೆರಿಕಾಕ್ಕೆ ಸಿಕ್ಕ ಫಲ ನೋಡಿ. ಆಫ್ಘಾನಿಸ್ಥಾನ ಅವರ ಕೈವಶವಾಯಿತು. ಇರಾಕ್ ಅವರ ಕೈವಶವಾಯಿತು. ಪಾಕಿಸ್ತಾನ ಮತ್ತು ಭಾರತ ಪರಸ್ಪರ ಶಾಂತಿಯನ್ನು ಬಯಸುವುದೂ ಅಮೆರಿಕದ ಅಭಿವೃದ್ಧಿಗೆ ಅಗತ್ಯವಾದಂತಾಯಿತು. ಈಗ ಬುಷ್‌ನ ಖ್ಯಾತಿ ಸ್ವಲ್ಪ ತಗ್ಗಿದೆಯಂತೆ, ಆದರೆ ಇನ್ನೊಬ್ಬ ಬಂದು ಅವನ ಜಾಗದಲ್ಲಿ ಕುಳಿತು ಅನಿವಾರ್ಯವೆಂಬಂತೆ ತನ್ನ ಹಿಂದಿನವರು ಮಾಡಿದ್ದನ್ನೇ ಮುಂದುವರಿಸುತ್ತಾರೆ" ಇಂಥದನ್ನೆಲ್ಲ ಕುರಿತು ಗಟ್ಟಿಧ್ವನಿಯಲ್ಲಿ ಸಾಂಸ್ಕೃತಿಕ ವಿರೋಧ ಪಕ್ಷದ ನಾಯಕರಂತೆ ಕೂಗುತ್ತಾರೆ, ಧ್ವನಿಸುತ್ತಾರೆ. ಇಲ್ಲಿಯೂ ನಮ್ಮ ಸಾಮಾಜಿಕ ಸಂದರ್ಭ ಕೊಟ್ಟ ಕೊಡುಗೆಯಂತೆ; ಕೊಂಕಿನಿಂದ, ವ್ಯಂಗ್ಯದಿಂದ ಮತ್ತು ಸಿನಿಕತನದಿಂದ ನೋಡುವವರೂ ಇದ್ದಾರೆ. ಹೀಗೆ ಮಾಡುವುದರಿಂದ ಯಾವುದಕ್ಕೋ ಮಸಲತ್ತು ನಡೆಸುತ್ತಿದ್ದಾರೆಂದು ಬೊಬ್ಬೆ ಎಬ್ಬಿಸುವವರೂ ಇದ್ದಾರೆ. ಆಗ ನಾವು ಯಾವ ರೀತಿಯ

ಅಂತರವನ್ನು ಕಾಪಾಡಿಕೊಂಡು ಅನಂತಮೂರ್ತಿ ಅಂಥವರನ್ನು ನೋಡಬೇಕು. ಯಾಕೆಂದರೆ ಇಲ್ಲಿ ಹಿಟ್ಲರ್ ಪರವಾಗಿ, ಗೋಡ್ಸೆ ಪರವಾಗಿ, ಮೋದಿ ಪರವಾಗಿ ಮಾತಾಡುವ ಪಡೆಯೂ ದೊಡ್ಡದಾಗಿಯೇ ಇದೆ. ಆದರೆ "ಇದಕ್ಕೆಲ್ಲ ಬಗ್ಗಬಾರದಯ್ಯ" ಎಂಬ ಧ್ವನಿಯನ್ನು ಅನಂತಮೂರ್ತಿ ಅವರು ಎಂದೋ ಬಿತ್ತರಿಸಿದ್ದರೂ; ನಿನ್ನೆ-ಮೊನ್ನೆ ಮಾತಾಡಿದಂತೆ; ನಾಳೆಗೆ ಮಾತಾಡುವಂತೆ ಕೇಳಿಸುತ್ತಿರುತ್ತದೆ.

ಮೇಲಿನ ಮುಂದುವರಿದ ಭಾಗವಾಗಿ ಹೆಚ್ಚು ಹೆಚ್ಚು ಅಂತರಂಗದಲ್ಲಿ ಈ ಸಾಲುಗಳನ್ನು ನನ್ನ ಒಟ್ಟು ಚಿಂತನೆಗೆ ಗ್ರಾಸಮಾಡಿಕೊಳ್ಳಲು ಹೋಗುವೆ: "ಆಡೆನ್ ಮಾಸ್ತರರೆಂದು ಕರೆಯುವ ಪೂರ್ವಸೂರಿಗಳು ತಮ್ಮ ಪೂರ್ಣದೃಷ್ಟಿಯಲಿ ಥಟ್ಟನೆ ಎದುರಾಗುವ ದುರಂತವನ್ನು ನಿತ್ಯದ ನಿರಂತರ ಉಸಿರಾಟದ ದೈನಿಕಗಳ ಸಂಪರ್ಕದಲ್ಲಿಟ್ಟು ನೋಡುವುದರಲ್ಲಿ ಇರುವ ಸತ್ಯ ನಮ್ಮ ಅರಿವನ್ನು ಕಲಕುತ್ತದೆ. ಆದರೆ ನಮ್ಮ ಕಾಲದ ದುರಂತಗಳು ಹರಿಯುವ ಜೀವನದಲ್ಲಿ ಅನಿವಾರ್ಯವಾಗಿ ಒದಗಿ ಬರುವ ಆಕಸ್ಮಿಕಗಳಲ್ಲ! ನಾವೇ ನಮ್ಮ ದುರಾಸೆಯಲ್ಲೂ ಸರ್ವಶಕ್ತರೆನ್ನುವ ಗರ್ವದಲ್ಲೂ ಖುದ್ದಾಗಿ ಸೃಷ್ಟಿಸುವ ಕ್ರೂರ ದುರಂತಗಳು. ಆದ್ದರಿಂದ ಅಮೆರಿಕಾದ ಧೀರ ಚಿಂತಕ ನೋಮ್ ಚೋಮ್‌ಸ್ಕಿಯ ಹಾಗೆ ನಾವು ಸತ್ಯ ಪಕ್ಷಪಾತಿಗಳಾಗಿ ಹೋರಾಡುತ್ತಲೇ ಇರಬೇಕಾಗುತ್ತದೆ." ಎಂಬ ಅನಂತಮೂರ್ತಿ ಅವರ ಸಾಲುಗಳಿಗೆ ಮತ್ತಷ್ಟು ಅರ್ಥವಂತಿಕೆ ತುಂಬಲು ನೋಮ್ ಚೋಮ್‌ಸ್ಕಿಯ ಮೊರೆ ಹೋಗುವೆ: ಇದನ್ನು ಬರೆಯುವ ಕಾಲಕ್ಕೆ ಅಮೆರಿಕಾದಲ್ಲಿ ಪ್ರಸಿದ್ಧ ಇತಿಹಾಸಕಾರ ಹಾಗೂ ಮಾನವಹಕ್ಕುಗಳ ಹೋರಾಟಗಾರ. ಅಷ್ಟೇ ಏಕೆ ಚೋಮ್‌ಸ್ಕಿಯಂಥವರಿಗೆ ಸ್ಫೂರ್ತಿದಾಯಕ ಚಿಂತಕ ಹೇವಾರ್ಡ್‌ಜಿನ್‌ರವರು ತಮ್ಮ 87ನೆಯ ವಯಸ್ಸಿನಲ್ಲಿ ಕಳೆದ ಜನವರಿ 27ರಂದು ನಿಧನರಾದರು. ನನಗೆ ಪ್ರಿಯವಾದ ಟೈಮ್ಸ್ ಪತ್ರಿಕೆಯಲ್ಲಿ ಚೋಮ್‌ಸ್ಕಿ ಚಿಕ್ಕ ಟಿಪ್ಪಣಿಯನ್ನು ಬರೆದಿದ್ದರು. "ಇತಿಹಾಸಕಾರ ಹೇವಾರ್ಡ್‌ಜಿನ್‌ನ ಸ್ಮರಣೀಯ ಕೃತಿ 'ಎ ಪೀಪಲ್ಸ್ ಹಿಸ್ಟರಿ ಆಫ್ ದಿ ಯುನೈಟೆಡ್ ಸ್ಟೇಟ್ಸ್'ನಲ್ಲಿ ಜಿನ್‌ರವರೇ ಹೇಳುವಂತೆ; ಪ್ರತಿಯೊಬ್ಬರ ಪ್ರಾಥಮಿಕ ಜವಾಬ್ದಾರಿಯೆನ್ನುವಂತೆ ಲೆಕ್ಕವಿಲ್ಲದಷ್ಟು ಅನಾಮಿಕರ ಹೋರಾಟಗಳು" ಚರಿತ್ರೆಯ ಮುಂದುವರಿದ ಭಾಗವಾಗಿದೆ. ಹಾಗೆಯೇ ಇತಿಹಾಸದುದ್ದಕ್ಕೂ ಅದ್ಭುತ ಚಳವಳಿಗಳಾಗಿವೆ ಎನ್ನುವನು ಹೇವಾರ್ಡ್‌ಜಿನ್‌ರವರು 1950 ಮತ್ತು 1960ರ ಅವಧಿಯಲ್ಲಿ ಅಟ್ಲಾಂಟಾದ ಚಾರಿತ್ರಿಕವಾಗಿ ಪ್ರಸಿದ್ಧಿಯನ್ನು ಪಡೆದ ಸ್ಪೆಲ್‌ಮನ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದವರು. ಅವರು ಉಪನ್ಯಾಸಕರಾಗಿರುವಾಗಲೇ ನಾಗರಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಹೋರಾಡಿ ಕೆಲಸ ಕಳೆದುಕೊಂಡರು. ಆದರೂ ಎಲ್ಲಿಯೇ ಆಗಲಿ ಶಾಂತಿ ಮತ್ತು ನ್ಯಾಯಬದ್ಧತೆಗೆ ಸಂಬಂಧಿಸಿದಂತೆ ಹೋರಾಟದಲ್ಲಿ ಹೇವಾರ್ಡ್‌ಜಿನ್‌ರವರು ಮೊದಲನೆಯ ಸಾಲಿನಲ್ಲಿರುತ್ತಿದ್ದರು ಮತ್ತು ಅಹಿಂಸೆಗೆ ಅನ್ವಯಿಸಿ ಎಲ್ಲರನ್ನು ಪ್ರೇರೇಪಿಸುತ್ತ ಒಂದು ತಲೆಮಾರು ಎಲ್ಲ ಚಿಂತಕರ ಪ್ರೇರಕಶಕ್ತಿಯಾಗಿದ್ದರು. ಹಾಗೆಯೇ ಎಷ್ಟೊಂದು ಮಂದಿ ಯುವಕರು ಜಿನ್‌ರವರ ಕೃತಿಗಳಿಂದ ಮತ್ತು ಸಂಪರ್ಕದಿಂದ ಪ್ರೇರಿತರಾದರು. ಇದನ್ನು ಹೇಳುತ್ತಲೇ ಚೋಮ್‌ಸ್ಕಿ ಒಂದು ಮಾರ್ಮಿಕವಾದ ಮಾತನ್ನು ದಾಖಲುಗೊಳಿಸುತ್ತಾರೆ: "ಚರಿತ್ರೆಯನ್ನು ತಿಳಿಯುವುದಕ್ಕೆ ಹಾಗೂ ತುಂಬ ಸಭ್ಯ ಹಾಗೂ ಗೌರವಾನ್ವಿತ ವ್ಯಕ್ತಿ ಹೇಗಿರಬೇಕು ಮತ್ತು ಹೇಗೆ ಜೀವಿಸಬೇಕು ಎಂಬುದರ ಬಗ್ಗೆ ಸಾಕ್ಷಿಪ್ರಜ್ಞೆಯಾಗಿ ಹೋಗಿದ್ದಾರೆ" ಎಂದು. ಇದನ್ನು ಚೋಮ್‌ಸ್ಕಿಯವರು ಹೇಳಿದಾಗ, ಜಗತ್ತಿನ ಉದ್ವಗಲಕ್ಕೂ ಈ ರೀತಿಯ ಮಾದರಿಗಳು ಹೇಗೆ ಪೂರಕವಾಗಿ ಕೆಲಸಮಾಡುತ್ತವೆ ಎಂಬುದನ್ನು ಯೋಚಿಸುತ್ತಲೇ ಮೈಸೂರು

ವಿಶ್ವವಿದ್ಯಾಲಯದಲ್ಲಿ ಅನಂತಮೂರ್ತಿ ಅವರು ಎದುರಿಸಿದ ಸಮಸ್ಯೆಗಳು ಹಾಗೂ ಅವರು ಭಾಗವಹಿಸಿದ ಹೋರಾಟಗಳ ಚಿತ್ರ ಕಣ್ಣು ಮುಂದೆ ಬಂದು ನಿಲ್ಲುತ್ತದೆ. ಯಾಕೆಂದರೆ ಸಾಹಿತ್ಯವನ್ನು ಕುರಿತು ಪಾಠ ಮಾಡುತ್ತಲೇ; ವಿದ್ಯಾರ್ಥಿಗಳನ್ನು ಹಾಗೂ ಅಧ್ಯಾಪಕರನ್ನು ನೈತಿಕವಾಗಿ ಬೆಳೆಸಲು ಪ್ರಯತ್ನಿಸಿದರು. ಇದನ್ನು ಇತಿಹಾಸದ ಬಗ್ಗೆ ಕುತೂಹಲವಿರುವವರು ಬರೆದರೆ ಸೂಕ್ತ.

ಕುವೆಂಪು ಅಂಥವರು ಮೈಸೂರು ವಿಶ್ವವಿದ್ಯಾಲಯದಲ್ಲಿ 'ಸ್ವಯಂಭು'ವಾಗಿ ಒಂದು ಸಂಸ್ಕೃತಿಯನ್ನು ಕಟ್ಟಿ ಬೆಳೆಸಿದರು. ಅದರ ಮುಂದುವರಿದ ಭಾಗವಾಗಿ 'ಸ್ವಯಂಭು' ಸ್ಥಾನದಲ್ಲಿ ಅನಂತಮೂರ್ತಿಯವರೂ ನಿಂತರು. ಯಾಕೆಂದರೆ ಈ ರೀತಿಯ 'ಸ್ವಯಂಭು' ಆದವರಿಗೆ ಒಂದು ರೀತಿಯ ಆಯಸ್ಕಾಂತದ ಗುಣವಿರುತ್ತದೆ. ಅದು ಋಷಿ ಸದೃಶವಾದದ್ದು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಜಿ.ಎಸ್. ಶಿವರುದ್ರಪ್ಪ ಅವರು ಇದ್ದ ರೀತಿಯಲ್ಲಿ. ಇಲ್ಲಿ ಕಾವ್ಯ, ಸಾಹಿತ್ಯ, ರಾಜಕೀಯ ಮತ್ತು ಸಮಾಜಶಾಸ್ತ್ರ ಯಾವುದೂ ಬೇರೆ ಬೇರೆ ಅಲ್ಲ. ಎಲ್ಲವನ್ನು ಒಳಗೊಂಡ ಧೀಮಂತಿಕೆ ನೆಲೆಗೊಳ್ಳುತ್ತದೆ. "ಅಡಿಗರಂಥ ಕವಿಯನ್ನು ಇವರು ಅದ್ಭುತ, ಇವರು ಕಾವ್ಯಕ್ಕೆ ಚೇತೋಹಾರಿ ಎಂದು ಅನಂತಮೂರ್ತಿ ಅವರು ನಮ್ಮ ಭಾಷೆಗೆ ಹಾಗೂ ಕಾವ್ಯಲೋಕಕ್ಕೆ ಸಮರ್ಥವಾಗಿ ಪರಿಚಯಿಸಿದರು. ಅದೇ ರೀತಿಯಲ್ಲಿ ಕುವೆಂಪುವನ್ನು ಪರಿಚಯಿಸುವ ಒಬ್ಬ ವಿದ್ವಾಂಸ ಕೂಡ ಹುಟ್ಟಿಕೊಳ್ಳಲಿಲ್ಲ ಕೇವಲ ಭಟ್ಟಂಗಿಗಳಾದರು" ಎಂಬ ಅಭಿಪ್ರಾಯವನ್ನು ಲಂಕೇಶ್‌ರವರು ವ್ಯಕ್ತಪಡಿಸಿರುವುದರಲ್ಲಿ ಸತ್ಯವಿದೆ. ಈ ದೃಷ್ಟಿಯಿಂದ ಅನಂತಮೂರ್ತಿಯವರು 'ಭೂಮಿಗೀತ' ಕಾವ್ಯ ಸಂಕಲನ ಕುರಿತಾದ ಮಾತು. ಒಟ್ಟು ಕಾವ್ಯವನ್ನು ನೋಡುವುದಕ್ಕೆ ಸಂಬಂಧಿಸಿದಂತೆ ಶಿಸ್ತುಬದ್ಧ ನೋಟವನ್ನು ಓದುಗರಲ್ಲಿ ಬೆಳೆಸಲು ಸಾಧ್ಯ. ಈ ಕಾರಣಕ್ಕಾಗಿ ಅನಂತಮೂರ್ತಿ ಅವರು ಬರೆದ ಮುನ್ನುಡಿಯಲ್ಲಿಯ ಈ ವಾಕ್ಯಗಳನ್ನು ಮತ್ತೆ ಮತ್ತೆ ಓದಿಕೊಳ್ಳುವೆ: "ದಾರಿ ನಡೆಯದೆ ಗುರಿ ಮುಟ್ಟುವ, ಸಾಧಿಸದೆ ಸಿದ್ಧಿಸಿತು ಎನ್ನಿಸುವ, ಯಾವ ಒಳತೋಟಿಗೂ ಒಳಗಾಗದ, "ಇಹದ ತಳಹದಿಯಿಂದ ದಿಟದ ದರ್ಶನವರಳಿ ಹಂಬಲಿಸಿ ಹಾಡಾಗದ" ಸಮನ್ವಯ ದೃಷ್ಟಿ, ಪೂರ್ಣ ದೃಷ್ಟಿ, ಎರವಲು ತಂದದ್ದು. ಜೀವನದ ಅನಿವಾರ್ಯತೆಯನ್ನು ಸಂಧಿಕಾಲಗಳ ಸಂದಿಗ್ಧತೆಯನ್ನು ಎದುರಿಸಲಾಗದ ಅಥವಾ ಎದುರಿಸಿದ ಅನುಭವವಿಲ್ಲದ ಅಲ್ಪ ತಿಳಿವಳಿಕೆಯಿಂದ ಬಂದದ್ದು. ಆದ್ದರಿಂದ ಪೂರ್ಣತೆಯ ಪ್ರಜ್ಞೆಯನ್ನು ಉಳಿಸಿ, ನೋಯಿಸಿ, ಕುದಿಸಿ ಬೆಳಕನ್ನು ಕಾಣಲು ಕತ್ತಲಲ್ಲೇ ತಡಕುತ್ತ ನಡೆಯಬೇಕಾದ ಅನಿವಾರ್ಯತೆಯನ್ನು ಜೀವಕ್ಕೆ ಕಲಿಸುವ ಕಾವ್ಯ ಶ್ರೇಷ್ಠವಾದದ್ದು. ಅಡಿಗರ ಕಾವ್ಯ ಹೀಗೆ ತೀವ್ರ ಅನುಭವಗಳ ಸಂವೇದನೆಗೆ ಜೀವವನ್ನು ಸಿದ್ಧಪಡಿಸಿ ಜೀವೋಪಯೋಗಿಯಾಗುತ್ತದೆ" ಈ ಪಾಟಿ ಚಿಂತಕ ಕಲೆಯ ಎಲ್ಲ ಪ್ರಕಾರಗಳನ್ನು ಕುರಿತಂತೆ ಅನನ್ಯತೆ ಬತ್ತಿಹೋಗದಂತೆ ಸಾಂಸ್ಕೃತಿಕವಾಗಿ ಹತ್ತಾರು ದಿಕ್ಕುಗಳಿಗೆ ಕೈಚಾಚಿರುತ್ತಾರೆ. ಇದಕ್ಕೆ ಮುಖ್ಯಕಾರಣ: ಚಿಂತನೆಯ ಅನಾಸಕ್ತಿ ಎಂದಿಗೂ ಪ್ರವೇಶಿಸುವ ಸಂದರ್ಭ ಬರುವುದಿಲ್ಲ. ಈ ದೃಷ್ಟಿಯಿಂದ ಈಗಲೂ ನೆನಪಿದೆ: ಕೆಲವು ವರ್ಷಗಳ ಹಿಂದೆ ನನಗೆ ತುಂಬ ಪ್ರಿಯರಾದ ಅಂತರರಾಷ್ಟ್ರೀಯ ಖ್ಯಾತಿಯ ಸಮಾಜಶಾಸ್ತ್ರಜ್ಞ ಡಾ. ಎಂ.ಎಸ್. ಶ್ರೀನಿವಾಸ್ ಅವರು ಅನಂತಮೂರ್ತಿಯವರ 'ಭವ' ಕಾದಂಬರಿಯನ್ನು ಬಿಡುಗಡೆ ಮಾಡಲು ಬಂದಿದ್ದರು. ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಅದು ಶೂದ್ರದ ಕಾರ್ಯಕ್ರಮ. ಬಿಡುಗಡೆಯ ಸಮಯದಲ್ಲಿ

ಡಾ. ಎಂ.ಎಸ್. ಶ್ರೀನಿವಾಸ್ ಒಂದು ಮಾತು ಹೇಳಿದರು: "ಅನಂತಮೂರ್ತಿ ಅವರು, ಕಾದಂಬರಿಕಾರರಾಗಿ, ಕಥೆಗಾರರಾಗಿ ಮತ್ತು ವಿಮರ್ಶಕರಾಗಿ ನನ್ನ ಮುಂದೆ ಕೂತಾಗಲೆಲ್ಲ

ಸಮಾಜಶಾಸ್ತ್ರದ ವಿವಿಧ ಆಯಾಮಗಳನ್ನರಿಯಲು ಎಷ್ಟು ಉಲ್ಲಸಿತರಾಗಿರುತ್ತಾರೆ. ಆದರೆ ನಮ್ಮಂಥವರು ಸಾಹಿತ್ಯವೂ ಸಮಾಜಶಾಸ್ತ್ರದ ಪ್ರಮುಖ ಅಂಗ ಎಂದು ತಿಳಿಯುವುದಿಲ್ಲ? ಎಂಬ ಪ್ರಶ್ನೆ ಅವರನ್ನು ಭೇಟಿಯಾದಾಗಲೆಲ್ಲ ಕಾಡಿದೆ. ಈ ಕಾರಣಕ್ಕಾಗಿ 'ಭವ' ಯಾಕೆ ಎಂತೆಂಥ ಸಾಧ್ಯತೆಗಳನ್ನು ವಿಸ್ತರಿಸುತ್ತದೆ" ಎಂದಿದ್ದರು. ಇದೇ ಡಾ. ಎಂ.ಎನ್. ಶ್ರೀನಿವಾಸ್ ಅವರು ಅನಂತಮೂರ್ತಿಯವರಿಗೆ ಮತ್ತು ನನಗೆ ದೂರವಾಣಿಯಲ್ಲಿ "ಬೆಂಗಳೂರು ಸಾಯುತ್ತಿದೆ ಏನು ಮಾಡುತ್ತಿರುವಿರಿ?" ಎಂದು ಕೇಳಿದ್ದರು. ಈಗ ಬೆಂಗಳೂರು ನಾಶವಾಗುತ್ತಿರುವುದನ್ನು ಕಂಡಿದ್ದರೆ; ರಾಷ್ಟ್ರೀಯ ಮಟ್ಟದಲ್ಲಿ ಕೂಗೆಬ್ಬಿಸುತ್ತಿದ್ದರು ಮತ್ತು ಸಾರ್ವಜನಿಕ ಅಭಿಪ್ರಾಯ ಮೂಡಿಸುತ್ತಿದ್ದರು. ಅದು ಅವರು ಆ ಸಂದರ್ಭದಲ್ಲಿ ಧ್ವನಿಯೆತ್ತಲು ಕಾರಣ : ಫ್ರೇಜರ್‌ಟೌನ್‌ನಲ್ಲಿ ಅವರ ಮನೆ ಮುಂದೆ ಒಂದು ಅಪಾರ್ಟ್‌ಮೆಂಟ್ ಎದ್ದೇಳುತ್ತಿತ್ತು. ಈಗ ಆಗಿದ್ದರೆ ಅನಂತಮೂರ್ತಿ ಅವರನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿಭಟನೆಗೆ ತಮ್ಮ ಕಡೆ ಸೆಳೆದುಕೊಳ್ಳುತ್ತಿದ್ದರು.

ರಾಮಮನೋಹರ ಲೋಹಿಯಾ ಅವರ ರೀತಿಯಲ್ಲಿ ಎಲ್ಲವೂ ನಮ್ಮ ಅಭಿರುಚಿಯ ಪರಿಧಿಗೆ ಬರಬೇಕು ಎಂಬುದನ್ನು ಮೊದಲಿನಿಂದಲೂ ನಂಬಿರುವುದರಿಂದ ಯಾವುದಕ್ಕೇ ಆದರೂ ಧಕ್ಕೆ ಬಂದಾಗ ಮಾನಸಿಕವಾಗಿ ಡಿಸ್ಟರ್ಬ್ ಆಗುವಂಥವರು ಅನಂತಮೂರ್ತಿ ಅವರು. ಇಂಥ ಸಮಯದಲ್ಲೆಲ್ಲ ನಮ್ಮ ವಚನಕಾರರ, ದಾಸರ, ಕೀರ್ತನಕಾರರ ಮತ್ತು ಮಹಾನ್ ಸಂತರ ಚಿಂತನೆಗಳಿಗೆ ಮೊರೆ ಹೋಗುತ್ತಾರೆ. ಇದು ಗುಣಾತ್ಮಕ ತಂತ್ರಗಾರಿಕೆಯೂ ಹೌದು. ಯಾಕೆಂದರೆ ಅಭಿರುಚಿ ನಿರ್ಮಾಣವಾಗದೆ ಒಂದು ಸಮಾಜವನ್ನು ಆರೋಗ್ಯಪೂರ್ಣವಾಗಿ ಸುಸ್ಥಿತಿಯಲ್ಲಿಡಲು ಸಾಧ್ಯವಿಲ್ಲ. ಇದರಿಂದ ಪ್ರಕೃತಿದತ್ತವಾಗಿ ಮನುಷ್ಯನಿಗೆ ಲಭ್ಯವಾಗಿರುವ ಎಲ್ಲವನ್ನು ಮುಟ್ಟಿನೋಡಿ ಆನಂದಿಸುವ ಸ್ಪಂಧಿಸುವ, ಅರ್ಥೈಸುವ ಕುತೂಹಲವನ್ನು ಸ್ವಾಭಾವಿಕವಾಗಿ ಬೆಳೆಸಿಕೊಂಡವರು. ಆದ್ದರಿಂದ ಇವರ ಕೊನೆಯ ಕಥೆಯಾದ 'ಬೇಟೆ, ಬಳೆ ಮತ್ತು ಓತಿಕ್ಯಾತ' ಎಂತೆಂಥ ಹಂತಗಳನ್ನು ನಿರ್ಮಾಣಮಾಡಿ ಚಿಂತನೆಗೆ ಪುಟ್ಟ ಪುಟ್ಟ ಬದುಕಿನ ದ್ವೀಪಗಳನ್ನು ತೆರೆದಿಡುತ್ತದೆ. ಆಧುನಿಕ ಬದುಕನ್ನು ಸೂಕ್ಷ್ಮವಾಗಿ ಗ್ರಹಿಸುತ್ತ ಅದರೊಳಗೆ ಪ್ರವೇಶ ಮಾಡಿದಾಗ ಕೊಡುವ ಅನುಭವದ ರೂಪಕಗಳು ಕಲಾತ್ಮಕವಾಗಿ ಮುಂದೆ ಬಂದು ನಿಲ್ಲುತ್ತವೆ. ಆದರೆ ಲೇಖಕನಾದವನಿಗೆ ಅಗಾಧವಾದ ತಾಳ್ಮೆಯಿರಬೇಕು ಎಂಬುದನ್ನು ತೋರಿಸುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ನೋಡುವ ಕ್ರಿಯೆಯಲ್ಲಿಯೇ ಸಿನಿಕತನ ಆವರಿಸಿಕೊಳ್ಳುವ ಅಪಾಯವಿರುತ್ತದೆ. ಗಡಿಬಿಡಿಯಿಂದ ನೋಡದೆ, ನೋಡಿದ್ದನ್ನು ವಿವಿಧ ಆಯಾಮಗಳಲ್ಲಿ ಅವಲೋಕಿಸಿಕೊಳ್ಳುವ; ನಮ್ಮ ಅವಲೋಕನದಲ್ಲಿ ಐಬಿದ್ದರೆ ಪುನರಾವಲೋಕಿಸಿಕೊಳ್ಳುವ ಮನಸ್ಥಿತಿಯವರು. ಇದರಿಂದ ಒಂದು ವಸ್ತುವಿನ, ಚಿಂತನೆಯ ಗುಣಾತ್ಮಕತೆ ವಿಸ್ತರಿಸುತ್ತದೆ ಎಂದು ತಿಳಿದವರು. ಇಂಥ ವ್ಯಕ್ತಿತ್ವ ಇರುವುದರಿಂದಲೇ 'ಇವರು ಅನಂತಮೂರ್ತಿಯವರು' ಎಂದು ನಾವು ಬೌದ್ಧಿಕ ವಲಯಕ್ಕೆ ತೋರಿಸಲು ಸಾಧ್ಯವಾಗಿರುವುದು. ಈ ರೀತಿಯದನ್ನು ನಾವು ಕುವೆಂಪುರವರಲ್ಲಿ ಕಾರಂತರಲ್ಲಿ ಮತ್ತು ಲಂಕೇಶ್ ಅವರಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಕಾಣಬಹುದು. ತಮ್ಮ ಬಗೆಗಿನ ವಿರೋಧ, ಅಪಪ್ರಚಾರ ಮತ್ತು ಪ್ರಸಂಶೆ ಒಂದು ನಾಗರೀಕ ಸಮಾಜದಲ್ಲಿ ನಾವಾಗಿಯೇ ಸೃಷ್ಟಿಸಿಕೊಂಡದ್ದು ಎಂದು ತಿಳಿದವರು. ಹೀಗೆ ತಿಳಿಯದಿದ್ದರೆ 'ಬೌದ್ಧಿಕತೆ' ಎನ್ನುವುದು ಒಟ್ಟು ಪ್ರಜ್ಞಾವಂತ ಸಮುದಾಯದ ಮುಂದೆ ವೈವಿಧ್ಯಮಯವಾಗಿ ಗೋಚರಿಸುತ್ತಿರಲಿಲ್ಲ. ನಮ್ಮ ಸಾಹಿತ್ಯ, ಸಂಗೀತ ಮತ್ತು ಕಲೆ; ಅಷ್ಟೇ ಏಕೆ ಬೇರೆ ಬೇರೆ ಮಾನವೀಯ ಸಂಬಂಧಗಳು ಅರ್ಥಪೂರ್ಣ ನೆಲೆಗಳನ್ನು ಕಂಡುಕೊಳ್ಳುತ್ತಿರಲಿಲ್ಲ.

ಅದರಲ್ಲೂ ಅನಂತಮೂರ್ತಿ ಅವರಂಥ ಸೂಕ್ಷ್ಮ ಸಂವೇದನೆಯ ಅಧ್ಯಾಪಕ ಕೇವಲ ನಾಲ್ಕು ಗೋಡೆಗಳ ನಡುವೆ ಮಾತ್ರ ಅಧ್ಯಾಪಕರಾಗಿರುವುದಿಲ್ಲ. ವಿಶಾಲ ಸಮುದಾಯದ ಮಧ್ಯೆಯೂ ಅಧ್ಯಾಪಕರಾಗಿರಲು, ಗುರುವಾಗಿರಲು ಬೊಟ್ಟು ಮಾಡಿ ತೋರಿಸುವ ಕೇಂದ್ರ ಬಿಂದುವಾಗಿರುತ್ತಾರೆ. ಆದ್ದರಿಂದಲೇ 'ಬೇಟೆ, ಬಳೆ ಮತ್ತು ಓತಿಕ್ಯಾತ' ಕತೆಯ ಹಸೀನ ತರಗತಿ ಒಳಗೆ ಹಾಗೂ ಹೊರಗೆ ಕಾಣಿಸಿಕೊಳ್ಳುವ ಪರಿಯಲ್ಲಿ ಎಷ್ಟೊಂದು ಸ್ಥಿತ್ಯಂತರಗಳನ್ನು ಕಂಡುಕೊಂಡಿರುತ್ತಾಳೆ. ನಂತರ ಹಸೀನಳ ಮುಂದುವರಿದ ಭಾಗವಾಗಿ ವಿಶಾಲವಾದ ಬದುಕಿನ ಪರದೆಯ ಮೇಲೆ ನಾವೆಲ್ಲ ನಂಬುವಂತೆ, ಸಣ್ಣ ಪ್ರಮಾಣದಲ್ಲಿ ನ್ಯೂಟೈಪ್ ಪ್ರಶ್ನೆ ಪತ್ರಿಕೆಯನ್ನು ಮುಂದಿಟ್ಟು; ಇಂಥದಕ್ಕೆಲ್ಲ ನಿಮ್ಮ ಬಳಿ ಯಾವ ರೀತಿಯ ಉತ್ತರವಿದೆ? ಎಂದು ನಯವಾಗಿ ತೆರೆದ ಮನದವಳಾಗಿರುತ್ತಾಳೆ. ಯಾಕೆಂದರೆ ಈ ರೀತಿಯ ಹಸೀನ ಮತ್ತು ಜ್ಯೋತಿಯಂಥವರನ್ನು ಅನಂತಮೂರ್ತಿ ಅವರು ನೂರಾರು ಜನರನ್ನು ಜಗತ್ತಿನ ಉದ್ದಗಲಕ್ಕೂ ಕಂಡಿದ್ದಾರೆ. ಅವರ ಬದುಕಿನ 'ಕ್ಯಾನ್‌ವಾಸ್' ಓಪನ್ ಥಿಯೇಟರ್‌ನಲ್ಲಿರುವಂಥದ್ದು. ಆಗ ಜ್ಯೋತಿಯಂಥವರು ಮಹಾನ್ ನಟಿಯಂತೆ ಕಾಣಿಸಿಕೊಳ್ಳಲೇ ಬೇಕು. ಇಲ್ಲಿ ಜ್ಯೋತಿ ನಾಯಕಿಯೂ ಹೌದು ಪ್ರತಿನಾಯಕಿಯೂ ಹೌದು. ಆದ್ದರಿಂದಲೇ ಅಮ್ಮನಿಂದ ಪಡೆದ ತನ್ನೆಲ್ಲ ವಿಷಾದವನ್ನು ಪರದೆಯ ಹಿಂದಿಟ್ಟು ವಿಜೃಂಭಿಸುತ್ತಾಳೆ. ಅದರಲ್ಲಿ ಬದುಕಬೇಕು ಎನ್ನುವುದಕ್ಕೆ ಸಂಭ್ರಮದ ಮೋಹಕತೆ ಇದೆ. ಇಲ್ಲೆಲ್ಲ ಅಮ್ಮನಂತೆ ನವಿರಾದ ಅತ್ತರು ಬೇಕಾಗುತ್ತದೆ ಎಂದು ತಿಳಿಯುವಳು. ಯಾಕೆಂದರೆ ಅಮ್ಮನ ಏಳುಬೀಳುಗಳ ದುರಂತವನ್ನು ಬಲ್ಲವಳು. ಅಮ್ಮನ ಗುರುವಾಗಿ ಕೃಷ್ಣಸ್ವಾಮಿ ಅವಳೆಲ್ಲ ಸುಪ್ತತೆಯನ್ನು ಚೈತನ್ಯಗೊಳಿಸಿದವರು. ಆದರೆ ಅದು ಪಕ್ವಗೊಳ್ಳುವ ಮುನ್ನವೇ ಪ್ರಕೃತಿಗೆ ಅರ್ಥಾತ್ ಬಯಲು ಲೋಕಕ್ಕೆ ಮೈಚೆಲ್ಲಿ ನಿಂತವಳು. ಆದರೆ ಕೃಷ್ಣಸ್ವಾಮಿ ಹಸೀನಾಳ ಮಗಳು ಜ್ಯೋತಿಯ ಮುಂದೆ ಋಷಿ ಸದೃಶ ವ್ಯಕ್ತಿ. ಆದರೆ ಜ್ಯೋತಿ ಕಚಗುಳಿ ಇಡುತ್ತಲೇ ನೋಟದಲ್ಲಿ ಮೈಮಾಟದಲ್ಲಿ ಚಲನವಲನದಲ್ಲಿ; ತಮ್ಮ ತರಗತಿಯ ಉಪನ್ಯಾಸವನ್ನು ನೆನಪಿಗೆ ತರುವ ಮತ್ತೊಂದು ರೀತಿಯ ವಿದ್ಯಾರ್ಥಿನಿಯಾಗಿಬಿಡುತ್ತಾಳೆ. ಇದೊಂದು ಕ್ಲೀಷೆಯಾಗದೆ ಆತ್ಮ ನಿವೇದನೆಯ ಭಾಗವಾಗಿಬಿಡುತ್ತದೆ. ಹಾಗೆಯೇ ಇದು ಪ್ರಜ್ಞಾವಂತ ಮನುಷ್ಯರ ಸವಾಲೂ ಹೌದು. ಅದರಲ್ಲೂ ಸೃಜನಶೀಲ ಲೇಖಕನೊಬ್ಬನಿಗೆ ಭಾಷೆ ಮತ್ತು ಅನುಭವದ ಜೊತೆಗೆ ತಿಕ್ಕಾಟವಿರುತ್ತದೆ. ಯಾಕೆಂದರೆ ನಾನು ಹಿಡಿದಿಡುತ್ತಿರುವ ಭಾಷೆಯ ಧ್ವನಿ ಎಷ್ಟು ಮಾತ್ರ ಪ್ರಾಮಾಣಿಕ ಎಂದು. ಸ್ವಲ್ಪ ಅಪ್ರಮಾಣಿಕತೆಯಾದರೂ ಆತ್ಮವಂಚನೆಯ ರೂಪದಲ್ಲಿ ಕಾಡಬಹುದು. ಸಮಸ್ಯೆ ಎತ್ತು ಗಂಜಲ ಹೊಯ್ಯುವ ರೀತಿಯಲ್ಲಿ ಓತಪ್ರೋತವಾಗಿ ಬರೆದುಕೊಂಡು ಹೋಗುವಂಥವರಿಗೆ ಎಂದೂ ಸಮಸ್ಯೆಯಲ್ಲ. ಆದರೆ ನಿಜವಾದ ಲೇಖಕನಾದವನಿಗೆ; ಲೇಖಕ ಮತ್ತು ಕಲಾವಿದನ ಸಮನ್ವಯತೆ ಯಾವಾಗಲೂ ಕಾಡುವಂಥದ್ದೇ. ಈ ದೃಷ್ಟಿಯಿಂದ ಅನಂತಮೂರ್ತಿಯಂಥ ಗಟ್ಟಿ ಲೇಖಕರು ಕಾಡುತ್ತಿದ್ದರೆ ಈ ನೆಲೆಯಲ್ಲಿಯೇ ಅನ್ನಿಸುತ್ತದೆ. ಇಲ್ಲಿ ಅನಂತಮೂರ್ತಿ ಅವರು ಏಟ್ಸ್ ಕವಿ ಬಗ್ಗೆ ಪ್ರಸ್ತಾಪಿಸಿರುವ ಈ ಸಾಲುಗಳನ್ನು ದಾಖಲಿಸಲು ಬಯಸುವೆ: "ಇದೊಂದು ಬಹಳ ಕಷ್ಟದ ಆಯ್ಕೆ. ಸಾಮಾನ್ಯ ಕಣ್ಣುಗಳಿಗೆ ಕಾಣಸಿಗದಂತೆ ಮೇಲೇರುವ ಪಕ್ಷಿಯ ಮಾರ್ಗ ಸರಿಯೇ ಅಥವಾ ಸಂತೆಯ ಬಂಡಿಯನ್ನೇರಿ ಪ್ರಯಾಣ ಮಾಡುವುದು ಸರಿಯೇ? ಏನೇ ಆದರೂ ನಮ್ಮ ಆತ್ಮವನ್ನು ನಮ್ಮೊಡನೆ ನಾವು ಒಯ್ಯುವಂತೆ ನೋಡಿಕೊಳ್ಳಬೇಕು.... ನಮ್ಮ ಕಲ್ಪನೆಗೆ ಸಂತೆಯ ಬಂಡಿಯೇ ಸರಿ ಅನ್ನಿಸಿದರೆ ನಮ್ಮ ಶರೀರಿದೊಳಗೆ ನಮ್ಮ ಆತ್ಮವನ್ನು ಗಟ್ಟಿಯಾಗಿ ಹಿಡಿದಿಟ್ಟು ಕಾಯಬೇಕು. ಯಾಕೆಂದರೆ ಹಲವು ಸೂಕ್ಷ್ಮ ಜನಾಂಗಗಳ, ಇತಿಹಾಸದಲ್ಲಿ ನಾವು ಆತ್ಮನಿಷ್ಠ ಸೌಂದರ್ಯದ ರುಚಿಗೆ

ಮನಸೋತವರಾಗಿಬಿಟ್ಟಿರುವುದರಿಂದ, ಕೇವಲ ಶಕ್ತಿಯ ಆರಾಧನೆಗೆ, ಕೇವಲ ವೈಯಕ್ತಿಕತೆಯ ವಿಜೃಂಭಣೆಗೆ, ಆವೇಶದ ರಕ್ತದ ತುಮುಲಕ್ಕೆ ಒಳಗಾಗುವುದನ್ನು ಈ ಆತ್ಮನಿಷ್ಠೆಯಿಂದ ಕಲಿತು ಬಿಟ್ಟಿದ್ದರಿಂದ ನಮ್ಮಲ್ಲಿ ಅಂತರ್ಗತವಾಗಿರುವ ಅಲೌಕಿಕದ ರುಚಿ ಅಸಹನೆಯಿಂದ ಕಾಡುತ್ತದೆ." ಇದನ್ನು ಓದುತ್ತಿದ್ದರೆ ಕೇವಲ ಲೇಖಕನಿಗೆ ಮಾತ್ರ ಅನ್ವಯಿಸಿ ಹೇಳುವಂಥದ್ದಲ್ಲ. ಎಷ್ಟೊಂದು ಒಳಸುಳಿಗಳು ಮನಸ್ಸಿನ ತುಂಬ ಆವರಿಸಿಕೊಂಡುಬಿಡುತ್ತವೆ. ಇಂಥ ಸಮಯದಲ್ಲಿಯೇ ಇರಬಹುದು ಸೃಷ್ಟಿಕಾರ್ಯ ಪಕ್ವಗೊಳ್ಳುವುದು.

ಅನಂತಮೂರ್ತಿಯವರು ಒಬ್ಬ ಮಹತ್ವಪೂರ್ಣ ಲೇಖಕರಾಗಿ ಚಿಂತಕರಾಗಿ ಇದನ್ನು ಪಡೆಯಲು ಸಾಕಷ್ಟು ಹೆಣಗಾಡಿದ್ದಾರೆ. ಇಲ್ಲದಿದ್ದರೆ ಅವರ ಶ್ರೀಮಂತವಾದ ನೆನಪಿನ ಬುತ್ತಿ ಈ ಪ್ರಮಾಣದಲ್ಲಿ ಆಕಾರ ಪಡೆಯುತ್ತಿರಲಿಲ್ಲ. ಆದ್ದರಿಂದ ಅವರ ಪ್ರತಿಯೊಂದು ಸೃಜನಶೀಲ ಪಾತ್ರವೂ; 'ಆಕಾರ' ಪಡೆದ ಕಲಾಕೃತಿಯಾಗಿದೆ. ಅವೆಲ್ಲ ಲೋಲುಪತೆಯಿಂದ ಹುಟ್ಟಿಕೊಂಡಂಥವು ಅಲ್ಲ. ವಿಷಾದ ಮತ್ತು ಸಂಕಟದ ನಡುವೆ ಬದುಕು ಕಾಡಲು ಪರದಾಡುವಂಥವು. ಇಂದೂ ಇದನ್ನು ಹೇಳುವ ಕ್ರಮದಲ್ಲಿ ಅವರ ಚಿಂತನೆಗೆ ಮತ್ತು ಮಾತಿಗೆ ದಣಿವೆಂಬುದಿಲ್ಲ. ತುಂಬಾ ಇತ್ತೀಚೆಗೆ ಬೆಂಗಳೂರಿನ ಅಂಕಿತ ಪುಸ್ತಕಗಳ ಮಾರಾಟದ ಮಳಿಗೆಯಲ್ಲಿ 'ಸಾವಿರ ಪಕ್ಷಿಗಳು' ಕಾದಂಬರಿಯ ಬಿಡುಗಡೆ ಇತ್ತು. ಇದು ಮೊದಲನೆಯ ನೋಬೆಲ್ ಪ್ರಶಸ್ತಿ ಪಡೆದ ಜಪಾನಿ ಲೇಖಕ ಯಸುವಾರಿ ಕವಬಾಟನದ್ದು. ಇದನ್ನು ಗೋಪಾಲಕೃಷ್ಣ ಅಡಿಗರ ಅಳಿಯನಾದ ಟಿ.ಎನ್. ಕೃಷ್ಣರಾಜು ಅವರು ಅನುವಾದಿಸಿರುವಂಥದ್ದು. ಇದಕ್ಕಾಗಿ ಅವರು ಅಮೆರಿಕಾದಿಂದ ಬಂದಿದ್ದರು. ಅವರನ್ನು ನೋಡಲು ಕುತೂಹಲವಿತ್ತು. ಯಾಕೆಂದರೆ ನನಗೆ ಆಗ ಇಷ್ಟವಾದ ಒಂದಷ್ಟು ಕಥೆಗಳನ್ನು ಬರೆದಿದ್ದಾರೆ. ಜೊತೆಗೆ ಸುಮಾರು ನಾಲ್ಕು ದಶಕಗಳಿಗೂ ಹಿಂದೆ ಲಂಕೇಶ್‌ರವರ ಜೊತೆ ಅವರನ್ನು ಭೇಟಿಯಾಗಿದ್ದೆ. ಅವರ ಸಂಕೋಚದ ಮಾತುಗಳು ಇಷ್ಟವಾಗಿತ್ತು. ಯಸುನಾರಿಯ 'ಸಾವಿರ ಪಕ್ಷಿಗಳು' ಅತ್ಯಂತ ಸೂಕ್ಷ್ಮ ಒಳನೋಟಗಳನ್ನು ತುಂಬಿಕೊಂಡಿರುವ ಮಾರ್ಮಿಕವಾದ ಕಾದಂಬರಿ. ಅದರಲ್ಲೂ ಗಂಡು ಹೆಣ್ಣಿನ ಬದುಕಿನ ಒಳನೋಟಗಳು ಎಷ್ಟೊಂದು ರೀತಿಯಲ್ಲಿ ಗರಿಗೆದರಿ – ಮುದುಡಿಕೊಳ್ಳುತ್ತ ವಿಷಾದವನ್ನು ವಿಸ್ತಾರಗೊಳಿಸಿರುವ ನೂರಿಪ್ಪತ್ತೈದು ಪುಟಗಳ ಪುಟ್ಟ ಕಾದಂಬರಿ. ಅದನ್ನು ಬಿಡುಗಡೆಗೆ ಬಂದ ಅನಂತಮೂರ್ತಿಯವರು ಸುಮಾರು ಇಪ್ಪತ್ತು ನಿಮಿಷ ಎಷ್ಟು ಚೆನ್ನಾಗಿ ಮಾತಾಡಿದರು. ಕಾರ್ಯಕ್ರಮಕ್ಕೆ ಬಂದು ಕೂತುಕೊಳ್ಳುವಾಗ ಎಷ್ಟು ಆಯಾಸಗೊಂಡಿದ್ದರು. ನನ್ನ ಪಕ್ಕದಲ್ಲಿ ಹಿಂದುಗಡೆ ಕೂತಿದ್ದ ಹಿರಿಯರೊಬ್ಬರು "ಇವರು ರೆಸ್ಟ್ ತಗೊಳ್ಳದೇ ಎಷ್ಟೊಂದು ಕಡೆ ಭಾಗವಹಿಸುತ್ತಾರೆ" ಎಂದರು. ಅದನ್ನು ಕೇಳಿಸಿಕೊಂಡು ಪಕ್ಕದಲ್ಲಿ ಎಡಗಡೆ ಕೂತಿದ್ದ ವಿಮರ್ಶಕ ಗೆಳೆಯರಾದ ಟಿ.ಪಿ. ಅಶೋಕ್ ಅವರ ಕಡೆ ನೋಡಿದೆ. ಅವರು ಬಾಯಿ ಬಿಡದೆ ಗಡ್ಡದ ಮರೆಯಲ್ಲಿ ನಗು ಸೂಚಿಸಿದರು. ಇದರ ಜೊತೆಗೆ "ಅನಂತಮೂರ್ತಿಯವರು ಎಷ್ಟೊಂದು ಎನರ್ಜಿಯನ್ನು ಬಾಯಿ ಬಿಡದೆ ತುಂಬಿಕೊಂಡಿದ್ದಾರೆ" ಎಂದಿದ್ದಕ್ಕೆ: ಅದಕ್ಕೂ ಕಣ್ಣರಳಿಸಿ ನಕ್ಕರು. ಎಷ್ಟಾದರೂ ಅನಂತಮೂರ್ತಿ ಅವರನ್ನು ಕುರಿತು ಅಶೋಕ್ ಅವರು ಸಾಕಷ್ಟು ಅಧ್ಯಯನ ಮಾಡಿದವರು ಅಲ್ಲವೇ? ಇದರ ಜೊತೆಗೆ: ಈ ಪುಸ್ತಕದ ಮಳಿಗೆಯಲ್ಲಿ ಜಗತ್ತಿನ ಎಷ್ಟೊಂದು ಮಂದಿ ಶ್ರೇಷ್ಠ ಲೇಖಕರ ಹಾಗೂ ಕನ್ನಡ ಸಂದರ್ಭದ ಕೃತಿಗಳಿವೆ. ಆ ಕೃತಿಗಳ ಲೇಖಕರ ಆತ್ಮಗಳು ಕೇಳಿಸಿಕೊಂಡು; ನಾವು 'ಸಾವಿರ ಪಕ್ಷಿಗಳು' ಕೃತಿಯನ್ನು ಓದದಿದ್ದರೂ: ಮಳಿಗೆಯನ್ನು ಮುಚ್ಚಿದ ಮೇಲೆ ಎಲ್ಲ ಲೇಖಕರ ಆತ್ಮಗಳು ಒಂದೊಂದು ಪ್ರತಿಯನ್ನು ತೆಗೆದುಕೊಂಡು ಓದಬಹುದು. ಕಾದಂಬರಿಕಾರ ಯಸುನಾರಿ ಕವಬಾಟ ಅಧ್ಯಕ್ಷತೆ ವಹಿಸಬಹುದು'

ಎಂದು ಫ್ಯಾಂಟಸಿಯ ಕಲ್ಪನೆಯಿಂದ ಹೇಳಲು ಮನಸ್ಸು ಬಂದಿತ್ತು. ಅಥವಾ ಅನಂತಮೂರ್ತಿ ಅವರಿಗೆ ತುಂಟತನದಿಂದ ಒಂದು ಚೀಟಿಯಲ್ಲಿ ಬರೆದು ಕಳಿಸಿದ್ದರೆ; ಅದನ್ನು ಕೃಷ್ಣರಾಜು ಅವರಿಗೆ "ಈ ಶೂದ್ರ ಎಷ್ಟೊಂದು ತಂಟೆಕೋರನಿದ್ದಾನೆ" ಎಂದು ಆತ್ಮೀಯತೆಯಿಂದ ತೋರಿಸುತ್ತಿದ್ದರು ಎಂದು ಕಲ್ಪಿಸಿಕೊಂಡು ಸುಮ್ಮನಾಗಿದ್ದೆ. ಆದರೆ ಮನೆಗೆ ಬಂದು ಮೂರುನಾಲ್ಕು ಗಂಟೆಯಲ್ಲಿ 'ಸಾವಿರ ಪಕ್ಷಿಗಳು' ಓದಿ "ಹಾ ಬ್ಯೂಟಿಫುಲ್ ನಾವೆಲ್" ಎಂದು ನನಗೆ ನಾನೇ ಹೇಳಿಕೊಂಡೆ. ಯಾಕೆಂದರೆ ಅಷ್ಟರ ಮಟ್ಟಿಗೆ ನಮ್ಮ ಭಾವನೆಗಳನ್ನು ಕೆದಕಿಬಿಡುತ್ತದೆ. ಇದೇ ಸಮಯಕ್ಕೆ ನನಗೆ ತುಂಬ ಪ್ರಿಯವಾದ ಪಾಬ್ಲೋ ನೆರೂಡನ 'ಫ್ಯೂರೀಸ್ ಮತ್ತು ಸಫರಿಂಗ್ಸ್' ಸ್ವಲ್ಪ ದೀರ್ಘವಾಗಿರುವ ಕವನವನ್ನು ಸಾಕಷ್ಟು ಓದಿ ರಿಹರ್ಸಲ್ ಮಾಡಿ ಟೇಪ್ ಮಾಡಿಕೊಂಡಿದ್ದೆ. ನನ್ನ ಧ್ವನಿಯ ವ್ಯಾಮೋಹದ ಕಾರಣಕ್ಕಗಿ ಅಲ್ಲ; ಓದಿನ ಹಾಗೆ ಒಂದು ಶ್ರೇಷ್ಠ ಕವನವನ್ನು ಇನ್ನೊಬ್ಬರು ಓದಿದರೆ ಹೇಗಿರುತ್ತದೆ ಎಂಬುದಕ್ಕಾಗಿ. ಅಲ್ಲಿ ಓದಿನಲ್ಲಿ ನಾನು ಇನ್ನೊಬ್ಬನಾಗಿದ್ದೇನೆ. ಈ ಕವನದ ಜೊತೆಗೆ ಪಾಬ್ಲೋ ನೆರೂಡ ಒಂದು ಪುಟ್ಟ ಟಿಪ್ಪಣಿಯನ್ನು 1939ರಲ್ಲಿ ಮಾರ್ಚ್‌ನಲ್ಲಿ ದಾಖಲಿಸುತ್ತಾರೆ. ಅದು ಹೀಗಿದೆ:

"This poem was written in 1934. How much has happened since then! Spain, where I wrote it, is a belt of ruins. Ah! if we could only placate the world's rage with a drop of poetry or of love - but only the struggle and the daring heart are capable of that. The world and my poetry have both changed. A drop of blood fallen on these lines will remain a live with in them, as indelible as love." ಈ ಸಾಲುಗಳ ಗುನುಗುನಿಸುವಿಕೆಯಲ್ಲಿ ನಾನು ಅನಂತಮೂರ್ತಿ ಅವರ ಯೇಟ್ಸ್ ಕವಿ ಬಗ್ಗೆ ಹಾಗೂ ಬ್ರೆಕ್ಟ್‌ನನ್ನು ಕುರಿತು ಬರೆದ ಪ್ರಸ್ತಾವನೆಗಳನ್ನು ಹಾಗೂ ಕಾವ್ಯವನ್ನು ಓದಿಕೊಳ್ಳುತ್ತೇನೆ. ಆಗ ನೆರೂಡನ Indeleble - indelible ಎಂಬ ಶಬ್ದ ಏನೇನನ್ನೋ ತಂದು ನಮ್ಮ ಮುಂದೆ ಬಿಸಾಕಿ ಬಿಡುತ್ತದೆ. ಅದು ನಮ್ಮ ಹಳ್ಳಿ ಇರಬಹುದು, ಅಲ್ಲಿಯ ಮನೆ ಇರಬಹುದು. ಅದರ ಸದಸ್ಯರಿರಬಹುದು. ಹಾಗೆಯೇ ದಿನನಿತ್ಯ ನಮಗೆ ಮುಖಾಮುಖಿಯಾದ ಮತ್ತು ಆಗುವ ಪ್ರೀತಿಯ ಮತ್ತು ಅವಮಾನದ ಘಟನೆಗಳಿರಬಹುದು. ಕೊನೆಗೂ ನಾವು 'ಶುದ್ಧ ಸಾಹಿತ್ಯ'ವೆಂದು ಕರೆಯುವುದು ಇದನ್ನೇ ತಾನೇ. ಅಂಥ ಶುದ್ಧ ಸಾಹಿತ್ಯವನ್ನು ನಮಗೆ ಅನಂತಮೂರ್ತಿ ಅವರು 'ಎಂದೆಂದೂ ಮುಗಿಯದ ಕಥೆ'ಯಾಗಿ ಓದಿಗೆ ಕೊಟ್ಟಿದ್ದಾರೆ. ಅದು ಸೃಜನಶೀಲ ಬರವಣಿಗೆಯಲ್ಲಿ ಹಾಗೂ ಸೃಜನೇತರ ಬರವಣಿಗೆಯಲ್ಲಿ ಹಂಚಿ ಹೋಗಿದೆ. ಆ ಸಮೃದ್ಧ ಬರವಣಿಗೆಯಲ್ಲಿ ನಾವು ಹೇಗೆ ಸಾಗುತ್ತೇವೆ ಎಂಬುದು ಮುಖ್ಯ. ಕೊನೆಗೂ ಅದು ನಮ್ಮ ನಮ್ಮ ಮಾನಸಿಕ ನಿಶ್ಚಲತೆಗೆ ಸಂಬಂಧಿಸಿದ ವಿಷಯ. ಈ ಒಟ್ಟು ಲೇಖನಕ್ಕೆ ಕೊನೆ ಹಾಡಲು; ಅವರೇ ಅನುವಾದಿಸಿರುವ 'ಮತ್ತೆ ಮತ್ತೆ ಬ್ರೆಕ್ಟ್' ಕೃತಿಯಿಂದ ಕೆಲವು ಸಾಲುಗಳನ್ನು ಉದಹರಿಸುವ:

"ಮತ್ತು ಬರೆದಿಡು; ನನ್ನ ಹುಡುಗನಿಗೆ ಹೇಳಿ ಬರೆಸು
ನಿನ್ನ ನಂತರ ಯಾರದನ್ನು ನಮಗೆ ಹೇಳಿಯಾರು?
ನನ್ನ ಬಳಿ ಲೇಖನಿ ಇದೆ, ಮಸಿ ಇದೆ ಕೊಡುವೆ
ಜೊತೆಯಾಗಿ ಊಟ ಮಾಡೋಣ; ಇದು ನನ್ನ ಮನೆ
ಈ ನಮ್ಮ ಒಪ್ಪಂದ ಇಷ್ಟವಾದರೆ ಹೇಳು"

ಬೆತ್ತಲು ಮತ್ತು ಬಯಲು

– ಗೀತಾ ಡಿ.ಸಿ.

ಕೃಪೆ : ಸ್ವೆಟಾಸ್ಲೊವ್ ರೋರಿಕ್

ಬಯಲಲ್ಲಿ ನಿಂತ ಬೆತ್ತಲೆ ಗೊಮ್ಮಟ
ಒಮ್ಮೆಲೆ ಕಣ್ಣಗಲಿಸಿ ಕಣ್ತುಂಬಿಕೊಂಡವರು
ಪಾದಗಳ ಮುಟ್ಟಿ ಕಣ್ಗೊತ್ತಿಕೊಂಡವರು
ನೋಡಲು ನಾಚಿ, ಭಕ್ತಿಯಲಿ ಕಣ್ಮುಚ್ಚಿ
ಉನ್ಮತ್ತರಾದವರು...
ಬೆತ್ತಲ ಅಂತರಾಳವ ಹೊಕ್ಕವರೆಷ್ಟೋ...?

ಹೊಕ್ಕು ಹೊರಬಂದವರು, ಬರಲಾಗದೆ ಒದ್ದಾಡಿದವರು
ದುಃಖಿಸಿ, ಮೌನವಾಗಿ, ಸ್ತಬ್ಧರಾಗಿ, ನಿಸ್ತೇಜರಾಗಿ
ಒಳಗೊಳಗೇ ಕುದ್ದು, ಕದ್ದು ಇಣುಕಿಣುಕಿ
ಚಪಲ ತೀರಿಸಿಕೊಂಡವರೂ ಇಲ್ಲದಿಲ್ಲ!

ಬಯಲು – ಬೆತ್ತಲ ಬೆಡಗು ಕಾಣದೆ ತಬ್ಬಿಬ್ಬಾಗಿ
ಭ್ರಮೆಯಲ್ಲಿ ನರಳಾಡುತ್ತಲೇ
ಬರೀ ಶಬ್ದಗಳಲ್ಲಿ ಅರ್ಥವ ತಡಕಾಡಿದವರೆಷ್ಟೋ

ಕನ್ನಡ ವಿಭಾಗ, ಶೇಷಾದ್ರಿಪುರಂ ಪ್ರದ. ಕಾಲೇಜು, ಯಲಹಂಕ, ಬೆಂಗಳೂರು–106

ಬಯಲ ಕಾಣಲು ನೂಕು ನುಗ್ಗುಲೇ?

ಕೇಳಿಲ್ಲವೆ ಸಾವಿರದ ಮನೆಯ ಸಾಸಿವೆ ಕಾಳಿನ ಕಥೆಯ?
ಬೆತ್ತಲಾದರೆ ಬಯಲು
ಅರಿವಿರದಿರೆ ಅರಿವೆ ಭಾರ!
ಅವರವರ ಭಾವ ಭಕುತಿಗೆ
ಎಲ್ಲಿ, ಏನು, ಹೇಗೆ, ಎಷ್ಟೆಂದು ಹೇಳಲು ಬಾರದು ಪ್ರಭುವೇ

ಕಡೆದ ಶಿಲ್ಪಿ, ಬೆತ್ತಲು ನಿಂತ ಗೊಮ್ಮಟ
ನೂಕು ನುಗ್ಗುಲು ಕಂಡು
ನಸುನಗುತ್ತಲೇ ಬಯಲಲ್ಲಿ ಬಯಲಾಗುತ್ತಾರೆ

ಕವಿತೆ ಎಂದರೆ ಬಯಲೆ?
ಅಥವಾ ಬೆತ್ತಲೆಯೇ?

"ಇಂದಿನ ಮನುಷ್ಯ ಮತ್ತೆ ಮಾತಿನ ಮಲ್ಲನಾಗಿ ಯಾವುದು ಜೀವಂತ, ಯಾವುದು ಕ್ಲೀಷೆ ಎಂಬುದನ್ನು ಕಾಣದಂಥವನು ಆಗಬಾರದು. ಪೂರ್ವದ ಬಗ್ಗೆಯಾಗಲಿ ಪಶ್ಚಿಮದ ಬಗ್ಗೆಯಾಗಲಿ ಪೂರ್ವಾಗ್ರಹ ಹಮ್ಮೆ ಎರಡೂ ಕೆಟ್ಟವು."

– ಪಿ. ಲಂಕೇಶ್

ನೀಲಾಂಜನೆಯರು

– ಡಾ॥ ಎಸ್.ಪಿ. ಪದ್ಮಿನಿ ನಾಗರಾಜ್

ಇವರೆಲ್ಲ ಕಾಮಾಟಿಪುರದ ನೀಲೆಯರು
ಭೂಲೋಕದ ಇಂದ್ರರ ಕೈಚಳಕದ
ಸುಂದರ ಗೊಂಬೆಗಳು ಮಾರಾಟವಾಗಿದ್ದಾರೆ
ಮಾಟ ಮೈಮಾಟದಲ್ಲಿ ಸ್ವರ್ಗಲೋಕದ
ನೀಲಾಂಜನೆಯರನ್ನೂ ಇವರು ಮೀರಿಸಿದ್ದಾರೆ

ಇಂದ್ರಲೋಕದಲ್ಲಿ ನೀಲಾಂಜನೆಯರಿಗೆ
ಪೈಪೋಟಿಯೇ ಪೈಪೋಟಿ
ಇವಳಲ್ಲದಿದ್ರೆ ಮತ್ತೊಬ್ಬಳನ್ನು
ಧರೆಗಿಳಿಸಿ ತನ್ನ ಕುರ್ಚಿ ಕಾಯ್ದುಕೊಳ್ಳಲು
ಇಂದ್ರನದ್ದು ಸದಾ ಲೆಕ್ಕಾಚಾರ
ಇವರು ಹಾಗೇ ಇಲ್ಲಿನ ಇಂದ್ರರ ಲೆಕ್ಕಾಚಾರದಲ್ಲಿ
ದಾರಿಯಲ್ಲಿ ನಿಂತು ಗಿರಾಕಿಗಳನ್ನು
ಕಣ್ಣಂಚಿನಲ್ಲಿ ಕರೆದು ತೂಗಿ ನೋಡುತ್ತಾರೆ

ಅಂದು ರಾಜಮಹಾರಾಜರ ಸನ್ಯಾಸಿಗಳ
ವ್ರತಭಂಗ ಮಾಡಲು
ಇಂದ್ರನ ಕೈಗೊಂಬೆಯಾಗಿ ವೃಷಭದೇವನ
ಮುಂದೆ ನಿಂತು ನೃತ್ಯ ಮಾಡಿದ
ಕೀಲುಗೊಂಬೆ ನೀಲಾಂಜನೆಗೆ ಕ್ಷಣಾರ್ಧದಲ್ಲಿ
ಆಯಸ್ಸು ಮುಗಿದಾಗ ಮತ್ತೊಬ್ಬಳನ್ನು
ಅಲ್ಲಿ ಯಾರಿಗೂ ಗೊತ್ತಾಗದಂತೆ
ಮತ್ತೆ ಮೂರ್ತವಿಟ್ಟ ಇಂದ್ರ
ಅಂತಹ ಇಂದ್ರರು ಇವರಿಗೆ ಇಲ್ಲಿಯೂ ಇದ್ದಾರೆ

ಚೆಂದದ ಚೆಂದಕ್ಕಿ ಗೊಂಬೆಗಳಾಗಿದ್ದ
ಇವರನ್ನು ಯಾವುದೋ ಕಾರಣಕ್ಕೆ
ಕಾಮಾಟಿಪುರದ ನೆಲೆ ಸೇರಿಸಿದ್ದಾರೆ
ಕಾಮವನ್ನೇ ಮಾರಿ ಮಾರಿ ಕರಗುವ
ಇವಳ ಜಾಗಕ್ಕೆ ಅವಳೇ ಏನೋ
ಎಂದು ಭ್ರಮಿಸುವಂತೆ
ಮತ್ತೊಬ್ಬ ನೀಲಾಂಜನೆ

ನಂ. 136, ಪಿರಿ, 4ನೇ ಮುಖ್ಯರಸ್ತೆ, ಬನಶಂಕರಿ 3ನೇ ಫೇಸ್, 6ನೇ ಬ್ಲಾಕ್, ಬೆಂಗಳೂರು–85.

ಆ ಜಾಗ ಆವರಿಸುತ್ತಾಳೆ
ನೀಲಾಂಜನೆ ಯಾರಾದರೇನು
ಗಿರಾಕಿಗಳಿಗೆ ಬೇಕಾದ್ದು
ಕಾಮ ಮಾತ್ರವೇ ತಾನೇ

ವಿಶ್ವಾಮಿತ್ರನ ತಪೋಭಂಗಕ್ಕೆ
ಬಂದ ಮುದ್ದು ಮೇನಕೆ
ಕ್ಷಣಕಾಲ ಮೈಮರೆತದ್ದಕ್ಕೆ
ಬಸುರಾಗಿ ಮುದ್ದುಕಂದನ
ಇಲ್ಲೆ ಬಿಟ್ಟು ತಾಯಿ ಹೃದಯವ ಕಲ್ಲಾಗಿಸಿ
ಇಂದ್ರನ ಬಳಿ ಹೋಗಿದ್ದಾಳೆ
ಕಾಮಾಟಿಪುರದ ನೀಲೆಯರೂ ಹಾಗೆ
ಬೆತ್ತಲಾಗಬೇಕು ಆದರೆ
ತಾಯಾಗಬಾರದು ಎಂಬ ಅಲಿಖಿತ ಕರಾರಿದೆ
ಬೆಲೆ ಇರುವ ತನಕ
ದುಡಿದೂ ದುಡಿದು ಕೂಡಿಡಬೇಕು
ಮುದಿ ಸೂಳೆಯರಾದಾಗ
ರೋಗಕ್ಕೆ ಮದ್ದಾಗುತ್ತದೆ
ಹಣ ಎಂಬ ಭ್ರಮೆಯಿಂದ

ಕಾಮಾಟಿಪುರದ ಈ ಬದುಕು
ಬೇಡವೆಂದರೂ ಇಲ್ಲಿಗೆ ಎಳೆತಂದು
ನೂಕುತ್ತರೆ ಕಾಮಣ್ಣಂದಿರು
ಅಂತಹ ಇಂದ್ರರ ಬದುಕು ಕಟ್ಟಲು
ಇವರುಗಳು ತಾವೇ ದಾಳವಾಗುತ್ತಾರೆ
ದಾಳವಾಗಿ ಲಾಳವಾಗುತ್ತಾರೆ
ಮಣ್ಣಲ್ಲಿ ಕರಗಿದ ಇವರನ್ನು
ಮತ್ತೆ ತಿದ್ದಿತೀಡಿ ಇಂದ್ರರು ಗೊಂಬೆ ಮಾಡಿ
ಜೀವತುಂಬಿ ಮತ್ತೆ ಎದುರು ತಂದು
ನಿಲ್ಲಿಸುತ್ತಾರೆ ಇವರು ನೀಲಾಂಜನೆಯರು

●

ಸ್ಕ್ರೂ ಡ್ರೈವರ್

– ರೆಜಿನಾಲ್ಡ್ ರೆನಾಲ್ಡ್

ಆ ಚಿಕ್ಕ ಸ್ಕ್ರೂ ಡ್ರೈವರ್ ಒಂದು ರೀತಿ ಅವನ ವ್ಯಕ್ತಿತ್ವದ ಅಂಗವೇ ಆಗಿಬಿಟ್ಟಿತ್ತು. ಅದನ್ನ ಯಾವಾಗಲೂ ತನ್ನ ಜೊತೇಲೇ ತೂಗೊಂಡು ಓಡಾಡಕ್ಕೆ ಶುರು ಮಾಡಿಬಿಟ್ಟಿದ್ದ ಅವನು. ದೊಡ್ಡವರ ಕೈಯಲ್ಲಿ ಮಾತಾಡೋವಾಗಲೆಲ್ಲ ತನ್ನ ಕೈಯನ್ನ ಮೆತ್ತಗೆ ಜೇಬಿನೊಳಕ್ಕೆ ಇಳಿಬಿಟ್ಟಾಗ ಅದು ಅಲ್ಲೇ ಕೂತಿರ್ತಾ ಇತ್ತು–ಚಪ್ಪಟೆಯಾದ ನುಣುಪಾದ ಹಿಡಿಯ ಪುಟ್ಟದಾದ ಗಟ್ಟಿಯಾದ ಸ್ಕ್ರೂ ಡ್ರೈವರ್. ಒಬ್ಬ ದರೋಡೆಕಾರನಿಗೆ ತನ್ನ ಬಂದೂಕು ಕೊಡೋ ಅಂಥ ಆತ್ಮಸ್ಥೈರ್ಯಾನೇ ಇದೂ ನೀಡ್ತಿತ್ತು, ಅವನ ರಹಸ್ಯದ ಸುಳಿವೇ ಇಲ್ಲದ ಪರಕೀಯರ ಪ್ರಪಂಚದಲ್ಲಿ ಆಗಾಗ ಕಳ್ಳತನದಿಂದ ಅದನ್ನ ಸವರಿದಾಗ. ಅದು ಒಂದು ರೀತೀಲಿ ಶಕ್ತಿಯ ಪ್ರತೀಕವಾಗಿಬಿಟ್ಟಿತ್ತು.

ಕ್ರಿಸ್‌ಮಸ್‌ನಲ್ಲಿ ಅವನಿಗೆ ಸಿಕ್ಕಿದ ಉಪಕರಣಗಳ ಜೊತೇಲೆ ಈ ಸ್ಕ್ರೂಡ್ರೈವರ್ ಕೂಡ ಬಂದಿತ್ತು. ಸುತ್ತಿಗೆ, ಉಳಿ ಇವನ್ನೆಲ್ಲ ಬೇಕೂಂದರೂ ಹೀಗೆ ಗುಟ್ಟಾಗಿ ಇಟ್ಟುಕೊಂಡು ಓಡಾಡಕ್ಕೆ ಆಗಲ್ಲ. ಬೇರೆ ಉಪಕರಣಗಳಿಗಿಲ್ಲದ ಒಂದು ವಿಶೇಷ ಸಾಮರ್ಥ್ಯವೂ ಸ್ಕ್ರೂಡ್ರೈವರ್‌ಗೆ ಇದೆ ನೋಡಿ. ಹಾಂ–ಅಲ್ಲೇ ಇರೋದು ಗುಟ್ಟು! ಇವನು ಸ್ಕ್ರೂ ಮೊಳೆಗಳ ಸಂಗ್ರಹಕಾರ!

ಪ್ರತಿನಿತ್ಯ ಬೆಳಿಗ್ಗೆ–ಮಧ್ಯಾಹ್ನ ತಮ್ಮ ಮನೆಯಿಂದ ಸ್ಕೂಲಿಗೆ ಒಂದು ಮೈಲಿ ದೂರ ನಡೆದುಕೊಂಡೇ ಓಡಾಡೋವ್ನು ಇವನು, ನಮ್ಮ ನಾಯಕ. ದಾರೀಲಿ ಕಾಣಿಸೋ ಕಾಂಪೌಂಡ್ ಗೇಟುಗಳ ಮೇಲೆ ಆಯಾ ಮನೆಯವರ ಮರ್ಜಿ ಪ್ರಕಾರ ಯಾವುದೋ ಊರಿನ ಹೆಸರೋ ಇಲ್ಲ ಅವರ ಕಲ್ಪನೆಯ ಬೇರೆ ಹೆಸರೋ ಅಂತೂ ಏನೋ ಒಂದು ಹೆಸರು ಇರ್ತಿತ್ತು. ಆ ರಸ್ತೆಗಳಲ್ಲಿ ಓಡಾಡಿ ಓಡಾಡಿ,ಆ ಹೆಸರುಗಳ ಪಟ್ಟಿ ಪಟ್ಟನೇ ಅವನಿಗೆ ಬಾಯಿಪಾಠ ಆಗಿಬಿಟ್ಟಿತ್ತು. ಆದರೂ ಆ ಹೆಸರುಗಳು ಎಲ್ಲಿಂದ ಬಂತು ಅಂತ ಅವನೇನು ತಲೆ ಕೆಡಿಸ್ಕೋತಿರಲಿಲ್ಲ. ಅವನಿಗೆ ಮುಖ್ಯವಾಗಿದ್ದಿದ್ದು ಏನಪ್ಪಾ ಅಂದರೆ... ಆ ಹೆಸರುಗಳು ತಗಡಿನ ಪಟ್ಟಿಗಳ ಮೇಲೆ ಇರ್ತಿದ್ದವು. ಇನ್ನೂ ಮುಖ್ಯವಾದ ಅಂಶ ಅಂದರೆ ಆ ಪಟ್ಟಿಗಳ ನಾಲ್ಕು ಮೂಲೆಗಳಲ್ಲೂ ಒಂದೊಂದು ಸ್ಕ್ರೂ ಮೊಳೆ ಇರ್ತಾ ಇತ್ತು! ಆ ಊರಿನ ದೊಡ್ಡ ಮನುಷ್ಯನ ಭವ್ಯವಾದ ಬಂಗಲೆ ಆನಂದ ನಿಲಯದ ಗೇಟ್ ಹತ್ತಿರ ಸ್ವಲ್ಪ ತಡೆದು, ಅದರಿಂದ ತನ್ನ ಮೊಟ್ಟ ಮೊದಲ ಸ್ಕ್ರೂ ಬಿಚ್ಚಿಕೊಂಡಾಗ, ಅಬ್ಬಾ! ಎಂಥಾ ರೋಮಾಂಚನ ಅಂತೀರಿ! ಧೈರ್ಯ ಮಾಡಿ ಅಪಾಯ ಎದುರಿಸಿ ಪಡೆದ ಯಶಸ್ಸು! ಅದೊಂದು ದೊಡ್ಡ ತಗಡಿನ ಬೋರ್ಡ್ ಆಗಿತ್ತು. ಆರು ಸ್ಕ್ರೂ ಮೊಳೆ ಹಾಕಿ ನಿಲ್ಲಿಸಿದ್ದಿದ್ದು ಈಗ ಮೇಲ್ಗಡೆ ಎರಡು ತುದೀಲೂ ಒಂದೊಂದು, ಕೆಳಗಡೆ ಮಧ್ಯದಲ್ಲಿ ಒಂದು–ಹೀಗೆ ಮೂರೇ ಸ್ಕ್ರೂ ಉಳಿದುಕೊಂಡಿವೆ. ಗೇಟಿಗೆ ನಾಲ್ಕು ಸ್ಕ್ರೂಗಳಿಂದ ಭದ್ರಪಡಿಸಿದ್ದ 'ಮಯೋಮೆ' ನಾಮಫಲಕ ಈಗ ಎರಡೇ ಸ್ಕ್ರೂಗಳಿಂದ ನೇತಾಡತೊಡಗಿತು.

ಕನ್ನಡಕ್ಕೆ : ಡಾ. ಮೀರಾ ಮೂರ್ತಿ, 'ಪಾರಿಜಾತ', 841, 6ನೇ ಕ್ರಾಸ್, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಮೈಸೂರು – 570 009

ಅವನು ಧೈರ್ಯ ಮಾಡಿ ತನ್ನ ಡ್ರಾನಲ್ಲಿಟ್ಟಿದ್ದ ಸಂಗ್ರಹವನ್ನ ಪರಿಶೀಲಿಸಿದಾಗಲೆಲ್ಲ, ಅವನಿಗೆ ಒಂದು ರೀತಿಯ ಪೈಶಾಚಿಕ ತೃಪ್ತಿ ಸಿಕ್ತಾ ಇತ್ತು. ಅವನ ಪುಟ್ಟ ಬೆಡ್ ರೂಂನಲ್ಲಿದ್ದ ಚೆಸ್ಟ್ ಆಫ ಡ್ರಾನಲ್ಲಿ ಬಲಗಡೆಯ ಮೇಲ್ಭಾಗದ ಡ್ರಾ ಮಾತ್ರ ಅವನ ಆಪ್ತ ಸ್ವತ್ತುಗಳಿಗೆ ಮೀಸಲಾಗಿತ್ತು. ಉಳಿದವುಗಳೆಲ್ಲ ಅದೇ ಮಾಮೂಲಿ ಬಟ್ಟೆ ಬರೇಗೆ ವಿನಿಯೋಗವಾಗಿದ್ದು, ಅವನ್ನೆಲ್ಲ ಅವನ ಅಮ್ಮ ನೋಡ್ಕೋತಿದ್ದರು. ಅವನ ಸ್ವಂತದ ಡ್ರಾದೊಳಕ್ಕೆ ಯಾರೂ ಇಣುಕೋಹಾಗಿರಲಿಲ್ಲ. ಅದು ಅವನ ಸ್ವಂತಿಕೆಯ, ವ್ಯಕ್ತಿತ್ವದ ಪ್ರತೀಕವಾಗಿತ್ತು. ಅವನ ಸೀಮೆಸುಣ್ಣದ ಡಬ್ಬ, ಯಾವತ್ತೋ ಪ್ರಾರಂಭಿಸಿ ಮೂರೇ ಸಾಲಿಗೆ ನಿಲ್ಲಿಸಿದ್ದ ಅವನ ಕಥಾರಚನೆಯ ನೋಟ್ ಪುಸ್ತಕ–ಅಲ್ಲೇ ಇದ್ದವು. ಮುರಿದು ಹೋಗಿದ್ದ ಪೆನ್–ನೈಫ್, ಟಾರ್ಚು, ರಿಪೇರಿ ಆಗಬೇಕಾಗಿದ್ದ ವಾಟರ್ ಗನ್ನು, ಗುಟ್ಟಾಗಿ ತಂದಿಟ್ಟಿದ್ದ ಬೆಂಕಿಪೊಟ್ಟಣ ಮತ್ತು ಕ್ಯಾಂಡಲ್ ಚೂರು

– ಇವೇ ಆ ಡ್ರಾನಲ್ಲಿದ್ದ ಮುಖ್ಯವಾದ ಸಾಮಗ್ರಿಗಳು. ಆದರೆ ಆ ಭಂಡಾರದ ಅತಿ ಅಮೂಲ್ಯ ಆಸ್ತಿ ಅಂದರೆ ಅವನು ಸ್ಕ್ರೂಗಳನ್ನಿಟ್ಟಿದ್ದ ಡಬ್ಬ. ನಿತ್ಯ ರಾತ್ರಿ ಅದರಲ್ಲಿಟ್ಟಿದ್ದ ಸ್ಕ್ರೂಗಳು ಹೆಚ್ಚಾಗ್ತಾ ಇದ್ದಿದ್ದನ್ನ ನೋಡಿ ನೋಡಿ ಅವನು ಆನಂದಿಸೋವ್ನು.

ಆ ಉದ್ದದ ಸ್ಕ್ರೂ ರಸ್ತೇಲಿ ಸಿಕ್ಕಿದ್ದು. ಅದಕ್ಕೇನೂ ಅವನು ಹೆಚ್ಚಿಗೆ ಮರ್ಯಾದೆ ಕೊಡ್ತಾ ಇರಲಿಲ್ಲ. ಆ ಊರಿನ ಡಾಕ್ಟರ್ ಮನೇಲಿ ನಾಲ್ಕು ಸ್ಕ್ರೂ ಹೊಂದಿದ್ದ ಹಿತ್ತಾಳೆ ಫಲಕದಲ್ಲಿ ಈಗ ಎರಡೇ ಉಳಿದಿವೆ. ಅದರಿಂದ ತೆಗೆದ ಹೊಳೆಯುವ ಸ್ಕ್ರೂಗಳೇ ಅವನ ಸಂಗ್ರಹದಲ್ಲೆಲ್ಲ ತುಂಬಾ ಅಮೂಲ್ಯವಾದವು. ಸೂಕ್ಷ್ಮವಾದ ಕಲಾಭಿರುಚಿ ಇರೋವ್ರನ್ನ ಹೊರತು ಬೇರೆಯವರು ಯಾವುದೇ ಗಮನ ಕೊಡದೆ ಪಕ್ಕಕ್ಕಿಟ್ಟುಬಿಡೋ ಅಂಥದ್ದು ಒಂದು ಕರೆಘಂಟೆಯಿಂದ ತೆಗೆದ ಒಂದು ಸ್ಕ್ರೂ. ಅದನ್ನು ಪಡೆದುಕೊಳ್ಳಕ್ಕೆ ಎಂಥಾ ಧೈರ್ಯ ಬೇಕಾಯಿತು, ಆ ಕಾರ್ಯ ಮುಗಿಸೋ ಅಷ್ಟರಲ್ಲಿ ಹೇಗೆ ಗುಂಡಿಗೆ ಹೊಡೆದುಕೊಳ್ತಾ ಇತ್ತು ಅಂದರೆ, ವೃತ್ತಿಪರ ಅಭಿಮಾನ ಮಾತ್ರ ಅವನು ಕಾರ್ಯ ಸಾಧನೆಯನ್ನ ಅರ್ಧದಲ್ಲಿ ಕೈ ಬಿಡದಂತೆ ಕಾಪಾಡಿತು ಅನ್ನಬೇಕು!

ತನ್ನ ಈ ರಹಸ್ಯ ಹವ್ಯಾಸ ಒಂದು ರೀತಿಯ ಕಳ್ಳತನ ಅಂತ ಅವನಿಗೆ ತಿಳಿದಿದ್ದರೂ ಆ ಅರಿವಿನಲ್ಲೇ ಒಂದು ಉತ್ಕಟವಾದ ಆನಂದ, ಭೀತಿ ಎರಡೂ ಅಡಗಿದ್ದವು. ತನ್ನ ಸ್ಕ್ರೂ ಮೊಳೆಗಳ ಸಂಪತ್ತು ವಾಸ್ತವವಾಗಿಯೂ ಹಲವಾರು ವಿಭಿನ್ನ ಅಪರಾಧಗಳ ಸಂಗ್ರಹ ಅನ್ನೋದು, ಪ್ರತಿಯೊಂದು ಮೊಳೆ ಕೂಡ ವಯಸ್ಕರ ನೀತಿ ಸಂಹಿತೆಯ ಮೇಲಿನ ಯಶಸ್ವಿ ಆಕ್ರಮಣದ ದ್ಯೋತಕ ಅಂತ ಅವನಿಗೆ ತಿಳಿದಿತ್ತು. ತನ್ನ ಅಪರಾಧ ಪತ್ತೆ ಆಗಿಬಿಡುವ ಅಪಾಯ ತನ್ನ ಡ್ರಾನಲ್ಲಿ ಇಟ್ಟುಕೊಂಡಿದ್ದ ಸ್ಕ್ರೂ ಮೊಳೆಗಳಿಂದಾಗಿ ಜೀವಂತವಾಗಿದ್ದು ಇಂಥ ಅಪಾಯಕ್ಕೆ ತನ್ನ ಮೈಯೊಡ್ಡಿಕೊಂಡಿರೋದೇ ಒಂದು ಪ್ರಾಯಶ್ಚಿತ್ತ ಅಂತ ಅವನು ನಂಬಿದ್ದ. ಇಂಥ ಸಂಗ್ರಹಕಾರ್ಯವನ್ನು ಕೈಗೊಳ್ಳಲು ತನ್ನನ್ನು ಒತ್ತಾಯಿಸುತ್ತಿರುವ ಪ್ರೇರಣೆ ಅವನ ಮೇಲೆ ಹೊರಿಸಿದ್ದ ಜವಾಬ್ದಾರಿಯ ಕೇವಲ ಒಂದು ಅಂಶವಾಗಿತ್ತು ಅವನು ಎದುರಿಸಬೇಕಾಗಿದ್ದ ಅಪಾಯ. ತಾನು ಮುಂದುವರೆಯುತ್ತಿದ್ದ ದಾರಿ ಒಬ್ಬ ಹುತಾತ್ಮನ ಮಾರ್ಗದಂತೆ ಅಪಾಯಕಾರಿಯೂ, ಗುರುತರ ಹೊಣೆಗಾರಿಕೆಯದ್ದೂ, ಕಠಿಣವೂ ಆಗಿ ತೋರುತ್ತಿತ್ತು ಅವನಿಗೆ. ಪಶ್ಚಾತ್ತಾಪ ಪಡದ ಕಳ್ಳನಂತೆ ಅವನು ತನ್ನ ಶಿಲುಬೆಯನ್ನು ಉತ್ಸಾಹದಿಂದಲೇ ಹೊರ್ತಾ ಇದ್ದ.

ಸ್ಕ್ರೂ ಮೊಳೆಗಳ ಸಂಗ್ರಹ ಕೈಗಾರಿಕೆಗೆ ಒಂದು ಸಣ್ಣ ಸಂದಿಗ್ಧ ಒಂದು ದಿನ ಆವರಿಸಿತು. ಅವನ ಮನೆಯಿಂದ ಶಾಲೆಗೆ ಹೋಗಿಬರಲು ಬಳಸಬಹುದಾದ ಮಾರ್ಗಗಳ ಸಂಖ್ಯೆ

ಸೀಮಿತವಾಗಿದ್ದು ಪ್ರತಿಯೊಂದು ಮಾರ್ಗದ ಅರ್ಹ ಫಲಕಗಳೆಲ್ಲಾ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸ್ಕ್ರೂಗಳನ್ನು ಕೊಟ್ಟುಬಿಟ್ಟಿದ್ದವು. ನಾಮಫಲಕಗಳನ್ನು ಕಿತ್ತುಹಾಕುವ ಇಲ್ಲವೆ ಒಂದೇ ಮೊಳೆಯಿಂದ ನೇತಾಡುವಂತೆ ಬಿಡುವ ಹಂತಕ್ಕೆ ಹೋಗದೆ ಇನ್ಯಾವ ಮೊಳೆಯನ್ನೂ ತೆಗೆಯಕ್ಕೆ ಸಾಧ್ಯವೇ ಇರಲಿಲ್ಲ. ರಜಾದಿನಗಳಲ್ಲೂ ಒಂಟಿಯಾಗಿ ಇತರ ದಿಕ್ಕುಗಳಲ್ಲಿ ಸಂಚರಿಸೋ ಅವಕಾಶ ಅವನಿಗೆ ಇರಲಿಲ್ಲ. ಅವರ ತಂದೆ ಶನಿವಾರ ಬೆಳಗ್ಗೆ ಆಫೀಸಿನಿಂದ ಬರ್ತಿದ್ದ ಹಾಗೇ ಇಡೀ ಕುಟುಂಬದ ಸಮೂಹ ಚಟುವಟಿಕೆಗಳು ಆರಂಭವಾಗ್ತಿದ್ದಿದ್ದರಿಂದ ಒಂಟಿಯಾಗಿ ಯಾವುದೇ ಕಾರ್ಯ ಕೈಗೊಳ್ಳೋ ಸಾಧ್ಯತೇನೇ ಇರಲಿಲ್ಲ. ಎಲ್ಲರಿಗಿಂತ ಸ್ವಲ್ಪ ಹಿಂದೆ ಉಳಿದು ಒಂದು ನಾಮಫಲಕದ ಮೇಲೆ ಹಿಡಿತ-ಸೆಳೆತದ ಆಕ್ರಮಣ ನಡೆಸಿ, ಮತ್ತೆ ಓಡಿಕೊಂಡು ಹೋಗಿ ಇತರರನ್ನ ಸೇರಿಕೊಳ್ಳೋ ಪ್ರಯತ್ನ ನಡೆಸಬಹುದಾಗಿದ್ದರೂ ಅದು ಬಹಳ ಕ್ಲಿಷ್ಟವಾದ ಕಾರ್ಯವಾಗಿತ್ತು. ಹಿರಿಯರ ಜೊತೇಲೇ ಇರಬೇಕು ಅಂತ ನಿರೀಕ್ಷೆ ಇದ್ದು, ಗುಂಪಿನಿಂದ ಹಿಂದೆ ಉಳಿದವರ ಮೇಲೆ ಅವರು ಕೂಗಾಡೋವ್ರು ಹಾಗೂ ಏನು ನಡೀತಾ ಇದೆ ಅಂತ ಯಾವಾಗ್ಲೂ ಪ್ರಶ್ನಿಸೋವ್ರು. ಸುಂದರವಾದ, ಅಮೂಲ್ಯವಾದ ನಾಮಫಲಕಗಳನ್ನ ಅವುಗಳ ಕನ್ಯತ್ವದ ಮೇಲೆ ಒಂದು ಪ್ರಯತ್ನವನ್ನೂ ನಡೆಸದೆ ಹಾಗೇ ಬಿಟ್ಟು ಮುಂದಕ್ಕೆ ಹೋಗಬೇಕಾಗಿ ಬಿಡೋದು. ಹೀಗೆ ಆದಾಗಲೆಲ್ಲ ತನ್ನ ಭವಿತವ್ಯಕ್ಕೆ ತಕ್ಕಂತೆ ಬದುಕುವಲ್ಲಿನ ಅಸಾಮರ್ಥ್ಯದ, ಅತೃಪ್ತಿಯ ಅನುಭವವಾಗ್ತಾ ಇತ್ತು ಅವನಿಗೆ. ತನ್ನ ಮುಂದಿನ ವರ್ಷಗಳಲ್ಲಿ ಯಾವುದನ್ನ ಅವನು ಕರ್ತವ್ಯ ಅಂತ ಗುರುತಿಸುವವನಿದ್ದನೋ ಅದಕ್ಕೆ ಅವನ ಈ ಸಂಗ್ರಹ ಕಾರ್ಯ ಅತ್ಯಂತ ಸಮೀಪವಾಗಿದ್ದು ಅದಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಸೋಲಾದಾಗ ಅವನು ಪಶ್ಚಾತ್ತಾಪಕ್ಕೆ ತೀರ ಸಮೀಪ ಬರ್ತಾ ಇದ್ದ.

ಅವನಿಗೆ ಸಾಧ್ಯವಿದ್ದದ್ದನ್ನೆಲ್ಲಾ ಅವನು ಮಾಡಿದನಲ್ಲ, ಅವನಿಗಿದ್ದ ಆಕರಗಳನ್ನೆಲ್ಲ ಸಂಪೂರ್ಣವಾಗಿ ಬಳಸಿಕೊಂಡನಲ್ಲ ಅಂತ ಇತರರು ಅವನನ್ನ ತಾರೀಫ್ ಮಾಡಬಹುದು. ಅವನು ಈಗ ಅನುಭವಿಸುವ ಮಿತಿಗಳಲ್ಲಿ ಸತ್ಯಮಾರ್ಗವನ್ನು ಅರಸುವ ಯಾವುದೇ ಒಳ್ಳೆ ಕ್ರಿಶ್ಚಿಯನ್ ಆದರೂ ಇಷ್ಟು ಅಪಾಯ ಎದುರಿಸಿ, ಇಷ್ಟು ಪರಿಶ್ರಮ ಹಾಕಿದಮೇಲೆ 'ನನಗೆ ಸಾಧ್ಯವಿದ್ದದ್ದನ್ನೆಲ್ಲ ಮಾಡಿದ್ದೇನೆ' ಅಂತ ತೃಪ್ತಿಯಿಂದ ಕೈಚೆಲ್ತಾ ಇದ್ದ. ಆದರೆ ಸನ್ಮಾರ್ಗದ ಒತ್ತಡಗಳಿಗಿಂತ ಸೈತಾನನ ಸವಾಲುಗಳು ಹೆಚ್ಚು ಪ್ರಬಲವಾಗಿರುತ್ತವೆ. ಅವನೀಗ ಏನಾದ್ರೂ ಯೋಚಿಸಲೇಬೇಕಾಗಿತ್ತು. ಸ್ಕ್ರೂಮೊಳೆಗಳ ಬೇಡಿಕೆಗೆ ತನ್ನ ನಿಷ್ಠೆ ತೋರಿಸಲು ಅವನೀಗ ಏನಾದ್ರೂ ಸರಿ, ಮಾಡಲೇಬೇಕಾಗಿತ್ತು.

ಅವನು ಈಗ ಭಾರವಾದ ಹೃದಯದಿಂದ ಕೈಗೊಂಡ ಕಾರ್ಯ ಅನಿವಾರ್ಯವಾಗಿತ್ತು. ಸಿಕ್ಕಿಹಾಕಿಕೊಳ್ಳುವ ಅಪಾಯ ಎಷ್ಟೇ ಹೆಚ್ಚಾಗಿದ್ದರೂ, ತಮ್ಮ ಮನೆಯ ಸಾಧ್ಯವಿರುವ ಮೊಳೆಗಳನ್ನೆಲ್ಲಾ ಅವನೀಗ ತೆಗೆಯಲೇಬೇಕಾಗಿತ್ತು. ಅಚ್ಚರಿಯಾಗುವಷ್ಟು ಸಂಖ್ಯೆಯ ಮೊಳೆಗಳು ಅಲ್ಲೇ ಇದ್ದು, ಹೆಚ್ಚಿನ ಎಚ್ಚರಿಕೆಯಿಂದ ಅವನು ಈ ಕಾರ್ಯವನ್ನು ಕೈಗೊಂಡ. ತನ್ನ ಶೋಧದ ಈ ಕೊನೆಯ ಹಂತವನ್ನು ಪ್ರವೇಶಿಸುತ್ತಿದ್ದಂತೆ ತಮ್ಮ ಮನೆಯ ಮೊಳೆಗಳು ಅತ್ಯಂತ ಮುಖ್ಯವಾದವು, ತನಗೆ ತೀರ ಅಗತ್ಯವಾಗಿದ್ದವು ಅಂತ ಅವನು ಮನಗಂಡ. ಯಾವುದೇ ಕೋಣೆಯಲ್ಲಿ ತಾನು ಒಂಟಿ ಅಂತ ಖಾತ್ರಿಯಾದ ಕೂಡಲೆ ಅವನು ಉತ್ಸುಕತೆಯಿಂದ ಸುತ್ತಮುತ್ತ ನೋಡತೊಡಗುತ್ತಿದ್ದ. ಅಷ್ಟರಲ್ಲೇ ಅವನ ಚಿಕ್ಕ ಸ್ಕ್ರೂಡ್ರೈವರ್ ಅವನ ಕಿಸೆಯಿಂದ ಹೊರಬರುತ್ತಿತ್ತು. ಕೆಲವೇ ದಿನಗಳಲ್ಲಿ ಎಲ್ಲ ಬೀಗಗಳನ್ನೂ ಕಲುಷಿತಗೊಳಿಸಲಾಯಿತು. ಬಾಗಿಲ

ಹಿಡಿಕೆಗಳ ಲೋಹದ ಪಟ್ಟಿಗಳೂ ತೀರ ಕನಿಷ್ಠವಾದ ಎರಡೇ ಮೊಳೆಗಳಿಂದ ನೇತಾಡತೊಡಗಿದವು. ಎಡಗಡೆಯ ಮೇಲ್ಭಾಗದ ಮೂಲೆ, ಬಲಭಾಗದ ಕೆಳಗಡೆಯ ಮೂಲೆ– ಇವೆರಡರ ಮೊಳೆಗಳನ್ನ ತೆಗೆದರೂ, ಎದುರೆದುರು ಮೂಲೆಗಳಲ್ಲಿ ಉಳಿದ ಇತರ ಎರಡು ಮೊಳೆಗಳೇ ಫಲಕಗಳನ್ನು ಸರಿಯಾಗಿ ಹಿಡಿದಿಡಬಲ್ಲವು ಅಂತ ಅವನು ಕಂಡುಕೊಂಡಿದ್ದ.

ಪ್ರತಿಯೊಂದು ಬಾಗಿಲಿನಿಂದಲೂ ಎದ್ದು ಕಾಣಿಸುವಂತಿದ್ದ ನಷ್ಟವನ್ನು ಯಾರಾದ್ರೂ ಗುರುತಿಸಿದರೆ, ತಾನೇ ತಪ್ಪಿತಸ್ಥನೆಂದು ಸುಲಭವಾಗಿ ಪತ್ತೆಹಚ್ಚಿ ಶಿಕ್ಷಿಸುವರೆಂದು ಅವನಿಗೆ ತಿಳಿದಿತ್ತು. ಇಂಥಾ ವಿಷಯಗಳಲ್ಲಿ ವಯಸ್ಸು ಲಿಂಗಗಳಿಂದಾಗಿ ಮನೆಯ ಇತರ ಎಲ್ಲರಿಗಿಂತ ತಾನೇ ಹೆಚ್ಚು ಅನುಮಾನಾಸ್ಪದ ವ್ಯಕ್ತಿ ಅಂತ ಅವನಿಗೆ ಗೊತ್ತಿತ್ತು. ಅವನ ತಮ್ಮಂದಿರಿಬ್ಬರೂ ತೀರ ಸಣ್ಣವರಾಗಿದ್ದರು. ಅವನ ಅಕ್ಕಂದಿರನ್ನ ಸ್ಕ್ರೂ ಕಳ್ಳರೆಂದು ಯಾರೂ ಅನುಮಾನಿಸುವಂತಿರಲಿಲ್ಲ. ಎಲ್ಲರಿಗೂ ತಿಳಿದಂತೆ ಅಂತೂ, ಅವರು ಯಾರ ಹತ್ತಿರವೂ ಸ್ಕ್ರೂ ಡ್ರೈವರ್ ಕೂಡಾ ಇರಲಿಲ್ಲ. ತನ್ನ ಕೋಟ್ ಪಾಕೆಟ್ ಮರೆಯಲ್ಲಿ ಆ ಚಿಕ್ಕ ಕಠಿಣವಾದ ಅಸ್ತ್ರವನ್ನ ಅವನು ಇಟ್ಟುಕೊಂಡು ಓಡಾಡ್ತಾನೆ ಅಂತ ಗೊತ್ತಿಲ್ಲದಿದ್ದರೂ ಅವನ ಹತ್ತಿರ ಉಪಕರಣಗಳ ಒಂದು ಸೆಟ್ ಇದೆ ಅಂತ ಎಲ್ಲರಿಗೂ ತಿಳಿದಿತ್ತು. ಯಾವುದಾದರೂ ಒಂದು ಬಾಗಿಲಿನಲ್ಲಿ ಏನೋ ವ್ಯತ್ಯಾಸ ಅಂತ ಯಾರಾದ್ರೂ ಗುರುತಿಸಿದ ಕೂಡಲೇ ಬೇರೆ ಬಾಗಿಲುಗಳೂ ಪರೀಕ್ಷಿಸಲ್ಪಡುತ್ತವೆ, ಹುಡುಕಾಟ –ಹಿಡಿದಾಟಗಳು ತನ್ನ ಬೆನ್ನು ಹತ್ತುತ್ತವೆ ಅನ್ನೋದ್ರಲ್ಲಿ ಅವನಿಗೆ ಯಾವ ಅನುಮಾನವೂ ಇರಲಿಲ್ಲ. ಖಂಡಿತವಾಗಲೂ ಯಾವ ಮಕುಟ ಹೊತ್ತ ತಲೆಯೂ ಇವನಷ್ಟು ಕಷ್ಟಪಡ್ತಿರಲಿಲ್ಲ.

ಯಾವ ಬೆಳವಣಿಗೆಯೂ ಇಲ್ಲದೆ ದಿನಗಳು ಕಳೀತಾ ಇದ್ದವು. ತನ್ನ ಗುರಿಯನ್ನು ಮುಟ್ಟುವ ದಿಸೆಯಲ್ಲಿನ ತನ್ನ ನಿಷ್ಕ್ರಿಯತೆ ಅವನಲ್ಲಿ ತಳಮಳ ಹುಟ್ಟಿಸಿತ್ತು. ಅಷ್ಟು ಹೊತ್ತಿಗೆ ಅವನ ಅಕ್ಕ ಬೋರ್ಡಿಂಗ್ ಶಾಲೆಯಿಂದ ಮನೇಗೆ ಬಂದಳು. ಅವಳೇ ಪತ್ತೆ ಮಾಡಿದವಳು. ಅತ್ಯಂತ ದೊಡ್ಡ ಅಪರಾಧಿಗಳೂ ಕೂಡ ತಮ್ಮ ಕಲೆಯ ಯಾವುದೋ ವಿವರದಲ್ಲಿ ನಂಬಲಸಾಧ್ಯವಾದ ತಪ್ಪು ಮಾಡೋದ್ರಿಂದಲೇ ಸಿಕ್ಕಿ ಹಾಕಿಕೊಳ್ತಾರೆ ಅನ್ನೋ ಸತ್ಯ ಅವನ ಅಕ್ಕ ಮಾತಾಡ್ತಾ ಇದ್ದದ್ದು ಕೇಳಿದಾಗ ಅವನಿಗೆ ಮೊದಲ ಬಾರಿಗೆ ಮನದಟ್ಟಾಯಿತು. ಮನೆಯ ಒಂದು ಕೋಣೆಯ ತಂಟೇಗೆ ತಾನು ಹೋಗಬಾರದಿತ್ತು ಅಂತ ಅವಳ ಮಾತು ಕೇಳ್ತಿದ್ದ ಹಾಗೇ ಅವನಿಗೆ ಹೊಳೆಯಿತು. ಸಾಮಾನ್ಯವಾಗಿ ಯಾರೂ ಯಾವ ಬಾಗಿಲನ್ನೂ ದಿಟ್ಟಿಸ್ತಾ ಕೂತ್ಕೋಳೊಲ್ಲ. ಆದರೆ ಒಂದು ಸ್ಥಳದಲ್ಲಿರೋವಾಗ ಮಾತ್ರ ಬಾಗಿಲನ್ನು ದಿಟ್ಟಿಸೋದು ಬಿಟ್ಟು ಕಣ್ಣಿಗೆ ಇನ್ನೇನೂ ಆಯ್ಕೇನೆ ಇರಲ್ಲ. ಅಲ್ಲಿ ಇನ್ನು ಯಾವ ದಿಗಂತವೂ ಗೋಚರಿಸಲ್ಲ. ಮನೆಯ ಅತ್ಯಂತ ಚಿಕ್ಕ ಕೋಣೆಯಿಂದ ಅವನ ಅಕ್ಕ ಆಗಷ್ಟೇ ಹೊರಕ್ಕೆ ಬಂದಿದ್ದಳು. ಅಲ್ಲಿನ ಪುಟ್ಟ ಪ್ರಪಂಚದ ಎಲ್ಲವನ್ನೂ ಪರಿಶೀಲಿಸ್ತಿರೋವಾಗ ಬಾಗಿಲಿನ ಹಿಡಿಯ ಮೇಲೆ ಕೆಳಗಿನ ಎರಡು ಫಲಕಗಳಲ್ಲೂ ಎರಡೆರಡು ಮೊಳೆಗಳು ನಾಪತ್ತೆಯಾಗಿದ್ದದ್ದನ್ನ ಅವಳ ಕಣ್ಣುಗಳು ಗುರುತಿಸಿದವು. ಈ ವಿಚಿತ್ರವಾದ ಅನ್ವೇಷಣೆಯ ಬಗ್ಗೆ ಅವನ ಅಕ್ಕ ಮಾತಾಡ್ತಾ ಇದ್ದಾಗ ಬಾಗಿಲು ಅರೆ ತೆರೆದಿದ್ದು, 'ಸ್ಕ್ರೂ' ಅನ್ನೋ ಪದ ಕಿವಿಗೆ ಬೀಳ್ತಿದ್ದ ಹಾಗೇ ಅವನ ಕಾಲು ಬಾಗಿಲ ಹೊರಗೇ ನಿಂತುಬಿಡ್ತು. ಉಸಿರು ಬಿಗಿ ಹಿಡಿದು ಇನ್ನೊಂದೇ ಕ್ಷಣ ಕೇಳ್ತಾ ನಿಂತವನು ಮೆಟ್ಟಿಲುಗಳನ್ನ ಮೆಟ್ಟಿಂಗಾಲಿನಲ್ಲಿ ಹತ್ತಿ ತನ್ನ ಪವಿತ್ರ ಡ್ರಾನಲ್ಲಿದ್ದ ಆ ಡಬ್ಬ ಹುಡುಕಿದ. ಆ ಮೊಳೆಗಳನ್ನ ತಡಕಿ, ಸೂಕ್ತವಾದ ಅಳತೆಯ ಒಂದಿಷ್ಟು ಮೊಳೆಗಳನ್ನ ಆರಿಸಿಕೊಂಡಾಗ

ಅವನ ಕೈ ನಡಗ್ತಾ ಇತ್ತು. ಕೆಲವೇ ಕ್ಷಣಗಳಲ್ಲಿ ಅವನು ಟಾಯ್ಲೆಟ್ ಒಳಸೇರಿ ಬಾಗಿಲು ಭದ್ರ ಪಡಿಸಿದ್ದ. ಕದ್ದ ಸಂಪತ್ತನ್ನ ಹಿಂತಿರುಗಿಸೋದು ಅತ್ಯಂತ ವೇದನಾಪೂರ್ವಕವಾಗಿದ್ದರೂ, ಇಡೀ ಸಂಪತ್ತನ್ನ ಉಳಿಸಿಕೊಳ್ಳಲು ನಾಲ್ಕು ಮೊಳೆಗಳನ್ನ ಬಲಿಕೊಡೋದು ಅನಿವಾರ್ಯವಾಗಿತ್ತು. ಯಾಕೆ ಅಂದ್ರೆ ಸಿಕ್ಕಿಹಾಕಿಕೊಳ್ಳೋ ಭಯ ದಟ್ಟವಾಗಿತ್ತು.

ಅಪರಾಧದ ಭಾವದಿಂದಾಗಿ ಅವನ ಕೈಗಳು ದೃಢವಾಗಿರಲಿಲ್ಲ. ಉಳಿದವಕ್ಕಿಂತ ಸ್ವಲ್ಪ ದೊಡ್ಡದಾದ ಕೊನೆಯ ಸ್ಕ್ರೂನ ಅವನು ಸ್ವಲ್ಪ ಅಲಕ್ಷ್ಯದಿಂದಲೇ ಹಾಕಿದ್ದರಿಂದ ಅನಿರೀಕ್ಷಿತವಾಗಿ ಬಾಗಿಲ ಹಿಡಿಕೆಯ ಮೇಲಿನ ಫಲಕ ಚೂರು ಸೀಳಿಬಿಟ್ಟಿತು. ಅದರ ಹೊಳೆಯುವ ಮೇಲ್ಮೈ ಆ ಸೀಳನ್ನ ಢಾಳಾಗಿ ತೋರಿಸಿತು. ಕೊನೆಯ, ಈ ತೀರ ಘೋರವಾದ ಅಪರಾಧದ ಸ್ಥಳದಿಂದ ಆತುರಾತುರವಾಗಿ ಅವನು ಪರಾರಿಯಾದ. ಇನ್ನೇನು ಕೆಲವೇ ಘಂಟೆಗಳಲ್ಲಿ ಪತ್ತೆಯಾಗಿಬಿಡತ್ತೆ ಅಂತ ಗೊತ್ತಿತ್ತು. ಕದ್ದಮಾಲಿಗಾಗಿ ಹೊಸ, ಸುರಕ್ಷಿತ ಸ್ಥಳವನ್ನು ಹುಡುಕಕ್ಕೂ ಅವನು ಪ್ರಯತ್ನಿಸಲಿಲ್ಲ. ಅಪರಾಧಿಯ ಶೋಧ ಪ್ರಾರಂಭವಾಗಿತ್ತು. ಊಟದ ಕೋಣೆಯ ಬಾಗಿಲಿನಲ್ಲೂ ಮಾಯವಾದ ಸ್ಕ್ರೂಗಳ ಚರಿತ್ರೆ ದಾಖಲಾಗಿದ್ದು, ಇಲ್ಲೂ ಕೂಡ ಬೀಗ ಮಾತ್ರ ಅಲ್ಲದೆ ಬಾಗಿಲಿನ ಹಿಡಿಕೆಯ ಮೇಲಿನ, ಕೆಳಗಿನ ಫಲಕಗಳಲ್ಲೂ ದರೋಡೆ ಕಂಡು ಬಂತು. ಸಮಾಧಾನವಾಗಿ ಇತರ ಕೋಣೆಗಳೆಲ್ಲದರ ಪರೀಕ್ಷೆ ನಡೆಯುತ್ತಿದ್ದಾಗಲೆ ಟಾಯ್ಲೆಟ್‌ನ ಬಾಗಿಲ ಸ್ಕ್ರೂಗಳು ಮತ್ತೆ ಪ್ರತ್ಯಕ್ಷವಾಗಿರೋದನ್ನ, ಅವುಗಳೊಡನೆ ಸೀಳು ಕೂಡ ತಲೆದೋರಿರೋದನ್ನ ಸಾರುತ್ತಾ ಯಾರೋ ಓಡಿ ಬಂದರು. ಸುತ್ತ ಆವರಿಸಲ್ಪಟ್ಟ ದರೋಡೆಕೋರನಂತೆ ಅವನು ತನ್ನ ಗುಹೇಲೇ ಕಾಯ್ತಾ ಇದ್ದ. ಅವಿತಿಟ್ಟ ಸಂಪತ್ತಿನ ರಕ್ಷಣೆಯ ಕೊನೆಯ ಪ್ರಯತ್ನ ಎಂಬಂತೆ ಅವನ ಅಸ್ತ್ರ ಇನ್ನೂ ಅವನ ಕಿಸೆಯಲ್ಲೇ ಇತ್ತು. ಅವರು ಅವನನ್ನ ಅಲ್ಲೇ ಪತ್ತೆ ಮಾಡಿ ಮನೆಯೊಳಗಿನ ನಿಗೂಢತೆಯ ಪರಿಹಾರಕ್ಕಾಗಿ ನೇರವಾಗಿ ಅವನ ಡ್ರಾ ಮೇಲೆ ಆಕ್ರಮಣ ಮಾಡಿದರು. ಅವರ ಪ್ರಶ್ನೆಗೆ ಉತ್ತರವಾಗಿ ತನ್ನ ಕಿಸೆಯಲ್ಲಿದ್ದ ಅಸ್ತ್ರವನ್ನ ತೋರಿಸ್ತಾ ಏನೋ ಅಸ್ಪಷ್ಟ ವಿವರಣೆ ನೀಡಿದ ಅವನು. ತನ್ನ ಕೃತ್ಯ ಕಳ್ಳತನ ಅಂತ ತಿಳಿದಿದ್ದರಿಂದ ಸಾಮಾಜಿಕ ನೀತಿ ರಕ್ಷಕರಿಂದ ಯಾವುದೇ ವಿನಾಯಿತಿಯನ್ನೂ ಅವನು ನಿರೀಕ್ಷಿಸಲೂ ಇಲ್ಲ, ಬಯಸಲೂ ಇಲ್ಲ. ಅವರ ಮನೆಯಲ್ಲಿ ವಾಡಿಕೆಯಾಗಿದ್ದ ನೇರವಾದ ಶಿಕ್ಷೆಗಳಿಗೆ, ಅದಕ್ಕಿಂತ ಘೋರವಾದ 'ಕಳ್ಳ' ಎಂಬ ಹಣೇಪಟ್ಟಿಯ ಅವಮಾನಕ್ಕೆ ಅವನು ಸಿದ್ಧವಾಗೇ ಇದ್ದ. ಈ ಕಳ್ಳತನಗಳಿಗೆ ಯಾವುದೇ ಸಮಝಾಯಿಶಿ ಕೂಡ ಇರಲಿಲ್ಲ ಅನ್ನೋದು ಅವನ ಅವಮಾನ ಅಪರಾಧೀ ಭಾವಗಳನ್ನ ಇನ್ನಷ್ಟು ತೀವ್ರಗೊಳಿಸಿತ್ತು. ಪರಿಶುದ್ಧಾತ್ಮನ ವಿರುದ್ಧ ಎಸಗಿದ ಪಾತಕದಂತೆ ತನ್ನ ಕೃತ್ಯ ಪೈಶಾಚಿಕವಾಗಿತ್ತು ಹಾಗೂ ಅಕ್ಷಮವಾಗಿತ್ತು ಅಂತ ಅವನು ಅರಿತಿದ್ದ.

ಅವನಿಗೆ ತೀರ ಅನಿರೀಕ್ಷಿತವಾದದ್ದು ಅಂದರೆ ಅವರ ಗೇಲಿ. ಶಿಕ್ಷೆ ಬಹಿಷ್ಕಾರಗಳನ್ನ ಎದುರಿಸಲು ಸಿದ್ಧವಾಗಿದ್ದವನಿಗೆ ಇದು ಅತ್ಯಂತ ಮುಜುಗರ, ಗೊಂದಲ ಉಂಟುಮಾಡಿತು. ತನಗೆ ಧರ್ಮವಾಗಿದ್ದು, ಸಮಾಜದ ದೃಷ್ಟಿಯಲ್ಲಿ ಅಪರಾಧ ಅನ್ನಿಸುವಂಥದ್ದನ್ನು ಹಾಸ್ಯದ ನಿಮಿತ್ತ ಮಾಡಿಕೊಂಡದ್ದು ಅವನಿಗೆ ಧರ್ಮದ್ರೋಹದಂತೆ ಆಘಾತವುಂಟುಮಾಡಿತು. ತಾನು ಅನುಭವಿಸಿದ ಒತ್ತಡ ಅವರಿಗೆ ಅರ್ಥವಾಗತ್ತೆ ಅಂತ ಅವನು ನಿರೀಕ್ಷಿಸಿರಲಿಲ್ಲ. ತನಗೇ ಅದರ ಪ್ರಭಾವ ಹೊರತು ಇನ್ನೇನೂ ತಿಳಿಯದಿದ್ದಾಗ ಬೇರೆಯವರಿಗೇನು ಗೊತ್ತಾಗೋ ಹಾಗಿತ್ತು! ಆದರೆ ಪಾತಕಕ್ಕೆ ಸಲ್ಲುವ ಗಾಂಭೀರ್ಯವಿಲ್ಲದೆ ಈ ವಿಷಯದಲ್ಲಿ ಅವರು

ವ್ಯವಹರಿಸುತ್ತಾರೆ ಅಂತ ಅವನು ಊಹಿಸಿಯೂ ಇರಲಿಲ್ಲ. ಅವರ ನಗು, ಅಟ್ಟಹಾಸಗಳು ಅವನ ಕೆನ್ನೆಗಳನ್ನ ಒಂದು ವಿನೂತನ ಅವಮಾನದಿಂದ ಕೆಂಪೇರಿಸಿದವು. ಒಳಿತು ಕೆಡಕುಗಳ ಅವನ ಜಗತ್ತೇ ನುಚ್ಚುನೂರಾಯಿತು, ತಿಂಗಳುಗಟ್ಟಲೆಯ ಅವನ ಶ್ರಮ, ಶೌರ್ಯಗಳು ನಿರರ್ಥಕವೆನಿಸಿಬಿಟ್ಟವು. ಪೂರ್ವ ದೇಶಗಳಲ್ಲಿ ಮುಖ 'ಕಳೆದುಕೊಂಡ' ಎಂದು ಹೇಳುವುದರ ಅರ್ಥ ಅವನಿಗಿನ್ನೂ ತಿಳಿದಿರಲಿಲ್ಲ. ಅಪರಾಧಿಯ ಅವನ ಸ್ಥಾನ, ತಾನೇ ಸವಾಲೊಡ್ಡುವಾಗಲೂ ಅವನೆಂದೂ ಅನುಮಾನಿಸದ ನೈತಿಕ ವ್ಯವಸ್ಥೆಯ ಬಗ್ಗೆ ಅವನ ನಂಬಿಕೆ, ಮೀರುವಾಗಲೂ ಅವನು ಕಡೆಗಣಿಸಿರದ ಕಾಯಿದೆ, ಒಬ್ಬ ಗಂಭೀರ ಪ್ರತಿಸ್ಪರ್ಧಿಯ ಗಂಭೀರ ಶತ್ರು ತಾನೆಂಬ ಅವನ ಆತ್ಮ ಗೌರವ – ಇವುಗಳ ಪೈಕಿ ತಾನು ಕಳೆದುಕೊಂಡದ್ದೇನು ಎಂದು ಅವನಿಗೆ ಸ್ಪಷ್ಟಗೊಳಿಸುವ ಯಾವ ಸೂತ್ರವೂ ಈಗ ಅವನ ಬಳಿ ಇರಲಿಲ್ಲ. ತನ್ನ ಅರಿವಿನ ವ್ಯಾಪ್ತಿಯಲ್ಲಿನ ಅತ್ಯಂತ ಗಂಭೀರ ನಿಷಿದ್ಧದ ವಿರುದ್ಧವಾಗಿ ಅವನು ತನ್ನೆಲ್ಲ ಕೌಶಲ ಶೌರ್ಯಗಳನ್ನೂ ರಾಚಿದ್ದ–ಅದನ್ನು ಅವರೆಲ್ಲ ಹಾಸ್ಯವಾಗಿ ಪರಿಗಣಿಸಿದ್ದರು.

ಮನೆಗೆ ಬಂದ ಅತಿಥಿಗಳಿಗೆ ಈ ಪ್ರಸಂಗವನ್ನು ಹೇಳುತ್ತಿದ್ದುದುಂಟು. ಆಗೆಲ್ಲ ಅವನು ಸದ್ದಿಲ್ಲದೆ ಕೋಣೆಯಿಂದ ಹೊರಕ್ಕೆ ನುಸುಳಿ, ಅವರ ಅವಹೇಳನದ ನಗು ಕೇಳುತ್ತಲೇ ಮೆಟ್ಟಿಲೇರುತ್ತಿದ್ದ, ಕಂಬನಿ ಚೆಲ್ಲಿ ತನ್ನ ಅವಮಾನವನ್ನು ತಾನೇ ಬಯಲು ಮಾಡದಂತೆ ತನ್ನ ಮುಖವನ್ನು ತಲೆದಿಂಬಿನಲ್ಲಿ ಹುದುಗಿಸಲೆಂದು.

ಇಂಗ್ಲಿಷ್ ಮೂಲ : ರೆಜಿನಾಲ್ಡ್ ರೆನಾಲ್ಡ್ಸ್ (1905) ಪೆಂಗ್ವಿನ್ ಪೆರೇಡ್ 10

●

"ನಾವೆಲ್ಲರೂ ಗಾಂಧೀಜಿಯ ವಾರಸುದಾರರಾಗಿರುವಂತೆಯೇ
ಕೈಗಾರಿಕಾ ಕ್ರಾಂತಿಯ, ಹದಿನಾರನೇ ಶತಮಾನದ ವೈಚಾರಿಕ ಕ್ರಾಂತಿಯ,
ಇಪ್ಪತ್ತನೇ ಶತಮಾನದ ಮಾಧ್ಯಮ ಕ್ರಾಂತಿಯ ವಾರಸುದಾರರು"

– ಪಿ. ಲಂಕೇಶ್

ಕಾಟ್ರಹಳ್ಳಿಯವರ ಎರಡು ಕವನ

ನನ್ನಲ್ಲಿಯ ಕವಿ

– ಮಹಾಬಲೇಶ್ವರ ಕಾಟ್ರಹಳ್ಳಿ

ಕವಿತೆ ಸರ್ವಾಂತರ್ಯಾಮಿ
ತಲೆ ತೂಗುವುದರಲ್ಲಿದೆ ಕವನ
ಒಳ್ಳೆ ರಾಗಕ್ಕೆ ತಲೆಯಾಡಿಸುವುದರಲ್ಲಿದೆ
ಮಾತಾಡುವ ಬಗೆಯಲ್ಲಿದೆ
ನರ್ತನದ ಆಂಗಿಕ ವಿನ್ಯಾಸದಲ್ಲಿದೆ
ಹ್ರಸ್ವ ನಗೆ ಮಲ್ಲಿಗೆ ತುಟಿಯಲ್ಲಿ
ಭಿಕ್ಷುಕನ ತಾಳಬದ್ಧ ಹೊಟ್ಟೆ ಬಡಿತದಲ್ಲಿರುತ್ತದೆ
ಸರಸರ, ಸೊರಸೊರ ಸುರಿಸುವ ಹಾಲು ಕರೆವ ಕೆಚ್ಚಲುಗಳಲ್ಲಿದೆ
ಮತ್ತೊಂದು ಮೊಲೆ ನೀವುತ್ತಾ, ಇನ್ನೊಂದನ್ನು ಬಾಯಿ ತುಂಬ ಹೀರುತ್ತಾ
ಸವಿಯುವ, ಕೂಸು ಕರುವಿನ ಹಾಲುಗಲ್ಲಗಳಲ್ಲಿ ಅವಿತಿದೆ
ಮತ್ತೆ ಮತ್ತೆ ಇದೆಲ್ಲವೂ ಕವಿತೆಯೇ

ಮನುಷ್ಯ – ನಿಸರ್ಗ – ಆಧುನಿಕತೆ – ಆವಿಷ್ಕಾರಗಳಿರುವವರೆಗೆ
ಈ ನೆಲ ನಡುಗುತ್ತಾ ಮೋಡ ಮಳೆಗರೆಯದೆ
ಭೂಮಿ ನೀರಿಗಾಗಿ ಬಿರಿದುಕೊಂಡಿರುವವರೆಗೆ
ದಾವಾನಲದಿಂದ ದಹಿಸುವ ಜೀವರಾಶಿಯಲ್ಲೂ
ರುದ್ರ ತಾಂಡವದ ನಿಸರ್ಗ ವೈಪರೀತ್ಯಗಳಲ್ಲೂ
ಮೇಳೈಸಿರುತ್ತಲೇ
ಮನುಷ್ಯ ಮನಸ್ಸು ಕವಿತೆಗಾಗಿ ಹಾತೊರೆಯುತ್ತಿರುತ್ತದೆ.

ಒಮ್ಮೊಮ್ಮೆ ಸಿಟ್ಟಿಗೇಳುತ್ತ, ಮತ್ತೆ ಮತ್ತೊಮ್ಮೆ ಸಂತಸಗೊಳ್ಳುತ್ತ
ಮಗದೊಮ್ಮೆ ಪ್ರೀತಿ–ವಿಷಾದ–ಹತಾಶೆ–ವ್ಯಗ್ರತೆ–ಏಕಾಕಿತನ
ಅನ್ಯಾಯ ಅಸಹಕಾರಗಳಿರುವವರೆಗೂ
ಒಳದನಿಯಾಗಿ ಹೆಪ್ಪುಗಟ್ಟಿದ ಆಕ್ರೋಶವಾಗಿ
ಹೊರಹಾಯಲು ಕಾತರದಲ್ಲಿರುತ್ತದೆ.

'ಇಕ್ರಲಾ ವದೀರ್ಲಾ' – ಗೊತ್ತಲ್ಲಾ ಕವಿಯ ಕೋಪ
ಗದ್ದರನ ಹೊಟ್ಟೆ ಕಿಚ್ಚು ಗಂಟಲಿಂದ ಜಿಗಿದು ಚಿಮ್ಮಿ
ಕವಿತಾ ಜ್ವಾಲೆಯಾಗಿ ಆಳುವವರನ್ನು ಆತಂಕಿಸುತ್ತಿದೆ ಅನವರತ

ಕೇರಾಫ್ ಕೆ. ಅಪ್ಪುರಾಜ್, ನಂ. 1166–ಡಿ, 4ನೇ 'ಎ' ಮೈನ್, 12ನೇ ಕ್ರಾಸ್, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–560040

'ನಾನು ರಸ್ತೆಯಲ್ಲಿ ನೋಡುತ್ತೇನೆ ಅವರಿಗೆ ಉಣ್ಣಲು ಇಲ್ಲ
ನೋಡದ ಕುರುಡನಾಗಲೇ' ಎಂದು
ಜಾಕ್ಸನ್ ಕಾಡುತ್ತಾನೆ – ಅಂತೆಯೇ
ನೋಡಿ – ಬೀದಿಯಲ್ಲಿ ರಕ್ತವಿದೆ
ಎಂದು ಅತ್ಯಾಚಾರ, ಹಿಂಸೆ ಕಂಡು
ನೆರುಡಾನಂತೆ ಕನಲುತ್ತಾನೆ.

ಶಾಂತಿಗಾಗಿ ಹಂಬಲಿಸುತ್ತಾ ದರ್ಗಾನಂತೆ ಆಶಿಸುತ್ತಾನೆ
ಅಂಥ ನಾಡಲ್ಲಿ ಬಂದೂಕಿನಲ್ಲಿ
ಗುಬ್ಬಿ ಗೂಡು ಕಟ್ಟುವ ತವಕ ತೋರುತ್ತದೆ.

'ಜನರೇ ಸುತ್ತ ಬನ್ನಿ, ಈ ನೀರು ಸುತ್ತಾ ವ್ಯಾಪಿಸ ಬಿಡಿ
ಪೂರಾ ನೆನೆದು ಹೋಗಲಿ ನಾವೆಲ್ಲಾ'
ಡೈಲಾನ್ ಅಂದಿದ್ದ ಕೊನೆಗೆ, ಎಲ್ಲಾ ಸ್ವಾಗತಿಸುತ್ತ

'ನಿನ್ನ ಮುಖ ಬಿಳಿಮೋಡದಂತಿದೆ, ಓಹ್!
ನೀ ಹೂವಂತೆ ಪರಿಮಳ ಸೂಸುತ್ತೀ ಎಂದಿರಾ
ಹಾಗಾದರೆ ನೀವೂ ಒಬ್ಬ ಕವೀನೇ ಖರೆ.

ಕಿಟಕಿಯ ಪರದೆ ಹಿಂದೆ
ಕೊಳಲನೂದುವನ
ಮರಳಿಕೆ ಕಾಯುತ್ತ – ಆ ಕಾವ್ಯ ಕನ್ನಿಕೆಯ
ಸ್ವಗತ – ಮೌನವಾಗಿ
ಬಳುಕು ಬೆರಳಿಂದ ಗೆರೆ ಕೊರೆಯುತ್ತಿದೆ
ಗಮನಿಸಿ, ಕವಿತಾಳ ಈ ಬೆರಗು ಬಿನ್ನಾಣವೆಲ್ಲವ
ಇದೇ ಏನು ಕಾವ್ಯ?

ನವ ದ್ರಷ್ಟಾರ

ಉಗ್ರ ದ್ರಷ್ಟಾರನಂತೂ ಅವಿತುಕೊಂಡಿದ್ದಾನೆ;
ಎಲ್ಲಿ?
ಇದೇ ಟ್ರಿಲಿಯನ್ ಡಾಲರ್ ಪ್ರಶ್ನೆ!

ಗೊತ್ತಿಲ್ಲ ಯಾರಿಗೂ ಎಲ್ಲಿ ಅಡಗಿದ್ದಾನೆಂದು:
ಪೊದೆ ಪೊಟರೆ ಅಥವಾ ಗವಿ ಗಹ್ವರ ಅಥವಾ
ಇತರ ಜಿಹಾದಿ ಆತ್ಮಗಳಲ್ಲೋ?

ಅಮೆರಿಕದ ಬೃಹತ್ ಸರ್ವೇಕ್ಷಣ ಕ್ಯಾಮರಾಗಳೂ
ಹಿಡಿಯಲೊಲ್ಲವು
ತುಂಡು ತುಂಡಾಗಿ ಸೀಳಿ ದಾಳಿ ಮಾಡಲೊಲ್ಲವು!

ದೇಹದಲ್ಲಿದ್ದಾನೊ ಮನದಲ್ಲಿದ್ದಾನೊ –
ಎರಡರಲ್ಲೂ ಇದ್ದಾನೊ!
ಇಲ್ಲ ಬಿಡಿ

ಅವನು ಸತ್ತಿಲ್ಲ, ಎಲ್ಲರ ಅಂಬೋಣದಂತೆ
ಇದ್ದಾನೆ ಜೀವಂತ ಈ ಜೀವಿಗಳ ಜೀನ್ ನಲ್ಲಿ
ಮಾಹಿತಿಯಾಗಿ ಆಳದೊಳಗೆ ಅಂತರ್ಗತ,

ಧಾನ್ಯ ಸಮೃದ್ಧಿ ಮುಂದಿದ್ದು –
ಬಡವನೊಬ್ಬನ ಹೊಟ್ಟೆ ಹಸಿವಿಂದ ಕಟಕಟ ಕನಲುವಾಗ
ಪೋಷಕರು ಬೂಟಿಂದ ತುಳಿದು ಒದ್ದು ಮಣ್ಣಾಗಿಸುತ್ತಾರೆ

ಸ್ವಾತಂತ್ರ್ಯ ಎಲ್ಲರಿಗೂ ಎನ್ನುವ ಸುಧಾರಕರು
ಸಾಮಾನ್ಯನ ಜೀವನ ಅಥವಾ ದನಿ ಹಿಚುಕಿದಾಗ
ಉಗ್ರತೆ ವಿವಿಧ ಅವತಾರವೆತ್ತಿ ಮೈದಾಳುತ್ತದೆ

ಉಷ್ಟ್ರ ಪಕ್ಷಿ ಮರಗಳು ದಿಣ್ಣೆಯಲ್ಲಿ ಮುಖ ಹುದಿಗಿಸಿಕೊಂಡಂತೆ
ಅನವರತ ಅಂತರ್ಗತ ಒತ್ತಾಸೆಗಳಿಂದ
ಶಿರವನ್ನೇ ಉಕ್ಕಿನ ಗೋಡೆಗಳಿಗೆ ಢಿಕ್ಕಿ ಹೊಡೆದು
ಶೋಷಕರ ವಿರುದ್ಧ ಯುದ್ಧ ಸಾರುವ ಹೂಂಕಾರದ ಧಿಕ್ಕಾರ ಧಿಕ್ಕಾರ

ದ್ರಷ್ಟಾರನು ಬಹುದಿನ ಬಾಳಲಿ,
ಮಾಧ್ಯಮವೇ ಅವನ ಸಂದೇಶ

ಪ್ರಶ್ನೆ ಅಂದರೆ ಸದ್ಯ
ಅಸಂಘಟಿತರ ಸಂಘಟನೆಯೇ ಜರೂರು

ಶಿರಗಳ ಕಳಕೊಳ್ಳುವ ಬದಲು
ಜ್ಞಾನ ಸಂಘರ್ಷವೇ ಸರೀನೇ?
ಹೃದಯವಂತ ಮೆದುಳಿನ ಶಿರಗಳೇ
ಸ್ಥಿರವಾಗಲಿ, ವರ್ಧಿತವಾಗಲಿ

"ಗ್ರೀಸ್ ಮತ್ತು ಭಾರತದ ವ್ಯಾಪಾರ ಸಂಪರ್ಕ ಅಲೆಕ್ಸಾಂಡರ್‌ನಿಗೂ ಹಿಂದಿನ ಕಾಲದಿಂದ ಇತ್ತು. ಅಲೆಕ್ಸಾಂಡರಿನ ದಂಡಯಾತ್ರೆಯ ನಂತರ ಕೆಲವೊಂದು ಸಾಂಸ್ಕೃತಿಕ, ಮುಖ್ಯವಾಗಿ ಶಿಲ್ಪ ಮುಂತಾದ ಕಲೆಗಳ ಮೇಲೆ, ಪ್ರಭಾವ ಉಂಟಾಯಿತು. ಗಾಂಧಾರ ಶೈಲಿಯ ಬುದ್ಧ ಪ್ರತಿಮೆಗಳಲ್ಲಿ ಗ್ರೀಸಿನ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು. ಅಲೆಕ್ಸಾಂಡರ್ ತನ್ನ ಜೊತೆಯಲ್ಲಿ ನಟರನ್ನು ಕರೆತಂದಿದ್ದ. ಅವರು ಭಾರತದಲ್ಲಿ 'ಏಗೆನ್' ಎಂಬ ನಾಟಕವನ್ನು ಆಡಿದ್ದರೆಂದು ಉಲ್ಲೇಖವಿದೆ"

– ಪ್ರೊ. ಎಂ.ಎಚ್. ಕೃಷ್ಣಯ್ಯ
(ರಂಗಭೂಮಿ ಮತ್ತು ಸೌಂದರ್ಯ ಪ್ರಜ್ಞೆ ಕೃತಿಯಿಂದ)

ಭೂತ ಚೇಷ್ಟೆ

– ಕ.ನಂ. ನಾಗರಾಜ್

ಮುಸ್ಸಂಜೆ ಹೊತ್ತು

ಸಂಜೆಯಾಗಲು ಎಲ್ಲಾ ಅಣಿಯಾಗುತ್ತಿತ್ತು. ಹೊತ್ತು ನಾಚಿಕೆ ಹೆಣ್ಣಿನಂತೆ ಮುಖ ಮಾಡಿಕೊಂಡು ಜರಜರ ಇಳಿಯುತ್ತಿದ್ದ. ಬೆಳಗಿನಿಂದ ಜನರು ಎಬ್ಬಿಸಿದ ಗದ್ದಲ, ದೂಳು ಒಂದು ತಹಬಂದಿಗೆ ತಲುಪುತ್ತಿತ್ತು. ಮನೆಯಲ್ಲಿದ್ದ ಕರುಗಳು ಹಿಂದಿರುಗಿದ ಹಸುಗಳನ್ನು ನೋಡಿ ಬಾಲವೆತ್ತಿ ಕುಣಿಯುತ್ತಾ, ಅಂಬಾ ಎಂದು ಕೂಗುತ್ತಾ, ಓಡುತ್ತಾ ನಲಿಯುತ್ತಿದ್ದವು. ಹಕ್ಕಿಗಳು ಗೂಡು ಸೇರಲು ಗುಂಪುಗೂಡಿ ತವಕದಿಂದ ಹಾರುತ್ತಿದ್ದವು. ಮನೆಗಳ ಹಿಂದೆ ಮುಂದೆ ಅಕ್ಕಪಕ್ಕದಲ್ಲಿ ಹಿತ್ತಲಲ್ಲಿ ಬೆಳೆದಿದ್ದ ಮರಗಿಡಗಳ ತುಂಬಾ ತುಂಬಿಕೊಂಡಿದ್ದ ಗೂಡಕ್ಕಿಗಳು ಅದೇನು ಸಡಗರವೋ ಒಂದೇ ಸಮನೆ ಕಿಚುಗುಟ್ಟುತ್ತಿದ್ದವು. ಮಕ್ಕಳು ತಮತಮಗೆ ಗೊತ್ತಿದ್ದ, ತೋಚಿದ ಆಟ ಆಡುತ್ತಾ, ಕಿರುಚುತ್ತಾ ಹುಯಿಲೆಬ್ಬಿಸಿದ್ದವು. ಮುದುಕರು ಕೆಮ್ಮುತ್ತ, ಕ್ಯಾಕರಿಸುತ್ತ, ಗಂಟಲು ಸರಿಮಾಡಿಕೊಂಡು ಮಕ್ಕಳನ್ನು ಗದರಿಸಲು ಹವಣಿಸುತ್ತಿದ್ದರು. ಹಗಲಿನ ದುಡಿತದಿಂದ ಬಿಡುಗಡೆ ಪಡೆದ ಮಂದಿ ಹೊಟ್ಟೆ ಪಾಡು ಮುಗಿಸಿ, ಬಿಡುವು ಪಡೆಯಲು ಕಾತರದಿಂದಿದ್ದರು. ಮನೆಗೆಲಸ ತೀರಿಸಿದ ಹೆಂಗಸರು ತಮ್ಮ ಗಂಡಂದಿರ ಮುಂದೆ ಕೊಂಚ ವಯ್ಯಾರ ಬೀರಿ ಸುಳಿದು ಮರೆಯಾಗುತ್ತಿದ್ದರು. ಗಂಡಸರು ಹೆಂಗಸರ ಸನ್ನೆಯ ತಿರುಳರಿತು ಕೈಕಾಲು ಮೊಗವ ತೊಳೆದು ಬೆವರು ಕಳೆದುಕೊಂಡು ಅಡುಗೆಕೋಣೆ ಕಡೆಗೆ ಹೆಜ್ಜೆ ಹಾಕುತ್ತಿದ್ದರು. ಕರು ಬಿಡುವ, ಹಾಲು ಕರೆಯುವ ಕೆಲಸದಲ್ಲಿ ಅವ್ವಂದಿರಿಗೆ, ಅಜ್ಜಂದಿರು ನೆರವಾಗುತ್ತಿದ್ದರು. ಕೊಕ್ಕೊಕ್ಕೊ ಎಂದು ಕೂಗಿ ಕರೆದು ಕೋಳಿಗಳನ್ನು ಗೂಡಿಗೆ ಅಟ್ಟುವ ಆಟ ಒಂದು ಕಡೆ ನಡೆಯುತ್ತಿತ್ತು.

ಇಲ್ಲಿ ಇದೆಲ್ಲಾ ಹೀಗೆ ನಡೆಯುತ್ತಿರಬೇಕಾದರೆ ಬೆಳಗಿನಿಂದ ನೆಲಕ್ಕೆ ಬೆಳಕು, ಬಿಸಿಲು ಕೊಟ್ಟು ದಣಿದಿದ್ದ ಬಿಸಿಲಯ್ಯನು ಸದ್ದಿಲ್ಲದೆ ಪಡುವಲಲ್ಲಿ ಮರೆಯಾಗಿಬಿಟ್ಟಿದ್ದ. ಕೂಗಾಟ, ಚೀರಾಟಗಳೆಲ್ಲಾ ಮೆಲ್ಲಮೆಲ್ಲನೆ ಕಿವಿಮರೆಯಾಗುತ್ತಿದ್ದವು. ಅವ್ವಂದಿರು ದೀಪ ಬೆಳಗಿಸಿ ಸೆರಗಿನ ಮರೆಯಲ್ಲಿ ಅಡಗಿಸಿ ತಂದು ಗೂಡುಗಳಲ್ಲಿ ಇಡುತ್ತಿದ್ದರು. ಹಗಲು ಇರುಳುಗಳು ಬೆಸೆಯುವ ನಸುಕಿನಲ್ಲಿ ಆಟ ಮುಗಿಸಿದ ಮಕ್ಕಳು ಮನೆಗೆ ಮರಳಿ ಕೈಕಾಲು ಮೋರೆ ತೊಳೆದು, ಪೊತ್ತಿಗೆ ಹಿಡಿದು ಕುಳಿತು ಉದ್ದುದ್ದಕ್ಕೆ ಎಳೆದು ಎಳೆದು ಗಟ್ಟಿಯಾಗಿ ಓದುತ್ತಿದ್ದವು. ಯಾರೋ ಅಲ್ಲೊಬ್ಬರು ಇಲ್ಲೊಬ್ಬರು, ಕತ್ತಲೆ ಕವಿದರೂ ಮನೆ ಸೇರದ ಮಕ್ಕಳ ಹೆಸರು ಹಿಡಿದು ಕೂಗಿ ಕೂಗಿ ಕರೆಯುತ್ತಿದ್ದರು.

*****

ನಾರವ್ವನ ಮೊಮ್ಮಗ ಪುಟ್ಟಮೊಗನು ಮಗ್ಗಿಯನ್ನು ಕೆಳಗಿನಿಂದ ಮೇಲಕ್ಕೆ ಹೇಳಿಕೊಳ್ಳುತ್ತಿದ್ದನು. "ಈ ಮೇಸ್ಟ್ರಯ್ಯನು ಅದೇನು ಮಗ್ಗಿ ಕಲಿಸ್ತಾವ್ರೊ, ಎಲ್ಲಾ ಉಲ್ಟಾ ಒಡಿತಾ ಅವ್ರೆ. ಅದೇನು

ಕ.ನಂ. ನಾಗರಾಜ್, ನಂ. 3, ದೇಸಿ, ಪ್ರಶಾಂತಿನಗರ, ಇಸ್ರೊ ಬಡಾವಣೆ, ಬೆಂಗಳೂರು–78.

ತಲೆಕೆಳಕ್ಕೆ ಮಾಡಿ ಕಾಲು ಮ್ಯಾಲಕ್ಮಾಡ್ಕೊಂಡೆ ಹೇಳ್ಬೇಕೇನೊ ಅದನ್ನ" ಎಂದು ಉಗ್ರಯ್ಯನು ಕೆಮ್ಮಿನ ನಡುವೆ ಬಿಡುವು ಮಾಡಿಕೊಂಡು ಹೇಳಿದನು. ನಾರವ್ವನು "ಅಯ್ಯಾ ಸುಮ್ಕಿರು ಮತ್ತೆ, ಈ ಮೇಸ್ತ್ರಯ್ಯನು ಬಂದ್ಮ್ಯಾಲೆ ಐಕಳು ಎಂಗೆ ಓದ್ಕೋತಾವೆ ನೋಡು. ಆ ದ್ಯಾವೀರಪ್ನು ಇದ್ದಾಗ ಐಕಳು ಕೈಗೆ ಸಿಗೋರ. ಮೆರೆಯೋದು, ಉಣ್ಣೋದು, ಮಲಗೋದು ಇದೇ ಆಗಿತ್ತು" ಎಂದಳು. "ಅದೇನೊ ಸರಿ ಅನ್ನು. ಪೋಲಿ ಬಿದ್ದೋಗಿದ್ನೆಲ್ಲ ಚನ್ನರಾಯಿ, ಈಗ ಬಾಲ ಮುದುರ್ಕೊಂಡು ಇಸ್ಕೋಲ್ಗೆ ಓತಾ ಅವ್ನೆ, ಓದೋದು, ಬರೆಯೋದು ಮಾಡ್ತಾ ಅವ್ನೆ ನೋಡು" ಎಂದು ತನ್ನ ದೊಡ್ಡ ಮೊಮ್ಮಗನ ಕಡೆ ಕತ್ತು ತಿರುಗಿಸಿದ ಉಗ್ರಯ್ಯನು ಕೆಮ್ಮಿ ಕೆಮ್ಮಿ ಗಂಟಲು ಸರಿಮಾಡಿಕೊಂಡನು. ಈ ಮಾತು ಕಿವಿಗೆ ಬಿದ್ದು, ಚನ್ನರಾಯಿ ಗಂಟಲು ಮತ್ತಷ್ಟು ಜೋರಾಯಿತು.

"ಮೂಜಾರಯ್ಯ್ನು ಗಂಟೆ ಬಾರಿಸಿದ್ನು ನೋಡು, ಉಂಡು ಮಲಗನ ನಡಿ" ಎಂದು ನಾರವ್ವ ಸೀರೆ ಕೊಡವಿಕೊಂಡು ಎದ್ದಳು. "ನಿಂಗೆ ಇನ್ನೇನು ಕೇಮು, ನೀನು ಉಂಡು ಮಲಕ್ಕೊ, ನಾನು ಆಮೇಕೆ ಉಣ್ಕೋತೀನಿ" ಎಂದು ಉಗ್ರಯ್ಯನು ಹೇಳುತ್ತಿದ್ದಂತೆ "ನಿಂಗ್ಯೆತಲ್ಲ ಕೇಮು, ಏನು ಅಗಸರಟ್ಟಿಗೆ ಒಯ್ತಿಯೇನೊ, ಅಲ್ಲಿ ಇದ್ದೆಲ್ಲ ನಿಸ್ರಾಣಿ" ಎಂದು ನಾರವ್ವ ಜಬರಿಸಿದಳು. ನಾರವ್ವ ಅಗಸರಟ್ಟಿ ಮಾತೆತ್ತಿದರು ಉಗ್ರಯ್ಯನ ಸದ್ದು ಉಡುಗೋಗ್ತಿತ್ತು. ಪುಟ್ಟಮೊಗ ಅಜ್ಜಿ ತಾತನ ಜಗಳ ನೋಡ್ಕೊಂಡು ಮಗ್ಗಿ ಮರೆತುಬಿಟ್ಟ, ಅದನ್ನು ಗಮನಿಸಿದ ನಾರವ್ವ "ಏ ಪಾಟ ಓದ್ಕೊ, ಇಲ್ಲೇನ್ನೋಡೀಯ" ಎಂದು ಗದರಿಕೊಂಡಳು. ಪುಟ್ಟಮೊಗ ಮತ್ತೆ ಮಗ್ಗಿ ಒದರತೊಡಗಿದ.

ನಾರವ್ವನ ಹಿರಿಮಗ ಕೆಂಚೀರ ಉಂಡು ಹೊರಕ್ಕೆ ಬಂದವನು "ಇದೇನ್ರವ್ವ ಇಂಗೆ ಕಿತ್ತಾಡ್ತೀರ" ಎನ್ನಲಾಗಿ "ಇದ್ದದ್ದೆ ಬುಡು, ಜೀವ ಇರೋಗಂಟ, ಉಂಡೇನೊ" ಎಂದು ನಾರವ್ವ ಕೇಳಿದಳು. "ಆಯ್ತವ್ವೊ" ಎಂದು ಅವ್ವನಿಗೆ ಹೇಳಿ "ಕಂದಾಯದ ಇಚಾರ ಏನಾಯ್ತಪ್ಪೊ" ಎಂದು ಉಗ್ರಯ್ಯನನ್ನು ಕೇಳಿದನು. ಉಗ್ರಯ್ಯನು "ಪಂಚಾಯ್ತಿಂಯೋರೆಲ್ಲಾ ಸೇರಿ, ತಾಸೀಲ್ದಾರತಕ್ಕೋಗಿ ಎಲ್ಡು ವರ್ಸ ಮಳೆ ಆಗ್ನಿಲ್ಲ, ಕಂದಾಯ ಮನ್ನಾ ಮಾಡಿ ಅಂತ ಕೇಳ್ಕೊಂಬೇಕು ಅನ್ಕೊಂಡವ್ರಂತಪ್ಪ" ಎಂದನು. "ಬುಡ್ಡಿ ಅಸ ತಿರುಗ್ಸುಟ್ಟೈತೆ. ದನೀನಾಸ್ಪತ್ರೆಗೆ ಕರ್ಕೊಂಡೋಗ್ಬೇಕಲ್ಲ, ಮುದ್ದೀರಂಗೆ ಏಳ್ಬೇಕು" ಎಂದ ಕೆಂಚೀರನ ಮಾತಿಗೆ ನಾರವ್ವನು "ಮುದ್ದೀರ್ನು ಯಾರ್ಕೈಗೆ ಸಿಕ್ಕಾನು, ಅವನಾಯ್ತು, ಅವನ ನಾಟಕವಾಯ್ತು. ಆಳಾಗಿ ಉಳ ಇಡಿದು ಕುಂತವ್ನೆ" ಎಂದಳು. "ಮದುವೆ ಮಾಡ್ಕೊಂಡು, ಮನೆ ಕೆಲ್ಸಗಿಲ್ಸ ನೋಡ್ಕೊಂಡು ಬಾಳೋದು ಬುಟ್ಟು ಒಳ್ಳೆ ನಾಟ್ಕ ಇಡ್ಕೊಂಡ್ನಲ್ಲ ಇವ್ನು" ಎಂದ ಉಗ್ರಯ್ಯನ ಮಾತಿಗೆ "ನೀನು ಕೆಮ್ಕೊಂಡು ಮನ್ಯಾಗೆ ಕುಂತ್ಕೊ, ಅವಂಗೆ ಮದ್ವೆ ಆಯ್ತದೆ" ಎಂದು ನಾರವ್ವ ವ್ಯಂಗ್ಯವಾಡಿದಳು. "ಊರ್ಮುಂದ್ಕೋಗಿ ಬತ್ತೀನಪ್ಪೊ" ಎಂದು ಹೊರನಡೆದ ಮಗನನ್ನು ಕರೆದು ಉಗ್ರಯ್ಯನು "ಒಂದು ಬೀಡಿ ಇತ್ತಾಗಾಕೊ" ಎಂದನು. ನಾರವ್ವನಿಗೆ ಮೈಯೆಲ್ಲಾ ಉರಿ ಪತ್ಕೊಳ್ತು, "ಎದೆ ಸೀಳೋಗೊ ಅಂಗೆ ಕೆಮ್ತೀಯಾ ಬೀಡಿ ಬೇರೆ ಕೇಡು ನಿಂಗೆ, ಕೊಡ್ಬ್ಯಾಡ್ರೊ" ಅಂದಳು. "ಏ ಇರ್ಲಿ ಬುಡವ್ವ, ನಾನು ಬರೋವಾಗ ಚಂದ್ರಪ್ನೋರ್ತಾವ ಔಸ್ದಿ ತತ್ತೀನಿ" ಎಂದು ನಗುತ್ತಾ ಕೆಂಚೀರನು ಒಂದು ಬೀಡಿಯನ್ನು ಅಪ್ಪನ ಕೈಗೆ ಹಾಕಿ ಹೊರಟನು. "ಬೀಡೀನು ಕೊಡ್ತೀಯಾ, ಔಸ್ದೀನು ತತ್ತೀಯ, ಏನಾರ ಮಾಡ್ಕೊ" ಎಂದು ನಾರವ್ವ ಒಳಕ್ಕೆ ಹೋದಳು. ಉಗ್ರಯ್ಯನು ಬೀಡಿ ಬಾಯಲ್ಲಿ ಕಚ್ಚಿ ಗೂಡಿನಲ್ಲಿದ್ದ ಹಣತೆಯ ಕಡೆ ನಡೆದನು. ಬೀಡಿ ಹಚ್ಚುವ ಸನ್ನಾಹದಲ್ಲಿ ಉಗ್ರಯ್ಯನು ಪುಟ್ಟಮೊಗನ ಬಳಿ ಕಾಲು ಚಾಚಿಕೊಂಡು ಮಲಗಿದ್ದ ಕರಿಯನ ಬಾಲ ತುಳಿದುಬಿಟ್ಟ,

ಅದು ಕುಯ್ಕೊಮರ್‍ರೊ ಎಂದು ಕಿರುಚುತ್ತಾ ಹೊರಕ್ಕೆ ಓಡಿತು. "ಎಲಾ ಇದ್ರವ್ನ ಇಲ್ಲಿ ಸಾಯ್ಪೇಕ ಬಂದು" ಎಂದು ಗಾಬರಿ ಬಿದ್ದ ಉಗ್ರಯ್ಯನ ಮಾತಿಗೆ ಮೊಮ್ಮಕ್ಕಳು ಬಿದ್ದು ಬಿದ್ದು ನಕ್ಕರು. "ಯಪ್ಪೊ ಉಣ್ಬನ್ನಿ" ಎಂದ ಸೊಸೆ ತಾಯಮ್ಮನ ಮಾತಿಗೆ, ಒಳಗಿನಿಂದ ನಾರವ್ವ "ನಿಮ್ಮ ಮಾವ ಬೀಡಿ ಸೇದೊ ಸಂಬ್ರಂಬದಾಗ್ಯತೆ, ನಂಗಿಕ್ಕು, ಉಣ್ತೀನಿ" ಎಂದು ಸೊಸೆಯನ್ನು ಕರೆದಳು. ತಾಯಮ್ಮನು ನಗುತ್ತಾ ಅಡುಗೆಕೋಣೆ ಕಡೆ ಹೊರಟಳು. ಬೀಡಿಯ ಗಾಟುವಾಸನೆ ಮನೆಯನ್ನೆಲ್ಲಾ ಆವರಿಸಿತು. ಕೆಮ್ಮನ್ನು ತಡೆದುಕೊಂಡು ದಮ್ಮು ಎಳೆಯುತ್ತಾ ಉಗ್ರಯ್ಯನು ಆ ಕಂಪಿನ ಅಲೆಯಲ್ಲಿ ತೇಲುತ್ತಾ ಅಗಸರಟ್ಟಿಯಲ್ಲಿ ಬಂದಿಳಿದನು.

"ಇದೇನ್ಸಂತು, ಕತ್ತಲನಗೆ ಇಂಗೆ ಜಗಲಿ ಮೇಲೆ ಕುಂತು ಜಪ ಮಾಡ್ತಿದ್ದೀಯ, ಉಂಡು ಮಲಕ್ಕೊ ನಡಿ, ತಾಯಮ್ಮ ಕಾಯ್ತಾ ಕುಂತವ್ಳೆ" ಎಂದು ನಾರವ್ವ ಗದರಿಸಿಕೊಂಡಾಗ ಉಗ್ರಯ್ಯನು ವರ್ತಮಾನಕ್ಕೆ ಬಂದನು. ಮಕ್ಕಳು ಉಂಡು ಮಲಗಲು ಅಣಿಯಾಗುತ್ತಿದ್ದರು. ನಾರವ್ವ 'ಕುರೊಕುರೊ' ಎಂದು ಕರಿಯುನನ್ನು ಕೂಗಿ ಕರೆದು, ಕಿವಿ ನಿಮಿರಿಸಿಕೊಂಡು, ಬಾಲವಾಡಿಸಿಕೊಂಡು ಬಂದ ಕರಿಯನಿಗೆ ಕೈನೀರು ಮಾಡಿಕೊಂಡು ಮುದ್ದೆ ಮುರಿದು ಮುರಿದು ಹಾಕುತ್ತಿದ್ದಳು. ಅದು ಗಬಕ್ ಗಬಕ್ ಎಂದು ಒಮ್ಮೆಗೆ ನುಂಗುವುದನ್ನು ಪುಟ್ಟಮೊಗನು ನೋಡುತ್ತಾ ನಿಂತಿದ್ದನು. "ಮಲಕ್ಕೊ ಓಗು ಮಗಾ" ಎಂದು ನಾರವ್ವ ಅವನನ್ನು ಒಳಕ್ಕೆ ಕಳುಹಿದಳು. ಅದಾಗಲೆ ವರ್ತಮಾನಕ್ಕೆ ಬಂದಿದ್ದ ಉಗ್ರಯ್ಯನು ಬಾನಿ ನೀರಿನಲ್ಲಿ ಮೋರೆ ಕೈಕಾಲ ತೊಳೆದುಕೊಂಡು ಅಡುಗೆಕೋಣೆ ಕಡೆ ಹೆಜ್ಜೆ ಹಾಕಿದನು.

*****

ಉಗ್ರಯ್ಯನು ಉಂಡು ಬರುವ ವೇಳೆಗೆ ಮುದ್ದೀರನು ನಾಟಕದ ಮಟ್ಟು ಗುನುಗುತ್ತಾ ಮನೆಯೊಳಗೆ ಕಾಲಿರಿಸಿದನು. "ಏ ಮುದ್ದೀರ ನಿಂಗೇನಾರ ಬುದ್ದಿಗಿದ್ದಿ ಐತೇನೊ, ಒಲ್ತಾವಿಂದ ಸೀದ ಮನಿಗ್ಬರೋದ್ಬಿಟ್ಟು, ನಾಟಕದ ಮನಿಗೋಗಿದ್ದೀಯೆಲ್ಲೊ, ನಿಂಗ್ಯಾರು ಏಳ್ತೋರ್ಕೇಳೋರು ಇಲ್ವಾ" ಮಗನನ್ನು ಕಂಡೊಡನೆ ಉಗ್ರಯ್ಯನು ರೇಗಿಕೊಂಡನು. "ಮೇಸ್ಟ್ರು ಏಳಿಕಳ್ಸಿದ್ರು ಕಣಪ್ಪೊ, ಅದ್ಕೆ ಓಗಿದ್ದೆ" ಎಂದು ಮದ್ದೀರನು ಹೇಳುತ್ತಿದ್ದಂತೆ ಮಲಗಿದ್ದ ನಾರವ್ವನು ಎದ್ದು ಬಂದು "ನೀನು ನಾಟ್ಕ ಪಾಟ್ಕ ಅಂತ ತಿರುಕ್ಕೊಂಡು ಕುಂತಿದ್ರೆ ಇಲ್ಲಿ ಒಲ, ಮನೆ ಕೆಲ್ಸ ಮಾಡೋರ್ಯಾರ್ಲಾ" ಎಂದು ಎದುರು ಬಿದ್ದಳು. ಇದ್ಕಿದ್ದಂತೆ ಇದೇನೊ ಬಂತಲ್ಲಾ ಅಂದ್ಕೊಂಡು "ನಿಮ್ಮನ್ನ ಕೇಳೆ ಅಲ್ವೇ ನಾಟ್ಕಕ್ಕೆ ಸೇರಿದ್ದು, ಈಗ ನೊಡಿದ್ರೆ ಇಂಗಂತೀರ" ಎಂದನು. "ಅದು ಸರಿ ಕಣಯ್ಯ, ನೀನು ಒಲ್ತಾವಿಂದ ನೇರ ಒಂಟ್ಬುಟ್ಟು, ಇಷ್ಟೊತ್ತು ಮಾಡ್ಕೊಂಡು ಬಂದಿದ್ದೀಯಲ್ಲ ಸರೀನಾ, ಏಳು" ಎಂದ ಉಗ್ರಯ್ಯನ ಮಾತಿಗೆ ಮುದ್ದೀರನು "ನಾನೇನು ದಿನಾ ಒಯ್ತೀನ, ನಂಗೆ ಅಂಗದನ ಪಾಲ್ಟು ತೆಗೆದು ಬೇರೆ ಕೊಟ್ಟವರೆ, ಮೇಸ್ಟ್ರು ಅದನ್ನ ಬರಕೊಡೋವರ್ಗು ಅಲ್ಲೇ ಕುಂತಿದ್ದು ಬರಸ್ಕಂಡು ಬಂದೀವ್ನಿ ನೋಡು" ಎಂದು ಮುದ್ದೀರನು ತನ್ನ ಕೈಲಿದ್ದ ಹಾಳೆಗಳನ್ನು ತೋರಿಸಿದ. ಮಲಗಿದ್ದ ಚನ್ನರಾಯಿ ಮುದ್ದೀರನ ಮಾತು ಕೇಳಿಸಿಕೊಂಡು ಎದ್ದು ಬಂದವನೆ "ಯಾವ ಪಾಲ್ಟು ಕಾಕ" ಎಂದು ಕೇಳಿದ. "ಬರತಂದು ಕಣ್ಲಾ" ಎಂದು ಮುದ್ದೀರ ಹೇಳಿದ. "ಓ ಅಂಗಾರೆ ದೊಡ್ಡ ಪಾಲ್ಟೆ ಆಯ್ತಲ್ಲೊ" ಎಂದು ಉಗ್ರಯ್ಯನು ಮಗನ ಕಡೆ ಮೆಚ್ಚಿಕೆಯಿಂದ ನೋಡಿದ. "ಈ ಪಾಟ ಬರಸ್ಕೊಂಡು ಬಂದಿದ್ದೀಯಲ್ಲ, ಅದ್ನೆಲ್ಲಾ ಯಾವಾಗ ನೀನು ಕಲಿಯೋದು, ನಿನ್ನ ಪಾಲ್ಟೇನಾರ ಕೆಟ್ಟುಗಿಟ್ಟೋದರೆ ಊರ್ನೋರೆಲ್ಲಾ ಕ್ಯಾಕರಿಸಿ ಉಗಿತರಲ್ಲೊ" ಎಂದು ನಾರವ್ವ ಆತಂಕಪಟ್ಟಳು. "ನೀನ್ಯಾವಾಗ್ಲೂ ಇಂಗೆ ಬುಡು" ಎಂದು ಮುದ್ದೀರನು ಹಾಳೆಗಳನ್ನು ಪುಟ್ಟಮೊಗನ ಕಲ್ಲಿಚೀಲವಲ್ಲಿಟ್ಟು ಉಣ್ಣಲು ಹೋದನು.

"ಅವ್ವೊ, ಕಾಕನು ಒಲ್ತಾವ ಕೆಲ್ಸ ಮಾಡೋವಾಗ ಈ ಮಾತ್ನೆಲ್ಲಾ ಏಳ್ಕೊತಾನೆ ಕಣವ್ವೊ" ಎಂದು ಚನ್ನರಾಯಿ ಹಾಳೆಗಳನ್ನು ತೆಗೆದು ಓದುತ್ತಾ ಕುಳಿತನು. ಏನೋ ಅಪ್ಪ, ಏನ್ರ ಮಾಡ್ಕೊಳ್ಳಿ, ನಂಗೇನು ಗೊತ್ತಾಯ್ತದೆ" ಎಂದು ನಾರವ್ವನು ಆಕಳಿಸುತ್ತಾ ಮಲಗಲು ಹೋದಳು.

ಮುದ್ದೀರನು ಉಂಡು ಈಚೆ ಬರುತ್ತಿದ್ದಂತೆ ಉಗ್ರಯ್ಯನು "ಉಂಡೇನ್ಲಾ" ಎಂದು ಕೇಳಿದನು. "ಊಕಣಪ್ಪೊ, ಒಸಿ ಜಾಸ್ತಿ ಆಯ್ತು" ಎಂದು ಹೊಟ್ಟೆ ನೀವಿಕೊಂಡು ಹೇಳಿದನು. "ಅದೆಂಗೆ ಜಾಸ್ತಿ ಆದಾತು, ನೀನು ಜಾಸ್ತಿ ಉಂಡಿದ್ದೀಯ, ಜಾಸ್ತಿ ಆಯ್ತು" ಎಂದು ನಗಾಡಿದನು. "ಮೂರು ಮುದ್ದೆ ತಿಂದೆ ಕಣಪ್ಪೊ" ಎಂದ ಮಗನ ಮಾತಿಗೆ ಉಗ್ರಯ್ಯನು "ಅದೇನಾಗಿತ್ಲ ಅಂಗ್ತಿಂದ್ದೀಯೆ" ಎಂದನು. "ಮಸೊಪ್ಪು ಚೆನ್ನಾಗಿತ್ತು ಕಣಪ್ಪೊ, ಅದ್ಕೆ ತಿಂದುಬುಟ್ಟೆ" ಎಂದು ಮದ್ದೀರನು ನಡುಮನೆಯ ಕಂಬಕ್ಕೊರಗಿ ಕುಳಿತನು. "ನೀನು ಮುದ್ದೆ ವೀರನಲ್ವೆ, ತಿಂದೆ ಇನ್ನೇನ್ಮಾಡೀಯ ಬುಡು" ಎಂದ ಉಗ್ರಯ್ಯನ ಮಾತಿಗೆ ಚನ್ನರಾಯಿ ನಗತೊಡಗಿದ. "ನಿಮ್ಮತ್ತಿಗೆ ಮಸೊಪ್ಪು ಚೆನ್ನಾಗಿ ಮಾಡ್ತಾಳ್ ಕಣ್ಲಾ, ಅತ್ತಿಗೆಮ್ಮಂಗೇನಾರ ಉಳಿಸಿದ್ದೀಯೊ ಇಲ್ವೊ" ಎಂದು ಉಗ್ರಯ್ಯನು ಕೇಳುತ್ತಿದ್ದಂತೆ, ತಾಯವ್ವನು ಒಳಗಿನಿಂದಲೆ "ಇನ್ನೂ ಮಸ್ತಾಗದೆ ಮಾವೊ, ಇಬ್ರು ಉಣ್ಬೋದು" ಎಂದಳು. "ಏನೊ ಇಂಗೆ ನಡಸ್ಕೊಂಡೋಗವ್ವ" ಎಂದ ಉಗ್ರಯ್ಯನ ಮಾತಿಗೆ ತಾಯವ್ವ ಏನೂ ಹೇಳಲಿಲ್ಲ. "ಒಸಿ ಮಜ್ಜಿಗೆ ಕುಡಿಯೊ ಸರಿಯೋತದೆ" ಎಂದು ಉಗ್ರಯ್ಯನು ಮಗನಿಗೆ ಹೇಳಿದನು. "ಇನ್ನು ಅದೊಂದು ಸೇರ್ಕಳ್ಲಿ, ಇನ್ನೂ ಬಾರ ಅತ್ಕೊತದೆ ತಕೊ" ಎಂದ ಮುದ್ದೀರನ ಮಾತು ಕೇಳಿಸಿಕೊಂಡ ತಾಯಮ್ಮನು "ಮಜ್ಜಿಗ್ಗೆ ಸುಂಟಿ ಬೆರೆಸಿಕೊಡ್ತೀನಿ ತಾಳು ತಮ್ಮಣ್ಣೊ" ಎಂದಳು. "ನೀನು ಉಂಡ್ಬುಟ್ಟು ಮಾಡು ತಾಯಿ ಅದನ್ನ" ಎಂದ ಉಗ್ರಯ್ಯನು ಮಗನ ಕಡೆ ತಿರುಗಿ "ಬುಡ್ಡಿ ಅಸ ತಿರುಗ್ಯೆತಂತೆ, ನಾಳೆ ಬೆಳಗಾನ ಎದ್ದೋನೆ ತಂಗಳುಂಡ್ಬುಟ್ಟು ಕಾರೆಪುರದ ದನೀನಾಸ್ಪತ್ರೆಗೆ ಕರ್ಕೊಂಡೋಗಿ ಹೋಎಇ ಬಡುಸ್ಕೊಂಡು ಬಾರ್ಲಾ" ಎಂದನು.

ಇದ್ದಕ್ಕಿದ್ದಂತೆ ಕರಿಯ ಬೊಗಳತೊಡಗಿತು. "ಏ ಸುಮ್ಕಿರು, ನೀನು ನೋಡ್ದೋಳ ನಾನು" ಎಂದು ಹೇಳುತ್ತಾ ಬಾಗಿಲು ತಳ್ಳಿಕೊಂಡು ಆಚೆಮನೆ ಮುನಿಯಪ್ಪನ ಹೆಂಡತಿ ಚನ್ನಮ್ಮ ಒಳಗೆ ಬಂದಳು. "ಏನು ಚನ್ನಕ್ಕ ಇಷ್ಟೊತ್ನಾಗೆ" ಎಂದ ಉಗ್ರಯ್ಯನ ಮಾತಿಗೆ "ನಾರವ್ವ ಮಲಗಿಬಿಟ್ಳೊ" ಎಂದು ಚನ್ನಮ್ಮ ಕೇಳಿದಳು. ನಾಯಿ ಬೊಗಳಿದ್ದರಿಂದ ಎಚ್ಚರಗೊಂಡಿದ್ದ ನಾರವ್ವ "ಏನು ಚನ್ನಮ್ಮ ಈಟೊತ್ನಾಗೆ" ಎಂದು ಎದ್ದು ಬಂದಳು. ಚನ್ನಮ್ಮ ತಂದಿದ್ದ ಪಾತ್ರೆ ತೋರುತ್ತಾ "ಒಸಿ ಎಸ್ರು ಬೇಕಾಗಿತ್ತು, ಅದ್ಕೆ ಕಣವ್ವ" ಎಂದಳು. "ಏನು ಯಾರಾನ ಬಂದ್ರೊ" ಎಂದ ಉಗ್ರಯ್ಯನ ಮಾತಿಗೆ ಚನ್ನಮ್ಮ "ಅಳಿಮಯ್ಯ ಬಂದವ್ರೆ, ಅದ್ಕೆ" ಎಂದಳು. "ಕೊಡಿಲ್ಲಿ ಪಾತ್ರೆ ಇತ್ತಾವ" ಎಂದು ನಾರವ್ವ ಪಾತ್ರೆ ತೆಗೆದುಕೊಂಡು ಒಳಗೆ ಹೋದಳು. "ಏನ್ ಚನ್ನಮ್ಮ ಇಳಿವೊತ್ನಾಗೆ ಅಳಿಮಯ್ಯ ಬಂದವ್ನೆ" ಎಂದ ಉಗ್ರಯ್ಯನ ಮಾತಿಗೆ "ಅದೇನೊ ಜಮೀನು ಇಚಾರಂತಣ್ಣ, ಚಿಕ್ಕಮರಿಯನ್ನ ಕರ್ಕೊಂಡು ಬಳ್ಳಾಪುರಕ್ಕೆ ಓಗ್ಬೇಕಂತೆ, ಅಂಗಂತ ಏಳ್ತಾ ಇದ್ರು" ಎಂಮು ಚನ್ನಮ್ಮ ಹೇಳಿದಳು. "ಅಂಗಾರೆ ನಾಳೀಕೆ ಮರಿ ಒಡೀತಿ ಅನ್ನು" ಎಂದು ಉಗ್ರಯ್ಯನು ಒಂದು ಕುಶಾಲುತೋಪು ಹಾರಿಸಿದನು. "ಇಲ್ಕಣಣ್ಣೊ ಬೆಳಗ್ಗೆ ಎದ್ದೋರೆ ಓತಾರಂತೆ" ಎಂದು ಚನ್ನಮ್ಮ ಹೇಳುತ್ತಿರುವಂತೆ ನಾರವ್ವನು ಪಾತ್ರೆಯನ್ನು ಕೊಡುತ್ತಾ "ಮಸೊಪ್ಪು ಕಣಮ್ಮೊ, ಎಸ್ರು ಮದ್ಯಾನ್ಕೆ ಮುಗಿದೋಯ್ತಂತೆ" ಎಂದಳು. "ಒಳ್ಳೇದಾಯ್ತು ಬುಡು, ತಾಯಮ್ಮನು ಮಾಡಿದ ಮಸೊಪ್ಪು ಅಂದ್ರೆ ಬಲು ರುಚಿ ಅಲ್ವಾ" ಎಂದು ಪಾತ್ರೆಯನ್ನು ಸೆರಗಿನಲ್ಲಿ ಮುಚ್ಚಿಕೊಂಡು "ಬತ್ತೀನ್ಕಣಮ್ಮೊ" ಎಂದು ಹೇಳುತ್ತಾ ಬಾಗಿಲು ದಾಟಿದಳು.

*****

ತುಸು ಹೊತ್ತಿಗೆ ಕರಿಯ ಕುಳಿತ ಕಡೆಯೇ ಕುಯ್ಗುಡತೊಡಗಿತು. "ಕೆಂಚೀರ್ಮ ಬಂದ್ನೇನೊ, ಕರಿಯ ಕುಯ್ಗುಡುತ ಅದೆ" ಎಂದು ಉಗ್ರಯ್ಯ ಹೇಳುತ್ತಿರುವಂತೆ ಕೆಂಚೀರ ಒಳಕ್ಕೆ ಬಂದಿದ್ದ. ಊಟ ಮುಗಿಸಿದ ತಾಯಮ್ಮ ಹಾಲು ಒಲೆಯ ಮೇಲಿಟ್ಟಿದ್ದಳು. ಕಾಯುತ್ತಿದ್ದ ಹಾಲಿನ ಗಮ ಮನೆಯನ್ನೆಲ್ಲಾ ಆವರಿಸಿತ್ತು. ಕೆಂಚೀರನು ಊರಮುಂದಲ ಲಕ್ಕಮ್ಮನ ಅಂಗಡಿಯಿಂದ ಅಡಕೆಲೆ ತಂದಿದ್ದ. ಚಂದ್ರಪ್ಪನ ಮನೆಯಿಂದ ತಂದಿದ್ದ ಚೂರ್ಣದ ಪೊಟ್ಟಣವನ್ನು ಉಗ್ರಯ್ಯನಿಗೆ ಕೊಟ್ಟು "ಮಲಗೊ ಮುಂಚೆ ಒಂದು ಚಿಟುಕೆ ಪುಡಿನ ಬಿಸಿ ನೀರ್ನಾಗೆ ಬೆರಸ್ಕೊಂಡು ಕುಡಿಬೇಕಂತೆ" ಎಂದು ಹೇಳಿ ಅಡಕೆಲೆಯನ್ನು ಕೆಳಗಿಟ್ಟು "ಏ ಸುಣ್ಣ ಎಲ್ಲಿ ಮಡಗಿದ್ದೀಯೆ" ಎಂದು ಹೆಂಡತಿಯನ್ನು ಕೇಳಿದನು. "ಅಲ್ಲೆ ಗೂಡಾಗಿರೊ ಚಿಪ್ನಾಗೈತೆ ನೋಡು" ಎಂದು ತಾಯಮ್ಮ ಒಳಗಿನಿಂದಲೇ ಹೇಳಿದಳು. ಸುಣ್ಣ ಹುಡುಕಿ ತೆಗೆದ ಕೆಂಚೀರ ಗೋಡೆಗೆ ಒರಗಿ ಕುಳಿತು "ಅಡಕೆಲೆ ಆಕ್ಕಳವ್ವೊ" ಎಂದು ನಾರವ್ವನನ್ನು ಕರೆದನು. ಮಲಗಲು ಮತ್ತೆ ಅಣಿಯಾಗುತ್ತಿದ್ದ ನಾರವ್ವನು "ನಂಗ್ಯಾಕೊ ಈ ನಡುವೆ ಅಡಕೆಲೆ ಒಗ್ಗಲ್ಲ ಕಣೊ" ಎಂದು ಎದ್ದು ಬಂದು ಅಡಕೆಗೆ ಕೈಹಾಕಿದಳು. "ಒಗ್ಗಲ್ಲ ಅಂತೀಯ, ಮತ್ತೆ ಅಡಕೆ ಬಾಯ್ಗಸ್ಕೊಂಡೆಲ್ಲಾ" ಎಂದು ಮುದ್ದೀರ ಚೇಡಿಸಿದನು. "ಅದು ಅಂಗೆ ಕಣ್ಲಾ ಕಡ್ಡಿಪುಡಿ ಆಕ್ತಿದ್ದೋರ್ಗೆ ಬರಿ ಅಡಕೆಲೆ ಒಗ್ಗಲ್ಲ" ಎಂದು ಕೆಂಚೀರ ಕಾರಣ ಕೊಟ್ಟನು. ಉಗ್ರಯ್ಯನು ಅಡಕೆಗೆ ಕೈಹಾಕಿದನು. "ಇದೇನಪ್ಪ, ಕೆಮ್ಮೋದೆ ಮರ್ತು ಕುಂತಿದ್ದೀಯ ನೀನು" ಎಂದು ಮುದ್ದೀರ ಅಪ್ಪನ ಕಡೆ ಕೈತೋರಿ ನಗುತ್ತಾ ಹೇಳಿದನು. "ಊ ಕಣ್ಲಾ, ನಾನು ನೆಪ್ಮಾಡ್ಕೊಂಡು ಕೆಮ್ತೀನಿ, ನಿಮಗೆಲ್ಲ ಉಡುಗಾಟ ಆಗೋಯ್ತು" ಎಂದು ರೇಗಿಕೊಂಡನು. "ಏ, ಏನೊ ನಗಸಾರ್ಕೆ ಅಂಗಂದೆ ಕಣಪ್ಪೊ" ಎಂದು ಮುದ್ದೀರನು ಗದರಿಕೊಂಡನು. "ಬೆಳಗ್ಗಿಂದ ಸೇದಿರ್ಲಿಲ್ಲ, ಸಂಜೆನಾಗ ಒಂದು ಬೀಡಿ ಸೇದ್ದೆ ನೋಡಪ್ಪ, ಮನೆ ಮಂದಿಯೆಲ್ಲ ಎಗರಿ ಬೀಳೋರೆ" ಎಂದು ಉಗ್ರಯ್ಯ ಹೇಳುತ್ತಿರಬೇಕಾದರೆ ಮುದ್ದೀರನು "ನಿಂಗೆ ಬೀಡಿ ಎಲ್ಲಿ ಸಿಗ್ತಪ್ಪೊ" ಎಂದನು. "ನಿಮ್ಮಣ್ಣ ಅವನೆಲ್ಲ, ಅಪ್ಪಂದಾಯ್ತು ಇನ್ನು ಮಗನ್ದ್ಯಾವ" ಎಂದು ನಾರವ್ವ ತಂದೆ ಮಕ್ಕಳಿಬ್ಬರನ್ನೂ ತೋರಿಸಿಕೊಂಡು ಹೇಳಿದಳು. "ಸರಿಯೋಯ್ತು ಬುಡು" ಎಂದು ಮುದ್ದೀರ ಹೇಳುತ್ತಿದ್ದಂತೆ "ಒಂದು ಬೀಡಿ ಸೇದಿದ್ರೆ ಏನಾಯ್ತದ ಬುಡೊ, ಔಸ್ದಿ ತಂದ್ಕೊಟ್ಟಿದ್ದೀನಿ, ತಗೊಂಡ್ರೆ ಸರಿಯೋತದೆ" ಎಂದು ಕೆಂಚೀರ ಅಡಕೆ ಬಾಯಿಗೆ ಹಾಕಿಕೊಂಡು ಎಲೆಗೆ ಸುಣ್ಣ ಹಚ್ಚತೊಡಗಿದನು. ತಾಯಮ್ಮ ಗಿಂಡಿಯಲ್ಲಿ ಮಜ್ಜಿಗೆ ತಂದು ಮುದ್ದೀರನಿಗೆ ಕೊಟ್ಟು, ಅವರೊಂದಿಗೆ ಕುಳಿತು ಅಡಕೆಗೆ ಕೈಹಾಕಿದಳು. ನಾಟಕದ ಸಾಲುಗಳನ್ನು ಓದುತ್ತಿದ್ದ ಚನ್ನರಾಯಿ ತೂಕಡಿಸುತ್ತಿದ್ದ. ಅದನ್ನು ನೋಡಿದ ಉಗ್ರಯ್ಯ "ಚನ್ನರಾಯಿ ತೂಕಡಿಸ್ತಾವ್ನೆ" ಎಂದನು. ನಾರವ್ವ "ಏ ಚನ್ನರಾಯಿ ಮನಿಕ್ಕೊ ಓಗು" ಎಂದಳು. ಬೆಚ್ಚಿಬಿದ್ದ ಚನ್ನರಾಯಿ ಎದ್ದು ತೂರಾಡುತ್ತಾ ಮಲಗಲು ಹೋದನು.

*****

"ಏನಯ್ಯ ಊರ್ಮುಂದ್ಲ ಸಂಗ್ತಿ" ಎಂದು ಉಗ್ರಯ್ಯ ಕೆಂಚೀರನನ್ನು ಕೇಳಿದನು. "ಆಲೆಮನೆ ಕೆಂಪಯ್ಯ ಸಿಕ್ಕಿದ್ನಪ್ಪೊ, ಗೊಲ್ಲಳ್ಳಿ ತಾಕೋಗಿದ್ನಂತೆ. ಆ ಊರಿಗೆ ಕರೆಂಟ್ ಬತ್ತದಂತೆ. ಕಂಬ ನಡ್ತಾ ಅವರಂತೆ" ಎಂದು ಕೆಂಚೀರ ಹೇಳುತ್ತಿದ್ದಂತೆ, "ನಮ್ಮೂರ್ಗೆ ಯಾವಾಗ್ಬತ್ತದಂತಣ್ಣ" ಎಂದು ಮುದ್ದೀರ ಕೇಳಿದನು. "ಅಲ್ಲಿ ಕೆಲ್ಸ ಮಾಡೋರ್ಯಾರೂ ಕೆಂಪಯ್ಯಗೆ ಗುರುತವರಂತೆ. ಈ ಕಡಿಕೆಲ್ಲಾ ದೀವಳಿಗೆ ಒಳಗೆ ಬಂದ್ಬಿಡ್ತದೆ ಅಂತ ಹೇಳಿದ್ರಂತೆ" ಎಂದು ಕೆಂಚೀರ ಹೇಳಿದನು. "ಕರೆಂಟ್ ಬಂದ್ಬುಟ್ರೆ ಎಣ್ಣೆ ದೀಪ ಬೇಕಾಗಲ್ವಂತೆ ಔದೇನ್ಲಾ" ಎಂದು ನಾರವ್ವ ಮಗನನ್ನು ಕೇಳಿದಳು. "ಊಕಣವ್ವ ಎಣ್ಣೆ ದೀಪಕ್ಕಿಂತ ಜೋರಾಗುರಿತವೆ" ಎಂದು ಕೆಂಚೀರ ಹೇಳಿದನು.

“ಕರೆಂಟಿದ್ದಿದ್ರೆ ನಮ್ಮ ನಾಟಕ ಚೆಂದಾಕಾಗಿರೋದು” ಎಂದು ಮುದ್ದೀರ ಹೇಳಿದ. “ನಾಟಕ ನೋಡೋಕೆ ಗಂಗವ್ವನ್ನು, ಶಾರದಕ್ಕನ್ನು ಕರ್ಕೊಂಬರ್ರಿ” ಎಂದು ತಾಯವ್ವ ಹೇಳಿದಳು. “ಊ ಕಣವ್ವ ತಮ್ಮ ನಾಟಕದಾಗೆ ಮಾಡಿರೋದ್ನ ಅವ್ರು ನೋಡ್ಬೋದು” ಎಂದು ನಾರವ್ವ ದನಿಗೂಡಿಸಿದಳು. “ಕರ್ಕೊಂಬರಾನ, ಅಂಗೆ ನಿಮ್ಮನೆಯೋರ್ಗೆ ಏಳಿಕಳ್ಸಾನ” ಎಂದು ಉಗ್ರಯ್ಯ ಹೇಳಿದನು. ಅಬ್ಬ ಐತೆ ನಮ್ಮ ಕಡೆಯೋರು ಯಾರು ಬತ್ತಾರೆ, ನಮ್ಮತ್ತಿಗೆ ತಮ್ಮನ ಮಗಳನ್ನ ಕರ್ಸಾನ, ಏಳಿ ಕಳ್ಸಿದ್ರೆ ಕರ್ಕೊಂಡ್ಬಂದು ಬಿಟ್ಬೋಯ್ತಾರೆ, ಅವಳಿಗೆ ನಾಟಕ ಅಂದ್ರೆ ಬಲೆ ಆಸೆ” ಎಂದು ತಾಯಮ್ಮ ಹೇಳಿದಳು. “ಬಯಲಾಂಜನೇಯನ ತೇರಿಗೆ ಬಂದಿತ್ತಲ್ಲ, ಆ ಮಗನೊ” ಎಂದು ಉಗ್ರಯ್ಯ ಕೇಳಿದ್ದಕ್ಕೆ, ತಾಯಮ್ಮನು “ಔದು ಕಣಪ್ಪೊ ಅವಳೆಯಾ” ಎಂದಳು. “ಆ ಉಡುಗ್ಗಿನ್ನು ಮದ್ವೆ ಆಗಿಲ್ವಾ” ಎಂದು ನಾರವ್ವ ಕೇಳಿದಳು. “ಇಲ್ಕಣವ್ವೊ, ಗಂಡುಡುಕ್ತಾವ್ರೆ” ಎಂದು ತಾಯಮ್ಮ ಹೇಳಿದಳು. “ನಮ್ಮ ಮುದ್ದೀರಂಗೆ ನೋಡ್ಬೋದಲ್ವ” ಎಂದು ನಾರವ್ವ ಕೇಳಲಾಗಿ “ಅದ್ಕೆ ಕಣವ್ವ ಅವಳ್ನ ಕರ್ಕೊಂಬರಾನ ಅಂದಿದ್ದು” ಎಂದು ತಾಯಮ್ಮ ಹೇಳಿದಳು. “ಒಳ್ಳೇದಾಯ್ತು ಬುಡು” ಎಂದು ನಾರವ್ವ ಹೇಳುತ್ತಿದ್ದಂತೆ ಕೆಂಚೀರ “ಇದೇನವ್ವ, ನಮ್ಮ ಕಡೆಯೋರು ಯಾರೋ ಅವ್ರೆ ಅಂತ ದ್ಯಾವಮ್ಮನ ತವ ಏಳ್ತಿದ್ದೆ ಅವತ್ತು ಒಲ್ತಾವ” ಎಂದನು. ನಾರವ್ವ “ಒಂದಲ್ಲ ಒಂದು ಆಯ್ತದೆ, ನಿಂಗೆ ಎಷ್ಟು ಕಡೆ ನೋಡಿದ್ದು, ಕಡೆಗೆ ಒಳ್ಳೇ ಕಡೆ ಆಯ್ತೊ ಇಲ್ವೊ” ಎಂದು ಕೆಂಚೀರನಿಗೆ ಹೆಣ್ಣು ಹುಡುಕಿದ್ದನ್ನು ನೆನಪಿಸಿಕೊಂಡಳು. ಆ ಮಾತಿನಿಂದ ಕೆಂಚೀರ, ತಾಯಮ್ಮ ಮುದಗೊಂಡರು. “ಈ ಉಡ್ಗೀನು ಒಲ, ಮನೆ ಎಲ್ಲಾ ನೋಡ್ಕೊತದೆ, ಬುದ್ದಿ ಚೆಂದಾಕೈತೆ” ಎಂದು ತಾಯಮ್ಮ ಶಿಫಾರಸು ಕೊಟ್ಟಳು. “ಅದೇನೊ ಸರಿ ಅನ್ನು, ಒಂದ್ಕೊಂಡೋಗ್ಬೇಕಲ್ಲ” ಎಂದ ಕೆಂಚೀರನ ಮಾತಿಗೆ ಉಗ್ರಯ್ಯನು “ಕಂಡು ಕೇಳಿದ್ದು ಅಲ್ವೇನ್ಲ, ತಾಯಮ್ಮಂಗೆ ಗೊತ್ತಾಗಲ್ವ ಏಳು. ಇವನು ಏನೇಳ್ತಾನೊ, ಎಂಗೆ ಕುಂತವ್ನೆ ನೋಡು, ಬಸಣ್ಣನಂಗೆ” ಎಂದು ಮುದ್ದೀರನ ಕಡೆ ನಗುತ್ತಾ ನೋಡಿದನು. “ಊ ಮತ್ತೆ ಅವ್ನ ಕೇಳ್ದೆ ಮಾಡಕಾಯ್ತದ, ಏನ್ಲಾ” ಎಂದು ನಾರವ್ವ ಮುದ್ದೀರನ ಕಡೆ ನೋಡಿದಳು. “ಈಗ ನನ್ನ ತಲೆ ಕೆಡಿಸ್ಬೇಡಿ, ಈ ನಾಟ್ಕ ಒಂದು ಮುಗೀಲಿ, ಆಮೇಲೆ ನೋಡಾನ” ಎಂದು ಮುದ್ದೀರ ಕೊಸರಿಕೊಂಡನು. “ಇಲ್ಲ ಕಣ್ಲ ನಾಳೆ ಒತ್ತಾರೆನೆ ಲಗ್ನ ಕಟ್ಟಿಸ್ಕೊಂಡು ಬತ್ತಾರಲ್ವ” ಎಂದು ಕೆಂಚೀರನು ನಗಸಾರವಾಡಲು, ಎಲ್ಲರೂ ನಗಾಡತೊಡಗಿದರು, ಮುದ್ದೀರನೂ.

“ಅಬ್ಬಕ್ಕೆ ಬಟ್ಟೆ ತರ್ಬೇಕಾತದೆ” ಎಂದ ಉಗ್ರಯ್ಯನ ಮಾತಿಗೆ “ಎಲ್ಲಾ ಎಷ್ಟಾತದಪ್ಪ” ಎಂದು ಕೆಂಚೀರ ಕೇಳಿದನು. “ಏಳ್ನೂರು ಎಂಟ್ನೂರು ಆತದೆ, ಒಂಬಾಳಯ್ಯಂತಾವ ಕಾಳು ಕಡ್ಡೀದು ಅಂತ ನಮ್ದುದೆ ಸಾಪಿರದ ಮೇಲೆ ಅದೆ, ಅಲ್ಲಿಗೆ ಸರಿಯೋತದೆ ಬುಡು” ಎಂದು ಉಗ್ರಯ್ಯನು ಹೇಳಿದ. “ಒಂಬಾಳಯ್ಯನು ಸೀಮೆ ಗೊಬ್ಬರ ತಂದವ್ನಂತೆ, ಎಂಗೈತೊ ನೋಡ್ಬೇಕು” ಎಂದ ಕೆಂಚೀರನ ಮಾತಿಗೆ ಉಗ್ರಯ್ಯನು “ಅದೆಲ್ಲ ನಮಗಲ್ಲ ಬುಡು, ಅದನ್ಹಾಕದ್ರೆ ಮಣ್ಣೆಲ್ಲ ಸುಟ್ಟ ಸುಣ್ಣದಂಗಾಯ್ತದೆ” ಎನ್ನುತ್ತಿರಬೇಕಾದರೆ ಹೊರಗೆ ಕರಿಯ ಒಂದೇ ಸಮನೆ ಬೊಗುಳತೊಡಗಿದ. “ಯಾರೂ ಬಂದಂಗೈತೆ ನೋಡ್ಲಾ” ಎಂದು ಉಗ್ರಯ್ಯನು ಮುದ್ದೀರನಿಗೆ ಹೇಳಿದನು. ಮುದ್ದೀರ ಎದ್ದು ಬಾಗಿಲು ತೆರೆದು “ಯಾರು” ಎಂದನು. “ನಾನು ಕಣೊ ಮಾದಪ್ಪ” ಎಂದು ಹಲಸಿನ ಹಣ್ಣು ಹೊತ್ತು ತಂದಿದ್ದ ಮಾದಪ್ಪ ಒಳಕ್ಕೆ ಬಂದನು. “ಬಾ ಮಾದಪ್ಪ, ಅದನ್ಯಾಕ್ ಒತೊಂಬರಕ್ಹೋದೆ ಅವೇಳೆನಾಗೆ, ಏಳಿಕಳ್ಸಿದ್ರೆ ಮುದ್ದೀರ್ನೆ ಬಂದಿರೋನು” ಎಂದು ಉಗ್ರಯ್ಯ ಹೇಳುತ್ತಿರಬೇಕಾದರೆ ಕೆಂಚೀರನು ಎದ್ದು ಹಲಸಿನ ಹಣ್ಣನ್ನು ಕೆಳಕ್ಕೆ ಇಳಿಸಿಕೊಂಡು “ಬಲು ಬಾರ ಐತೆ” ಎಂದನು. “ಕುಂತ್ಕೊ ಮಾದಪ್ಪಣ್ಣ” ಎಂದು ಹೇಳಿದ ನಾರವ್ವ “ಚಂದಾಕಣ್ಣಾಗಿರ್ಬೇಕು, ವಾಸ್ನೆ ಬತ್ತಾ ಅದೆ” ಎಂದಳು. “ಊಕಣವ್ವ ಮದ್ದವ್ವಾಗೆ

ಅಣ್ಣಾಗ್ಬಿಟ್ಟಿತ್ತು. ಸಂಜೆನಾಗೆ ಕಿತ್ತೆ. ನಾಳೆ ಕೊಯ್ಕೊಂಡು ತಿನ್ಸೋದು" ಎಂದು ಮಾದಪ್ಪ ಹೇಳಿದನು. "ನಿಮ್ಮರದಣ್ಣು ಬಲು ರುಚಿ ಮಾದಪ್ಪಣ್ಣ" ಎಂದು ಮೆಚ್ಚಿಕೆಯ ಮಾತಾಡಿದ ನಾರವ್ವನು "ನಮಗೊಂದು ಸಸಿ ಮಾಡ್ಕೊಡಣ್ಣೊ" ಎಂದು ಕೇಳಿದಳು. "ನಾಲಕ್ಸಸಿ ಮಾಡಿದ್ದೀನಿ, ಇನ್ನೊಂದ್ತಿಂಗ್ಳಾಗ್ಲಿ, ನಿಮಗೊಂದು ತಂದ್ಕೊಡ್ತೀನಿ" ಎಂದು ಮಾದಪ್ಪ ಹೇಳಿದನು. "ಇತ್ತಿಲ್ನಾಗಾಕನ, ಮನೆಗತ್ತರನು ಆತದೆ" ಎಂದು ತಾಯಮ್ಮ ತನ್ನ ಸಲಹೆ ಕೊಟ್ಟಳು. "ಅಡ್ಕೆಲೆ ಆಕ್ಕೊ ಮಾದಪ್ಪ" ಎಂದು ಉಗ್ರಯ್ಯ ಹೇಳಿದನು. "ಇಲ್ಲಪ್ಪೊ ನಂದಿನ್ನು ಊಟ ಆಗಿಲ್ಲ" ಎಂದ ಮಾದಪ್ಪನ ಮಾತು ಕೇಳಿದ ನಾರವ್ವನು "ಅಂಗಾರೆ ಊಟ ಮಾಡೇಳಣ್ಣೊ" ಎಂದು ಹೇಳಿದಳು. "ಇವತ್ತು ಬಸ್ಸಾರ್ಮಾಡವರೆ ಮನ್ಯಾಗೆ" ಎಂದ ಮಾದಪ್ಪನ ಮಾತು ಕೇಳಿ "ಸರಿ ಬುಡು, ರಾಜಮ್ಮನ ಕೈ ಬಸ್ಸಾರು ಅಂದ್ರೆ ಯಾರು ಬಿಟ್ಟಾರು" ಎಂದು ನಾರವ್ವ ಮಾದಪ್ಪನ ಹೆಂಡತಿಯನ್ನು ಹೊಗಳಿದಳು. "ಈ ಸಾರಿ ಕಾಯಿ ಚೆಂದಾಕೆ ಬಿಟ್ಟಿದ್ದೊ" ಎಂದ ಕೆಂಚೀರನ ಮಾತಿಗೆ ಮಾದಪ್ಪನು "ಊಕಣಯ್ಯ, ಒಂದು ಮುನ್ನೂರು, ನಾನೂರು ಕಾಯಿ ಬಿಟ್ಟವೆ, ಆ ಮೊಟ್ಟೆ ಸಾಬಣ್ಣನು ಎಂಟ್ನೂರು ರೂಪಾಯಿ ಕೊಡ್ತೀನಿ ಅಷ್ಟು ಕೊಟ್ಟಿಡಿ ಅಂದ. ಇಲ್ಲಪ್ಪ ಊರೋರ್ಗೆಲ್ಲ ಕೊಡ್ಬೇಕು, ನಂಟರ ಮನೆಗೆ ಕಳುಸ್ಬೇಕು, ಆಗಲ್ಲ ಅಂದೆ" ಎಂದನು. "ಆಲೆಮನೆ ಕೆಂಪಯ್ಯನು ಕರೆಂಟ್ ಬತ್ತದೆ ಅಂದ್ನಂತೆ" ಎಂದ ಉಗ್ರಯ್ಯನ ಮಾತಿಗೆ "ಊ ನಂಗೂ ಸಿಕ್ಕಿದ್ದ, ಕರೆಂಟ್ ಬತ್ತದೆ, ಜೊತೆಗೆ ಅದೇನೊ ಕಂಪ್ನಿಗಳು ಬತ್ತವಂತೆ ಅಂತ ಬ್ಯಾರೆ ಏಳ್ದ" ಎಂದು ಮಾದಪ್ಪ ಹೇಳಿದ. "ಅದೆಲ್ಲಾ ಆಗೊ ಮಾತಲ್ಲ ಬುಡು, ಕಂಪ್ನಿ ಇಲ್ಯಾಕೆ ಬತ್ತಾವೆ, ಅದೇನಿದ್ರು ಪ್ಯಾಟೆ ಪಟ್ಟಣದ ಕಡೇನೆ" ಎಂದು ಉಗ್ರಯ್ಯ ಹೇಳಿದನು. "ನಾಳೀಕೆ ನಿಮ್ಮನೆತಾವ್ಕೆ ನಾನೆ ಬರಾನ ಅಂತಿದ್ದೆ" ಎಂದ ನಾರವ್ವನ ಮಾತು ಕೇಳಿ ಮಾದಪ್ಪ "ಯಾಕವ್ವ ಏನ್ಸಮಾಚಾರ" ಎಂದು ಕೇಳಿದನು. "ರಾಜಮ್ಮ, ತುಪ್ಪ ಬೇಕು ಅಂದಿದ್ಲು, ಮದ್ಯಾನ ಕಾಸ್ದೆ, ಕುಡಿಕೆನಾಗೆ ಮಡಗಿದ್ದೀನಿ, ತಗೊಂಡೋಯ್ತೀಯ" ಎಂದ ನಾರವ್ವನ ಮಾತಿಗೆ "ಕೊಡಮ್ಮ, ನೀನು ಕಾಯಿಸಿದ ತುಪ್ಪ ಅಂದ್ರೆ ಯಾರು ಬ್ಯಾಡ ಅಂತಾರೆ" ಎಂದು ಮಾದಪ್ಪ ಹೇಳಿದನು. "ಮುದ್ದೀರ ನೆಲವಿನಮ್ಯಾಗೆ ತುಪ್ಪದ ಕುಡಿಕೆ ಮಡಗೀವ್ನಿ, ತಗೊಂಬಾರ್ಲ" ಎಂದು ಮುದ್ದೀರನಿಗೆ ನಾರವ್ವ ಹೇಳಿದಳು. ಕುಡಿಕೆ ಇನ್ನೂ ಬೆಚ್ಚಗಿತ್ತು. ಹಾಲಿನ ಕೆನೆಯ ಬಣ್ಣದ, ತರಿತರಿಯಾದ ಗಮಗಮ ತುಪ್ಪ ತುಂಬಿದ, ಹರಳೆಲೆ ಮುಚ್ಚಿದ ಕುಡಿಕೆಯನ್ನು ಮುದ್ದೀರ ತಂದು ಮಾದಪ್ಪನ ಕೈಗೆ ಕೊಟ್ಟನು. ಮಾದಪ್ಪನು "ಬತ್ತೀನ್ರಪ್ಪೊ" ಎಂದು ಹೊರಟನು.

*****

ಮಾದಪ್ಪನು ಹೊರಡುತ್ತಿದ್ದಂತೆ ಮನೆಮಂದಿಯೆಲ್ಲಾ ಮಲಗುವ ಹವಣಿಕೆಯಲ್ಲಿರಬೇಕಾದರೆ, ಮುದ್ದೀರನು ಕೊಟ್ಟಿಗೆಗೆ ಹೋಗಿ ದನಗಳಿಗೆಲ್ಲ ಮೇವು ಕೊಟ್ಟು ಬಂದನು. ದೂರದಲ್ಲೆಲ್ಲೊ ಮರದ ಮೇಲೆ ಕುಳಿತಿದ್ದ ಗೂಬೆಯೊಂದು 'ಗೂಕ್' ಎಂದು ಕೂಗಿತು. ಮುದ್ದೀರನು "ಗೂಬೆ ಅಲ್ವೇನಣ್ಣೊ ಕೂಗಿದ್ದು" ಎಂದು ಕೇಳಿದ್ದಕ್ಕೆ ಕೆಂಚೀರ "ಇನ್ನೇನ್ಮತ್ತೆ, ಈಟೊತ್ನಾಗೆ ಕೋಗ್ಲೆ ಕೂಗ್ತದ" ಎಂದನು. ಬೆಳಗ್ಗೆ ಎತ್ತುಗಳಿಗೆ ತಿನ್ನಿಸಬೇಕಾದ ಜೋಳದ ಕಡ್ಡಿಯನ್ನು ಜಗಲಿಯ ಮೇಲೆ ಕೆಂಚೀರನು ಒಪ್ಪವಾಗಿಟ್ಟನು. ಕರಿಯ ಏರಿಳಿತವಿಲ್ಲದೆ ಒಂದೇ ಸಮನೆ ಬೊಗಳುತ್ತಿತ್ತು. "ನಾಯಿಲ್ಲ, ನರಿಯಿಲ್ಲ ಅದೇನ್ನೋಡಿ ಬೊಗುಳ್ತದೊ ಈ ಕರಿಯ" ಎಂದ ಕೆಂಚೀರನ ಮಾತಿಗೆ ಹೊರಗೆ ಹೋಗಿ ಬಂದ ಉಗ್ರಯ್ಯನು "ಅದು ಅಂಗೆ ಕಣ್ಲಾ, ನರಮನ್ಸರ ಕಣ್ಗೆ ಕಾಣಿಸ್ದಿರೋದು ಅವಕ್ಕೆ ಕಾಣ್ತವೆ" ಎಂದು ಹೇಳಿ ಕಪ್ಪಾನ ಕತ್ತಲೆಯಲ್ಲಿ ಕಾಣದಿದ್ದ ನಾಯಿಯನ್ನು ಹುಡುಕುತ್ತಾ "ಎಲ್ಲೈತೊ ಕರಿಯ" ಎಂದು ಕೆಂಚೀರನನ್ನು ಕೇಳಿದನು. "ಅಲ್ಲೆ ಗಾಡಿ ಕೆಳ್ಗೆ

ಮಲಗದೆ" ಎಂದು ಕೆಂಚೀರ ಹೇಳಿದನು. ಗಾಡಿಯ ಕಡೆ ದಿಟ್ಟಿಸಿ ನೋಡಿದ ಉಗ್ರಯ್ಯನಿಗೆ ಏನೂ ಕಾಣದಂತಾಗಲು "ಎಲ್ಲಾನ ಮನಗ್ಲಿ ಬುಡು" ಎಂದು ಮಲಗಲು ಹೋದನು. ತಾಯವ್ವ ಬಿಸಿನೀರಿಗೆ ಕದರಿ ಕೊಟ್ಟ ಔಷಧಿಯನ್ನು ಕುಡಿದು ಮಲಗಿದನು.

*****

ಇರುಳ ಕಾರುಬಾರು

ಬೆಳಗಿನಿಂದ ದುಡಿದು ದಣಿದಿದ್ದ ಜೀವಿಗಳೆಲ್ಲಾ ನಿದ್ದೆಗೆ ಮೈ ಒಡ್ಡಿ ಕನಸಿನರಮನೆಯಲ್ಲಿ ವಿಹರಿಸತೊಡಗಿದರು. ಗೂಡು ತಪ್ಪಿಸಿಕೊಂಡ ಹಕ್ಕಿಗಳು ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಪತರುಗುಟ್ಟುತ್ತಿದ್ದವು. ಕತ್ತಲ ಸಾಮ್ರಾಜ್ಯದ ಆಗಸದಲ್ಲಿ ಅಲ್ಲೊಂದು, ಇಲ್ಲೊಂದು ಮೋಡದ ತುಣುಕುಗಳು ಚಿತ್ರ ವಿಚಿತ್ರ ಆಕಾರ ತಳೆಯುತ್ತಾ ಮೆಲ್ಲನೆ ಅಲೆಯುತ್ತಿದ್ದವು. ತಾರೆಗಳು ಪಿಳಿಪಿಳಿ ಕಣ್ಣು ಬಿಟ್ಟು ಮೋಡದ ಮರೆಯಿಂದ ನೆಲದ ಕಡೆ ಇಣುಕುತ್ತಿದ್ದವು. ಸಣ್ಣಪುಟ್ಟ ತಾರೆಗಳು ಆಗಸದಂಗಳದಲ್ಲಿ ಕಣ್ಣುಮುಚ್ಚಾಲೆಯಾಡುತ್ತಿದ್ದವು. ರಚ್ಚೆ ಹಿಡಿದ ಮಗುವನ್ನು ಮಲಗಿಸಲು ತಾಯಿ, ದೂರದಲ್ಲೆಲ್ಲೊ ಹಾಡುತ್ತಿದ್ದ ಜೋಗುಳ ಅಲೆಅಲೆಯಾಗಿ ತೇಲಿಬಂದು ಮಲಗಿದ್ದವರ ಮೈ ತಟ್ಟುತ್ತಿತ್ತು. ಹೊಲದಿಂದ ಮನೆಗೆ ತಡವಾಗಿ ಹೋಗುತ್ತಿದ್ದವರ ಬಂಡಿಗಾಲಿಯ ಉರುಳು ಸದ್ದಿಗೆ ಎತ್ತುಗಳ ಕತ್ತಿನ ಗೆಜ್ಜೆಸರದ ಜಲ್ ಜಲ್ ನಾದ ಹಿಮ್ಮೇಳವಾಗಿತ್ತು. ಪುಟ್ಟಮೊಗನು ಕನಸಿನಲ್ಲಿ ಮಗ್ಗಿ ಎಣಿಸುತ್ತಿದ್ದನು. ಉಗ್ರಯ್ಯನ ಕೆಮ್ಮು ಇನ್ನೂ ಕಾಡುತ್ತಿತ್ತು. "ಬೀಡಿ ಸೇದ್ಬೇಡ ಅಂದ್ರು ಸೇದ್ತೀಯ, ಈಗ್ನೋಡು ನೀನು ಪಡೊ ಪಾಡು" ಎಂದು ನಾರವ್ವ ಗೊಣಗುತ್ತಿದ್ದಳು. ಯಾವಾಗಲೋ ಉಗ್ರಯ್ಯನಿಗೂ ನಿದ್ದೆ ಹತ್ತಿತು.

******

ಎಲ್ಲಿಂದೆಲ್ಲಿಗೊ ಎಲ್ಲೆಲ್ಲೂ ಹಬ್ಬಿದ ಕತ್ತಲೆ. ಆಕಾಶ ಭೂಮಿಗಳನ್ನು ಒಂದು ಮಾಡಿದ ಕತ್ತಲೆ. ದೂರಾತಿದೂರದ ಪಟ್ಟಣದಲ್ಲಿ ಕತ್ತಲಿನಲ್ಲೂ, ಬೆಳ್ಳಂಬೆಳಗುವ ತಂಗಾಳಿ ಮಹಲು. ತಂಗಾಳಿ ಮಹಲಿನ ವಿಶಾಲ ಕೋಣೆಯೊಂದರಲ್ಲಿ ಮೆತ್ತನೆಯ ಸುಪ್ಪತ್ತಿಗೆಯಲ್ಲಿ ನಿದ್ದೆ ಬಾರದೆ ಚಡಪಡಿಸುತ್ತಿರುವ ಜೀವವೊಂದು. ಒಂದನ್ನು ಹತ್ತು ಮಾಡುವ, ಹತ್ತನ್ನು ನೂರು ಮಾಡುವ, ನೂರನ್ನು ಸಾವಿರ ಮಾಡುವ, ಸಾವಿರವನ್ನು ಲಕ್ಷ ಮಾಡುವ, ಲಕ್ಷವನ್ನು ಕೋಟಿ ಮಾಡುವ, ಕೋಟಿಯನ್ನು ನೂರಾರು ಕೋಟಿ ಮಾಡಿಕೊಂಡು ಅದನ್ನು ಸಾವಿರ ಮಾಡುವ ಲಕ್ಷ ಲಕ್ಷ ಕೋಟಿ ಕೋಟಿ ಮಾಡುವ ಸನ್ನಾಹದಲ್ಲಿ ಹವಣಿಸುತ್ತಿರುವ ಜೀವಕ್ಕೆ ನಿದ್ದೆಯಾದರೂ ಹೇಗೆ ಬಂದೀತು. ಪುಟ್ಟಮೊಗನ ಮಗ್ಗಿಯ ಎಣಿಕೆಗೆ ಸಿಗದ, ಅಂಕಿಸಂಖ್ಯೆಗಳ ಗೊಂದಲ ಗೋಜಲುಗಳಲ್ಲಿ ಸಿಲುಕಿ ಏಣಸುತ್ತಿರುವ ಜೀವಿ, ಅತ್ತಿಂದಿತ್ತ ಹೊರಳುವುದು, ಇತ್ತಿಂದತ್ತ ಹೊರಳುವುದು, ಎದ್ದು ಕೂಡುವುದು, ಮತ್ತೆ ಮಲಗುವುದು, ಜಗ್ಗನೆದ್ದು ದಾಪುಗಾಲಿಟ್ಟು ಕಿಟಕಿಯೆಡೆ ನಿಂತು ಹೊರಗೆ ನೋಡುವುದು, ನೋಡಿ ನೋಡಿ ಕಣ್ಸೋತು ಮತ್ತೆ ಸುಪ್ಪತ್ತಿಗೆಗೆ ಹಿಂತಿರುಗುವುದು. ಭೂತಗಣಾಧೀಶನಾದ ಈ ಸಿರಿ ಭೂಪತಿಗೆ ಅನೇಕ ದೂತರು. ಒಬ್ಬೊಬ್ಬರನ್ನು ಒಂದೊಂದು ದಿಕ್ಕಿಗೆ ಅಟ್ಟಿ ಅವರು ತರಲಿರುವ ಸುದ್ದಿಗಾಗಿ ಕಾದು, ಕಾದು ಬಸವಳಿದು ಬೇಸತ್ತಿದ್ದಾನೆ ಧಣಿ. ಪಾಪ ನಿದ್ದೆಯಾದರೂ ಹೇಗೆ ಬಂದೀತು. ಇದು ಹೀಗೆ ಇನ್ನು ಎಷ್ಟು ಹೊತ್ತಾದೀತೊ ತಿಳಿಯದು.

*****

ಅಲ್ಲಿ ಹಾಗಿರಬೇಕಾದರೆ ಇತ್ತ ಪಾಪದ ಹಳ್ಳಿಯ ಪಾಮರರು ನಿದ್ರಾಪರವಶರಾಗಿ ಸಿದ್ದೆಗೊಮ್ಮೆ ನಿತ್ಯಮರಣದ ಸ್ಥಿತಿ ತಲುಪಿರುವರು. ಆಗ ಇದ್ದಕ್ಕಿದ್ದಂತೆ ಪಡುವಲದಲ್ಲೇನೊ ಚಲನೆ ಗೋಚರಿಸಿತು.ನೋಡನೋಡುತ್ತಿದ್ದಂತೆ ಅದೇನೊ ಬಂದು ಆಕಾಶವನ್ನೆಲ್ಲಾ ಆವರಿಸಿದಂತೆ ದಟ್ಟ ಕತ್ತಲಿನಲ್ಲೂ ಕರಿನೆರಳು ಮೂಡಿಸಿ ಗಳಿಗೆಗೊಂದೊಂದು ಆಕಾರ ತಳೆಯುತ್ತಾ, ಹಿಗ್ಗುತ್ತಾ, ಕುಗ್ಗುತ್ತಾ, ಸುತ್ತಿ,ಸುಳಿದು ಹಳ್ಳಿ ಹಳ್ಳಿಗಳನ್ನು ದಾಟಿ ದೂರಾತಿ ದೂರದ ಪಟ್ಟಣದತ್ತ ಚಲಿಸುತ್ತಿತ್ತಲ್ಲ. ಕರಿಯನಾದರೊ ಬೆಕ್ಕಸಬೆರಗಾಗಿ ಬೊಗಳುವುದನ್ನು ಮರೆತು, ಬೊಗಳುತ್ತಿರುವೆನೆಂಬ ಭ್ರಮೆಯಲ್ಲಿ ಬಾಯ್ತೆರೆದು ಕುಳಿತಲ್ಲೆ ಕುಳಿತಿರುವುದಲ್ಲ! ಭೂತರಾಜನನ್ನು ಆದಷ್ಟು ಬೇಗ ಕಂಡು ಅವನಿಗೆ ಹೊಸ ಸುದ್ದಿ ತಲುಪಿಸಿ, ಅವನ ಕೃಪೆಗೆ ಪಾತ್ರವಾಗಬೇಕೆಂಬ ತವಕದಲ್ಲಿ ಗಾಳಿಯಂತೆ ಚಲಿಸಿ, ದೂರಾತಿದೂರದ ಪಟ್ಟಣದ ತಂಗಾಳಿ ಮಹಲನ್ನು ತಲುಪಿ, ಗಾಳಿಯೇ ಆಗಿಬಿಟ್ಟು ಕೀಲಿಕಿಂಡಿಯಿಂದ ನುಸುಳಿ ನರರೂಪದಲ್ಲಿ ಪ್ರತ್ಯಕ್ಷವಾಯಿತಲ್ಲ. ಹೀಗೆ ಪ್ರತ್ಯಕ್ಷವಾದ ಭೂತವು ಭೂತರಾಜನ ಕಿವಿಯಲ್ಲಿ ಪೈಶಾಚಿ ಭಾಷೆಯಲ್ಲೇನೊ ಪಿಸುಗುಟ್ಟಿತು. ಅದನ್ನು ಕೇಳಿಸಿಕೊಂಡ ಧಣಿಯ ಕಿವಿ ನಿಮಿರಿತು, ಕಣ್ಣರಳಿತು, ಬಾಯ್ತೆರೆಯಿತು, ನಾಭಿ ಮೂಲದಿಂದ ನಗೆಯುಕ್ಕಿ, ಉಕ್ಕಿ ಅಲೆಅಲೆಯಾಗಿ ತೇಲಿಬಂತು. ಒಡನೆ ಭೂಪಟವೊಂದನ್ನು ತನ್ನ ಮುಂದೆ ಹರಡಿಕೊಂಡ ಭೂತರಾಜ, ಭೂತ ಸೂಚಿಸಿದಂತೆ ಭೂಪಟ ಮೇಲೆ ವಕ್ರವಕ್ರವಾದ ಕರಿಗೆರೆಯ ದೊಡ್ಡ ವೃತ್ತವೊಂದನ್ನು ರಚಿಸಿದನು. ಆ ವಕ್ರವೃತ್ತದಲ್ಲಿ ಉಗ್ರಯ್ಯನ ಪಾಲಳ್ಳಿಯಲ್ಲದೆ ಸುತ್ತಮುತ್ತಣ ಹತ್ತಾರು ಹಳ್ಳಿಗಳ ಸಾವಿರಾರು ಎಕರೆ ಹೊಲಮನೆಗದ್ದೆ ತೋಟಗಳೆಲ್ಲಾ ಸೇರಿಹೋಗಿದ್ದವು. ಈಗ ಭೂತದ ಕಿವಿಯಲ್ಲಿ ಪೈಶಾಚಿ ಭಾಷೆಯಲ್ಲಿ ಪಿಸುಗುಟ್ಟುವ ಸರದಿ ಭೂತರಾಜನದಾಯಿತು. ಸಂತೃಪ್ತಿಯ ನಗೆ ನಗುತ್ತಾ ಭೂತ ಅಂತರ್ಧಾನವಾಯಿತು. ಭೂತರಾಜನಾದ ಸಿರಿಭೂಪತಿಯು ಕಾಡುಹಂದಿಯನ್ನು ನುಂಗಿದ ಹೆಬ್ಬಾವಿನಂತೆ, ಸುಪ್ಪತ್ತಿಗೆಯ ಮೇಲೆ ಉರುಳಿಕೊಂಡು ಎತ್ತರೆತ್ತರದ ಕಟ್ಟಡಗಳ, ಮಿಣಿ ಮಿಣಿ ಮಿಂಚುವ ಬಣ್ಣ ಬಣ್ಣದ ಗಾಜುಗಳ, ಹೊಗೆಯುಗುಳುವ ಉದ್ದನೆಯ ಚಿಮಣಿಗಳ ಕನಸು ಕಟ್ಟುತ್ತಾ ಗೊರಕೆ ಹೊಡೆಯತೊಡಗಿದನು.

******

ಮೂಡಲದಲ್ಲಿ ಬೆಳ್ಳಿ ಚುಕ್ಕಿ ತೆಳುಹಿಮದ ಪರದೆಯ ಹಿಂದೆ ಕಾಣಿಸಲೊ, ಬೇಡವೊ ಎಂಬಂತೆ ಕಾಣಿಸುತ್ತಿತ್ತು. ಇದನ್ನು 'ನೋಡಿ' 'ನೋಡಿ' ಎಂದು ಜನರಿಗೆಲ್ಲಾ ಕೂಗಿ ಹೇಳುವಂತೆ ಕೋಳಿಗಳು ಕೂಗತೊಡಗಿದವು. ಇರುಳ ವಿದ್ಯಮಾನದ ಪರಿವೆಯೇ ಇಲ್ಲದ ಉಗ್ರಯ್ಯನು ಎಚ್ಚರಗೊಂಡು ಮೊಗ ತೊಳೆದು, ಮೂಡಲದಲ್ಲಿ ಮೂಡಲಿರುವ ನೇಸರನಿಗೆ ಶರಣೆಂದು, ಕೊಟ್ಟಿಗೆಯಿಂದ ಎತ್ತುಗಳನ್ನು ಕರೆತಂದು, ಅವುಗಳಿಗೆ ಜೋಳದ ಕಡ್ಡಿಯನ್ನು ತಿನ್ನಿಸುವುದರಲ್ಲಿ ತೊಡಗಿಕೊಂಡನು. ಕರಿಯ ಬಚ್ಚಲೊಲೆಯ ಗೋಡೆಗೆ ಮೈ ಆನಿಸಿಕೊಂಡು ಕಾಲು ಚಾಚಿ ಮಲಗಿತ್ತು. ಮೂಡಲದಲ್ಲಿ ಅರುಣ ತನ್ನ ಕಲಾಕೌಶಲವನ್ನು ಮರೆಯತೊಡಗಿದ್ದ. ಹಕ್ಕಿಗಳ ಚಿಲಿಪಿಲಿ ಗಾನ ಬಯಲನಾವರಿಸುತ್ತಿತ್ತು. ಅಜ್ಜಿ ಚನ್ನರಾಯಿಯ ಎಚ್ಚರಗೊಳಿಸಿದಳು. ಅವನು ಮೋರೆ ತೊಳೆದು ಬಂದು ಅಜ್ಜಿ ಬೆಳಗಿಸಿದ ದೀಪದ ಬೆಳಕಿನಲ್ಲಿ ಪದ್ಯವೊಂದನ್ನು ಬಾಯಿಪಾಟಮಾಡತೊಡಗಿದ *"ಮೂಡುವನು ರವಿ ಮೂಡುವನು. ಕತ್ತಲೊಡನೆ ಜಗಳಾಡುವನು"*.

ಮತ್ತೊಂದು ವರ್ಷ

– ಜಯಶ್ರೀ ಸಿ. ಕಂಬಾರ

ಕೃಪೆ: ಸ್ವಟಾಸ್ಲೊವ್ ರೋರಿಕ್

ಪಡುವಣದ ರವಿ ಗಂಭೀರದಲ್ಲಿ ಇಳಿಯುತ್ತಿದ್ದಾನೆ
ಮೋಟಾರುಗಳು ರಸ್ತೆಯಲ್ಲಿ ಯೆರ್ರಾಬಿರ್ರಿ ನುಗ್ಗುತ್ತಿವೆ
ಅವ್ಯವಸ್ಥೆಯ ಮನಗಳಂತೆ
ಹಾದಿಗಳೆಲ್ಲಾ ತಿರುಚಿವೆ, ಉರುಳುತ್ತಿದೆ ದಾಳ
ನಿಲ್ಲದೆ ಉರುಳುತ್ತಲೇ ಇದೆ
ಟೇಬಲ್ ಮೇಲಿನ ಇಸ್ಪೀಟು ಎಲೆಗಳಂತೆ
ಹರಡಿವೆ ವರುಷಗಳು ಒಂದರ ಮೇಲೊಂದು
ಮತ್ತೆ ಹೊಸ ಎಲೆ, ಮತ್ತೆ ಹೊಸ ವರ್ಷ

ಹೊರಗಿನ ಗದ್ದಲಗಳ ಮಧ್ಯೆ
ಕುಳಿತಿದ್ದೇವೆ ಇಲ್ಲಿ ನೀನು, ನಾನು
ಥಿಕ್ಕಿಸುತ್ತಿವೆ ಗೊಂದಲಗಳು
ಪಂಜುಗಳು ಪರಚುತ್ತಿವೆ ಖಾಸಗಿ ವಿಷಯಗಳ
ತೇಲಿ ಬರುತ್ತಿವೆ ನೆನಪುಗಳು ಹೆಣದಂತೆ
ಒಡೆದು ನೋಯುತ್ತಿವೆ ಮಾತುಗಳು ಗಾಯದಂತೆ
ಸದ್ದಿಲ್ಲದೆ ಹುದುಗಿದೆ ಮೌನ
ಮಾತಿನ ನಡುವೆ ನಾನು ನಾನಾಗಿ ಉಳಿದಿರಲಿಲ್ಲ
ನೀನೂ ನೀನಾಗಿರಲಿಲ್ಲ ಕೇವಲ ಸರಕುಗಳಂತಿದ್ದೆವು

ನಿನ್ನ ಕಣ್ಣ ವಿಚಿತ್ರ ಹೊಳಹಿನಲ್ಲಿ
ನನ್ನ ಭೂತವ ಕಂಡೆ
ಆಳದ ಬಾವಿಯಿಂದ ಏಳುವುದನ್ನು
ನೆರಳು ಜಾಡಿಸುವ ಸಮಯ
ಉರುಳುತ್ತಿದೆ ದಾಳ
ಕಾರೆಂಬೋ ಕತ್ತಲ ಗರ್ಭದಲ್ಲಿ
ಹೊಸ ದಿನವು ಹೊರಳಿ, ಉರುಳಿದೆ,
ಮತ್ತೊಂದು ಹೊಸ ಎಲೆ
ಮತ್ತೊಂದು ಹೊಸ ವರ್ಷ

'ಸಿರಿಸಂಪಿಗೆ', ನಂ.44, 1ನೇ ಮೈನ್, 3ನೇ ಸ್ಟೇಜ್, ಬನಶಂಕರಿ 4ನೇ ಬ್ಲಾಕ್, ಬೆಂಗಳೂರು–85

ಹೊರಗಿನ ಗದ್ದಲಗಳ ಮಧ್ಯೆ
ಕುಳಿತಿದ್ದೇವೆ ಇಲ್ಲಿ ನೀನು, ನಾನು
ಢಿಕ್ಕಿಸುತ್ತಿವೆ ಗೊಂದಲಗಳು
ಪಂಜುಗಳು ಪರಚುತ್ತಿವೆ ಖಾಸಗಿ ವಿಷಯಗಳ
ತೇಲಿ ಬರುತ್ತಿವೆ ನೆನಪುಗಳು ಹೆಣದಂತೆ
ಒಡೆದು ನೋಡುತ್ತಿವೆ ಮಾತುಗಳು ಗಾಯದಂತೆ
ಸದ್ದಿಲ್ಲದೆ ಹುದುಗಿದೆ ಮೌನ
ಮಾತಿನ ನಡುವೆ ನಾನು ನಾನಾಗಿ ಉಳಿದಿರಲಿಲ್ಲ
ನೀನೂ ನೀನಾಗಿರಲಿಲ್ಲ ಕೇವಲ ಸರಕುಗಳಂತಿದ್ದೆವು.

ನಿನ್ನ ಕಣ್ಣ ವಿಚಿತ್ರ ಹೊಳಹಿನಲ್ಲಿ
ನನ್ನ ಭೂತವ ಕಂಡೆ
ಆಳದ ಬಾವಿಯಿಂದ ಏಳುವುದನ್ನು
ನೆರಳು ಜಾಡಿಸುವ ಸಮಯ
ಉರುಳುತ್ತಿದೆ ದಾಳ
ಕಾರೆಂಬೋ ಕತ್ತಲ ಗರ್ಭದಲ್ಲಿ
ಹೊಸ ದಿನವು ಹೊರಳಿ, ಉರುಳಿದೆ
ಮತ್ತೊಂದು ಹೊಸ ಎಲೆ
ಮತ್ತೊಂದು ಹೊಸ ವರ್ಷ



ತರಕಾರಿ ಕತ್ತರಿಸುವ ಕತ್ತರಿ
ಕೃಪೆ : ರಾಜಾ ದಿನಕರ್ ಕೇಲ್ಕರ್ ಮ್ಯೂಸಿಯಂ

ಜೀವ ಝುಲ್ಲರಿಯ ಕಥನ

– ಆರ್. ಜಿ. ಹಳ್ಳಿ ನಾಗರಾಜ

ಪ್ರವೇಶ:

ತಣ್ಣನೆಯ ಚಳಿಗೆ ಹೊದ್ದು ಮಲಗಿದೆ ಕ್ರಾಂತಿ
ಬೆಲ್ಲದ ಸಿಹಿ ಊಟದ ಸುಗ್ಗಿಯ ಸಂಭ್ರಮದಲ್ಲಿದೆ ಸಂಕ್ರಾಂತಿ
ನನ್ನೊಳಗೆ ಕೂತು ಧ್ಯಾನಿಸಿದ ಸಂತ ಒನಕೆ ಕುಟ್ಟಿ
ಜೀವಝುಲ್ಲರಿಯ ಕಥನಕ್ಕೆ ಬರೆದಿದ್ದಾನೆ – ಮುನ್ನುಡಿ

ಜೀವ : ಒಂದು

ಕಲ್ಲು ಬಂಡೆಯ ಗುಡ್ಡದ ಆಸುಪಾಸು
ಹಸಿರಿಲ್ಲದ ವನದಲ್ಲಿ ಒಣ ಎಲೆ ಸಿಪ್ಪೆ ತೊಗಟೆ
ಹೆಕ್ಕಿ ಬಾಯಾಡಿಸಿದೆ ಊರ ಜಂಗುಳಿ ದನಕರು

ಕಣ್ಣಿಗೆ ಸೂರು ದೂರ ಅದೇ ಬೆಟ್ಟಸಾಲು
ಅಜ್ಜ ಅಜ್ಜಿ ಮುತ್ತಜ್ಜ ನಡೆದು ಊರುಗೋಲಿಟ್ಟ ಬಂಡಿಜಾಡು
ಗುಡಿಸಲೆಂಬ ಅರಮನೆ ಮುಂದೆ ಕೋಳಿ ಕುರಿಗಳ ಸಂತೆ

ಕೋಡಜ್ಜ ರಂಗಜ್ಜ ಗಿರಿಯಜ್ಜ – ಎಲ್ಲರೆಲ್ಲರ ಅಜ್ಜ
ಬದುಕ ಬಂಡಿ ಸವೆಸಿದ್ದೆ ಹಿಡಿಮಣ್ಣ ಬೆಟ್ಟಸಾಲು ಬುಡದಲ್ಲಿ
ಬರಲಿಲ್ಲ ಶತಮಾನವಾದರೂ ನಗು ಉಕ್ಕು ಸಂತಸದ ಗಳಿಗೆ – ಅಲ್ಲಿ

ರಾತ್ರಿಯೆಂದರೆ ಅದು ಕನಸಿನ ಲೋಕವಲ್ಲ
ಭಯ ಆತಂಕದ ಕಂತೆಕಟ್ಟು;
ನಿದ್ರೆಗೆ ಜಾರಿದರೆ ಸ್ವಪ್ನದ ಸುಳಿವಿಲ್ಲ,
ತುಸು ದೂರದಲ್ಲಿ ಮದ್ದುಗುಂಡು ತುಫಾಕಿ ಗ್ರೆನೇಡು ಸಿಡಿದ ಸದ್ದು
ಭಂಗ, ನಿದ್ರೆಗೂ ಭಂಗ; ಗುಡಿಸಲಿಗೂ ನಡುಕ

ರಸ್ತೆ ಬದಿ ಕುದುರಿದೆ ರಾತ್ರಿ ವ್ಯಾಪಾರ
ಅಲ್ಲಿ ಲಾರಿಗಳೆಂಬ ಯಮಕಿಂಕರರ ಸಾಲು ಸಾಲು ಪೈಪೋಟಿ
ಹೊತ್ತು ಸಾಗಿವೆ ನೆಲ ಕೊರೆದ ಚಿನ್ನದ ಮಣ್ಣು ಕಲ್ಲುಬಂಡೆ

ನಂ. 161, 'ಶ್ರೀಮಾತಾ', 6ನೇ ಕ್ರಾಸ್, ಶಾಸ್ತ್ರಿನಗರ, ಬನಶಂಕರಿ 2ನೇ ಹಂತ, ಬೆಂಗಳೂರು–70

ಜೀವ : ಎರಡು

ಬಿಸಿಲ ತಾಪ ಚಡಪಡಿಕೆ ಬೆವರು ವಾಸನೆ ಮೈಯಲ್ಲಿ
ದಾಹ ತಣಿಯಲು ಹಾಹಾಕಾರ, ಎಲ್ಲಿದೆ ನೀರ ನೆಲೆಯ ಕಾರಂಜಿ?
ನೆಲಕಾವು ಇರುವೆ ಕೀಟಗಳಿಗೂ ಸಂಕಟದ ಭೀತಿ

ಹೆಸರಿಗದು ಮನೆಯೆಂಬ ಗೂಡು, ಕಾದ ಹೆಂಚಿನ ಬಿಸಿ
ಸಂತಾನದ ಮೊಟ್ಟೆ ಹೊತ್ತು ಹೊರಟಿವೆ ಇರುವೆಗಳ ದಂಡು
ತೊಟ್ಟಿವೆ ನಾಳಿನ ಜೀವಸಂಕುಲದ ರಕ್ಷಣೆಗೆ ಪಣ.

ಅಜ್ಜಿ ಹೇಳಿದ್ದು ನೆನಪಾಯಿತು:
'ಹನಿ ಹೊತ್ತ ಸ್ವಾತಿಮಳೆಗಿದು ಮುನ್ನುಡಿ'

ನಂಬಿಕೆಗೆ ಪ್ರಶ್ನೆಗಳೇ ಅಡ್ಡಗಾಲು; ಶೂನ್ಯದಲ್ಲೂ ಕುಂಬಳಕಾಯಿ!
ಏನು ಪವಾಡವೊ ಸುಡುಬಿಸಿಲ ನೆತ್ತಿ ನೋಡಿದರೆ
ಕರಿಮೋಡದಂಚು ಆಗಸದಲ್ಲಿ

ಗರ್ಭ ಹೊತ್ತ ಹುಡುಗಿಯ ಸುಖ ಪ್ರಸವ
ಸಂತಾನ ಸುಖದಲ್ಲಿ ಬಿರಿದ ನಗು
ಹನಿ ಹನಿ ಮುತ್ತನಿತ್ತು ಮನ ತಣಿಸಿದ್ದು ಪ್ರಕೃತಿ
ತಣ್ಣನೆಯ ಗಾಳಿಯಲ್ಲಿ ನಸುನಕ್ಕಿದ್ದು ಬಿರಿದ ಹೂವು

ಸಂತಾನದ ಮೊಟ್ಟೆ ಹೊತ್ತು ಸಾಗಿದ್ದ ಇರುವೆಗಳ ದಂಡಿಗೆ
ಮರದ ಬೇರಿನಡಿ ಆಶ್ರಯ; ಅಲ್ಲೊಂದು ಪಾಯವಿಲ್ಲದ ಮನೆ !
ಸುತ್ತ ದಿನಸಿ ಅಂಗಡಿಯ ಪುಟ್ಟ ಜಗತ್ತು

ಆಜೀವ : ಮೂರು

ಮಳೆ ಹನಿದ ರಾತ್ರಿ ಚುಕ್ಕಿಗಳ ಆಗಸದಂಗಳದಲ್ಲಿ ಕುರುಕ್ಷೇತ್ರ
ಮಹಾಭಾರತದ ಮಹಾ ಗದೆಗಳ ಸದ್ದಿಲ್ಲ ಬಾಣಗಳ ಪೈಪೋಟಿಯಿಲ್ಲ
ನೆಲಕ್ಕಪ್ಪಳಿಸದೆ ಧೂಮಕೇತು – ಕನಸಿಲ್ಲದ ಮನೆ ಬಾಗಿಲಿಗೆ;
ದುಃಸ್ವಪ್ನದಿಂದ ಎಚ್ಚರ, ಕಣ್ಣುಗಳಿಗೆ ವಾಸ್ತವದರಿವು
ಯಂತ್ರಮಾನವನ ಅಟ್ಟಹಾಸ – ಅಲ್ಲಿ.

ಬೆಟ್ಟ ಬುಡದ ಗುಡಿಸಲ ಗಿರಿಯಜ್ಜ ಚಿಂದಿ ಹೊದಿಕೆಯಲ್ಲಿ ಚೀರುತ್ತ
ನಟ್ಟನಡು ರಸ್ತೆಯಲ್ಲಿ ನಿಂತು ಬೆವರಿದ
ಶತಮಾನದ ಬದುಕ ಕಟ್ಟಿಕೊಂಡ ಮುತ್ತಜ್ಜನ ನೆಲೆಯೀಗ ಗಾಳಿಪಟ

ಹೊತ್ತು ಸಾಗಿದ ಲಾರಿಯ ಹಾದಿಯಲ್ಲಿ ಕಳಕೊಂಡ ಬದುಕ ಹುಡುಕಾಟ
ದೊರೆಸಾನಿಗಳ ಮುಂದೆ ಅವನೆಂದೂ ಕೈಚಾಚದ ಸ್ವಾಭಿಮಾನಿ.

ತಣ್ಣನೆಯ ಚಳಿಗೆ ಹೊದ್ದು ಮಲಗಿದೆ ಕ್ರಾಂತಿ
ಎಳ್ಳು ಬೆಲ್ಲದ ರುಚಿ ಮೆದ್ದು ಕವಿಗೋಷ್ಠಿಯಲ್ಲಿ ಸಂಭ್ರಮಿಸಿದೆ ಸಂಕ್ರಾಂತಿ

●

ಅಸ್ಸಾಮ್ ಬರಗೀತ್

– ಪ್ರೊ. ಬಿ.ವೈ. ಲಲಿತಾಂಬ

ಇತ್ತೀಚೆಗೆ ಬೆಂಗಳೂರು ಎಲೆಕ್ಟ್ರಾನಿಕ್ ನಗರ ಅನಿಸಿಕೊಂಡ ಮೇಲೆ ನಾವು ಭಾರತೀಯರ ವಿವಿಧ ಚೆಹರೆಗಳನ್ನ ನೋಡುವುದಕ್ಕೆ ಅವಕಾಶವಾಗಿದೆ. ನಗರದ ಬಸ್‌ಗಳಲ್ಲಿ ಮಣಿಪುರ, ಅಸ್ಸಾಂ ಮುಂತಾದ ರಾಜ್ಯಗಳಿಂದ ಬಂದು ಇಲ್ಲಿ ಕಾಲ್ ಸೆಂಟರ್‌ಗಳಲ್ಲಿ ಎಲೆಕ್ಟ್ರಾನಿಕ್ ಫರ್ಮ್‌ಗಳಲ್ಲಿ ಎಷ್ಟೋ ಹುಡುಗ–ಹುಡುಗಿಯರು ಕೆಲಸ ಮಾಡುತ್ತಿರುವವರನ್ನ ಕಾಣಬಹುದು. ಕೆಲವು ಕಡೆ ಸಾಂಸ್ಕೃತಿಕ ಚಟುವಟಿಕೆಗಳು ಇರುವಾಗ ಅವರ ನೃತ್ಯ ಕಾಣಸಿಗುತ್ತದೆ. ಪೂರ್ವೋತ್ತರ ಭಾರತ ಅಂತಲೇ ಗುರುತಿಸುವ ಆ ಭಾಗದ ಕೆಂಪು–ಕರಿ ಪಟ್ಟಿಯ ಶಾಲುಗಳು ಕೂಡ ನಮ್ಮನ್ನ ಆಕರ್ಷಿಸುತ್ತವೆ.

ಹಾಗಿದ್ದರೂ, ನೃತ್ಯವಲ್ಲದೆ ಅವರ ಸಾಂಸ್ಕೃತಿಕ ವೈಶಿಷ್ಟ್ಯಗಳು ಅನೇಕವಿವೆ. ಅವರ ಹಾಡು–ಸಂಗೀತದ ಧ್ವನಿಗಳು ನಮಗಿನ್ನೂ ಅಪರಿಚಿತವಾಗಿಯೇ ಉಳಿದಿವೆ.

ಅಸ್ಸಾಮ್ ನ ಶಾಸ್ತ್ರೀಯ ಸಂಗೀತ–ರಾಗ ವಿಧಾನಗಳಲ್ಲಿ 'ಬರಗೀತ' ಅನ್ನುವದೊಂದಿದೆ. ಅದನ್ನ ಜನಪದ ಸಂಗೀತ, ಭಕ್ತಿಗೀತೆಗಳು ಅಂತ ಕೂಡ ಗುರುತಿಸುತ್ತಾರೆ.

ಅಷ್ಟೇ ಅಲ್ಲದೆ ಅದನ್ನ ನಮ್ಮ ಹರಿಕತೆಗಳಿಗೂ ಹೋಲಿಸುವುದುಂಟು.

'ಬರಗೀತ್'ನ ವಿಶೇಷತೆ ಅಂದರೆ, ಈಗ ನಮ್ಮಲ್ಲಿ ಕೀರ್ತನೆಗಳಿಗೆ ಕೀರ್ತನಕಾರರ ಹೆಸರು ಇರುವ ಹಾಗೆ ಈ ಗೀತೆಗಳ ರಚನಾಕಾರರು ಒಬ್ಬರು ಅಂದರೆ ಆಚಾರ್ಯ ಶಂಕರ ದೇವರು, ಇನ್ನೊಬ್ಬರು, ಆತನ ಶಿಷ್ಯನಾದ ಮಾಧವ ದೇವ ಅವರು.

ಕನ್ನಡದಲ್ಲಿ ಕೀರ್ತನೆಗಳು ಹುಟ್ಟಿಕೊಂಡ ಸುಮಾರಿನಲ್ಲೇ ಅಸ್ಸಾಮ್ ನಲ್ಲಿ ಕೂಡ ಶಂಕರದೇವರ ಭಕ್ತಿ ಆಂದೋಳನ ಜಾಗ್ರತವಾದದ್ದು.

ದ್ವೈತ ಸಿದ್ಧಾಂತ ಹಾಗೂ ಸಮಾಜ ಸುಧಾರಣೆ ಎರಡೂ ನಮ್ಮ ಕರ್ನಾಟಕದಲ್ಲಿ ಒಟ್ಟೊಟ್ಟಿಗೆ ರೂಪುಗೊಂಡ ರೀತಿಯಲ್ಲೇ ಸಾಮಾಜಿಕ–ಧಾರ್ಮಿಕ ಎರಡೂ ದಿಕ್ಕಿನಲ್ಲಿ ಶಂಕರದೇವರದು ಅತಿ ದೊಡ್ಡ ಕೊಡುಗೆ ಆಗಿತ್ತು.

ಶಂಕರದೇವರು 15–16ನೇ ಶತಮಾನದ ಆ ಕಾಲದಲ್ಲಿ ಹಿಂದೂಗಳು ಮತ್ತೆ ಗಡಿನಾಡಿನ ಜನರ ನಡುವಣ ಜಾತಿ ಉಪಜಾತಿಗಳ ಆಧ್ಯಾತ್ಮಿಕ ಭಾವನೆಗಳನ್ನ ಒಟ್ಟುಗೂಡಿಸಿದ ಸಂತರು.

ಅವರು ಸಮಾಜ ಸುಧಾರಕರು, ಕವಿ, ಮಹಾನ್ ಪ್ರತಿಭಾಶಾಲಿಗಳಾಗಿದ್ದ ವ್ಯಕ್ತಿ.

ಕವಿಗೆ ಬೇಕಾಗಿರುವ ಗುಣ ಅಂದರೆ ಆತನಲ್ಲಿ ಔದಾರ್ಯ, ಮಾನವೀಯ ತತ್ವಗಳು.

ಬಸವೇಶ್ವರರು, ಪುರಂದರದಾಸರ ಹಾಗೆ, ನಮ್ಮೆಲ್ಲ ಮಹಾನ್ ಸಂತರ ರೀತಿಯಲ್ಲಿ ಶಂಕರದೇವರೂ ಮಾನವ ಕುಲವನ್ನ ಒಂದಾಗಿ ಕಂಡವರು. 'ಸ್ವ–ಪರ, ಮೇಲು–ಕೀಳು' ಅನ್ನುವುದು ಅವರ ರಕ್ತದಲ್ಲಿರಲಿಲ್ಲ.

ನಮ್ಮಲ್ಲಿ ವಚನಗಳು, ಕೀರ್ತನೆಗಳು ಸಿದ್ಧಾಂತ ವಿಚಾರವಂತಿಕೆಯ ಸಾಧನಗಳಾದಂತೆ ಶಂಕರ ದೇವರು ಕೂಡ ಸಂಗೀತದ ಮುಖಾಂತರ 'ನಾಮಘೋಷಾ', 'ಕೀರ್ತನ ಘೋಷಾ', ಹಾಗೂ 'ಬರಗೀತ್'ವನ್ನಾಧರಿಸಿ ಸಂದೇಶವನ್ನು ಸಾರಿದರು.

'ಬರಗೀತ್ ನೀಡಿದ್ದು ಮನುಷ್ಯರೆಲ್ಲರ ನಡುವೆ 'ಸಮತೆ'ಯ ಸಂದೇಶವನ್ನ.

ಡಾ॥ ಪ್ರಭಾಕರ ಮಾಚವೆ ಅವರು 'ಬರಗೀತ್'ಗಳನ್ನ ಕುರಿತಂತೆ; ಈ ಅಸ್ಸಾಮಿ ಗೀತೆಗಳಲ್ಲಿ ಅದ್ಭುತ ನಾದದ ಚಾಲನೆ ಇದೆ, ಸಂಗೀತದ ಲಯಾತ್ಮಕತೆ ಇದೆ, ವಿದ್ಯಾಪತಿ ಸೂರದಾಸ, ಮೀರಾಬಾಯಿಯ ಪದಗಳಲ್ಲಿರುವಂತೆ; ಚಂಡೀದಾಸ, ತುಕಾರಾಮರ ಭಕ್ತಿಗೀತೆಗಳಂತೆಯೇ ಬರಗೀತ್ ಗಳಲ್ಲೂ ಲಯಾತ್ಮಕತೆ ಇದೆ, ಗುಜರಾತಿ ಭಾಷೆಯ ನರಸೀ ಮೆಹ್ತಾ, ಪ್ರೇಮಚಂದ್ ರ ಗೀತೆಗಳಂತೆ ಭಾಗವತದ ಮೂಲ ಬುಗ್ಗೆ ಇಲ್ಲಿ ಬೇರೆ-ಬೇರೆ ರೂಪಗಳಲ್ಲಿ ಪ್ರವಹಿಸಿದೆ ಅನ್ನುತ್ತಾರೆ.

'ಬರಗೀತ್' – ಅದು ಅಸ್ಸಾಮಿ ಧ್ವನಿಯಲ್ಲಿ ಹುಟ್ಟಿಕೊಂಡಿರುವ ಪದ, 'ಬರ' 'ವರ್' – ಶ್ರೇಷ್ಠ ಎಂಬ ಅರ್ಥ ಇದಕ್ಕೆ ಬರುತ್ತೆ. ಉತ್ತರ ಭಾರತದಲ್ಲಿ ತುಳಸೀದಾಸರ 'ರಾಮಚರಿತ ಮಾನಸ' ಜನರ ಮನಸ್ಸಿನಲ್ಲಿ ನೆಲೆಗೊಂಡಿರುವ ಹಾಗೆ ಅಸ್ಸಾಮ್‌ನಲ್ಲಿ ಶಂಕರ ದೇವರು, ಅವರು ರಚಿಸಿದ 'ಬರಗೀತ್'ಗಳು ಮನೆ-ಮನೆಯಲ್ಲಿ ನೆಲೆಗೊಂಡಿವೆ.

ಬಾಪಚಂದ್ರ ಮಹಂತ ಅನ್ನುವ ವಿದ್ವಾಂಸರು ಈ 'ಬರಗೀತ್'ಗಳನ್ನ ಹಿಂದಿ ಭಾಷೆಗೆ ಪರಿಚಯಿಸಿಕೊಟ್ಟಿದ್ದಾರೆ. ಅವರು ಎಷ್ಟು ವಿಶಿಷ್ಟ ರೀತಿಯಲ್ಲಿ ಈ 'ಬರಗೀತ್'ಗಳನ್ನ ಸಂಪಾದಿಸಿ, ಗ್ರಂಥ ರಚಿಸಿಕೊಟ್ಟಿದ್ದಾರೆಂದರೆ, ನಮಗೆ ಅವರು ಅಸ್ಸಾಮ್ ನ ಇತಿಹಾಸವನ್ನು ತಿಳಿಸುತ್ತಾರೆ, ಅಲ್ಲಿನ ಜನರ ನಡವಳಿಕೆಗಳನ್ನ ಅರ್ಥ ಮಾಡಿಕೊಡುತ್ತಾರೆ:

ಇಂದು ಅಸ್ಸಾಮ್‌ಗೆ, ಪೂರ್ವೋತ್ತರ ಭಾರತದ ಐತಿಹಾಸಿಕವಾದ 'ಕಾಲಜಯೀ' ಅಂದರೆ ಕಾಲವನ್ನೂ ಮೀರಿ ಉಳಿದುಕೊಂಡಿರುವ ವ್ಯಕ್ತಿತ್ವ ಅಂದರೆ ಶಂಕರದೇವರು.

ಭಾರತದ ಒಂದು ಅತಿ ಮಹತ್ವದ ಅಂಗವಾಗಿದ್ದರೂ ಅಸ್ಸಾಮ್ ಇವತ್ತಿಗೂ ಸಾಕಷ್ಟು ಹಿಂದುಳಿದ ಪ್ರದೇಶ ಕೂಡ ಆಗಿದೆ.

ಸಮುದ್ರ ಗುಪ್ತನಿಗೆ ಮುಂಚೆ ಅಸ್ಸಾಮ್‌ನ ಇತಿಹಾಸ ನಮಗೆ ಗೊತ್ತಿಲ್ಲ. ಆದರೆ ಆತನ ಕಾಲದ ಶಿಲಾಶಾಸನಗಳು, ತಾಮ್ರ ಪಟ್ಟಿಗಳು ಇವುಗಳಲ್ಲಿ ಅಸ್ಸಾಮ್‌ನ ಉಲ್ಲೇಖ ಕಂಡುಬರುತ್ತೆ.

ಅಂದರೆ ಆರ್ಯ ಸಂಸ್ಕೃತಿಯ ಪ್ರಭಾವ ಅಸ್ಸಾಮ್ ಮೇಲೆ ಆ ನಂತರದಲ್ಲಿ ಬಿದ್ದಿರಬೇಕು ಅಂತ ಊಹೆ.

ಹಾಗಾದರೆ ಅಸ್ಸಾಮ್‌ನ ಮೂಲ ನಿವಾಸಿಗಳು ಯಾರಿದ್ದಿರಬೇಕು, ಅವರ ಸಂಸ್ಕೃತಿ ಯಾವುದಾಗಿರಬಹುದು ಅಂದರೆ, ಭಾರತದ ಮಿಕ್ಕೆಲ್ಲ ಗುಡ್ಡಗಾಡು, ಘಟ್ಟ ಪ್ರದೇಶಗಳಲ್ಲಿಯಂತೆ ಇಲ್ಲಿಯೂ ಕಿರಾತ ಸಂಸ್ಕೃತಿಯ ಅಸ್ತಿತ್ವ ಎದ್ದು ಕಾಣುತ್ತೆ.

ಬೌದ್ಧರ ಪ್ರಭಾವ ಆ ಕಾಲದಲ್ಲಿ ಹೆಚ್ಚು ಆಗಿದ್ದಿಲ್ಲ ಅಂತ ಊಹೆ. ಹಾಗಾದರೆ ಅಸ್ಸಾಮ್ ನ ಮೂಲ ನಿವಾಸಿಗಳು ಯಾರಿದ್ದಿರಬೇಕು, ಅವರ ಸಂಸ್ಕೃತಿ ಯಾವುದಾಗಿರಬಹುದು ಅಂದರೆ, ಭಾರತದ ಮಿಕ್ಕೆಲ್ಲಾ ಗುಡ್ಡಗಾಡು, ಘಟ್ಟ ಪ್ರದೇಶಗಳಲ್ಲಿಯಂತೆ ಇಲ್ಲಿಯೂ ಕಿರಾತ ಸಂಸ್ಕೃತಿಯ ಅಸ್ತಿತ್ವ ಎದ್ದು ಕಾಣುತ್ತೆ.

ಬೌದ್ಧರ ಪ್ರಭಾವ ಆ ಕಾಲದಲ್ಲಿ ಹೆಚ್ಚು ಆಗಿದ್ದಿಲ್ಲ ಅಂತ ಊಹೆ, ಶಾಕ್ತರ ಪ್ರಭಾವ, ತಂತ್ರಶಾಸ್ತ್ರದ ಪ್ರಭಾವ ಕಂದಾಚಾರಗಳು ಹೆಚ್ಚಾಗಿದ್ದು, ನಂತರದಲ್ಲಿ ಗೋರಖನಾಥನಿಂದಾಗಿ ಕಂದಾಚಾರಗಳು ಕಡಿಮೆಯಾಗಿರಬೇಕು.

10-11ನೇ ಶತಮಾನದಲ್ಲಿ ಬಹುಶಃ ರಚಿಸಿರುವ 'ಕಾಳಿಕಾಪುರಾಣ' ಅಂತ ಒಂದು ಗ್ರಂಥ ದೊರಕಿದೆ. ಅದು ಸಂಸ್ಕೃತದಲ್ಲಿ ರಚಿತವಾಗಿದೆ. ಶಾಸನಗಳಲ್ಲೂ ಸಂಸ್ಕೃತ ಭಾಷೆಯೇ ಸಿಗುತ್ತದೆ.

'ಕಾಳಿಕಾ ಪುರಾಣ' ಅಂದರೆ ಶಕ್ತಿ ಪೂಜೆಯ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ ಒಂದು ವಿಷಯ, ಶಕ್ತಿ ಪೂಜೆಯ ವರ್ಣನೆ ಇದ್ದರೂ ಅದರಲ್ಲಿ ಕಾವ್ಯದ ಆರಂಭದಲ್ಲಿ ವಿಷ್ಣು ವಂದನೆ ಇದೆ. ಕೊನೆಯಲ್ಲಂತೂ ವಿಷ್ಣುವಿನ ಅವತಾರವಾದ ಪರಶುರಾಮನ ಬರುವಿಕೆ ಅದರಿಂದ ಕಾಮರೂಪದ ಜನರು ವಸಿಷ್ಠ ಮುನಿಯ ಶಾಪದಿಂದ ಮುಕ್ತರಾಗಿ ಶುದ್ಧಾಚಾರಿಗಳಾಗುತ್ತಾರೆ ಎಂಬ ವರ್ಣನೆ ಬರುತ್ತಾದ್ದರಿಂದ ಕಂದಾಚಾರದಳ ವಿರೋಧ ಸಮಾಜದಲ್ಲಿ ಆರಂಭವಾಗಿತ್ತು ಅಂತ ತಿಳಿದು ಬರುತ್ತೆ.

ಅಸ್ಸಾಮ್ ನಲ್ಲಿ ಮಾಧವ ಕಂದಲಿ ಬರೆದ ರಾಮಾಯಣ ಸಿಗುತ್ತೆ.

ತಂತ್ರಶಾಸ್ತ್ರದ ಪ್ರಭಾವ ಇರುವುದರಿಂದ ಶಿವನ ಪೂಜಕರು ಅಲ್ಲಿ ಜನ. ಅಸ್ಸಾಮ್ ನಲ್ಲಿರುವ ಕಿರಾತ ಜಾತಿಯ ಜನ ಶಿವನನ್ನ ಕುರಿತು ಹೇಳುವ ಕತೆಗಳಲ್ಲಿ ಶಿವ ಭಂಗಿ ಕುಡಿಯುವ ಯೋಗಿ (ಮಧ್ಯ ಪ್ರದೇಶದ ಕಾಳಭೈರವನ ಅನೇಕ ಮಂದಿರಗಳಲ್ಲಿ ಇವತ್ತಿಗೂ ಶಿವಲಿಂಗಕ್ಕೆ ಹೆಂಡದ ಅಭಿಷೇಕ ಮಾಡುವ ಪದ್ಧತಿ ಇದೆ). ಈ ತೆರನಾದ ಜೀವನದಿಂದ ಬೇಸತ್ತ ಶಿವ ಭೂಮಿ ಉಳತೊಡಗುತ್ತಾನೆ, ಪಾರ್ವತಿ ಶಿವನ ಬೇಸಾಯ ನೋಡಿ ಚಕಿತಳಾಗ್ತಾಳೆ. ಶಿವ ಭತ್ತದ ಬೀಜ ಕುಬೇರನಿಂದ ಪಡೆದುಕೊಂಡು ಬಂದಿದ್ದು, ಬಲರಾಮನಿಂದ ನೇಗಿಲನ್ನ ತಂದಿದ್ದ ಅಂತ. ಅಂದರೆ ಆರ್ಯರಿಂದ ಅಸ್ಸಾಮೀಯರು ವ್ಯವಸಾಯವನ್ನು ಕಲಿತರೆಂಬ ಸಂಕೇತ ಸಿಗುತ್ತದೆ.

ಮುಂದೆ ವ್ಯವಸಾಯದಲ್ಲಿ ನಿರತರಾದ್ದರಿಂದ ಜನರ ಸಂಚಾರ ಕಡಿಮೆಯಾಗಿ ಸಂಪರ್ಕ ಕಡಿಯಿತು. ಪುಟ್ಟ ಪುಟ್ಟ ಭಾಷಾ ಕ್ಷೇತ್ರಗಳು ನಿರ್ಮಿತವಾಗಿ, ಅಲ್ಲಲ್ಲೇ ಚಿಕ್ಕ-ಪುಟ್ಟ ರಾಜ್ಯಗಳು ನಿರ್ಮಿತವಾದವು. ನಂತರದಲ್ಲಿ ಭೂಸ್ವಾಮಿಗಳು (ಜಮೀಂದಾರರುಗಳು) 'ಭೂಷಾ'ಗಳಾದರು, ಅವರೇ ಸಾಮಂತ ಶಾಸಕರಾದರು.

ಅಂತಹ ಸಾಮಂತ ಶಾಸಕರಲ್ಲಿ ಚಂಡೀವರ ವಂಶದವರಲ್ಲಿ ಶಿರೋಮಣಿ ಭೂಷಾಗಳು ಹುಟ್ಟಿಕೊಂಡರು. ಶಂಕರದೇವ ಕೂಡ ಚಂಡೀವರ ವಂಶದಲ್ಲಿ ಹುಟ್ಟಿದ ಶಿರೋಮಣಿ ಭೂಷಾ ಆಗಿದ್ದವರು.

ಅಸ್ಸಾಮ್‌ನಲ್ಲಿ ಆ ಕಾಲದಲ್ಲಿ ಮಾಧವ ಕಂದಲಿ ಎಂಬೊಬ್ಬ ಅಸ್ಸಾಮಿ ರಾಮಾಯಣವನ್ನ ರಚಿಸಿದ್ದರು. ಅವರಿಗೆ ಆಶ್ರಯ ನೀಡಿದ್ದವರು ವರಾಹಿರಾಜ ಮಹಾಮಾಣಿಕ್ಯ ಎಂಬುವರು. ವರಾಹಿ ರಾಜ್ಯ ಆಗ ಅಸ್ಸಾಮ್ ನಲ್ಲಿತ್ತು. ವರಾಹಿ ರಾಜ ಕಿರಾತ ವಂಶಜರೇ ಆಗಿದ್ದರು. ಮಾಧವ ಕಂದಲಿ ಬ್ರಾಹ್ಮಣ ವಂಶಜರಾಗಿದ್ದವರು. ಕಿರಾತ ವಂಶದ ರಾಜರು ಹಾಗೂ ಬ್ರಾಹ್ಮಣರ ನಡುವಿನ ಸಂಬಂಧ ಹಾಗೂ ರಾಮಾಯಣ - ಮಹಾಭಾರತ ಜನರಿಗೆ ಪ್ರಿಯವಾಗಿದ್ದುದರಿಂದ ಅಸ್ಸಾಮ್ ನಲ್ಲಿ ನವಚೈತನ್ಯ ಹುಟ್ಟಿಕೊಂಡಿತು. ಅದರ ಪ್ರತಿರೂಪವಾಗಿಯೇ

ಶಂಕರದೇವರ ಮುಂದಾಳತ್ವ ಮೂಡಿದ್ದು, ಶಂಕರದೇವರ ವೈಶಿಷ್ಟ್ಯ ಎಂದರೆ ಅವರು ರಾಜಕೀಯವನ್ನು ತಾನಾಗಿ ತೊರೆದು ಸಾಂಸ್ಕೃತಿ, ಜಾಗೃತಿಯ ಹೊಣೆ ಹೊತ್ತರು.

ಶಂಕರ ದೇವರು ಭಾಗವತ ಪುರಾಣವನ್ನ ಓದಿ ಅದನ್ನ ನಂಬಿದ್ದವರು, ಆದುದರಿಂದ ಧರ್ಮ ಮಾರ್ಗದಿಂದ ಸಮಾಜದಲ್ಲಿ 'ಸಮತೆ'ಯನ್ನ ತರಲು ಹೆಣಗಿದರು.

ಶಂಕರದೇವರ ಅವರ ಧರ್ಮ 'ಮಹಾಪುರುಷೀಯ ಧರ್ಮ' 'ಏಕಶರಣ ಭಗವತೀ ಧರ್ಮ' ಎಂದು ಹೆಸರು ಪಡೆದಿದೆ. ದೇವಕೀನಂದನ ಕೃಷ್ಣ ಅವರಿಗೆ ದೇವರು ಹಾಗೂ ಗುರು, ಆ ಮೂಲಕ ಸಾಮಾಜಿಕ ಭೇದ-ಭಾವನೆಗಳನ್ನು ದೂರ ಮಾಡಲು ಅವರು ಹೆಣಗಿದರು.

ಕೆಲವು ಬರಗೀತೆಗಳು ಈ ಕೆಳಗಿನಂತಿವೆ;

ಜಯ ಜಯ ಯಾದವ ಜಲನಿಧಿ ಜಾಧವ ಧಾತಾ

ಶೃತಮಾತ್ರಾಖಿಲತ್ರಾತಾ ಸ್ಮರಣೇ ಕರದಿ ಸಿದ್ಧಿ

ದೀನದಯಾನಿಧಿ ಭಕ್ತ-ಮುಕುತಿ ಪದದಾತಾ॥

ಪದ - ಜಗಜನಜೀವನ ಅಜನ ಜನಾರ್ಧನ

ದನುಜದಮನ ದುಃಖಹಾರೀ ।

ಮಹದಾನಂದ ಕಂದ ಪರಮಾನಂದ

ನಂದನಂದನ ವನಚಾರೀ

ವಿವಿಧ ವಿಹಾರ ವಿಶಾರದ ಶಾರದ

ಇಂದುನಿಂದಿ ಪರಕಾಶೀ ।

ಶೇಷಶಯನಶಿವ ಕೇಶೀವನಾಶನ

ಪೀಲವಸನ ಅವಿನಾಶೀ

ಜಗತ್ ವಿಧು ಮಾಧವಮಧುರಿಪ

ಮಧುರ್ ಮಾರುತಿ ಮುರನಾಶೀ

ಕೇಶವ ಚರಣಸರೋರುಹ ಕಿಂಕರ

ಶಂಕರ ಏಹು ಅಭಿಲಾಷೀ ॥

ರೇ ಮನ್ ಸೇವಹು ಹರಿತಹು ಚರಣಾ

ನಿಕಟ ದೇಖಹು ನಿಜ ಮರಣಾ ।

ದೇಖತ ಹರಿತಹು ಚರಣ ಶರಣ ಬಿನೆ

ನಾಹಿ ನಾಹಿ ಭವ ಭಯ ತರಣಾ ।

ಪದ : ಚಾರಿ ವೇದ ಪುರಾಣ ಯತ ಭಾತರ

ಗೀತಾ ಭಾಗವತ ಚಾಯಿ।

ಬಹಿ ಸಾರ ವಿಚಾರ ಕಯ ಭೂಷತ

ಹರಿ ಬಿನೇ ತಾರಕ ನಾಯಿ ।

ಸನಕ ಸನಾತನ ಮುನಿ ಶುಕ ನಾರದ

ಚತುರ ನಯನ ಶೂಲಪಾಣಿ ।

ಸಹಸುವಯನ ಆದಿ ಗಾವತ ಹರಿದು--

ಸಕಲನಿಗಮ ತತ್ವಜ್ಞಾನಿ

ಇವು ಅಸ್ಸಾಮಿ ಕೀರ್ತನೆಗಳ ಎರಡು ಉದಾಹರಣೆಗಳು ಮಾತ್ರ, ಕರ್ನಾಟಕದ ಕೀರ್ತನೆಗಳೊಂದಿಗೆ ಹೋಲಿಸಿದಾಗ ದಕ್ಷಿಣ ಭಾರತ-ಪೂರ್ವೋತ್ತರ ಭಾರತದ ನಡುವಿನ ಈ ಸಾಂಸ್ಕೃತಿಕ ಸಂಬಂಧಗಳ ಅರಿವಾಗಿ ರಾಷ್ಟ್ರೀಯ ಭಾವೈಕ್ಯತೆಯಡಿಯಲ್ಲಿ ಅವು ಎಷ್ಟು ಸುರಕ್ಷಿತವಾಗಿದೆ ಎಂಬುದೂ ಅರಿವಾಗುತ್ತದೆ.

ಸಾಮಾಜಿಕ ಸಮತೆಯ ಹರಿಕಾರರಾದ ಈ ಸಂತರು ದೇಶದ ಅಡಿಗಲ್ಲನ್ನು ಎಷ್ಟು ಭದ್ರಗೊಳಿಸಿದ್ದಾರೆಂದು ತಿಳಿದಾಗ ಮನಸ್ಸು ಇವರೆಲ್ಲರಿಗೂ ನಮನ ಸಲ್ಲಿಸುತ್ತದೆ.

ದಿ॥ 10/5/11

"ಒಂದು ಜನಪದಕ್ಕೆ ಭೌಗೋಳಿಕ ಎಲ್ಲೆ ಅಥವಾ ಮತ್ತಿತರ ಚಾರಿತ್ರಿಕ ಪುರಾವೆಗಳು ಮುಖ್ಯವಲ್ಲ. ಅದೊಂದು ಭಾವಿಸಿದ ಜನಪದ. ಅದಕ್ಕೊಂದು ವಿವರಿಸಲಾಗದ ಗುರುತಿಸಲಾಗದ ಗಡಿರೇಖೆಗಳಿರುತ್ತವೆ ಎಂಬುದೇ ಆಗಿದೆ. ಅದೇ ಅರ್ಥದಲ್ಲಿ ಭಾಷೆಯೆಂದರೆ ಅದರ ವ್ಯಾಕರಣ, ಅದರ ಸಂಧಿ ಸಮಾಸಗಳಲ್ಲ. ಅದರ ಲಿಪಿ, ವಾಕ್ಯ ರಚನಾ ವಿನ್ಯಾಸಗಳಲ್ಲಿ ಆ ಭಾಷೆಗಳನ್ನಾಡುವ ಜನರ ಬದುಕು, ಅವರ ನಡೆ ನುಡಿ, ಅವರ ಅಂತಿಮ ಯಶಸ್ಸು"

– ಅಗ್ರಹಾರ ಕೃಷ್ಣಮೂರ್ತಿ

('ಕನಿಮೊಳಿ' ಅಂಕಣ, ಮಯೂರ – ನವೆಂಬರ್ 2011)

ಸಾಹಿತ್ಯ ಮತ್ತು ಚರಿತ್ರೆಯ ನಂಟುಗಳು: ಇಂದಿನ ಸಾಹಿತ್ಯ

– ಆರ್. ಚಲಪತಿ

ಸಾಹಿತ್ಯಕ್ಕೆ ಚರಿತ್ರೆಯ ನಂಟಿರುವುದು, ಚರಿತ್ರೆಗೆ ಸಾಹಿತ್ಯದ ನಂಟಿರುವುದು ನಾವು ನಮ್ಮ ಕಲಿಕೆಯಲ್ಲಿ ಈವರೆಗೆ ಗಮನಿಸಿರುವ ಸಂಗತಿಗಳೇ ಆಗಿವೆ. ಇದನ್ನು ಒಂದು ಇನ್ನೊಂದರ ದಾರಿಯೆನ್ನುವಂತೆಯೇ ಗಮನಿಸಿಕೊಂಡಿದ್ದೇವೆ ಅನಿಸುತ್ತದೆ. ಇದು ಚರಿತ್ರೆಯನ್ನು ಕಟ್ಟುವ ಇಲ್ಲವೇ ಸಾಹಿತ್ಯವನ್ನು ಚಾರಿತ್ರಿಕವಾಗಿ ನೋಡುವ ದಾರಿಗಳಿಗೆ ಕಸುವು ಒದಗಿಸುವ ನೆಲೆಯಲ್ಲಿ ನೋಡಬಯಸಿದ್ದೇವೆ. ಹೀಗೆ ಮಾಡುವಾಗ ಸಹ ಚರಿತ್ರೆ ಮತ್ತು ಸಾಹಿತ್ಯ ಚರಿತ್ರೆಯ ಕಟ್ಟುಗಳಲ್ಲಿ ನಿಕರವಾದ ನಿಲುವುಗಳು ಇವೆಯೆಂದು ನಂಬುವಲ್ಲಿ ಅನುಮಾನಗಳು ನಿರಂತರವಾಗಿ ಬೆನ್ನು ಹತ್ತಿದ ಸಂಗತಿಗಳೇ ಆಗಿ ಉಳಿದಿವೆ. ಹಾಗಾಗಿಯೇ ಅವವೇ ಮಾಹಿತಿಗಳನ್ನು ಬಳಸಿಕೊಂಡು ಚರಿತ್ರೆಯನ್ನು ಹೇಳುವ ಓರಣಗಳು ಒಂದೇ ಬಗೆಯವಾಗಿಲ್ಲ. ಆಗಲು ಬರುವುದೂ ಇಲ್ಲ ಎನ್ನುವುದು ಈಗೀಗ ನಮಗೆ ಮನವರಿಕೆಯಾಗುತ್ತಿದೆ. ಸಾಹಿತ್ಯ ಸಹ ಚಾರಿತ್ರಿಕವಾದ ಅವಶ್ಯೇ ಸಂಗತಿಗಳು ನಿಜ ಎನ್ನುವುದನ್ನು ರಚನೆಯ ಕಟ್ಟುಗಳಲ್ಲಿಯೇ ಮೀರಿರುವುದಕ್ಕೆ ಹಳೆಯ ಕಾಲದ ಸಾಹಿತ್ಯದ ಮೊದಲಿಂದ ಹೊಸಕಾಲದ ಸಾಹಿತ್ಯದವರೆಗೆ ಬೇಕಾದಷ್ಟು ಎತ್ತುಗೆಗಳು ಸಿಗುತ್ತವೆ.

ಇಂತಹ ಯಾವುದೂ ನಿಕರವಲ್ಲದ ಈ ಕುರಿತ ತಿಳುವಳಿಕೆಗಳನ್ನಿರಿಸಿಕೊಂಡು ನೂರಕ್ಕೂ ಹೆಚ್ಚು ವರುಶಗಳ ಕಾಲ ನಾಡು ನುಡಿಗಳನ್ನು ಗ್ರಹಿಸುತ್ತಾ ಬಂದಿರುವ ಬಗೆಯಲ್ಲಿ ಅನೇಕ ಒಡಕುಗಳು ಕಾಣುತ್ತವೆ. ಒಂದು ನುಡಿಸಮುದಾಯದ ಎಲ್ಲ ಜನಾಂಗಗಳು ಅದರೊಳಗೆ ಕಾಣುವುದಿಲ್ಲ, ಅವರ ಬದುಕಿನ ಗುರುತುಗಳು ಇಲ್ಲ ಅನ್ನುವುದೇ ಅಂತಹ ಒಂದು ದೊಡ್ಡ ಒಡಕು. ಇದು ಇಂದು ಕಲಿಕೆಗೆ ಎದುರಾಗುತ್ತಿರುವವರಿಗೆ ನಿಚ್ಚಳವಾಗಿ ಕಾಣುತ್ತಿದೆ. ಆದ್ದರಿಂದಾಗಿಯೇ ಅನೇಕ ಜಾತಿ–ಕುಲ–ಜನಾಂಗೀಯ ಗುಂಪುಗಳಿಗೆ ತಮ್ಮದಲ್ಲದ್ದನ್ನು ತಮ್ಮದೆಂದು ತಿಳಿಯುವ ಕಗ್ಗಂಟಿನಲ್ಲಿ ಸಿಕ್ಕು ತಮ್ಮನ್ನು ನಿರೂಪಿಸಿಕೊಳ್ಳುವುದೇ ಬಹುದೊಡ್ಡ ತೊಡಕಾಗಿದೆ. ಆದ್ದರಿಂದಾಗಿ ಸಾಹಿತ್ಯ ಮತ್ತು ಚರಿತ್ರೆಯ ನಂಟು ಸಾಹಿತ್ಯವನ್ನು ಗ್ರಹಿಸುವ ಬಗೆಯಲ್ಲಿ, ಚರಿತ್ರೆಯನ್ನು ಗ್ರಹಿಸುವ ಬಗೆಯಲ್ಲಿ ಹೇಗೆ ಉಪಯುಕ್ತವಾಗಿ ಒದಗಿಬಂದಿದೆ ಎನ್ನುವುದನ್ನು ನಾವು ಇದುವರೆಗೆ ಸರಿಯಾಗಿ ಕಂಡುಕೊಂಡಿಲ್ಲ ಅಂತಲೇ ಅನಿಸುತ್ತದೆ. ಈ ನಿಟ್ಟಿನಲ್ಲಿ ಚರಿತ್ರೆ ಮತ್ತು ಸಾಹಿತ್ಯದ ಎರಡು ಸನ್ನಿವೇಶಗಳು ನಮ್ಮೆದುರು ನಿಲ್ಲುತ್ತವೆ. ಒಂದು; ಚಾರಿತ್ರಿಕವಾದ ಸಾಮಾಜಿಕ ಬದುಕನ್ನು ಸಾಹಿತ್ಯ ಎದುರಾಗಿರುವ ಬಗೆ, ಎರಡು; ಚರಿತ್ರೆಯಾಗಿರುವ ಸಾಹಿತ್ಯವನ್ನು ನಮ್ಮ ಕಾಲದ ಸಾಹಿತ್ಯ ಒಳಗೊಳ್ಳುವ ಬಗೆ.

ಒಂದು; ಚಾರಿತ್ರಿಕವಾದ ಸಾಮಾಜಿಕ ಬದುಕನ್ನು ಸಾಹಿತ್ಯ ಎದುರಾಗಿರುವ ಬಗೆ,

ಕನ್ನಡದಲ್ಲಿ ಕವಿರಾಜ ಮಾರ್ಗದಿಂದ ಮೊದಲುಗೊಂಡು ವಿಕ್ರಮಾರ್ಜುನ ವಿಜಯ, ಸಾಹಸಬೀಮ ವಿಜಯಗಳನ್ನು ಒಳಗೊಂಡಂತೆ ಹಳೆಯಕಾಲದಲ್ಲಿಯೂ, ಹರಿಹರನ ರಗಳೆಗಳಿಂದ ಮೊದಲಾಗಿ ಪ್ರಭುಲಿಂಗಲೀಲೆ, ಶೂನ್ಯಸಂಪಾದನೆಗಳು, ವಿರಕ್ತರನ್ನು ಕುರಿತ ಕಾವ್ಯಗಳು, ಒಡೆಯರ ಬಗೆಗಿನ ಬರವಣಿಗೆಗಳು, ರಾಜಾವಳಿ ಕಥಾಸಾರ, ಭೈರವೇಶ್ವರ ಕಥಾ ರತ್ನಾಕರ ಸೂತ್ರ, ಮೊದಲಾಗಿ ನೂರಾರು ಬರವಣಿಗೆಯ ರೂಪಗಳು ನಡುಗಾಲದಲ್ಲಿಯೂ ಚರಿತ್ರೆಯನ್ನು ಸಾಹಿತ್ಯ ಬರವಣಿಗೆಯೊಳಕ್ಕೆ ತೆಗೆದುಕೊಂಡದ್ದನ್ನು ನೋಡಬಹುದಾಗಿದೆ. ಹೀಗೆ ಸಾಹಿತ್ಯ ಬರವಣಿಗೆಗೆ ಚರಿತ್ರೆ ಊರಣವಾಗಿ ಒದಗಿ ಬಂದಿರುವ ಬಗೆಯನ್ನು ನಾವು ಒಂದೇ ನಿಟ್ಟಿನಲ್ಲಿಯೂ ಗ್ರಹಿಸಬೇಕಾಗಿಲ್ಲ. ಇದರಲ್ಲಿ ಹಲವು ಬಗೆಯ ದಾರಿಗಳನ್ನು ಕನ್ನಡ ಕವಿಗಳು ಹಿಡಿದಿದ್ದಾರೆ. ಅವನ್ನು ಹೀಗೆ ಗುರುತು ಮಾಡಿಕೊಳ್ಳಬಹುದು;

- ❑ ಕಾವ್ಯ ಸಂಗತಿಗಳೊಳಗೆ ಚರಿತ್ರೆಯನ್ನು ಕಟ್ಟುವ ಬಗೆ-ಕವಿರಾಜ ಮಾರ್ಗ
- ❑ ಪುರಾಣ ಕತೆಯೊಂದಿಗೆ ಚರಿತ್ರೆಯ ಸಂಗತಿಯನ್ನು ಒಳಗುಮಾಡಿ ನೋಡುವ ಬಗೆ-ವಿಕ್ರಮಾರ್ಜುನ ವಿಜಯ, ಸಾಹಸಬೀಮ ವಿಜಯ ಇತ್ಯಾದಿ
- ❑ ಚರಿತ್ರೆಯ ಸಂಗತಿಗಳನ್ನು ಪುರಾಣವಾಗಿಸುವ ಬಗೆ-ಮಹಾದೇವಿಯಕ್ಕನ ರಗಳೆ, ಬಸವರಾಜದೇವರ ರಗಳೆ, ಪ್ರಭುಲಿಂಗಲೀಲೆ ಇತ್ಯಾದಿ
- ❑ ಪುರಾಣ ಸಂಗತಿಗಳೊಳಗೆ ನಿರ್ದಿಷ್ಟವಾದ ಕಾಲ ಮತ್ತು ಅವಕಾಶ(ದೇಶ)ವನ್ನು ಕಾಣುವ ಬಗೆ-ಆದಿಪುರಾಣ, ಕರ್ಣಾಟ ಭಾರತ ಕಥಾಮಂಜರಿ, ಯಶೋಧರ ಚರಿತೆ, ಭರತೇಶ ವೈಭವ ಇತ್ಯಾದಿ
- ❑ ಚರಿತ್ರೆಯ ಸನ್ನಿವೇಶವನ್ನು ಊರಣ ಮಾಡಿಕೊಂಡ ಹೊಸಕಾಲದ ಸಾಹಿತ್ಯಬರವಣಿಗೆಯ ಮಾದರಿಗಳ ಬಗೆ-ಕವಿತೆ, ಕಾದಂಬರಿ, ನಾಟಕ, ಕತೆ ಇತ್ಯಾದಿ

ಇದಲ್ಲದೆಯೂ ಒಟ್ಟು ಸಾಮಾಜಿಕ ಬದುಕಿನ ಬೇರೆ ಬೇರೆ ನೆಲೆಗಳಲ್ಲಿ-ಜಾತಿ, ಕುಲ, ಧರ್ಮದ ನೆಲೆಗಳಲ್ಲಿ, ಪ್ರಜಾಬಲದ ಸನ್ನಿವೇಶಕ್ಕೆ ಬೇಕಾದ ಸಾಮಾಜಿಕ ತಿಳುವಳಿಕೆಯ ಸಾಂಸ್ಕೃತಿಕ ನಾಯಕತ್ವದ ಗುರುತುಗಳನ್ನು ಕಾಣುವ ನೆಲೆಗಳಲ್ಲಿ-ಕಲಬುರ್ಗಿಯವರ ಮಾರ್ಗ ಬರವಣಿಗೆಗಳು, ಬಂಜಗೆರೆಯವರ ಆನುದೇವ ಹೊರಗಣವನು, ಚಿದಾನಂದಮೂರ್ತಿಯವರ ಸಾಂಸ್ಕೃತಿಕ ಅಧ್ಯಯನಗಳಂತಹ ಬರವಣಿಗೆಗಳನ್ನು ಈ ನಿಟ್ಟಿನಲ್ಲಿ ನೋಡಬಹುದು. ಬ್ರಹ್ಮಶಿವನ ಸಮಯ ಪರೀಕ್ಷೆ ಮತ್ತು ವಚನಗಳಿಂದಲೇ ಈ ಕೆಲಸ ಮೊದಲಾಗಿರಬೇಕು ಅನಿಸುತ್ತದೆ. ಚರಿತ್ರೆಯ ಸಂಗತಿಗಳನ್ನು ಹೊಸಕಾಲದ ಬದುಕಿನ ಪರಂಪರೆಯಾಗಿ ಕಟ್ಟುವ ಬಗೆಗಳಲ್ಲಿಯೂ ನಾವು ಇವುಗಳ ನಂಟಿನ ಸಂಗತಿಗಳನ್ನು ನೋಡಬಹುದಾಗಿದೆ. ಕನ್ನಡ ಸಾಹಿತ್ಯ ಚರಿತ್ರೆ, ಕರ್ನಾಟಕ ಸಂಸ್ಕೃತಿ ಅಧ್ಯಯನ, ಕರ್ನಾಟಕ ಪರಂಪರೆ ಇತ್ಯಾದಿ ಬರವಣಿಗೆಗಳು, ಮುಂತಾದ ಗುರುತುಗಳಲ್ಲಿ ಇದನ್ನು ಕಾಣಲು ಬರುತ್ತದೆ. ಈ ನಂಟಿನ ಇನ್ನೊಂದು ಪರಂಪರೆಯನ್ನು ಬಾಯ್ದೆರೆಯ(ಓರಲ್) ಸಾಹಿತ್ಯದ ಓದುಗಳೂ ಆಗುಮಾಡುತ್ತಿವೆ.

ಹೊಸಕಾಲದ ಸನ್ನಿವೇಶ

ಹೊಸಕಾಲದ ಬರವಣಿಗೆಯ ಸನ್ನಿವೇಶದಲ್ಲಿ ಚಾರಿತ್ರಿಕವಾದ ಸಾಮಾಜಿಕ ಬದುಕನ್ನು ಸಾಹಿತ್ಯ ಎದುರಾಗಿರುವ ಬಗೆಯನ್ನು, ಈಗಾಗಲೇ ಗುರುತಿಸಿಕೊಂಡಿರುವಂತೆ ಸಾಹಿತ್ಯಬರವಣಿಗೆಯ ಮಾದರಿಗಳನ್ನಿರಿಸಿಕೊಂಡು–ಕವಿತೆ, ಕಾದಂಬರಿ, ನಾಟಕ, ಕತೆ–ಗಮನಿಸಿಕೊಳ್ಳಬಹುದು.

ಕವಿತೆಗಳು: ಹೊಸಕಾಲದ ಕವಿತೆಯ ಬರವಣಿಗೆಯಲ್ಲಿ ಚಾರಿತ್ರಿಕ ಸಂಗತಿಗಳು ಬಂದಿರುವುದಕ್ಕೆ ಎತ್ತುಗೆಗಳನ್ನು ಪಂಪ, ಕುಮಾರವ್ಯಾಸ, ಬಸವಣ್ಣ, ಕುವೆಂಪು, ಬೇಂದ್ರೆ, ಅಡಿಗ, ಟಿಪ್ಪುಸುಲ್ತಾನ್, ನಾಲ್ವಡಿ ಕೃಷ್ಣರಾಜ ಒಡೆಯರ್, ಕನಕ, ಪುರಂದರ, ಗಾಂಧೀಜಿ, ಕೀರಂ ಮೊದಲಾಗಿ ವ್ಯಕ್ತಿಗಳನ್ನು ಕುರಿತ ಕವಿತೆಗಳು, ಅವರ ಕಾವ್ಯಸಂಗತಿಗಳನ್ನು ಕುರಿತ ಕವಿತೆಗಳು, ನಾಡುನುಡಿಯ ಕುರಿತಾಗಿ ಚರಿತ್ರೆಯ ನೆನಪುಗಳನ್ನು ಕಟ್ಟುವ ಕವಿತೆಗಳು, ಚಾರಿತ್ರಿಕ ಸನ್ನಿವೇಶಗಳ ಬಗೆಗಿನ ಕವಿತೆಗಳು ಮೊದಲಾಗಿ ಒಂದು ದೊಡ್ಡ ಕಾವ್ಯ ಸಂಪುಟವನ್ನೇ ಆಗುಮಾಡಿ ನೋಡಬಹುದು.

ಕತೆಗಳು: ಕತೆಗಳ ಬರವಣಿಗೆಯ ಸನ್ನಿವೇಶದಲ್ಲಿಯೂ ಸಹ ಮಾಸ್ತಿಯವರಿಂದಲೇ ಇದನ್ನು ಗುರುತು ಮಾಡಿಕೊಳ್ಳಬಹುದಾಗಿದೆ. ಇವತ್ತಿನ ಸನ್ನಿವೇಶದಲ್ಲಿ ಬರೆಯುತ್ತಿರುವ ಗಣೇಶಯ್ಯನವರೆಗೆ ಇದರ ಹರಹೂ ಸಹ ಇದೆ. ಕನ್ನಡದಲ್ಲಿ ಇಂತಹ ಕತೆಗಳ ಚಹರೆಯನ್ನು ಗುರುತಿಸಬಹುದಾದ ಕುತೂಹಲದ ಓದನ್ನು ನಡೆಸಲು ದಾರಿಯಿದೆ. ಕತೆಗಳಿಗೆ ಚಾರಿತ್ರಿಕ ಸಂಗತಿಗಳು ಸ್ಥಳೀಯವಾದವುಗಳು ಮಾತ್ರವೇ ಅಲ್ಲದೆ ಭಾರತೀಯ ಇಲ್ಲವೇ ಜಾಗತಿಕ ನೆಲೆಯ ಸಂಗತಿಗಳೂ ಸಹ ಒದಗಿ ಬಂದಿರುವುದನ್ನು ಕಾಣಬಹುದಾಗಿದೆ.

ಕಾದಂಬರಿಗಳು: ಹೊಸಕಾಲದ ಸಾಮಾಜಿಕ ಸನ್ನಿವೇಶದಲ್ಲಿ ಚರಿತ್ರೆಯ ವಿದ್ಯಮಾನಗಳನ್ನು ಒಂದು ದೊಡ್ಡ ಕ್ಯಾನ್ವಾಸಾಗಿ ತೆಗೆದುಕೊಂಡದ್ದು ಅಂದರೆ ಕಾದಂಬರಿಯ ಬರವಣಿಗೆ. ಇದರ ಬೆಳವಣಿಗೆಯ ಮೊದಲಿನ ಕಾರಣಗಳನ್ನು ಹೀಗೆ ಗುರುತಿಸಿಕೊಳ್ಳಬಹುದು. ವಸಾಹತು ರಾಜಕೀಯಕ್ಕೆ ಎದುರಾಗಿ ಹೊಸಕಾಲದ ಬದುಕನ್ನು ಕಟ್ಟಿಕೊಳ್ಳುವಾಗ ಸಾಹಿತ್ಯದ ನಂಟಿನ ತಿಳುವಳಿಕೆಗಳಲ್ಲಿ ಹೆಚ್ಚೆಚ್ಚು ಪಾಲ್ಗೊಂಡಿರುವುದನ್ನು, ಸ್ಥಳೀಯ ಬದುಕಿನ ಚಹರೆಗಳಿಗೆ ಸಾಹಿತ್ಯದ ಬರವಣಿಗೆಯನ್ನು ಮುಖ್ಯ ದಾರಿಯಾಗಿ ಬಳಸಲು 19ನೇ ಶತಮಾನದ ಕೊನೆಯಿಂದಲೇ ತೊಡಗಿಕೊಳ್ಳಲಾಗಿದೆ. ಸಾಹಿತ್ಯವು ಚರಿತ್ರೆಯನ್ನು ಕಟ್ಟಲು, ಪರಂಪರೆಯನ್ನು ಕಟ್ಟಲು, ನುಡಿಯ ಬೆಳವಣಿಗೆಯನ್ನು ಕಟ್ಟಲು ಪಡೆದುಕೊಂಡ ಹೆಚ್ಚುಗಾರಿಕೆಗಳಲ್ಲಿ ಇದನ್ನು ಗಮನಿಸಬಹುದಾಗಿದೆ. ಹೀಗಾಗಿ ಇತರೆ ಸಂಗತಿಗಳು–ಶಾಸನ, ಐತಿಹ್ಯ, ವಿದೇಶಿಯರ ಬರವಣಿಗೆ–ಚರಿತ್ರೆಯ ಬರವಣಿಗೆಗೆ ಕಾರಣವಾಗಿರುವಾಗಲೂ ಸಾಹಿತ್ಯ ಹೆಚ್ಚೆಚ್ಚು ವಿವರಗಳನ್ನು ಒದಗಿಸುವಲ್ಲಿ ತನ್ನೆದುರಿಗೆ ತಟ್ಟಂತ ಸಿಕ್ಕ ಮಾಹಿತಿಗಳ ರಾಶಿಯಾಗಿ ಒದಗಿ ಬಂದದ್ದಾಗಿತ್ತು. ಹೊಸಕಾಲದ ಶುರುವಿನಲ್ಲಿ ಇದು 'ಕರ್ನಾಟಕ ಗತವೈಭವ'ಗಳನ್ನು ಕಟ್ಟಲು ಕಾರಣವಾಯಿತು.

ಹಾಗೆಯೇ ಚರಿತ್ರೆಯ ಸಂಗತಿಗಳನ್ನು ಊರಣ ಮಾಡಿಕೊಂಡು ಸಾಹಿತ್ಯ ಬರವಣಿಗೆಯ ಕೆಲಸಗಳೂ ಹೆಚ್ಚೆಚ್ಚಾಗಿ ನಡೆದವು. ಎಂ.ಎಸ್. ಪುಟ್ಟಣ್ಣನವರಿಂದಲೇ ಇಂತಹ ಒಂದು ಶುರುವನ್ನು ಗಮನಿಸಿಕೊಳ್ಳಬಹುದಾಗಿದೆ. ಇದನ್ನು ಭಾರತ ದೇಶ ಮತ್ತು ಕನ್ನಡನಾಡನ್ನು ಕಟ್ಟಲು ತೊಡಗಿದ ನೆಲೆಗಳಲ್ಲಿ ಗ್ರಹಿಸಿಕೊಳ್ಳಬೇಕಾಗುತ್ತದೆ. ದೇಶ ರಾಜಕೀಯದ ಗುಲಾಮಗಿರಿಯನ್ನು ಕಳೆದುಕೊಂಡ ನಂತರವೂ ಕನ್ನಡನಾಡನ್ನು ಇಡಿಯಾಗಿ ಗುರುತಿಸಿಕೊಳ್ಳುವ ಅವಕಾಶವು ಒದಗಿ

ಬಂದಿರಲಿಲ್ಲವಾದ್ದರಿಂದಾಗಿ ಇದರ ಒಂದಂಗವಾಗಿ ಸಹ ಚರಿತ್ರೆಯನ್ನು ಒಳಗುಮಾಡಿಕೊಂಡ ಸಾಹಿತ್ಯದ ಬರವಣಿಗೆಯು ಮುಖ್ಯವಾಗಿ ನಡೆಯುತ್ತಲೇ ಬಂದದ್ದಾಗಿತ್ತು. 'ಕನ್ನಡಿಗರ ಕರ್ಮಕತೆ' ಮುಂದುವರೆದಿತ್ತು. ಅನಂತರವೂ ಇದು ಕನ್ನಡಿಗರನ್ನು ಎಚ್ಚರವಾಗಿರಿಸುವ ಒಂದು ಸಿದ್ಧ ದಾರಿಯಾಗಿ ಸಹ ಮತ್ತೆಮತ್ತೆ ಇವತ್ತಿಗೂ ಕಾಣಿಸಿಕೊಳ್ಳುತ್ತಿರುವ ಸಂಗತಿಯೇ ಆಗಿದೆ.

ಇನ್ನೊಂದು ಸಂಗತಿಯೆಂದರೆ, ಹೊಸಕಾಲದಲ್ಲಿ ಸಾಹಿತ್ಯ ಬರೆಯಲು ತೊಡಗಿದವರಿಗೆ ಊರಣ(ವಸ್ತು)ದ ಸಿದ್ಧ ಚವ್ಕಟ್ಟಿನ ಚಹರೆಗಳು ಅದರಲ್ಲಿ ಸಿಗುತ್ತಿದ್ದರಿಂದಾಗಿ ಬರವಣಿಗೆಯಲ್ಲಿ ತೊಡಗಲು ಸಲೀಸಾಗಿದ್ದುದೂ ಇಂತಹ ಬರವಣಿಗೆಯ ಹೆಚ್ಚಳಕ್ಕೆ ಕಾರಣವಿರಬಹುದು ಅನಿಸುತ್ತದೆ. ಯಾಕೆಂದರೆ ತಮ್ಮ ಕಾಲದ ಸಾಮಾಜಿಕ ಸನ್ನಿವೇಶವನ್ನು ಹೊಂದಿಸಿಕೊಳ್ಳಲಾಗದ ಅನೇಕ ಇಂತಹ ಬರವಣಿಗೆಗಳನ್ನು ಇವತ್ತಿಗೂ ವಾರ, ತಿಂಗಳ ಪತ್ರಿಕೆಗಳ ದಾರವಾಹಿಗಳಲ್ಲಿ,(ಟಿವಿ ದಾರವಾಹಿಗಳಲ್ಲಿ ಕೂಡ) ಗಮನಿಸಿಕೊಳ್ಳಬಹುದಾಗಿದೆ.

ಗುರುತಿಸಲೇಬೇಕಾದ ಸಂಗತಿಯೆಂದರೆ ಹೊಸಕಾಲದ ತಿಳುವಳಿಕೆಗಳನ್ನು ಕಟ್ಟುವ ಬರವಣಿಗೆಯ ಮೊದಲಿಂದಲೂ ಸಾಹಿತ್ಯ ಮತ್ತು ಚರಿತ್ರೆಗಳ ನಡುವೆ ಒಂದು ನಿರಂತರವಾದ ಒಳನಂಟು ಇದೆ ಎನ್ನುವುದು. ಈ ಒಳನಂಟಿನಿಂದಾಗಿ ನಾಡುನುಡಿಯ ಕುರಿತಾಗಿ ಜನರಲ್ಲಿ ಒಂದು ಒಳತೋಟಿಯನ್ನು ಕಾಪಾಡಿಕೊಂಡು ಬಂದಿವೆ ಎನ್ನುವುದು. ಇದು ಅನೇಕ ಸಾರಿ ಬೇಕಾಗಿರದ ಅತಿರೇಕಗಳಲ್ಲೂ ಕಾಣಿಸಿಕೊಳ್ಳುತ್ತಿರುತ್ತದೆ ಎನ್ನುವುದನ್ನು ನುಡಿಯ ಮತ್ತು ನಾಡಿನ ಹೆಸರಿನ ಗುಂಪುಗಳ ಆಚರಣೆಗಳಲ್ಲಿ ಕಾಣಬಹುದು. ಕೆಲವೊಮ್ಮೆ ಆಡಳಿತ ನಡೆಸುವ ರಾಜಕೀಯ ಗುಂಪುಗಳು ತಮ್ಮ ಕುರ್ಚಿಯನ್ನು ಗಟ್ಟಿಮಾಡಿಕೊಳ್ಳುವ ತಂತ್ರಗಳಾಗಿಯೂ ಇದನ್ನು ಬಳಸುತ್ತಿರುವುದರಲ್ಲಿಯೂ ನೋಡಬಹುದು.

ಹೊಸಕಾಲದ ಈ ಸನ್ನಿವೇಶಗಳಲ್ಲಿ ಜನಬದುಕಿನ ಸಾಮಾಜಿಕ ಅವಕಾಶಗಳನ್ನು ಆಗುಮಾಡುವ ಕಾರಣವಾಗಿಯೂ ಚರಿತ್ರೆಯ ಸಂಗತಿಗಳಿಗೆ ಆತುಕೊಳ್ಳುವ ಬಗೆ ಕನ್ನಡ ಸಾಹಿತ್ಯ ಬರವಣಿಗೆಯಲ್ಲಿ ಕಾಣಬಹುದಾದ ಇನ್ನೊಂದು ನೆಲೆಯೂ ಆಗಿದೆ. ಇಂತಹ ಬರವಣಿಗೆಗಳಲ್ಲಿ 'ತನ್ನ ಕಾಲದ ತಿಕ್ಕಾಟದಿಂದಲೇ ಮೈ ತಳೆದ ಕೃತಿಯೊಂದು ನಿಧಾನವಾಗಿ ತನ್ನದೇ ಆದ ಸ್ವತಂತ್ರ ಕಕ್ಷೆಯನ್ನು ರೂಪಿಸಿಕೊಂಡು ಹೊರಬಂದಾಗ ಮಾತ್ರ ಅದು 'ಸಾಹಿತ್ಯ'ದ ಉತ್ತಮಿಕೆಯನ್ನು ಮೈಗೂಡಿಸಿಕೊಂಡಿದೆ ಎನ್ನಬಹುದು'(ಕೆ.ವಿ.ಎನ್ 2010)

ನಾಟಕಗಳು: ಚಾರಿತ್ರಿಕ ಸಂಗತಿಗಳನ್ನಿರಿಸಿಕೊಂಡ ನಾಟಕಗಳ ರಚನೆಯ ಸನ್ನಿವೇಶದಲ್ಲಿಯೂ ಸಹ ಬಹುಮಟ್ಟಿಗೆ ಮೇಲಿನ ಮಾತುಗಳನ್ನೇ ಹೇಳಬಹುದಾಗಿದೆ. ಚಾರಿತ್ರಿಕ ನಾಟಕ ಹೇಗೆ ಇವೆಲ್ಲಕ್ಕಿಂತ ಪರಿಣಾಮಕಾರಿಯೆಂದರೆ, ಒಂದು: ಆಗಿಹೋದ ಮತ್ತು ಈಗಿನ ಎರಡು ಕಾಲದ ನಡುವೆ ಮಾತುಕತೆಯನ್ನು ಅದಕ್ಕೆ ಎದುರಾಗುವ ಗಳಿಗೆಗಳಲ್ಲೇ ಆಗುಮಾಡುತ್ತಿರುತ್ತದೆ. ಎರಡು: ಜೊತೆಗೆ ಈ ಮಾತುಕತೆಯನ್ನು ಆ ಗಳಿಗೆಯಲ್ಲಿಯೇ ಓದುಗ/ನೋಡುಗರ ನಡುವೆಯೂ ನಡೆಸುತ್ತಿರುತ್ತದೆ. ಮೂರು: ಖಾಸಗಿಯಾದ ಓದಿಗೆ ಸಿಗುವಂತೆ, ಯಾರು ಬೇಕಾದರೂ ಗುಂಪಿನೊಂದಿಗೆ ನೋಡಲೂ ಸಿಗುವ ಅವಕಾಶವನ್ನು ಒದಗಿಸುತ್ತದೆ. ನಾಲ್ಕು: ಚರಿತ್ರೆ ಮತ್ತು ಸಾಹಿತ್ಯದ ರಮ್ಯತೆಗಳೊಂದಾದ ಬದುಕಿನ ನೋಟವನ್ನು 'ಈಗ' ಸಿಗುವಂತೆ ಮಾಡುತ್ತದೆ ಎನ್ನುವುದು. ಇದರಲ್ಲಿಯ ಕೆಲವು ಗುಣಗಳು ಕಾದಂಬರಿ, ಕತೆ ಮತ್ತು ಕವಿತೆಗಳಲ್ಲಿ ಇರುವುದಿಲ್ಲವೆಂದೇನೂ ಅಲ್ಲ. ಸಾಹಿತ್ಯ ಮಾದರಿಗಳಲ್ಲಿಯೇ ನಾಟಕ ಹೆಚ್ಚು ನೇರವಾದ ಮಾತಿನಲ್ಲಿ ಬಿಚ್ಚಿಕೊಳ್ಳುವ ಗುಣವಿರುವಂತದ್ದು ಎನ್ನುವ ನಿಟ್ಟಿನಲ್ಲಿ.

ಅದೇನೆ ಇರಲಿ, ಚರಿತ್ರೆಯ ಒಂದು ಕಾಲದಲ್ಲಿ ಇದ್ದ(ಚರಿತ್ರೆಯೆಂದರೇ ಕಾಲವನ್ನನುಸರಿಸಿದ ಸಂಗತಿಗಳ ಜೋಡಣೆ) ವ್ಯಕ್ತಿಗಳನ್ನು, ನಿರ್ದಿಷ್ಟ ರಾಜಕೀಯ ಇಲ್ಲವೇ ಸಾಮಾಜಿಕ ಸನ್ನಿವೇಶವನ್ನು ಮುಖ್ಯಮಾಡಿಕೊಂಡು ಅನೇಕ ಕಾದಂಬರಿಗಳು, ನಾಟಕಗಳು, ಕತೆಗಳು, ಕವಿತೆಗಳು ಹುಟ್ಟುಪಡೆದಿವೆ. ಹೀಗೆ ಮಯ್ತಳೆಯುವ ಬರವಣಿಗೆಗಳು ಈ ಮೂಲಕ ತಮ್ಮ ಕಾಲದ ಬದುಕಿನ ಸನ್ನಿವೇಶದ ಸಂಕಟಗಳಿಗೆ ಯಾವ ಬಗೆಯಲ್ಲಿ ಎದುರಾಗುತ್ತಿರುತ್ತವೆ ಎನ್ನುವ ಕೇಳ್ವಿಯು ಮುಖ್ಯವಾಗುತ್ತದೆ. ಇದು ಚಾರಿತ್ರಿಕ ನಿಜ ಮತ್ತು ಸಾಹಿತ್ಯಕ ನಿಜಗಳನ್ನು ಪ್ರಮಾಣಿಸುವ ಕೇಳ್ವಿಯೂ ಆಗುತ್ತದೆ. ಯಾಕೆಂದರೆ, ಇದು ನಿರ್ದಿಷ್ಟ ಜಾತಿ ಗುಂಪುಗಳ ಗುರುತಾಗಿ ಕಂಡುಕೊಳ್ಳುವ ಬಗೆಯಲ್ಲಿಯೂ ಮತ್ತು ಒಟ್ಟು ಕನ್ನಡ ಸಮಾಜದ ಒಂದಂಗವಾಗಿ ಎಲ್ಲ ಜಾತಿ ಜನಾಂಗಗಳನ್ನೂ ಒಳಗೊಳ್ಳುವ ಬಗೆಯಲ್ಲಿಯೂ ಸವಾಲುಗಳನ್ನು ಎದುರಿಸಬೇಕಾಗುತ್ತಿರುತ್ತದೆ. ಇದು ಸಾಹಿತ್ಯ ಮತ್ತು ಚರಿತ್ರೆಯ ನಂಟಿನಲ್ಲಿರುವ ಇನ್ನೊಂದು ಸಂಕಟ.

ಇವತ್ತಿನ ಬದುಕಲ್ಲಿ ಇದು ಕಾಣಿಸುವ ಆ ಇನ್ನೊಂದು ಬಗೆಯ ಸಂಕಟ

ಇದು ಇವತ್ತಿನ ಸನ್ನಿವೇಶದಲ್ಲಿ ಪಡೆದುಕೊಂಡಿರುವ ಸಾಮಾಜಿಕ ಮುಖವೆಂದರೆ, ಚರಿತ್ರೆಯಲ್ಲಿನ ವ್ಯಕ್ತಿಯ ಚಹರೆಗಳನ್ನು ಇವತ್ತಿನ ಸಾಮಾಜಿಕ ಬದುಕಿನಲ್ಲಿ ಒಂದು ನಿರ್ದಿಷ್ಟ ಜಾತಿ, ಕುಲ, ನಡಾವಳಿ(ಧರ್ಮ)ಯ ಗುಂಪುಗಳು ತಮ್ಮ ಸಾಂಸ್ಕೃತಿಕ ನಾಯಕತ್ವದ ಸಂಕೇತವಾಗಿ ಗುರಿಯಾಗಿಸಿಕೊಂಡಿವೆ ಎನ್ನುವುದು. ಬಸವಣ್ಣ, ಕನಕದಾಸ ಮೊದಲಾದ ಚಾರಿತ್ರಿಕ ವ್ಯಕ್ತಿಗಳನ್ನು ಇದಕ್ಕೆ ಎತ್ತುಗೆಯಾಗಿ ನೋಡಬಹುದು. ಇದರಿಂದಾಗಿ ಯಾವುದೇ ಜಾತಿ-ಕುಲ ಗುಂಪಿನ ಚಹರೆಗಳನ್ನು ಆಯಾ ಗುಂಪುಗಳು ಚಾರಿತ್ರಿಕ ವ್ಯಕ್ತಿಗಳಲ್ಲಿ ಕಾಣಲು ತೊಡಗಿದಾಗ ಒಟ್ಟು ಸಾಮಾಜಿಕ ಸನ್ನಿವೇಶವನ್ನು ನೋಡುವ ನೋಟದಲ್ಲಿಯೇ ಬೀಳುಗಳು ಬೆಳೆಯುತ್ತವೆ. ಇಂತಹ 'ಬೇರೆ'ಯೆನ್ನುವ ಬೀಳುಗಳನ್ನು ನಮ್ಮ ಸನ್ನಿವೇಶದಲ್ಲಿ ಜಾತಿ-ಜನಾಂಗ-ಕುಲದರ್ಮಗಳ ಜಾಡು ಹಿಡಿದು ಕಟ್ಟಿಕೊಳ್ಳುತ್ತಿರುವುದು ತುಂಬಾ ಜೋರಾಗಿ ನಡೆಯುತ್ತಿರುವ ಕೆಲಸವೇ ಆಗಿದೆ.

ಇದನ್ನು ಒಂದು ನಿಟ್ಟಿನಿಂದ ಕನ್ನಡ ಸಮಾಜವನ್ನು ಕುರಿತ ಓದುಗಳಲ್ಲಿಯೂ ಆಗುಮಾಡಿಕೊಳ್ಳಲಾಗಿದೆ. ಜಾತಿ, ಜನಾಂಗಗಳನ್ನು ಕುರಿತ ಓದುಗಳು ಇಂತವಾಗಿವೆ. ಇಂತಹ ಒಂದು ಶುರುವನ್ನು ಬ್ರಾಹ್ಮಣ, ಜಯ್ನ, ವೀರಶಯ್ವದ ಗುರುತುಗಳಲ್ಲಿ ನಡೆಸಿದ ಸಾಹಿತ್ಯ ಮತ್ತು ಚರಿತ್ರೆಯ ಓದುಗಳಲ್ಲೇ ಗಮನಿಸಿಕೊಳ್ಳಬಹುದಾಗಿದೆ. ಜೊತೆಗೆ ಇದಕ್ಕೆ ಬೆಂಬಲವಾಗಿ ನಮ್ಮ ಆಡಳಿತ ವ್ಯವಸ್ಥೆಗಳೂ ಇರುವುದನ್ನು ಅವು ಮಠ ಮಾನ್ಯಗಳಿಗೆ ನೀಡುತ್ತಿರುವ ದೇಣಿಗೆಗಳು, ಕನ್ನಡ ತಿಳುವಳಿಕೆಯ ನೆಪದಲ್ಲಿ ಪ್ರಕಟಿಸುತ್ತಿರುವ ಜಾತಿಕೇಂದ್ರಿತ ಬರವಣಿಗೆಗಳು, ಆಡಳಿತ ನಡೆಸುತ್ತಿರರುವ ಜಾತಿನಾಯಕರ ಬೆಂಬಲದಿಂದ ನಡೆಸುತ್ತಿರುವ ಸಮಾವೇಶಗಳು ಮೊದಲಾದ ಆಚರಣೆಗಳಲ್ಲಿ ನಿಕರವಾಗಿಯೇ ಗುರುತಿಸಬಹುದಾಗಿದೆ. ಈ ದಾರಿಯಲ್ಲಿ ಆಯಾ ಜಾತಿ-ಜನಾಂಗಗಳೇ ಪ್ರಕಟಿಸುವ ಸಾಹಿತ್ಯ ಮತ್ತಿತರೆ ಬರವಣಿಗೆಗಳು ಇಂತಹ ಗುರುತುಗಳ ಮೂಲಕ ತಮ್ಮ ಜಾತಿಬಲವನ್ನು ಗಟ್ಟಿಮಾಡಿಕೊಳ್ಳುವಲ್ಲಿ ತೊಡಗಿರುವ ನಿರಂತರ ಪ್ರಯತ್ನಗಳೇ ಆಗಿವೆ. ಹೀಗಾಗಿ ಒಟ್ಟು ಜನಬದುಕಿನ ಒಂದಂಗವಾಗಿ ಗ್ರಹಿಸುವ ಬರವಣಿಗೆಗಳನ್ನೂ ಈ ಗುರುತುಗಳಲ್ಲಿಯೂ ಪರಿಶೀಲನೆಗೆ ಒಳಪಡಿಸಿ ತಕರಾರು ತೆಗೆಯುತ್ತಿರುವುದನ್ನು ಬಹು ಹಿಂದಿನಿಂದಲೇ ನಡೆಸಿಕೊಂಡು ಬಂದಿರುವ ಸಂಗತಿಯಾಗಿದೆ. ಇದು ಕೆ.ವಿ. ನಾರಾಯಣ ಅವರು ಹೇಳುವಂತೆ 'ಸಾಹಿತ್ಯದ ಚರಿತ್ರೆ ಎಂಬ ವಿವರ ಕೂಡ ಸಾಹಿತ್ಯದ ಮೂಲಕ ಕಂಡ ಚರಿತ್ರೆ ಎಂಬ ನೆಲೆಗೆ ಒಯ್ಯಬಹುದು'(ಕೆ.ವಿ.ಎನ್ 2010).

ಬಸವಣ್ಣನ್ನು ಕುರಿತು ಬಂದಿರುವ ಕಾದಂಬರಿ ಮತ್ತು ನಾಟಕಗಳ ಬರವಣಿಗೆಗಳ ಕುರಿತಾಗಿ ನಡೆದ ಜಗಳಗಳು ಈ ನಿಟ್ಟಿನಲ್ಲಿ ಗಮನಿಸಿಕೊಳ್ಳಬಹುದಾದ ಸಂಗತಿಗಳಾಗಿವೆ. ಮಾಸ್ತಿಯವರ 'ಚನ್ನಬಸವ ನಾಯಕ' ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ', ಪಿ.ವಿ. ನಾರಾಯಣರ 'ಧರ್ಮಕಾರಣ', ಬಂಜಗೆರೆ ಜಯಪ್ರಕಾಶ್ ಅವರ 'ಆನು ದೇವ ಹೊರಗಣವನು' ಈ ಬರವಣಿಗೆಗಳಲ್ಲಿ ಬಸವಣ್ಣನ ಚಾರಿತ್ರಿಕ ವದೆ ಮಾಡಲಾಗಿದೆ, ಆ ಮೂಲಕ ಒಂದು ಜಾತಿಸಮುದಾಯದ ಕಾರಣಿಕನನ್ನು ಅವಮಾನ ಮಾಡಲಾಗಿದೆ-ಆ ಜಾತಿಯನ್ನೇ ಅವಹೇಳನ ಮಾಡಲಾಗಿದೆ ಎನ್ನುವ ನೆಲೆಗಳಲ್ಲಿ ಈ ಜಗಳಗಳು ನಡೆದಿವೆ. ಮಾಸ್ತಿಯವರ 'ಚನ್ನಬಸವನಾಯಕ' ಕಾದಂಬರಿಯನ್ನಿರಿಸಿಕೊಂಡು ನಡೆದ ದೊಂಬಿಯ ಒಳಕಾರಣಗಳು ಮತ್ತೂ ಬೇರೆಯವೇ ಆಗಿರುವುದು ಈ ಬೆಳವಣಿಗೆಗಳ ಇನ್ನೊಂದು ಕೊಂಡಿ. ಆ ಸಂಗತಿಯೆಂದರೆ, ಮಾಸ್ತಿಯವರು 'ಚನ್ನಬಸವ ನಾಯಕ' ಕಾದಂಬರಿಯನ್ನು ಹೊರತರುವ ಸ್ವಲ್ಪ ಮೊದಲು ಜಯ್ನು ಪರಂಪರೆಯಲ್ಲಿ ಬಂದ 'ಬಿಜ್ಜಳ ಚರಿತೆ'ಯನ್ನು ಹೊರತರಲು ಸಹಕಾರಿಯಾಗಿದ್ದರು ಎನ್ನುವುದು. ಜಯ್ನ ಪರಂಪರೆಯ ಈ ಕಾವ್ಯವು 15-16ನೇ ಶತಮಾನದ ನಡುಗಾಲದ ಬರವಣಿಗೆಯಾಗಿದ್ದು ಇದರಲ್ಲಿ ಬಸವಣ್ಣನನ್ನು ಬಿಜ್ಜಳನು ಅಧಿಕಾರವನ್ನು ಕಳೆದುಕೊಳ್ಳುವಲ್ಲಿ ನೇರವಾದ ಕಾರಣಿಕನನ್ನಾಗಿ ಮಾಡಲಾಗಿದೆ. ಬಿಜ್ಜಳನ ಮಗನನ್ನು ತಂದೆಯ ಎದುರುಕಟ್ಟುವ ಮೂಲಕವೇ ಬಸವಣ್ಣ ಮಾಡಿಸುತ್ತಾನೆ ಎನ್ನುವ ಸಂಗತಿಗಳನ್ನು ಜಯ್ನ ಪರಂಪರೆಯ 'ಬಿಜ್ಜಳ ಚರಿತೆ' ಒಳಗೊಂಡಿದೆ. ಈ ಕಾರಣವನ್ನಿರಿಸಿಕೊಂಡು ಇಂತಹ ಪುಸ್ತಕವೊಂದನ್ನು ಹೊರತರುವಲ್ಲಿ ಮಾಸ್ತಿ ಅದರ ಬೆನ್ನಿಗಿದ್ದರಲ್ಲ ಅನ್ನುವುದು ಅವರ 'ಚನ್ನಬಸವ ನಾಯಕ' ಕುರಿತ ಜಗಳಕ್ಕೆ ಇಂಬುಕೊಟ್ಟಿತು ಎನ್ನುವುದು. ಹೀಗೆ ಜಾತಿ-ಜನಾಂಗಗಳು ಚರಿತ್ರೆಯ ವ್ಯಕ್ತಿಗಳನ್ನು ತಮ್ಮ 'ಸಾಂಸ್ಕೃತಿಕ ಗುರುತು'ಗಳಾಗಿ ಕಾಣುವಲ್ಲಿ ಜಾತಿ-ಜಾತಿಗಳ ನಡುವಿನ ಜಗಳವಾಗಿ, ಜಿದ್ದಾಗಿ, ಜಾತಿ ಮಾನ್ಯತೆಯ ಕೇಳ್ವಿಯಾಗಿ ಹುಟ್ಟುಹಾಕಿರುವ ಸಂಕಟಗಳನ್ನು ಡೆಮಾಕ್ರೆಟಿಕ್ ನೆಲೆಯಲ್ಲಿ ಅರಗಿಸಿಕೊಳ್ಳಬೇಕಾಗಿರುವುದು ಸವಾಲಿನದೇ ಆಗಿರುತ್ತದೆ. ಎಸ್.ಎಲ್. ಭೈರಪ್ಪನವರ ಬರವಣಿಗೆಗಳ ಸನ್ನಿವೇಶದಲ್ಲಿ ಅದು ಪಡೆದುಕೊಳ್ಳುವ ಧಾರ್ಮಿಕ ತಿರುವುಗಳಿಂದಾಗಿ ಇದು ದರ್ಮಗಳ ನಡುವಿನ ಜಿದ್ದಿನ ಚಹರೆಗಳಲ್ಲಿ ಕಾಣಿಸಿಕೊಳ್ಳುತ್ತದೆ. 'ಆವರಣ'ದ ಬಗೆಗಿನ ಜಗಳವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹೆಗ್ಗೋಡಿನ ನೀನಾಸಂ ನವರ ತಿರುಗಾಟದಲ್ಲಿ ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕದ ಶೂದ್ರ ಶಂಬೂಕನಿಗೆ ಜನಿವಾರ ಹಾಕಿ ಬ್ರಾಹ್ಮಣನನ್ನಾಗಿ ಗ್ರಹಿಸಿದ ಕೊಂಟೆಯೂ ಕೂಡ ನೆನಪಾಗುತ್ತಿದೆ. ಎಂ.ಎಂ. ಕಲಬುರ್ಗಿಯವರ 'ಮಾರ್ಗ' ಬರವಣಿಗೆಗಳ ಜಗಳದ ಸನ್ನಿವೇಶವನ್ನೂ ಈ ನಿಟ್ಟಿನಲ್ಲಿ ನೆನಪಿಗೆ ತಂದುಕೊಳ್ಳಬಹುದು. ಈ ನೋಟದಿಂದ ಗಮನಿಸುವಾಗ 'ಚರಿತ್ರೆಯನ್ನು ಸಾಹಿತ್ಯ ಕೃತಿಗಳ ಮೂಲಕ ಗ್ರಹಿಸಬೇಕೆಂಬ ಮಾತೂ, ಚರಿತ್ರೆಯ ಮೂಲಕ ಸಾಹಿತ್ಯ ಕೃತಿಗಳನ್ನು ಗ್ರಹಿಸಬೇಕೆಂಬ ಮಾತೂ ಒಟ್ಟೊಟ್ಟಿಗೆ ಹೋಗಲಾರದು'(ಅದೇ 1997) ಎನ್ನುವುದನ್ನು ತಿಳಿಯಬೇಕಾಗುತ್ತದೆ. ಯಾಕೆಂದರೆ ಈಗಿನ ಸಾಮಾಜಿಕ ಬದುಕಿನಲ್ಲಿ ಇವೆರಡರಲ್ಲಿ ಯಾವುದು ಬೇಕಾದರೂ ಇಲ್ಲವೇ ಈ ಎರಡೂ ಸಂಗತಿಗಳು ಮೂರನೆಯದೊಂದರ ಮೀಟುಗೋಲಾಗಿ ಬಳಕೆಯಾಗುತ್ತಿರುತ್ತವೆ.

ಎರಡು; ಚರಿತ್ರೆಯಾಗಿರುವ ಸಾಹಿತ್ಯವನ್ನು ನಮ್ಮ ಕಾಲದ ಸಾಹಿತ್ಯ ಒಳಗೊಳ್ಳುವ ಬಗೆ.

ಚರಿತ್ರೆಯೆಂದರೆ ಆಗಿ ಹೋದುದಲ್ಲ. ಹಾಗೆಂದು ನಾವು ಭಾವಿಸಿದುದು ಅನ್ನುವುದು ಕೆವಿಎನ್ ಅವರ ಮಾತು. ಹೀಗೆಂದುಕೊಳ್ಳುವಾಗ ಹಳೆಯ ಸಾಹಿತ್ಯ ಮತ್ತು ಹೊಸಕಾಲದ

ಸಾಹಿತ್ಯದ ಚಾರಿತ್ರಿಕ ನಂಟುಗಳ ಕುರಿತಾಗಿ ನಮ್ಮೆದುರು ನಿಲ್ಲುವ ಕೇಳ್ವಿಗಳೆಂದರೆ;

❑ ಹಳೆಯ ಕಾಲದ ಸಾಹಿತ್ಯವನ್ನು ಹೊಸಕಾಲದ ಕನ್ನಡ ಸಾಹಿತ್ಯ ತನಗಿರುವ ಬೆನ್ನಾಗಿ ಹೇಗೆ ಗ್ರಹಿಸಿದೆ: ನುಡಿ, ಲಯ, ಚಂದಸ್ಸು ಮೊದಲಾಗಿ ಹಳೆಯ ಸಾಹಿತಿಗಳು ಬಳಸಿದ ರಚನೆಯ ಕಟ್ಟುಗಳು ಹೊಸಗನ್ನಡ ಸಾಹಿತ್ಯ ಬರವಣಿಗೆಗಳಿಗೆ ಒದಗಿಬಂದಿರುವ ಬಗೆಗಳಲ್ಲಿ ಇದನ್ನು ತಿಳಿಯಲು ಆಗುತ್ತದೆ. ಈಗಾಗಲೇ 'ಪ್ರಮುಖ' ಕವಿಗಳನ್ನಿರಿಸಿಕೊಂಡ ಇಂತಹ ಓದುಗಳು ಅಲ್ಲಲ್ಲಿ ಕಾಣುತ್ತವೆಯಾದರೂ ಇದನ್ನೇ ಕನ್ನಡ ತಿಳುವಳಿಕೆಯ ಒಂದು ಹೊಸ ಓದಾಗಿ ಕಟ್ಟುವ ಅಗತ್ಯವಂತೂ ಇದೆ.

❑ ಹೊಸಕಾಲದ ಸಾಹಿತ್ಯ ತನ್ನ ಬೆಳವಣಿಗೆಯ ಕೊಂಡಿಯೆಂದು ತಿಳಿದಿರುವ ಹಳೆಯ ಸಾಹಿತ್ಯವನ್ನು ಎದುರಾಗಿರುವ ದಾರಿಗಳು ಯಾವು: ಹೊಸಕಾಲದ ಶುರುವಿನಲ್ಲಿ ಹಳೆಯಕಾಲದ ಬರವಣಿಗೆಗೆ ಎದುರಾಗುವಾಗ ಕನ್ನಡ ಬರವಣಿಗೆಗಳಿಗಿಂತ ಮುಖ್ಯವಾಗಿ ಸಂಸ್ಕೃತ ಮತ್ತು ಇಂಗ್ಲಿಶ್ ಬರವಣಿಗೆಗಳನ್ನು ಹೊಸಕಾಲದ ಕನ್ನಡದಲ್ಲಿ ಕಟ್ಟಿನೋಡುವ ಕೆಲಸವೇ ಹೆಚ್ಚಾಗಿ ಕಾಣುತ್ತದೆ. ಇದನ್ನು ಅನುವಾದ, ರೂಪಾಂತರದ ಬರವಣಿಗೆಗಳು ಕಾಣಿಸುತ್ತವೆ. ಈ ನಿಟ್ಟಿನಲ್ಲಿ ಕೆಲವೊಮ್ಮೆ ಹಳೆಯ ಕನ್ನಡ ಬರವಣಿಗೆಗಳಿಗೆ ಎದುರಾಗುವ ಬಗೆಯೂ ಸಹ ಈ ಎರಡರ ಮಾದರಿಗಳಲ್ಲೇ ಗ್ರಹಿಸಲಾಗಿದೆ. ಇಲ್ಲವೇ ಹಾಗೆ ಗ್ರಹಿಸಲಾಗಿದೆಯೆಂದು ಹೊಸಕಾಲದ ಸಾಹಿತ್ಯದ ಶುರುವಿನ ತಿಳುವಳಿಕೆಯನ್ನು ಕಟ್ಟಲಾಗಿದೆ. ಹಳೆಯ ಸಾಹಿತಿ-ಸಾಹಿತ್ಯವನ್ನು ಹೊಸಕಾಲದ ಕತೆಗಳಾಗಿ, ಕಾವ್ಯವಾಗಿ, ಕಾದಂಬರಿಗಳಾಗಿ, ನಾಟಕಗಳಾಗಿ ಕಟ್ಟಲಾಗಿದೆ. ಬಿಎಂಶ್ರೀಯವರ ಗದಾಯುದ್ಧ, ಅಶ್ವತ್ಥಾಮನ್ ನಂತಹ ಬರವಣಿಗೆಗಳಿಂದ ಹಿಡಿದು ಇತ್ತೀಚಿಗಿನ ಬರಹಗಾರರಾದ ಕೆ.ವೈ. ನಾರಾಯಣಸ್ವಾಮಿ, ಲಕ್ಷ್ಮೀಪತಿ ಕೋಲಾರ ಇವರ ಪಂಪಭಾರತ, ಅಲ್ಲಮನ ಬಯಲಾಟ ಮೊದಲಾ ಹಳೆಯ ಸಾಹಿತ್ಯ ಮತ್ತು ಸಾಹಿತಿಗಳನ್ನೇ ಎದರುಗೊಳ್ಳುವ ಬರವಣಿಗೆಗಳವರೆಗೆ ಹೊಸಬಗೆಯ ಓದನ್ನು ಮಾಡಬಹುದಾಗಿದೆ. ಇದು ಒಂದು ಬಗೆಯಲ್ಲಿ ಸಾಹಿತ್ಯ ಮತ್ತು ಸಾಹಿತಿಗಳನ್ನು ಹೊಸಕಾಲದ ಕನ್ನಡ ತಿಳುವಳಿಕೆಗಳಿಗೆ ಬದಲಿಸುವ(ರೂಪಾಂತರಿಸುವ) ಓದಾಗಿ ನೋಡಬಹುದಾಗಿದೆ.

❑ ಹಾಗೆ ಎದುರಾಗುವಲ್ಲಿ ಕಟ್ಟಿಕೊಂಡ ತಿಳುವಳಿಕೆಯ ದಾರಿಗಳು, ಯಾವುದನ್ನು ಈ ಕಾಲದ ಕನ್ನಡದ ಹೊಣೆ ಎಂದು ತಿಳಿದಿವೆ: ಈ ಕೇಳ್ವಿ ನಮಗೆ ಮುಖ್ಯವಾಗುವುದು ಸಂಸ್ಕೃತ ಪರಂಪರೆಯ ತಿಳುವಳಿಕೆಗಳು ಮತ್ತು ಇಂಗ್ಲಿಶ್‌ನಿಂದ ತೆಗೆದುಕೊಂಡ ಯೂರೋಪು ಮತ್ತಿತರ ತಿಳುವಳಿಕೆಗಳು ಕನ್ನಡದ್ದೇ ತಿಳುವಳಿಕೆಯ ದಾರಿಯೊಂದನ್ನು ಗ್ರಹಿಸದಿರುವಂತೆ ಬಂತೆಗೊಳಿಸಿರುವುದರಿಂದಾಗಿ. ನಾವು ಯೂರೋಪಿನ ತಿಳುವಳಿಕೆಯ ಪರಂಪರೆಯೊಂದನ್ನು, ಸಂಸ್ಕೃತದ ತಿಳುವಳಿಕೆಯ ಪರಂಪರೆಯೊಂದನ್ನು ಗುರುತಿಸಿಕೊಳ್ಳಲು ಸಿದ್ದವಿರುವಂತೆ ಕನ್ನಡದ್ದೇ ತಿಳುವಳಿಕೆಯ ಪರಂಪರೆಯೊಂದನ್ನು ಒಟ್ಟು ಸಮಾಜದ ಸನ್ನಿವೇಶದಲ್ಲಿ ಆಗದಂತೆ ಹಿಂದೆ ಸರಿದುಬಿಡುತ್ತೇವೆ. 'ಭಾರತೀಯ ಕಾವ್ಯಮೀಮಾಂಸೆ', 'ಪಾಶ್ಚಾತ್ಯ ಕಾವ್ಯಮೀಮಾಂಸೆ' ಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದ್ದರಿಂದಾಗಿ ಯಾವುದೇ-ಚರಿತ್ರೆ, ಸಮಾಜಶಾಸ್ತ್ರ, ವಿಜ್ಞಾನ ಮೊದಲಾದ-ದಾರಿಯಲ್ಲಿ ಆಲೋಚಿಸುವಾಗಲೂ ಸಂಸ್ಕೃತ ಮತ್ತು ಇಂಗ್ಲಿಶ್ ಸೇರಿದ ತಿಳುವಳಿಕೆಯೇ ಕನ್ನಡದ ತಿಳುವಳಿಕೆ ಎನ್ನುವ ಗ್ರಹಿಕೆಯೊಂದನ್ನು ಇರಿಸಿಕೊಂಡುಬಿಟ್ಟಿದ್ದೇವೆ. ಹೀಗಾಗಿ ನಮ್ಮ ಬದುಕಿನ ಕಾಲದ ನಿಕರವಾದ ಹೊಣೆಗಳನ್ನು ಗುರುತಿಸಿಕೊಳ್ಳುವಲ್ಲಿಯೂ ಸೋಲುವುದು ನಡದೇ ಇರುತ್ತದೆ. ಭಾರತ ಮತ್ತು ಜಾಗತಿಕ ತಿಳುವಳಿಕಸ್ಥರಾದ ನಾವು

ಕನ್ನಡದ ಗುರುತುಗಳಲ್ಲಿ ನಮ್ಮನ್ನು ಕಳೆದುಕೊಳ್ಳಲು ರೆಡಿಯಿದ್ದೇವೆ

ಈ ನಂಟುಗಳಲ್ಲಿ ಚರಿತ್ರೆ ಮತ್ತು ಸಾಹಿತ್ಯದ ಕೇಳ್ವಿಗಳನ್ನಿರಿಸಿಕೊಂಡು ನೋಡಬೇಕಾಗುತ್ತದೆ. ಈಗಾಗಲೇ ಗಮನಿಸಿಕೊಂಡಿರುವಂತೆ ಯಜಮಾನ ಜಾತಿಗಳ ನಡಾವಳಿಯ(ದಾರ್ಮಿಕ) ಚವ್ಕಟ್ಟುಗಳು ಕನ್ನಡ ಸಾಹಿತ್ಯವನ್ನು ಚಾರಿತ್ರಿಕವಾಗಿ ವಿವರಿಸಿಕೊಳ್ಳುವ ದಾರಿಗಳನ್ನಾಗಿ ಮಾಡಿಕೊಳ್ಳಲಾಗಿದೆ. ಇದು ನಮ್ಮ ಚರಿತ್ರೆ, ಪರಂಪರೆ, ಬದುಕು(ಸಂಸ್ಕೃತಿ) ಎನ್ನುವ ಕಟ್ಟುಗಳಲ್ಲಿ ಕಲಿತು ನಮ್ಮದಾಗಿಸಿಕೊಳ್ಳಬೇಕೆಂಬ ದರ್ದನ್ನೂ ಕನ್ನಡದ ನೆಪದಲ್ಲಿ ಬೆಳೆಸಿಕೊಂಡು ಬರಲಾಗುತ್ತಿದೆ. ಇದರಿಂದಾಗಿ ಸಾಹಿತ್ಯ ಮತ್ತು ಚರಿತ್ರೆಗಳನ್ನು ಕುರಿತ ನಿಜವಾದ ನಂಟುಗಳನ್ನು ತಿಳಿಯುವಲ್ಲಿ ಇರುವ ಗೋಡೆಗಳನ್ನೂ ಕಾಪಾಡಿಕೊಂಡು ಬರುವಂತಾಗಿದೆ. ಹಾಗಿದ್ದರೆ, ಇವೆರಡರ ನಡುವಿನ ನಂಟನ್ನು ತಿಳಿಯಬಹುದಾದ ಬೇರೆ ದಾರಿ ಗುರುತುಗಳು ಯಾವು ಎನ್ನುವುದು ನಮ್ಮೆದುರು ನಿಲ್ಲುವ ಕೇಳ್ವಿಯಾಗಿದೆ. ಈ ನಿಟ್ಟಿನಲ್ಲಿ ಪರಿಶೀಲಿಸಿಕೊಳ್ಳಬೇಕಾದ ಸಂಗತಿಗಳೆಂದರೆ;

1. ಹೊಸಕಾಲದ ಕನ್ನಡ ಸಾಹಿತ್ಯಕ್ಕೆ ಹಳೆಯ ಸಾಹಿತ್ಯ(ಚಾರಿತ್ರಿಕ ನಿಜ) ಹೇಗೆ ಬೇರು ಆಗಿದೆ ಎನ್ನುವುದು.

2. ಬೇರು ಅದೇ ಆಗಿರುವಾಗ ಕಾಂಡ ಬೇರೆ ಇನ್ನಾವುದೋ ಆಗಲು ಬರುವುದಿಲ್ಲ ಅಲ್ಲವೇ ಎನ್ನುವುದನ್ನು ಪರಿಶೀಲಿಸುವುದು.

3. ಹೊಸಕಾಲದಲ್ಲಿ ಅನೇಕ ಬದುಕುಗಳನ್ನು ಒಳಗೊಳ್ಳುವ ಸಮಾಜ ತಿಳುವಳಿಕೆಯ ಚವ್ಕಟ್ಟುಗಳು(ವಯ್ಚಾರಿಕ ಆಕ್ರುತಿಗಳು) ಹಳೆಯ ಕಾಲದ ಬರವಣಿಗೆಯ ಚಿಗುರುಗಳೇ ಆಗಿವೆಯೇ ಎನ್ನುವುದನ್ನು ಜನಬಲ(ಪ್ರಜಾಪ್ರಭುತ್ವ)ದ ಅವಕಾಶಗಳೊಂದಿಗಿರಿಸಿ ಕಂಡುಕೊಳ್ಳುವುದು.

ಈ ಕುರಿತು ಇನ್ನಷ್ಟು ವಿವರಗಳ ಪರಿಶೀಲನೆಗೆ ಎದುರಾಗೋಣ.

ಮೊದಲನೆಯದು; ಹಳೆಯ ಕಾಲದ ಸಾಹಿತ್ಯವನ್ನು ಗ್ರಹಿಸುವಾಗ ಕಲಿಕೆಯಲ್ಲಿ ನಮ್ಮೆದುರಿಗಿಟ್ಟಿರುವ ಸನ್ನಿವೇಶ ಈ ಮೇಲೆ ಹೇಳಿರುವಂತೆ ಜಾತಿಮೂಲವಾದ ದಾರ್ಮಿಕ ನಡಾವಳಿಗಳದ್ದು. ಜಯ್ನ, ವೀರಶಯ್ವ, ಬ್ರಾಹ್ಮಣ ಅನ್ನುವ ಗುರುತುಗಳಲ್ಲಿ ಬೇರಬೇರೆ ಮಾಡಿ ಕಟ್ಟಿಕೊಳ್ಳುವ ನೆಲೆಯೇ ಈ ಬಗೆಯದು. ಇದರಿಂದಾಗಿ ಹೊಸಕಾಲದ ಸಾಹಿತ್ಯ ಬರವಣಿಗೆಯಲ್ಲಿ ಇವು ಮುಂದುವರೆದ ಗುರುತುಗಳಾಗಿವೆಯೇ? ಆಗಿರುವುದಾದರೆ ಹೇಗೆ, ಎಷ್ಟು, ಯಾವುದು ಎನ್ನುವುದನ್ನು ಬಿಡಿಸಿ ತಿಳಿಯಬೇಕಾಗುತ್ತದೆ. ಇದು, ಬದಲಾದ ಬದುಕಿನ ಸನ್ನಿವೇಶದಲ್ಲಿ ಎಂತಹ ಚಹರೆಗಳನ್ನು ಇರಿಸಿಕೊಂಡಿದೆ, ಯಾವುದನ್ನು ಕನ್ನಡದ್ದಾಗಿ ಆಗುಮಾಡಿದೆ ಎನ್ನುವುದನ್ನು ಇದರ ಮುಂದುವರಿದ ಸಂಗತಿಯಾಗಿ ಗ್ರಹಿಸಬೇಕಾಗುತ್ತದೆ. ಹಾಗೆ ಅಲ್ಲದಿರುವ ಸಂಗತಿಗಳೂ ಹೊಸ ಸಾಹಿತ್ಯದ ಬರವಣಿಗೆಯಲ್ಲಿ ಇರುವುದಾದರೆ ಅವುಗಳ ಬೇರು ಎಲ್ಲಿದೆ ಎನ್ನುವುದನ್ನೂ ತಿಳಿಯುವ ದಾರಿ ಇದಾಗುತ್ತದೆ. ಇದು ಹಳೆಯ ಕನ್ನಡ ಸಾಹಿತ್ಯದಲ್ಲಿರುವ ಇನ್ನೊಂದು ದಾರಿಯ ಕಡೆಗೂ ನಮ್ಮನ್ನು ಕರೆದುಕೊಂಡು ಹೋಗಬಹುದು, ಕೆಲವೊಮ್ಮೆ ನಮ್ಮಲ್ಲಿಲ್ಲದ ದಾರಿಯ ಕಡೆಗೂ ಕರೆದೊಯ್ಯಬಹುದು.

ಇದರ ಜೊತೆಗೆ ನಿಲ್ಲುವ ಮತ್ತೊಂದು ಕೇಳ್ವಿಯೆಂದರೆ ಹಳೆಯ ಸಾಹಿತ್ಯವನ್ನು ವಿವರಿಸಿಕೊಳ್ಳುವ ಈ ಜಾತಿಮೂಲವಾದ ದಾರ್ಮಿಕ ನೆಲೆಗಳೇ ಹೊಸಕಾಲದ ಸಾಹಿತ್ಯವನ್ನೂ ಒಳಗು ಮಾಡಿಕೊಂಡಿವೆಯೇ ಎನ್ನುವುದು. ಹಾಗೆ ಒಳಗುಮಾಡಿಕೊಂಡಿದ್ದರೆ, ಈ ನಿಟ್ಟಿನಲ್ಲಿಯೇ ಇದರ ಚಹರೆಗಳನ್ನೂ ಸಹ ತಿಳಿಯಬಹುದಾಗಿದೆ.

ಎರಡನೆಯದು; ಕೆವಿಎನ್ ಅವರು 'ಬೇರು ಕಾಂಡ ಚಿಗುರುಗಳು ಕೇವಲ ಕಾಲದ ಸಾತತ್ಯವನ್ನು ಮಾತ್ರ ಪ್ರತಿನಿಧಿಸುವುದಿಲ್ಲ. ಅವುಗಳ ನಡುವೆ ಇರುವ ಜೈವಿಕ ಸಂಬಂಧದ ಸ್ವರೂಪ ಆವರ್ತನಶೀಲವಾಗಿದೆ. ಅಲ್ಲದೆ, ಒಂದು ಇನ್ನೊಂದನ್ನು ಅವಲಂಬಿಸುವ ಬಗೆಯನ್ನು ಪ್ರಕಟಿಸುತ್ತದೆ' ಎನ್ನುತ್ತಾರೆ(ಅದೇ). ಈ ನಿಟ್ಟಿನಲ್ಲಿ ಹೊಸಕಾಲದ ಸಾಹಿತ್ಯದ ಕಟ್ಟುವಿಕೆಯನ್ನು ಗಮನಿಸಿಕೊಳ್ಳಬೇಕಾಗಿರುವುದು ಮುಖ್ಯವಾದ ಸಂಗತಿಯಾಗಿದೆ. ಯಾಕೆಂದರೆ ಸಾಹಿತ್ಯದ ಕಟ್ಟುವಿಕೆಯಲ್ಲಿ ಬಳಸಲಾಗಿರುವ ಬದುಕಿನ ಊರಣಗಳು ಯಾವ ಯಾವ ಬೇರುಗಳಿಂದ ಮಯ್ತಳೆದಂತವು ಎನ್ನುವ ಕೇಳ್ವಿಯ ಕಡೆಗೆ ಇದು ಮುಖ ಮಾಡುತ್ತದೆ. ಹಳೆಯ ಸಾಹಿತ್ಯವನ್ನು ತಿಳಿಯುವ ಗುರುತುಗಳು ಇಂಗ್ಲಿಶ್ ಓದಿನಿಂದಾಗಿ ಹೊಸಕಾಲದಲ್ಲಿ ಮಾನವತಾವಾದದ ಬುಡಗಳಾಗಿ ಬದಲುಗೊಂಡಿವೆ. ಕೆವಿಎನ್ ಗುರುತಿಸುವಂತೆ ಇದು ಹೊಸಕಾಲದ 'ಕನ್ನಡಸಾಹಿತ್ಯದ ಪ್ರಧಾನ ನೆಲೆ'. 'ಮನುಷ್ಯನ ಘನತೆಯನ್ನು ಎತ್ತಿಹಿಡಿಯುವ ಈ ಸಾಹಿತ್ಯದ ಹಿಂದಿರುವ ಮನುಷ್ಯನ ಪರಿಕಲ್ಪನೆ ಜೀವಸಂಕುಲದ ಅಂಗವಾಗಿರುವ ಮಾನವನನ್ನು ಕುರಿತಿಲ್ಲ. ಆ ಸಂಕುಲದಿಂದ ಬೇರೆಯಾಗಿದ್ದು, ಅತ್ಯುನ್ನತ ಮೌಲ್ಯಗಳನ್ನು ಸಾಧಿಸಲು ಹವಣಿಸುತ್ತಿರುವ ಮಾನವನನ್ನು ಕುರಿತಿದೆ'ಯಾದ್ದರಿಂದಾಗಿ ಈ ಮೇಲಿನ ಗುರುತುಗಳಲ್ಲಿ 'ಪರಿಸರದಿಂದ ಅನ್ಯವಾದ ಮಾನವನ ಜಗತ್ತನ್ನು ಅಧಿಕೃತಗೊಳಿಸುವ ವಿಧಾನ'ಗಳಿವೆ. ಇದನ್ನು ಒಟ್ಟು ಕನ್ನಡ ಬದುಕುಗಳ ತಿಳುವಳಿಕೆಯಲ್ಲಿ ಪರಿಶೀಲಿಸಿ ನೋಡಬೇಕಾಗುತ್ತದೆ. ಇದನ್ನು ಮೂರು ನೆಲೆಗಳಲ್ಲಿ ಗ್ರಹಿಸಲು ಅವಕಾಶವಿದೆ; ಒಂದು: ಹೆಣ್ಣಿನ ಎದುರಿನ ಗಂಡುನೆಲೆ, ಎರಡು: ಕೆಳಜಾತಿಗಳ ಎದುರಿನ ಮೇಲ್ಜಾತಿಯ ನೆಲೆ ಮೂರು: ಪರಿಸರವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕೆಂಬ ಹಂಬಲದ ನೆಲೆ. ಇದಲ್ಲದೆಯೂ ಒಟ್ಟು ಮಾನವ ಜೀವಿಗಳ ಒಳಿತಿನ ದಾರಿಗಳಲ್ಲಿಯೂ ಈ ಮಾನವತಾವಾದವನ್ನು ಗುರುತಿಸಲು ಬರುವುದಿಲ್ಲವೆಂದೇನೂ ಅಲ್ಲ.

ಮೂರನೆಯದು; ಹೊಸಕಾಲದ ಬದುಕು ಅವಕಾಶಗಳನ್ನು ಎಲ್ಲರಿಗೂ ಆಗುಮಾಡುವ ತಿಳುವಳಿಕೆಯ ಚವ್ಕಟ್ಟುಗಳನ್ನು ಕಟ್ಟುವ ಕಡೆಗೆ ಇದೆ. ನಮ್ಮ ಸಂವಿದಾನವೆ ಅಂತಹ ಒಂದು ದಾರಿಯನ್ನು ಕಾಣಿಸಿದೆ. ಇದರಿಂದಾಗಿ 'ಕೊಟ್ಟುಕೊಳ್ಳುವ' ರಾಜಕೀಯ ನಂಬಿಕೆಯನ್ನು ಹೊಸಕಾಲದ ಸಾಹಿತ್ಯದಲ್ಲಿ, ಸಾಹಿತ್ಯವನ್ನು ವಿವರಿಸಿಕೊಳ್ಳುವ ದಾರಿಗಳಲ್ಲಿ 'ಹೇಗೆ' ಹುಡುಕಿಕೊಂಡಿದ್ದೇವೆ ಎನ್ನುವ ಕೇಳ್ವಿಯು ಮುಖ್ಯವಾಗುತ್ತದೆ. ಆದ್ದರಿಂದಾಗಿ ಎಲ್ಲಿಂದಲೇ ಶುರುವಿಟ್ಟುಕೊಳ್ಳುವ ತಿಳುವಳಿಕೆಗಳು ಇಂತಹ ಗುರಿಯನ್ನು ತಲುಪಿವೆಯೇ, ತಲುಪಬಲ್ಲುವೇ, ತಲುಪಲು ಬೇಕಾದಂತಹ ದಾರಿಗಳೇ ಆಗಿವೆಯೇ ಎನ್ನುವುದನ್ನು ಕನ್ನಡ ಬದುಕುಗಳ ಸನ್ನಿವೇಶಗಳನ್ನಿರಿಸಿಕೊಂಡೇ ಖಚಿತಪಡಿಸಿಕೊಳ್ಳಬೇಕಾಗುತ್ತದೆ.

ಸಾಹಿತ್ಯ ಮತ್ತು ಚರಿತ್ರೆಯ ನಂಟುಗಳನ್ನು ಇವತ್ತಿನಲ್ಲಿ ಹುಡುಕುವ ದಾರಿ ಇದಾಗಬೇಕೆಂದು ನಾನು ಬಯಸುತ್ತೇನೆ.

[ಕೆ.ವಿ. ನಾರಾಯಣ ಅವರ 'ಬೇರು ಕಾಂಡ ಚಿಗುರು' ಮತ್ತು 'ಸಾಹಿತ್ಯದ ಚರಿತ್ರೆ ಅಥವಾ ಸಾಹಿತ್ಯದಲ್ಲಿ ಚರಿತ್ರೆ' ಆಲೋಚನೆಗಳು ಇದರ ಬೆನ್ನಿಗಿವೆ. ಕೆವಿಎನ್:2010, ತೊಂಡುಮೇವು-2, ಬರಹ ಪಬ್ಲಿಶಿಂಗ್ ಹೌಸ್, ಬೆಂಗಳೂರು]

●

ಎರಡು ವಿದೇಶಿ ವ್ಯಕ್ತಿ ಚಿತ್ರಗಳು

ಲುಗಾನೋ ಸರೋವರದ ಬಳಿ ಆ ಡೋರಿಸ್

– ಶೂದ್ರ ಶ್ರೀನಿವಾಸ್

ಇಟಲಿಯ ರಸ್ತೆಯ ಉದ್ದಗಲಕ್ಕೂ ಹಸಿರು ತುಂಬಿದ ಪರ್ವತ ಶ್ರೇಣಿ. ಅಲ್ಲಿಯೇ ಬದುಕಲು ಕಟ್ಟಿಕೊಂಡ ಮನಮೋಹಕ ಮನೆಗಳು. ಎತ್ತರೆತ್ತರಕ್ಕೆ ಬೆಳೆದ ಮರಗಳು. ವಾಣಿಜ್ಯದ ದೃಷ್ಟಿಯಿಂದ ಕ್ರಮಬದ್ಧವಾಗಿ ಬೆಳೆಸಿರುವಂಥವುಗಳು. ಅಲ್ಲಲ್ಲಿ ಬೆಳ್ಳನೆ ಇಳಿದು ಬರುವ ಜಲಪಾತಗಳು. ಎಲ್ಲಿ ನೋಡಿದರೂ ಪುಟ್ಟ ನದಿಗಳಂತೆ ಹರಿಯುವ ಜಲ ಸಮೃದ್ಧಿ. ಇದರ ಜೊತೆಗೆ ಹಸಿರಿನಿಂದ ಕಂಗೊಳಿಸುವ ವೈನ್‌ನ ಗಿಡಗಳನ್ನು ಬೆಳೆದಿರುವ ಬಯಲು ಪ್ರದೇಶ. ಹಾಗೆ ನೋಡಿದರೆ ಇಡೀ ಯೂರೋಪ್ ವೈವಿಧ್ಯಮಯವಾದ ಹಸಿರಿನ ವಸ್ತ್ರಗಳನ್ನು ಧರಿಸಿರುವ ರೂಪವತಿಯರಂತೆ ಕಣ್ಣು ಕುಕ್ಕುವಂತೆ ಕಾಣುವಂಥದ್ದು. ಹೀಗೆ ಮೂರು ದಿವಸ ಇಟಲಿಯನ್ನು ಸುತ್ತಲು ವೆನಿಸ್, ರೋಮ್, ಮಿಲಾನ್, ನಗರಗಳಿಗೆ ಹಾಯ್ ಎಂದು ಹೇಳಿ ಸ್ವಿಜರ್‌ಲ್ಯಾಂಡ್‌ನ ಲುಗಾನೋ ತಲುಪಿದಾಗ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ನಮ್ಮನ್ನು ಯೂರೋಪಿನ ಉದ್ದಗಲಕ್ಕೂ ಸುಮಾರು ಎಂಟು ಸಾವಿರದ ಐನೂರು ಕಿ.ಮೀಟರ್ ಸುತ್ತಾಡಿಸಿದ ರಾಣಿಯಂತೆ ಕಾಣುತ್ತಿದ್ದ ತಾಜ್ ಕೋಚ್ ಲುಗಾನೋ ಸರೋವರದ ಬಳಿ ಬಿಟ್ಟಿತು. ಬೆಚ್ಚನೆಯ ವಾತಾವರಣ. ಸರೋವರದಲ್ಲಿ ಬಣ್ಣ ಬಣ್ಣದ ದೋಣಿಗಳಲ್ಲಿ ವಿವರಿಸುತ್ತಿದ್ದ ಪ್ರವಾಸಿಗರು. ಸರೋವರದ ಪಕ್ಕದಲ್ಲಿ ಹೋಟೆಲ್ ಮತ್ತು ಷಾಪಿಂಗ್ ಸ್ಥಳದಲ್ಲಿ ಮೂತ್ರ ವಿಸರ್ಜನೆಗೆಂದು ಎಲ್ಲರೂ ಓಡಿದರು. ಯಾಕೆಂದರೆ ಎಲ್ಲೆಂದರಲ್ಲಿ ಭಾರತದ ರೀತಿಯಲ್ಲಿ ಹೋಗುವಂತಿಲ್ಲ. ಆಯಾ ಪ್ರದೇಶದ ನಿರ್ಧಿಷ್ಟ ನಾಣ್ಯವನ್ನು ಕೊಟ್ಟು ಹೋಗಬೇಕಾಗಿತ್ತು. ನಾನು ನನ್ನ ಹೆಂಡತಿ ಎಲ್ಲರೊಡನೆ ಒಳಗೆ ಹೋದೆವು. ಕೆಲವರು ಬಿಯರ್ ಕುಡಿಯುತ್ತಿದ್ದರು. ಕೆಲವರು ಸ್ವಿಸ್‌ನ ಚಾಕಲೇಟ್ ಮುಂತಾದವುಗಳನ್ನು ತೆಗೆದುಕೊಳ್ಳುತ್ತಿದ್ದರು.

ಅಲ್ಲಿಯೇ ಬಾಗಿಲ ಪಕ್ಕದಲ್ಲಿ ಸ್ಫುರದ್ರೂಪಿ ವೃದ್ಧೆಯೊಬ್ಬರು ಪಿಯಾನೋ ನುಡಿಸುತ್ತಿದ್ದರು. ಆ ಪಿಯಾನೋ ಪಾರಂಪರಿಕ ರೀತಿಯ ಬೃಹತ್ತಾದದ್ದು ಅಲ್ಲ. ನಮ್ಮ ವೈಯಲನ್ನಿಗಿಂತ ಸ್ವಲ್ಪ ದೊಡ್ಡದಿತ್ತು. ಆದರೆ ಪಿಯಾನಾದ್ದೇ ನಾದ. ಆಕೆಯ ಪಕ್ಕದಲ್ಲಿ ನಿಂತಿದ್ದ ಹೀರಾಲಾಲ್ ಪಟೇಲ್ ನನ್ನನ್ನು ನೋಡಿ ಒಂದು ಕ್ಷಣ ನಿಲ್ಲಿಸಿ ಆಕೆಗೆ ಪರಿಚಯ ಮಾಡಿಕೊಡುತ್ತ "ಇವರ ಹೆಸರು ಶ್ರೀನಿವಾಸ್, ಲೇಖಕ ಪತ್ರಕರ್ತ, ಅದಕ್ಕಿಂತ ಮಿಗಿಲಾಗಿ ನಮ್ಮ ಕೋಚ್‌ನ ಫಿಲಾಸಫರ್" ಎಂದರು. ನಾನು ನಗುತ್ತ ನಿಂತಿದ್ದೆ. ಆಕೆ ಎದ್ದು ನಿಂತು ನನ್ನ ಕೈ ಕುಲುಕಿ ನನ್ನ ಹೆಸರು ಡೋರಿಸ್, ಜರ್ಮನಿಯಿಂದ ಬಂದಿದ್ದೀನಿ, ನನ್ನ ಗಂಡನೂ ಜರ್ನಲಿಸ್ಟ್ ಅವರು ಇಲ್ಲಿಗೆ ಬರುವರು. ಪರಿಚಯ ಮಾಡಿಕೊಡುವೆ ಎಂದರು. ನಾನು ಹತ್ತು ನಿಮಿಷ ಅಲ್ಲಿಯೇ ಕೂತೆ. ನನ್ನ ಹೆಂಡತಿ ಸರೋವರ ನೋಡಲು ತವಕಪಡುತ್ತಿದ್ದಳು. ಆಕೆ ಡೋರಿಸ್ ಮನುಷ್ಯ ಸಂಬಂಧಗಳ ದಟ್ಟತೆ ಕುರಿತು ತಾವೇ ರಚಿಸಿದ ಹಾಡನ್ನು ಪಿಯಾನೋದಲ್ಲಿ ನುಡಿಸಿದರು. ಒಂದು ದೃಷ್ಟಿಯಿಂದ ಆ ಲೂಗಾನ್ ಸರೋವರದ ಅತಿ ನೀಲಾಕರದ ಸಮೃದ್ಧ ನೀರಿಗಿಂತ ಪಿಯಾನೋದ ಧ್ವನಿ ತರಂಗಗಳು ಆಪ್ತವಾಗಿದ್ದುವು. ಹೀರಾಲಾಲ್ ಪಟೇಲ್ ಅವರ ಹೆಂಡತಿ

ಮಕ್ಕಳು ಹಾಗೂ ನನ್ನ ಹೆಂಡತಿ ಸರೋವರದ ಕಡೆ ಹೋಗಲು ಒತ್ತಾಯ ಮಾಡತೊಡಗಿದರು. ಅದೇ ಸಮಯಕ್ಕೆ ಸುಮ ರಾವ್ ಎಂಬ ಮಹಿಳೆ "ಶ್ರೀನಿವಾಸ್ ನಿಮ್ಮ ಹೊಸ ಫ್ರೆಂಡಾ?" ಎಂದು ತಮಾಷೆ ಮಾಡಿದರು ಇಂಗ್ಲೀಷಿನಲ್ಲಿ, ಅದನ್ನು ಕೇಳಿಸಿಕೊಂಡ ಡೋರಿಸ್ "ವೈ ನಾಟ್?" ಎಂದರು.

ನಾವು ನಗುತ್ತ ಮತ್ತೆ ಬರುವೆವು ಎಂದು ಸರೋವರದ ಕಡೆಗೆ ಹೋದೆವು. ಅತ್ಯಂತ ಶುದ್ಧವಾದ ಪ್ರದೇಶ. ಅಲ್ಲೆಲ್ಲ ಓಡಾಡುತ್ತ ಕ್ಯಾಮರಾಗೆ ಸಾಕಷ್ಟು ಕೆಲಸ ಕೊಟ್ಟೆವು. ಕೆಲವರು ಬೋಟುಗಳಲ್ಲಿ ವಿಹರಿಸಲು ಹೋದರು. ನಾವು ಕಳೆದ ಏಳೆಂಟು ದಿವಸಗಳಿಂದ ವಿವಿಧ ರೀತಿಯ ದೊಡ್ಡ ಪ್ರಮಾಣದ ಬೋಟುಗಳಲ್ಲಿ ಅಲೆದಾಡಿದ್ದೆವು. ಕೆಲವು ಬೋಟುಗಳಲ್ಲಿ ರೆಸ್ಟೋರೆಂಟ್‌ಗಳಲ್ಲಿ ಅಲ್ಲಿಯ ಸ್ಥಳೀಯರು ಅದರ ಮಾಮೂಲಿ ಸದಸ್ಯರಂತೆ ಬಿಯರ್ ಕುಡಿಯುತ್ತ ಕಾರ್ಡ್ಸ್ ಆಡುವುದರಲ್ಲಿ ತೊಡಗಿರುತ್ತಿದ್ದರು. ಯುವಕ ಯುವತಿಯರು ತಮ್ಮದೇ ಆದ ಲೋಕದಲ್ಲಿ ತಲ್ಲೀನರಾಗಿರುತ್ತಿದ್ದರು. ನಾನು ಅಂಥ ಕಡೆಯಲ್ಲೆಲ್ಲ ಪಟೇಲ್ ಗೆಳೆಯರ ಜೊತೆ ಬಾರ್ ಕೌಂಟರ್‌ಗೆ ಹೋಗಿ ತಣ್ಣನೆಯ ಬಿಯರ್ ತೆಗೆದುಕೊಂಡು ಚಪ್ಪರಿಸಿದ್ದೆವು. ಪರ್ವತ ಶ್ರೇಣಿಯ ನಡುವೆ, ನದಿಯ ಪ್ರಶಾಂತ ಹರಿಯುವಿಕೆಯನ್ನು ಅನುಭವಿಸುತ್ತ.

ಲೂಗಾನ್ ಸರೋವರದ ಪಕ್ಕದಲ್ಲಿಯೂ ಆಕರ್ಷಕ ಕಾರಂಜಿಯ ಪಕ್ಕ ಸ್ವಲ್ಪ ಸಮಯ ಕೂತು ನಂತರ ಅಲ್ಲಿಯ ಬೀದಿಗಳನ್ನು ಗಮನಿಸಲು ಹೋದೆವು. ನಾನಾರೀತಿಯ ಸ್ವಿಸ್ ಬ್ಯಾಂಕ್‌ಗಳು ಕನ್ನಡಿಯಂತೆ ಎದ್ದು ಕಾಣುತ್ತಿದ್ದ ಬೀದಿಗಳ ಬಗ್ಗೆ ಚರ್ಚಿಸುತ್ತ ಮತ್ತೆ ಡೋರಿಸ್ ಇದ್ದ ಹೋಟೆಲ್ ಬಳಿಗೆ ಹೋದೆ. ಆಕೆ ಪಿಯಾನೋವಾದನದಲ್ಲಿ ತಲ್ಲೀನಳಾಗಿದ್ದಳು. ಒಮ್ಮೆ ತಲೆಯತ್ತಿ ನೋಡಿ "ನೈಸ್" ಎಂದಳು. ಮತ್ತೆ ಆಕೆಯದ್ದೇ ಎರಡು ರಚನೆಗಳನ್ನು ಕೇಳಿದೆ. ಸ್ವಲ್ಪ ದೂರದಲ್ಲಿ ಗಂಡ ಬರುತ್ತಿದ್ದುದನ್ನು ಕಂಡು ಎದ್ದಳು. ನನ್ನನ್ನು ಕರೆದುಕೊಂಡು ಹೋಗಿ ಪರಿಚಯ ಮಾಡಿಕೊಟ್ಟಳು. ಆತನಲ್ಲಿ ಆಕೆಯ ನಗುಮುಖವಿರಲಿಲ್ಲ. ಒಂದೈದು ನಿಮಿಷ ಮಾತಾಡಿ ಆತ ತನ್ನ ಸ್ನೇಹಿತರ ಜೊತೆ ಸ್ವಲ್ಪ ದೂರದಲ್ಲಿ ಹೋಗಿ ನಿಂತರು. ಆತನ ಬಳಿ ಏನೇನೋ ಕೇಳಬೇಕೆಂದಿದ್ದೆ, ಮುಖ್ಯವಾಗಿ ಬರ್ಲಿನ್ ಗೋಡೆ ಕೆಡವಿದ ಮೇಲೆ ಎರಡೂ ಕಡೆ ಆಂತರಿಕ ಮತ್ತು ಭಾವನಾತ್ಮಕ ಸಂಬಂಧ ಹೇಗಿದೆ ಎಂದು ತಿಳಿಯಲು. ಹಾಗೆಯೇ ಆತನ ಮುಕ್ತ ಮನಸ್ಸನ್ನು ತಿಳಿದು ಹಿಟ್ಲರ್ ವ್ಯಕ್ತಿತ್ವದ ಬಗ್ಗೆ ಜನ ಹೇಗೆ ಪ್ರತಿಕ್ರಿಯಸುತ್ತಾರೆ ಎಂಬುದರ ಬಗ್ಗೆ ಕೂತೂಹಲವಿತ್ತು. ಆದರೆ ಇಂಥದನ್ನೆಲ್ಲ ಡೋರಿಸ್ ಬಳಿ ಕೇಳಬಹುದಾಗಿತ್ತು. ಆದರೆ ಆಕೆ ಒಂದು ರೀತಿಯಲ್ಲಿ ಭಾವನೆಗಳ ಲೋಕದಲ್ಲಿ ಸುತ್ತಾಡುತ್ತಿದ್ದವಳು. ಪಿಯಾನೋ ನುಡಿಸುವಾಗಿನ ರಚನೆಗಳೇ ಅದಕ್ಕೆ ಸಾಕ್ಷಿ ಎನ್ನುವಂತಿದ್ದವು. ಯಾಕೆಂದರೆ ಎಲ್ಲೆಂದರಲ್ಲಿ ತುಂಬ ಸಾರ್ವಜನಿಕತೆಯನ್ನು ಬಯಸದಂಥವರು ಕೆಲವೇ ನಿಮಿಷಗಳ ಪರಿಚಯದಲ್ಲಿ ಆಕೆಯ ಮುಖದಲ್ಲಿ ಅದು ಎದ್ದು ಕಾಣುತ್ತಿತ್ತು. ಈ ಕಾರಣಕ್ಕಾಗಿ ಡೋರಿಸ್‌ರವರನ್ನು ಕೇಳಬೇಕಾಗಿದ್ದುದು ಬೇರೆಯೇ ಆಗಿತ್ತು. ತನ್ನ ಪ್ರೀತಿ ಪಾತ್ರವಾದ ಪಿಯಾನೋದ ಮೂಲಕ ಕೇಳಿ ಕೊನೆಗೂ ಯಾವ ರೀತಿಯ ಮಾನವ ಪ್ರೇಮವನ್ನು ಧ್ವನಿಸಲು ಬಯಸುವಿರಿ ಎಂದು.

ಈ ಚೌಕಟ್ಟಿನಲ್ಲಿಯೇ ಡೋರಿಸ್‌ರವರು ಬದುಕಿನ ಬಗ್ಗೆ ಕೇಳಿದಾಗ ನನ್ನ ಕೈಯನ್ನು ಹಿಡಿದು. ನನ್ನಪ್ಪ ಜೀವನದ ಪ್ರೀತಿಯನ್ನು ತುಂಬ ಅಗಾಧವಾಗಿ ಧಾರೆಯೆರದ. ಇಂದು ಈ ಎಪ್ಪತ್ನಾಲ್ಕನೆಯ ವಯಸ್ಸಿನಲ್ಲಿಯೂ ಎಲ್ಲವನ್ನು ಮಮಕಾರದಿಂದ ನೋಡಲು ಸಾಧ್ಯವಾಗಿದೆ. ಆತ ಚರ್ಚ್‌ನಲ್ಲಿ ಪ್ರೀಸ್ಟ್ ಆಗಿದ್ದ. ಮತ್ತೊಂದು ಮುಖ್ಯ ವಿಷಯ ಹೇಳಲೇಬೇಕು. ನಾನು ಪ್ರಾಟೆಸ್ಟೆಂಟ್ ಗುಂಪಿಗೆ ಸೇರಿದವಳು. ಅಂದರೆ ಕ್ರೈಸ್ತರಲ್ಲಿ ಮೈನಾರಿಟಿಗೆ ಸೇರಿದವಳು. ಅಪ್ಪ

ಅಂಥ ಗುಂಪಿನ ಪಾದ್ರಿಯಾಗಿದ್ದವರು. ಧಾರ್ಮಿಕ ಡೈಕಾಟಮಿಗಳ ವೈಪರೀತ್ಯಗಳನ್ನು ಅನುಭವಿಸಿದವರು. ಇದರಿಂದ ಕಿಂಚಿತ್ತೂ ವಿಚಲಿತರಾಗದೆ ಕೊನೆಗೂ ಪ್ರೀತಿ, ಪ್ರೇಮ ಮತ್ತು ಶ್ರದ್ಧೆಯನ್ನು ನಾವು ಧಾರೆಯೆರೆಯಬೇಕು ಎಂದು ತಿಳಿದು ಬದುಕಿದವರು. ನನ್ನನ್ನೂ ಹಾಗೆಯೇ ಬೆಳೆಸಿದರು. ಆದ್ದರಿಂದ ನಾನು ಕ್ರಿಸ್ತನನ್ನು ಧ್ಯಾನಿಸುವಾಗಲೆಲ್ಲ. ಆ ಪ್ರಭುವು ಪ್ರತಿದಿವಸ ಕನಸಿನಲ್ಲಿ ಬರುವನು, "ಮಗಳೇ ಯಾವ ಕಾರಣಕ್ಕಾಗಿಯೂ ಭಯಪಡಬೇಡ. ನಾನು ಯಾವಾಗಲೂ ನೊಂದವರ ಬಡವರ ಹಾಗೂ ಅಲ್ಪ ಸಂಖ್ಯಾತರ ಪರವಾಗಿರ ತಕ್ಕಂಥವನು." ಎಂದು ಧೈರ್ಯ ತುಂಬುವನು. ಇದರಿಂದ ನನ್ನ ಬದುಕಿನಲ್ಲಿ ಚೈತನ್ಯವಿದೆ. ಆದ್ದರಿಂದ ನನ್ನ ಪಿಯಾನೋ ನುಡಿಸುವಾಗ ಜೀವನ ಪ್ರೇಮ ತುಂಬಿ ಬರುತ್ತದೆ ಎಂದು ನನ್ನ ತಲೆ ನೇವರಿಸಿದಳು. ನನ್ನ ಹೆಂಡತಿಯ ತಲೆ ನೇವರಿಸಿದಳು. ಆಕೆಗೆ ನಮಸ್ಕರಿಸುವ ನೆಪದಲ್ಲಿ ಎರಡು ಕೈಗಳನ್ನು ಹಿಡಿದು ತಲೆಯಿಟ್ಟೆ. ಕಣ್ತುಂಬ ನೀರು.

ಲುಗಾನ್ ಸರೋವರ ನೂರಾರು ವರ್ಷಗಳಿಂದ ಹೀಗೆ ಬೇರೆ ಬೇರೆ ರೂಪದಲ್ಲಿ ಕಣ್ಣೀರು ತೊಟ್ಟನ್ನು ತನ್ನ ವಿಶಾಲವಾದ ಬಟ್ಟಲಿಗೆ ತುಂಬಿಕೊಳ್ಳುತ್ತಲೇ ಬಂದಿರಬಹುದು ಎಂದು ಯೋಚಿಸುತ್ತಿರುವಾಗ "ಇಟ್ ಈಸ್ ಆಲ್ ರೈಟ್ ಕಮ್, ಲೆಟ್ ಅಸ್ ಗೋ ಫರ್ದರ್" ಎಂದು ಸ್ವಲ್ಪ ಮುಂದೆ ಕರೆದುಕೊಂಡು ಹೋದಳು. ನಾನು ಸ್ವಲ್ಪ ತಡೆಯಿರಿ ಎಂದು ಹಾಗೆಯೇ ನಿಂತೆ. ಹತ್ತು ಅಡಿ ದೂರದಲ್ಲಿ ಡೈಮಂಡ್ ಆಕಾರದಲ್ಲಿ ರೂಪಿಸಿದ್ದ ಒಂದು ಆಕೃತಿ ಕಾಣಿಸಿತು. ಇನ್ನೂ ಸ್ವಲ್ಪ ಹತ್ತಿರ ಹೋದೆ ಡೋರಿಸ್ ಮತ್ತು ನನ್ನ ಹೆಂಡತಿ ವಿಜಯಾನು ಬಂದರು. ಅದು ಸಿಗರೇಟು ತುಂಡುಗಳನ್ನು ಹಾಕಿಸಿಕೊಳ್ಳುವ ಆಷ್‌ಟ್ರೇಯಾಗಿತ್ತು. ಪಕ್ಕದಲ್ಲಿ ಅಷ್ಟೇ ಕಲಾತ್ಮಕವಾಗಿದ್ದ ಎರಡು ಹೂವಿನ ಗಿಡಗಳ ಕುಂಡಗಳನ್ನಿಟ್ಟಿದ್ದರು. ನನ್ನ ಹೆಂಡತಿ ಅದನ್ನು ಕ್ಯಾಮರಾದೊಳಗೆ ಸೇರಿಸಿಕೊಂಡಳು. ನಾನು ಎಷ್ಟು ಚೆನ್ನಾಗಿದೆ ಎಂದು ಧ್ವನಿ ಹೊರಡಿಸಿದಾಗ. ಡೋರಿಸ್ ಸ್ವಚ್ಚತೆಯ ದೃಷ್ಟಿಯಿಂದ ಯೂರೋಪಿನಾದ್ಯಂತ ಈ ರೀತಿಯವು ಸ್ವಾಭಾವಿಕ ಎಂದರು. ನಾನು ನಕ್ಕು ಅವರ ಜೊತೆ ಮುಂದೆ ಹೋದೆ. ಲೂಗಾನ್ ಸರೋವರ ಪಕ್ಕದಲ್ಲಿ ಹಾಕಿದ್ದ ಎದೆ ಮಟ್ಟದ ಸ್ಟೈನ್‌ಲೆಸ್‌ಸ್ಟೀಲ್‌ನ ಪೈಪ್ಗಳ ಮೇಲೆ ಕೈಯೂರಿ ಸರೋವರ ನೋಡುತ್ತಿದ್ದೆವು. ಅಷ್ಟರಲ್ಲಿ ಗೆಳೆಯರಾದ ಪಂಕಜ್ ಪಟೇಲ್ ಮತ್ತು ಭರತ್ ಪಟೇಲ್ ಹಾಗೂ ವಿದ್ಯಾಕಪಾಡಿಯಾ ಅವರು "ಶ್ರೀನಿವಾಸ್ ಕಮ್ ಕೋಚ್ ಡ್ರೈವರ್, ಸಾವಾ ಗೀವಿಂಗ್ ಸಿಗ್ನಲ್" ಎಂದು ಕರೆದರು.

ನಾನು ಪೆಚ್ಚಾಗಿ ಡೋರಿಸ್‌ಗೆ ಕೈ ಮುಗಿದೆ. ಆಕೆಯ ಕಣ್ಣು ತುಂಬ ವಿಷಾದ ತುಂಬಿತ್ತು. "ಯು ಆರ್ ಗಾಡೆಸ್ ಆಫ್ ದಿಸ್ ರಿಮಾರ್ಕಬಲ್ ಲೂಗಾನ್ ಲೇಕ್" ಎಂದೆ. "ರಿಯಲಿ ಬ್ಯೂಟಿಫುಲ್" ಎಂದು ನನ್ನನ್ನು ಅಪ್ಪಿಕೊಂಡು ಹಣೆಗೆ ಮುತ್ತು ಕೊಟ್ಟಳು "ಗಾಡ್ ಬ್ಲೆಸ್ ಯು ಪೀಪಲ್" ಎಂದು ಪಿಯಾನೋ ಕೈಗೆ ತೆಗೆದುಕೊಂಡು ನುಡಿಸತೊಡಗಿದಳು. ಒಂದು ರೀತಿಯ ವೇದನೆ ಕಾಡತೊಡಗಿತು. ಆ ಪಿಯಾನೋ ಧ್ವನಿ ಸರೋವರದ ಅಲೆಗಳಲ್ಲಿ ಮರುಕಳಿಸುತ್ತಿದೆಯೇನೋ ಅನ್ನಿಸಿತು. ನಾವು ಆಕೆಯಿಂದ ಬಿಡಿಸಿಕೊಂಡು ಹೊರಟವು. ಪಿಯಾನೋ ನುಡಿಸುತ್ತಲೆ ಕೈಬೀಸಿದಳು. ಹೋಗಿ ಕೋಚ್‌ನಲ್ಲಿ ಕೂತೆ. ಯಾಕೋ 1986ರ ಡಿಸೆಂಬರ್ ತಿಂಗಳಲ್ಲಿ ಕಲ್ಕತೆಯಲ್ಲಿ ಭೇಟಿಯಾದ ಮದರ್ ಥೆರೇಸಾ ನೆನಪಿಗೆ ಬಂದರು. ಏನೇ ಆಗಲಿ ಅಮ್ಮಾ ಡೋರಿಸ್ ನೀನೂ ಕೂಡ ಈ ಮನುಕುಲದ ಸಾವಿರಾರು ದೇವತೆಗಳಲ್ಲಿ ಒಬ್ಬಳು ಎಂದು ಅಂತರಾಳದ ಧ್ವನಿ ಪಿಸುಗುಡುತ್ತಿತ್ತು.

ಸಂಜೆ ಆರೂವರೆಯಾಗಿತ್ತು. ಬೆಳಕು ಇನ್ನು ಪ್ರಖರವಾಗಿಯೇ ಇತ್ತು. ತಾಜ್‌ಕೋಜ್ ಸರೋವರವನ್ನು ದಾಟಿ ಲೂಗಾನ್ ನಗರದ ತಗ್ಗುಗಳಲ್ಲಿ ಚಲಿಸುತ್ತ ಮೇಲಕ್ಕೆ ಕರೆದುಕೊಂಡು ಹೋಯಿತು. ತೆಳುವಾಗಿ ಮಂಜು ಕವಿಯಲು ಪ್ರಾರಂಭವಾಗಿತ್ತು.

ಮೊಯರಾ ಸೆಬಾ ಎಂಬ ಲವಲವಿಕೆಯ ವಕೀಲೆ

ಪ್ಯಾರೀಸ್ ನಾನಾ ರೀತಿಯ ಹುಚ್ಚುತನಗಳನ್ನು ತುಂಬಿಕೊಂಡಿರುವ ನಗರ. ಇಲ್ಲಿಯ ಕಲಾವಿದರು ಲೇಖಕರು ಮತ್ತು ಸಾಮಾಜಿಕ ಚಿಂತಕರು ಎಂತೆಂಥದೋ ಹಂತಗಳನ್ನು ತಲುಪಿದವರು. ಇದರಿಂದ ನಾಗರೀಕತೆ ಎಂದರೆ ಹೀಗೆ ಎಂದು ಕೆಲವು ಸೃಜನಾತ್ಮಕ ಮಾದರಿಗಳನ್ನು ಕೊಟ್ಟಿರುವುದು. ಹಾಗೆ ನೋಡಿದರೆ ಕಳೆದ ಮೂರು ನಾಲ್ಕು ದಶಕಗಳಿಂದ ಮೊಪಾಸಾ ಬೋದಿಲೇರ್, ಬಾಲ್ಜಾಕ್, ಸಾರ್ತ್ರೆ ಕಾಮು, ಡಿಗಾಲೆ ಮುಂತಾದವರನ್ನು ಮನಸ್ಸಿನ ತುಂಬ ತುಂಬಿಕೊಂಡವನು. ಇದರ ಜೊತೆಗೆ ಈ ನಗರದ ಮೋಹಕತೆಗೆ ಮತ್ತು ಇಲ್ಲಿಯ ಕಲಾಚಟುವಟಿಕೆಗೆ ಮರುಳಾಗಿ ಪಿಕಾಸೋನಂಥ ಮಹಾನ್ ಕಲಾವಿದ ತನ್ನ ಕಲೆಯ ವೈವಿಧ್ಯತೆಯ ವೈಭವವನ್ನು ಇತಿಹಾಸಕ್ಕೆ ವಿಸ್ತರಿಸಿದ್ದು ಇಲ್ಲಿಂದಲೇ. ಇಂಥ ರೂಪಕ ನಗರದಲ್ಲಿರುವ ಲಾವರೆ ಮ್ಯೂಸಿಯಂ ಜಗತ್ತಿಗೆಲ್ಲ ಸಾರುತ್ತ ನಾನು ಇಲ್ಲಿದ್ದೇನೆ. ಬಂದು ನೋಡಿಕೊಂಡು ಹೋಗಿ ಎಂದು ಪ್ರತಿ ದಿವಸ ಸಾವಿರಾರು ಮಂದಿಯನ್ನು ಒಳಗೆ ಬಿಟ್ಟು ಕೊಂಡು ಸಂತೃಪ್ತಿಯಿಂದ ಹೋಗಿ ಎಂದು ಹೇಳುವಂತಿರುವುದು. ಇಲ್ಲಿಯೇ ಮಹಾನ್ ದೇವತೆಯಂತಿರುವ ಡಾವಿಂಚಿಯ 'ಮೊನಾಲೀಸಾ ಕಲಾಕೃತಿಯನ್ನು ನೋಡಿಕೊಂಡು ಅದರ ಹಂದರದೊಳಗೆಯೇ ನಾನಾ ರೀತಿಯ ನೂರಾರು ಷಾಪ್‌ಗಳಿರುವಂತೆ ಒಂದು ಸ್ವಲ್ಪ ವಿಸ್ತಾರವಾದ ಕಾಫಿ ಹೌಸ್ ಇತ್ತು. ನಾಲ್ಕೈದು ಗಂಟೆಗಳಿಂದ ಸುತ್ತಾಡಿ ಒಂದು ರೀತಿಯಲ್ಲಿ ಎಲ್ಲಾದರೂ ಕೂತು ಒಂದರ್ಧ ಗಂಟೆ ಆರಾಮವಾಗಿ ಕೂರಬೇಕೆನ್ನಿಸಿತು. ನನಗಿಂತ ನನ್ನ ಹೆಂಡತಿ ಸುಸ್ತಾಗಿದ್ದಳು. ಅವಳು ಒಂದು ಕಪ್ ಕಾಫಿ ಕುಡಿದಾಕ್ಷಣ ಮತ್ತೆ ಲವಲವಿಕೆಯನ್ನು ಪಡೆಯುತ್ತಾಳೆಂಬುದು ಗೊತ್ತಿತ್ತು.

ಕಾಫೀ ಷಾಪಿನ ಒಳಗೆ ಹೋದಾಗ ಹತ್ತಾರು ಮಂದಿ ನಾನಾ ರೀತಿಯ ಪಾನೀಯಗಳನ್ನು ಚಪ್ಪರಿಸುತ್ತಿದ್ದರು. ಒಂದು ಕ್ಷಣ ಬೇರೆಲ್ಲಿಗಾದರೂ ಹೋಗಿ ಕೂರುವ ಅನ್ನಿಸಿದರೂ; ಎಲ್ಲಿಗ್ಹೋದರೂ ಇದೇ ಸಮಸ್ಯೆ ಅನ್ನಿಸಿತು. ಆಗ ಒಂದು ಪುಟ್ಟ ಕುಟುಂಬದ ಇಬ್ಬರು ಮೂರು ನಾಲ್ಕು ವರ್ಷದ ಮಕ್ಕಳು ಮುದ್ದಾದ ತುಂಡು ಸ್ಟೂಲುಗಳ ಮೇಲೆ ಕೂತಿದ್ದರು. ಆ ಹುಡುಗರನ್ನು ಒಂದು ಸ್ಟೂಲು ಬಿಟ್ಟು ಕೊಡಲು ನಗುತ್ತ ಕೇಳಿದಾಗ 'ನೊ' ಎಂದರು. ಫ್ರೆಂಚ್ ಭಾಷೆಯ ಧ್ವನಿಯಲ್ಲಿ. ಆಗ ಅವರ ತಂದೆ ತಾಯಿ ಹೇಳಿದಾಗ ಎರಡೂ ಸ್ಟೂಲುಗಳನ್ನು ಬಿಟ್ಟುಕೊಟ್ಟರು. ನನಗೆ ಹಾಯ್ ಅನ್ನಿಸಿ ಆ ಮಕ್ಕಳ ತಲೆ ಸವರಿ ಎರಡು ಮಗ್ಗುಗಳಲ್ಲಿ ಕಾಫೀ ಮತ್ತು ಟೀಯನ್ನು ತಂದು ಕೂತುಕೊಂಡೆ. ಆ ಮಕ್ಕಳು ಬಣ್ಣ ಬಣ್ಣದ ಚಾಕಲೇಟ್ ತಿನ್ನುತ್ತಿದ್ದರು. ಅವರು ನಮ್ಮ ಹತ್ತಿರ ಬಂದು ಚಾಕಲೇಟ್ ಕೊಡಲು ಕೈ ಚಾಚಿದರು. ನಾನು 'ಬೇಡ ನೀವು ತಿನ್ನಿ' ಎಂದಾಗ "ನೋ ಯು ಷುಡ್ ಟೇಕ್" ಎಂದು ಕೈ ಹಿಡಿದು ಒತ್ತಾಯ ಮಾಡಿಕೊಡಲು ಬಂದರು. ಮತ್ತೆ ನಾವು ಬೇಡ ಎಂದಾಗ ಅವರ ತಾಯಿ, "ಅವರು ಬಿಡುವುದಿಲ್ಲ ತೆಗೆದುಕೊಳ್ಳಿ" ಎಂದರು. ನಾವು ಎಂಥ ತುಂಟ ಮಕ್ಕಳು ಎಂದು ತೆಗೆದುಕೊಂಡೆವು.

ಅವರ ಮುಂದೆ ಕೂತು ಕಾಫಿ ಚಪ್ಪರಿಸುತ್ತಿದ್ದೆವು. ಆ ದಂಪತಿಗಳ ಮುಖ ನೋಡಿದೆ ಸರಳವಾದ ಡ್ರೆಸ್. ಆಕೆ ಸ್ವಲ್ಪ ಎತ್ತರಕ್ಕಿದ್ದಳು. ಆತ ಆಕೆಗಿಂತ ಸ್ವಲ್ಪ ಎತ್ತರ ಕಮ್ಮಿ. ಹೆಸರು ಕೇಳಿದೆ "ಮೊಯರಾ ಸೆಬಾ" ಎಂದು ಹೇಳುತ್ತ ತನ್ನ ಪರ್ಸಿನಿಂದ ಕಾರ್ಡ್ ತೆಗೆದಳು.

ಕಾರ್ಡ್ ಹಿಂದೆ ತನ್ನ ಮಕ್ಕಳ ಹಾಗೂ ಗಂಡನ ಹೆಸರು ಬರೆದಳು. ಆ ಹೆಸರುಗಳು ಅನುಕ್ರಮವಾಗಿ TESS, NOA ಮತ್ತು FARID ಎಂದು. ಫರೀದ್ ಗಂಡ. ಆಕೆ ವೃತ್ತಿಯಿಂದ ವಕೀಲೆ ಎಂದು ತಿಳಿಯಿತು. ಮುಂದುವರೆಸಿ ಕೇಳಿದಾಗ ನಾವು ಇಬ್ಬರೂ ಇಲ್ಲೆ ಪ್ಯಾರೀಸ್‌ನಲ್ಲಿ ವಕೀಲರಾಗಿದ್ದೇವೆ ಎಂದಳು. ನಾನು ನನ್ನ ಹಿನ್ನೆಲೆಯನ್ನು ವಿವರಿಸಿದೆ. ನನಗೆ ಪ್ರಿಯರಾದ ಮತ್ತು ಪ್ರಭಾವ ಬೀರಿದ ಕೆಲವು ಫ್ರೆಂಚ್ ಲೇಖಕರ ಹೆಸರನ್ನು ಹೇಳಿದಾಗ ಕಣ್ಣರಳಿಸಿ ಕೈಕುಲುಕಿದಳು. ಅದರಲ್ಲೂ ಸಿಮನ್ ದಿ ಬುನಾಯಿರ್‌ಳ ಹೆಸರನ್ನು ಹೇಳಿದಾಗಲಂತೂ, ಲವ್ಲೀ ಲೇಡಿ ಎಂದಳು. ಗಂಡ ಫರೀದ್ ಅತ್ಯಂತ ಮಿತಭಾಷಿ. ಒಂದು ರೀತಿಯಲ್ಲಿ ಸಂಕೋಚ ಸ್ವಭಾವದವನು ಅನ್ನಿಸಿತು. ಆದರೆ ಮೊಯಿರಾ ಮಹಿಳೆಯಂತೂ ಎದೆತುಂಬಿ ಮಾತಾಡುತ್ತಿದ್ದಳು ಮಾತಿನ ದಾಟಿಯಿಂದಲೇ ಮೋಹಕವಾಗಿ ಕಾಣುತ್ತಿದ್ದಳು.

ನಾವು ಬಂದ ವಿಷಯವನ್ನು ಕೇಳಿದಳು. ಲಂಡನ್, ನೆದರ್ ಲ್ಯಾಂಡ್ಸ್, ಜರ್ಮನಿ, ಇಟಲಿಯ ವೆನಿಸ್, ರೋಮ್, ಪೀಸಾನಗರ, ಮಿಲಾನ್, ಸ್ವಿಟ್ಜರ್‌ಲ್ಯಾಂಡ್ ನೋಡಿಕೊಂಡು ನಿನ್ನೆ ಜಿನೀವದ ಮೇಲೆ ಪ್ಯಾರೀಸ್‌ಗೆ ಬಂದೆವು" ಎಂದೆ. ನೈಸ್ ಎಂದು ಹೇಳುತ್ತಲೇ ವೆನಿಸ್ ಎಂಥ ರಿಮಾರ್ಕೆಬಲ್ ನಗರ ಎಂದು ಉದ್ಗಾರ ತೆಗೆದಳು. ಆ ಉದ್ಗಾರದಲ್ಲಿ ಆಪ್ತವಾದ ಧ್ವನಿಯೊಂದು ತೇಲಿ ಬರುತ್ತಿತ್ತು. ಇನ್ನು ನಾಲ್ಕು ದಿವಸ ಮಾತ್ರ ನಮ್ಮ ಪ್ರವಾಸ. ಇನ್ನೆರಡು ದಿವಸ ನಾವು ಪ್ಯಾರಿಸ್‌ನಲ್ಲಿರುವುದು ಎಂದೆ. ಅದಕ್ಕೆ ಆಕೆ ನಗುತ್ತ" ಒಂದು ಕೆಲಸ ಮಾಡಿ ನಿಮ್ಮ ರೆಗ್ಯುಲರ್ ಟೂರ್ ಕ್ಯಾನ್ಸಲ್ ಮಾಡಿ ನಮ್ಮ ಮನೆಯಲ್ಲೇ ಇರ್ರಿ, ನಾನು ಎಲ್ಲ ವ್ಯವಸ್ಥೆ ಮಾಡುವೆ. ಪ್ಯಾರೀಸ್ ಮತ್ತು ಅಕ್ಕಪಕ್ಕದ ಕೆಲವು ಪ್ರದೇಶಗಳನ್ನು ನೋಡುವಿರಂತೆ. ಹೇಗಿದ್ದರೂ ನೀವು ರೈಟರ್ ಮತ್ತು ಜರ್ನಲಿಸ್ಟ್ ಆಗಿರುವುದರಿಂದ ನೋಡಲೇ ಬೇಕಾದ ಕೆಲವು ಸ್ಥಳಗಳಿವೆ" ಎಂದಳು. ಒಂದು ಕ್ಷಣ ಆಕೆಯ ಆಹ್ವಾನವನ್ನು ಒಪ್ಪಿಕೊಳ್ಳಲು ನನ್ನ ಮನಸ್ಸು ತುದಿಗಾಲಿನಲ್ಲಿ ನಿಂತಿತ್ತು. ಆದರೆ ನನ್ನ ಹೆಂಡತಿ ಅಷ್ಟೊಂದು ಉತ್ಸಾಹವನ್ನು ತೋರಿಸದಿದ್ದುದರಿಂದ ನಾನು ಹಿಂದೇಟು ಹಾಕಿದೆ. ಮೊಯಿರಾ ಸೆಬಾ ನಗುತ್ತ, ನೀವಿದ್ದರೆ ನಮಗೆ ಸಂತೋಷವಾಗುತ್ತಿತ್ತು ಎಂದಳು. ಮುಂದೆ ಆಕೆ ನಗುತ್ತ: ತನ್ನ ಗಂಡನ ಬಗ್ಗೆ ತೋರಿಸುತ್ತ ಅವರನ್ನು ನೋಡಿದರೆ ನಿಮಗೇನನ್ನಿಸುತ್ತದೆ ಎಂದಾಗ, ಒಂದು ಕ್ಷಣ ಪೇಚಿಗೆ ಸಿಕ್ಕಿಕೊಂಡೆ. ಅವರು ಗಂಡ-ಹೆಂಡತಿ ನನ್ನನ್ನು ನೋಡಿ ಮುಸಿ ಮುಸಿ ನಗುತ್ತಿದ್ದರು. ಕೊನೆಗೆ ನಾನು ಏನಾದರೂ ಹೇಳಲೇ ಬೇಕಲ್ಲ ಎಂದು ಪಕ್ಕ ಇಂಡಿಯಾದವರ ರೀತಿಯಲ್ಲಿ ಕಾಣುವರು ಎಂದೆ. ಮೊಯಿರಾ ಸೆಬಾ ನನ್ನ ಕೈಕುಲುಕಿ "ಯು ಆರ್ ಕರೆಕ್ಟ್, ನನಗೆ ಅದೇ ಉತ್ತರ ಬೇಕಾಗಿದ್ದುದು, ಅವರನ್ನು ನೋಡಿದ ಯಾರೇ ಆಗಲಿ ಇಂಡಿಯಾದವರಾ? ಎಂದು ಕೇಳುವರು." ಎಂದಳು ನಾನು ಮುಂದುವರಿದು ಫರೀದ್ ಅವರ ಕುಟುಂಬದ ಮೂಲವನ್ನು ಕೇಳಬೇಕೆನ್ನಿಸಿತು. ಅಷ್ಟರಲ್ಲಿ ಮೊಯಿರಾ ಅವರು "ನೀವು ಇಂಡಿಯಾದಲ್ಲಿ ಯಾವ ಕಡೆಯವರು?" ಎಂದು ಕೇಳಿದಾಗ "ದಕ್ಷಿಣ ಇಂಡಿಯಾದಲ್ಲಿ ಕರ್ನಾಟಕ ಸ್ಟೇಟ್ ಅದರ ಕ್ಯಾಪಿಟಲ್ ಸಿಟಿ ಬೆಂಗಳೂರು. ಅಲ್ಲಿದ್ದೇವೆ" ಎಂದಾಗ ರಿಯಲೀ ಹಾಗಾದರೆ ಕೇರಳ ನಿಮಗೆ ಹತ್ತಿರವಿರಬಹುದು ಅಲ್ಲವೇ? ನ್ಯಾಚುರಲೀ ತುಂಬ ಬ್ಯೂಟಿಪುಲ್ ಪ್ರದೇಶವಂತೆ ಹೌದಾ? ನನ್ನ ತಾಯಿ ತುಂಬ ವರ್ಷಗಳಿಂದ ನೋಡಬೇಕು ಆ ಪ್ರದೇಶವನ್ನು ಎಂದು ಹೇಳುತ್ತಲೇ ಇದ್ದಾಳೆ. ನನ್ನಮ್ಮನಿಗೆ ಒಂದು ಹುಚ್ಚು. ಬಿಡುವು ಸಿಕ್ಕಿದಾಗಲೆಲ್ಲ ಜಗತ್ತಿನ ಭೂಪಟಗಳನ್ನೆಲ್ಲ ತೆರೆದು ನೋಡುವುದು ಸಾಧ್ಯವಾದರೆ ಅವುಗಳ ವಿವರಗಳನ್ನು ತರಿಸಿಕೊಂಡು ಓದುವುದು "ಪ್ರವಾಸ ಎಂದರೆ ತುಂಬ ಇಷ್ಟ" ಎಂದಳು. "ಹಾಗಾದರೆ ಬನ್ನಿ ನಿಮ್ಮ ತಾಯಿಯನ್ನು ಕರೆದುಕೊಂಡು" ಎಂದೆ. "ವಿ ವಿಲ್ ಟ್ರೈ. ಬಂದಾಗ ನಿಮ್ಮ ಬೆಂಗಳೂರಿಗೂ ಬರಲು ಪ್ರಯತ್ನಿಸುವೆವು." ಎಂದರು.

ಸಮಯ ನೋಡಿಕೊಂಡೆ. ಸಂಜೆ ಐದೂವರೆಯಾಗಿತ್ತು. ಅಲ್ಲಿಯ ಕಲಾ ಸಂಪತ್ತನ್ನು ನೋಡಲು ಪ್ರವಾಸಿಗರು ಗುಂಪು ಗುಂಪಾಗಿ ಬರುತ್ತಲೇ ಇದ್ದರು. ಅವರಿಗೆ ನಮಸ್ಕರಿಸಿ ಎದ್ದು ನಿಂತೆ. ಹಾಗೆಯೇ ನನ್ನ ಹೆಂಡತಿಯನ್ನು ಅವರ ಪಕ್ಕದಲ್ಲಿ ನಿಲ್ಲಿಸಿ ಆ ಮುದ್ದು ಮಕ್ಕಳ ಜೊತೆ ಒಂದೆರಡು ಫೋಟೋ ತೆಗೆದೆ. ಷಾಪಿನಿಂದ ಹೊರಗೆ ಬಂದು ಒಂದಷ್ಟು ಸಮಯ ಮತಾಡುತ್ತಾ ನಿಂತಿದ್ದೆವು. ಅಷ್ಟರಲ್ಲಿ ನಮ್ಮ ಪ್ರವಾಸದ ಮ್ಯಾನೇಜರ್ ರೋಷನ್ ಎಂಬ ಹೆಂಗಸು ನನ್ನ ಹತ್ತಿರ ಬಂದು " ಶ್ರೀನಿವಾಸ್, ವಿ ಕೆನ್ ಮೂವ್" ಎಂದಾಗ. ಆಕೆಗೆ ಮೊಯಿರಾ ಅವರನ್ನು ಪರಿಚಯ ಮಾಡಿಕೊಟ್ಟೆ. ರೋಷನ್ ತುಂಬ ಮಾತಿನ ಪ್ರಿಯಳಾಗಿದ್ದರಿಂದ ಪರಿಚಯ ಮಾಡಿಕೊಂಡು ಮತ್ತೆ ಮತ್ತೆ ಪ್ಯಾರಿಸ್‌ಗೆ ಬರುವೆ ಎಂದರು. ಅಷ್ಟರಲ್ಲಿ ಮೊಯಿರಾ ತನ್ನ ಬ್ಯಾಗಿನಿಂದ ಎರಡು ಚಿತ್ರಗಳನ್ನು ತೆಗೆದು ಒಂದು ಕವರ್‌ನಲ್ಲಿ ಹಾಕಿ " ವಿಥ್ ಗ್ರೇಟ್ ಅಫೆಕ್ಷನ್" ಎಂದು ಬರೆದುಕೊಟ್ಟಳು. ನಾನು ಒಂದು ರೀತಿಯ ಭಾವುಕತೆಯಿಂದ ಮೊಯಿರಾ ಮತ್ತು ಫರೀದ್ ಅವರ ಕೈ ಕುಲುಕಿ. ಆ ಮಕ್ಕಳನ್ನು ಅಪ್ಪಿಕೊಂಡೆ. "ಶ್ರೀನಿವಾಸ್ ಕಾಂಟ್ಯಾಕ್ಟ್ ಥ್ರೂ ಇ ಮೇಲ್" ಎಂದಳು. ಆಗ ರೋಷನ್ "ಯು ಬಿಕೇಮ್ ದಟ್‌ಮಚ್ ಕ್ಲೋಸ್ ಟು ದೆಮ್" ಎಂದಳು. ಅದಕ್ಕೆ ಮೊಯಿರಾ "ಆಲ್ ರಿಲೇಷನ್‌ಷಿಪ್ಸ್ ಲೈಕ್ ದಟ್ ಓನ್ಲೀ" ಎಂದಳು. ರೋಷನ್ ತುಂಟನಗೆಯಿಂದ ಮೊಯಿರಾ ಅವರ ಹೆಗಲ ಮೇಲೆ ಕೈ ಹಾಕಿ ಫೈನ್ ಎಂದು ಮುಂದೆ ಸಾಗಿದಳು. ನಾನು ಮತ್ತು ನನ್ನ ಹೆಂಡತಿ ಒತ್ತಾಯದಿಂದಲೇ ಅವರಿದ್ದಲ್ಲಿಂದ ಕಾಲುಕಿತ್ತೆವು. ಮೊಯಿರಾಳ ಕಣ್ತುಂಬ ವಿಷಾದ ಆವರಿಸಿತ್ತು. ತನ್ನ ವಕೀಲಿ ವೃತ್ತಿಯ ಜೀವನದಲ್ಲಿ ನೂರಾರು ಜನ ಕಕ್ಷಿದಾರರನ್ನು ಹೊಂದಿರುವಂಥವರು. ಅವರ ಜೀವನದ ವಿವಿಧ ಏರುಪೇರುಗಳ ನಡುವೆ ತೇಲಾಡುತ್ತಿರುವಂಥವಳು. ಇದರ ಮಧ್ಯೆ ನಾನೇನು? ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ನಡೆದೆ. ನನ್ನ ಹೆಂಡತಿ ಯಾರ್‍ಯಾರನ್ನೋ ಪರಿಚಯ ಮಾಡಿಕೊಂಡು ಬಿಡ್ತೀಯ ಎಂದು ಮುಗ್ಧತೆಯಿಂದ ಕೇಳಿದಾಗ ; ಈ ಜಗತ್ತಿಗೆ ಸಂಚಲನ ಶಕ್ತಿ ನೂರಾರು ವರ್ಷಗಳಿಂದ ಇರುವುದೇ ಹಾಗೆ ಎಂದು ಹೇಳುವ ಮನಸ್ಸಾದರೂ, ಹೇಳಲಿಲ್ಲ. ಕೋಚ್ ತಲುಪುವ ಮುನ್ನ ಕುತೂಹಲದಿಂದ ಮೊಯಿರಾಕೊಟ್ಟ ಕವರ್ ತೆರೆದು ನೋಡಿದೆ. ಅದರಲ್ಲಿ ನನಗೆ ತುಂಬ ಪ್ರಿಯವಾದ ಪಿಕಾಸೋವಿನ ಎಂಬ್ರೆಸ್ ಚಿತ್ರವಿತ್ತು. ಅದು ಅತ್ಯಂತ ಪ್ರಸಿದ್ಧವಾದ ಚಿತ್ರವೆಂಬುದು ಗೊತ್ತಿತ್ತು. ಪೋಸ್ಟ್ ಕಾರ್ಡ್ ಸೈಜಿನ ಆ ಕಲಾಕೃತಿ ಮೊಯಿರಾ ಮೂಲಕ ಮತ್ತೊಮ್ಮೆ ಮನಸ್ಸಿನ ತುಂಬ ಆವರಿಸಿಕೊಂಡು ಬಿಟ್ಟಿತ್ತು. ಇದೇ ರೀತಿಯ ಮತ್ತೊಂದು ಮನಮೋಹಕ ಚಿತ್ರ ಆಂಟೋನಿಯೋ ಕನಾವೋನದ್ದು. ಈ ಕಲಾವಿದ ಹದಿನೆಂಟನೇ ಶತಮಾನದ ಕೊನೆಯಲ್ಲಿ ಹಾಗೂ ಹತ್ತೊಂಬತ್ತನೇ ಶತಮಾನದ ಪ್ರಾರಂಭದ ಕಾಲು ಶತಮಾನದಲ್ಲಿ ಕ್ರಿಯಾ ಶೀಲವಾಗಿದ್ದವನು. ಮೇಲ್ನೋಟಕ್ಕೆ ಸ್ವಲ್ಪ ವಾಚ್ಯವೆನ್ನಿಸಿದರೂ ಮತ್ತೆ ಮತ್ತೆ ನೋಡಿ ಅನಂದಿಸಬಹುದಾದ ಚಿತ್ರ.

ಈ ಎರಡೂ ಚಿತ್ರಗಳ ಮೂಲಕ ಮೊಯಿರಾ ಸೆಬಾ ಕುಟುಂಬಕ್ಕೆ ಗುಡ್ ಬೈ ಹೇಳಿದೆ. ಐರಾವತದ ರೀತಿಯ ನಮ್ಮ ತಾಜ್ ಎಕ್ಸ್‌ಪ್ರೆಸ್ ನಿಧಾನವಾಗಿ ಪ್ಯಾರಿಸ್ಸಿನ ಮತ್ತೊಂದು ಮಹೋನ್ನತ ತಾಂತ್ರಿಕ ಶಿಲ್ಪ ಐಫೆಲ್ ಟವರ್‌ನ ಕಡೆ ಕರೆದುಕೊಂಡು ಹೋಯಿತು. ರಾತ್ರಿ ಹನ್ನೆರಡು ಗಂಟೆಗೆ ಟವರ್ ಮೂಲಕ ಪ್ಯಾರಿಸ್‌ನ ಒಟ್ಟು ನಗರದ ಬೆಳಕಿನ ವೈಭವವನ್ನು ಕಾಣಲು ಕಾತುರರಾಗಿದ್ದೆವು. ಶೀತಗಾಳಿ ಮೈಯನ್ನೆಲ್ಲ ತಣ್ಣಗಾಗಿಸುತ್ತಿತ್ತು. ಅಂತರಾಳದಲ್ಲಿ ಮೊಯಿರಾಳ ಕುಟುಂಬವನ್ನು ಇಲ್ಲಿಗೆ ಕರೆಯಬಹುದಾಗಿತ್ತು ಅನ್ನಿಸಿತು.

●

ಕನಸಿಗೊಂದು ಕಣ್ಣು

ಅಲೆಮಾರಿಯ ಮಾತು – 149

'ಹೇಳತೇನ ಕೇಳ' : ಸೃಜನಾತ್ಮಕವಾಗಿ ಕೇಳಿಸುತ್ತಲೇ ಇರುವ....

– ಶೂದ್ರ ಶ್ರೀನಿವಾಸ್



"ನಿನ್ನಂತೆ ಪಾತ್ರ ಕುಣಿದವರುಂಟೆ ಮಾರಾಯಾ?
ದೇವಾಂಗದಲ್ಲಿ ಕಿರಾತ ಮೈಮುಚ್ಚಿ
ಮಗ್ಗದ ಹೃದಯಂಗಮ ರಿದಮ್ಮಿಗೆ
ಚಂಡೆ ಮೃದಂಗ ಆಫ್ರಿಕಾದ ಚಳ್ಳಂಗ ಮೇಳೈಸಿ
ಮೂರು ಕಾಲಗಳಲ್ಲೂ ಹುಸಿ ಸಮೇತ ಆರು ಮೂರು ಪೆಟ್ಟಿನ
ಹೆಜ್ಜೆಗಳಿಕ್ಕುತ್ತ
ಐದು ನಿಮಿಷಗಳಲ್ಲೆ ಐವತ್ತರ ಬೆಳವಣಿಗೆ ಬೆಳೆದು
ಮೂಡ ಪಡುವಣ ದೇಶಾಂತರ ಚರಿಸಿ
ವೇಷಾಂತರ ನಟಿಸಿ
ತಾರಾಮೂರು ಹಾರಾಡುತ್ತ
ಅಟ್ಟವನೇರಿ ತಕ್ಕತೈ ಎಂದು ನೀನಂದೆ ನೋಡು:
ತಬ್ಬಿಬ್ಬಾದೆವು ನಾವೆಲ್ಲ!
ಅರ್ಥ ಕಟ್ಟಿದವರುಂಟೆ ನಿನ್ನಂತೆ?
ನಾನೀನೆಂಬ ಅರ್ಥದಾರಿಗಳ ಹೊಲಬುದಪ್ಪಿಸಿ
ಹಳೆ ಹೊಸಮಾತುಗಳ ಗೋತಾ ಹೊಡೆದರ್ಥಗಳ
ಮಥನಿಸಿ ಮಾತು ಹೊತ್ತಿಸಿದರೆ ನೀನು
ಗಹಗಹಿಸಿ ನಕ್ಕರು ಗುಹೆಗಳ ಗುಹೇಶ್ವರರು!"

(ಕಂಬಾರರ 'ಡಿ.ಆರ್.ನಾಗರಾಜ್' ಕವನದ ಭಾಗ)

ಕನ್ನಡದ ಸಾಹಿತ್ಯದ ನೆಲೆಯ ವಿಸ್ತಾರವೇ ವಿಚಿತ್ರವಾದದ್ದು; ವೈವಿಧ್ಯಮಯವಾದದ್ದು. ನಮ್ಮ ಸುತ್ತಮುತ್ತಲಿನ ಭಾಷಾಲೋಕದ ಸಾಹಿತ್ಯ ಈ ರೀತಿಯಲ್ಲಿಯೇ ಬೇರೆ ಬೇರೆ ಧ್ವನಿ ರೂಪಗಳನ್ನು ವಿಸ್ತರಿಸುತ್ತಿರಬಹುದು. ಯಾಕೆಂದರೆ ಷೇಕ್ಸ್‌ಪಿಯರ್, ಮಿಲ್ಟನ್, ಟಾಲ್ ಸ್ಟಾಯ್,

ದಾಸ್ತೋವಸ್ಕಿ, ಪಂಪ, ಕುವೆಂಪು, ಬೇಂದ್ರೆ, ಅಡಿಗ, ಲಂಕೇಶ್, ಕಂಬಾರ, ತೇಜಸ್ವಿ ಮತ್ತು ಅನಂತಮೂರ್ತಿಯಂಥವರು ಭಾವಲೋಕದ ರೂಪಕಗಳ ವ್ಯಾಪಕತೆಯನ್ನು ಒಂದು ವಿಸ್ತಾರವಾದ ಕ್ಯಾನ್ ವಾಸ್ ಮೇಲೆ ಎಂತೆಂಥದೋ ಅದ್ಭುತವಾದದ್ದನ್ನು ದಾಖಲಿಸಿದ್ದಾರೆ. ಇವರ ಪಕ್ಕದಲ್ಲಿಯೇ ಕೂತ ರವೀಂದ್ರನಾಥ ಟ್ಯಾಗೂರರನ್ನ ಹಾಗೂ ಪ್ರೇಮಚಂದ್ ಅವರನ್ನು ಯಾವ ರೀತಿಯಲ್ಲಿ ವ್ಯಾಖ್ಯಾನಿಸಿಕೊಳ್ಳುತ್ತ ಹೋಗಲಿ? ಯಾಕೆಂದರೆ ಒಂದೊಂದು ಮರು ಓದು 'ನಿನ್ನೆಯ ಜೀವನ ಇಂದಿನದಲ್ಲ' ಎಂದು ಪಿಸುಗುಡುವ ಧ್ವನಿ ಕಾವ್ಯದ ಅರ್ಥಾತ್ ಸಾಹಿತ್ಯದ ರೂಪದಲ್ಲಿ ಆಲಾಪನೆಗೊಳ್ಳುತ್ತಲೇ ಇದೆ. ಆಗ ಈ ಕಾವ್ಯಕ್ಕೆ ಈ ಸಂಗೀತಕ್ಕೆ ಹಾಗೂ ಸಾಹಿತ್ಯಕ್ಕೆ ಮುಂದುವರಿದು ಆ ಸೃಷ್ಟಿಕರ್ತ ಮಹನೀಯರನ್ನೆಲ್ಲ ನಾನಾ ರೀತಿಯಲ್ಲಿ ಆರೋಪಿಸಿಕೊಂಡು ಅಥವಾ ಸಣ್ಣ ಪ್ರಮಾಣದಲ್ಲಿ ಆವಾಹನೆಗೊಳಪಟ್ಟು ನನ್ನನ್ನು ನಾನು ಸಿಂಹಾವಲೋಕನಕ್ಕೆ ತೆರೆದುಕೊಂಡು ಆಸ್ವಾದಿಸುವುದಿದೆಯಲ್ಲ ಅದು; ಎಂಥ ಭಾವಪೂರ್ಣವಾದದ್ದು. ಇದನ್ನು ಕಳೆದ ನಾಲ್ಕೈದು ದಶಕಗಳಿಂದ ವಿವಿಧ ಆಯಾಮಗಳಲ್ಲಿ ಅನುಭವಿಸುತ್ತ ಬಂದಿದ್ದೇನೆ. ಈ ಅನುಭವವೆನ್ನುವುದು ಪೂರ್ಣವಾಗಿ ನನಗೆ ಸಂಬಂಧಿಸಿದ್ದು. ನಮ್ಮ ನಮ್ಮ ನೆಲೆಗಳನ್ನು ಹಿಂದಿರುಗಿ ನೋಡಿಕೊಳ್ಳುತ್ತಲೇ ಎಷ್ಟೊಂದು ದೂರ ಓಡಿ ಬಂದ್ಬಿಟ್ಟಿದ್ದೇವೆ ಎಂದು ವಿಷಾದದ ಪಾತ್ರೆಯಲ್ಲಿ ನಮ್ಮ ಮುಖಗಳನ್ನು ನೋಡಿಕೊಳ್ಳುವಾಗ ಸುಕ್ಕುಗಟ್ಟಿದ ಮುಖ, ನೆರೆತ ಕೂದಲ ನಡುವೆ ದೈಹಿಕ ದುರ್ಬಲತೆಯನ್ನು ಸಾಬೀತುಪಡಿಸುವ ರೀತಿಯಲ್ಲಿ ಕೇವಲ ವಯೋವೃದ್ಧರೇ ಕಾಣಿಸುತ್ತಿರುತ್ತಾರೆ. ಬುದ್ಧನ ಸ್ವಲ್ಪಮಟ್ಟಿನ ಜ್ಞಾನೋದಯವಾದರೂ ಇದ್ದಿದ್ದರೆ ಸದಾ ಹಸನ್ಮುಖತೆಯನ್ನು ಸ್ಥಿರಗೊಳಿಸಿಕೊಳ್ಳಬಹುದಾಗಿತ್ತು. ಇಂಥ ನೆಲೆಯಲ್ಲಿ ಚಂದ್ರಶೇಖರ ಕಂಬಾರರ ಶಿವಾಪುರ ಅವರ ಮಾನಸಿಕ ಸ್ಥಿತಿಯಲ್ಲಿ ಗೂಟ ಹೊಡೆದು ನಿಂತು ಹಾರಾಡುತ್ತಿರುವ ಪತಾಕೆ. ಅದು ಅಷ್ಟೊಂದು ಸಂಭ್ರಮದಿಂದ ಕೂಡಿರುವಂಥದ್ದೇನು ಅಲ್ಲ. ಆದರೆ ಅನುಭವಿಸಿರುವ ಸಂಭ್ರಮ. 'ಹಾಗೆಯೇ ಉಳಿದಿಲ್ಲವಲ್ಲ' ಎಂಬ ವಿಷಾದ ದಟ್ಟಗೊಂಡಿರುವ ನೆಲೆ ಭದ್ರಗೊಂಡಿದೆ. ಆದ್ದರಿಂದಲೇ ಇಂದಿನವರೆವಿಗೂ ಒಟ್ಟು ಕಂಬಾರರ ಸಾಹಿತ್ಯವನ್ನು ನಾವು ಓದುವಾಗ ಮತ್ತು ಅವರ ಮಾತನ್ನು ಕೇಳುವಾಗ; ನಮ್ಮ ಶಿವಾಪುರ ವ್ಯಾಪಕತೆಯ ವರ್ತುಲದಲ್ಲಿ ಗಿರಕಿ ಹೊಡೆಯುತ್ತಿರುತ್ತದೆ.

ಸುಮಾರು ನಾಲ್ಕು ದಶಕಗಳ ಹಿಂದೆ ಕಂಬಾರರು ಪರಿಚಯಿಸಿದ ಈ ಪದಗಳ ಮಾಲೆ ಹೀಗಿದೆ; "ಹೃದಯದ ದೃಷ್ಟಿ ಪ್ರೀತಿಯ ಜ್ಯೋತಿಯಲ್ಲಿ ಭೂತ ಜಾತವನ್ನು ನೋಡುವುದೇ ಈ ಹಗಲು. ಬೇಡ ಕ್ರೌಂಚ ಮಿಥುನವನ್ನು ಕಂಡುದು ಕಣ್ಣಿನ ಗಹಲಲ್ಲಿ. ಹೃದಯದ ಕತ್ತಲೆಯಲ್ಲಿ. ಆದಿ ಕವಿ ವಾಲ್ಮೀಕಿ ಅದೇ ಮಿಥುನವನ್ನು ಕಂಡುದು ಹೃದಯದ ನಯನಗಳು ಹಡೆದ ಹಗಲಲ್ಲಿ. ಕತ್ತಲೆ ಕವಿದ ಎದೆಯಲ್ಲಿ ದೇವನ ದ್ವೈತಲೀಲೆಯನ್ನು ಕಾಣದೆ, ಕಣ್ಣಲ್ಲಿ ಮಾಂಸದ ಮುದ್ದೆಗಳನ್ನು – ತನ್ನ ಹೊಟ್ಟೆಯ ಆಹಾರವನ್ನು ಕಂಡು, ಬೇಡ ಬಿಟ್ಟ ಬಾಣ ಹಕ್ಕಿಯ ದೇಹದಲ್ಲಿ ಹೊಕ್ಕು ಪಾರಾಗಿ ನೋಡುತ್ತ ನಿಂತಿದ್ದ ವಾಲ್ಮೀಕಿಯ ಎದೆಯಲ್ಲಿ ಸಹಸ್ರ ಬಾಣವಾಗಿ ನಾಟಿತು! ಸರ್ವಭೂತಹಿತ ದಯೆ ಪ್ರೇಮ ವಾತ್ಸಲ್ಯ ಮಹರ್ಷಿಯ ಹೃದಯದ ಪ್ರೇಮಲ ಪ್ರಭೆ, ಈ ಪ್ರಭೆ, ಈ ಹಗಲು ಬೇಡನ ಎದೆಯಲ್ಲಿ ಬೆಳಗುತ್ತಿದ್ದರೆ ಕ್ರೌಂಚ ಪಕ್ಷಿಗಳು ಬೇರೊಂದು ಬೆಳಗಿನಲ್ಲಿ ಬೆಳಗುತ್ತಿದ್ದುವು ಆ ನಿಷಾದನಿಗೆ.

ಭಾವಕ್ಕೂ ಈ ಹಗಲು ರಾತ್ರಿಗಳುಂಟು. ಗಂಗೆ ತುಂಗಭದ್ರೆ ನಿಮ್ಮ ಭಾವಕ್ಕೆ ಮಂಗಲ ಪಾವನ, ಶುಭ ಶೋಭನ. ನನ್ನ ಭಾವಕ್ಕೆ ಅವು ಹರಿವ ನೀರು. ಅಷ್ಟೇ. ಹಂಪೆ, ಕಾಶಿ, ಜೆರುಸಲೇಮ್, ಮೆಕ್ಕಾ ನಿಮಗೆ ಪವಿತ್ರ ಕ್ಷೇತ್ರ; ನನಗೆ ಮಣ್ಣಿನ ನೆಲ, ಅಷ್ಟೇ. ವಿಶ್ವನಾಥ, ವಿರೂಪಾಕ್ಷ, ವಿಠಲ, ಬನಶಂಕರಿ, ಬುದ್ಧ, ತೀರ್ಥಂಕರ – ಇವರ ವಿಗ್ರಹಗಳೆಲ್ಲ ದೇವರು

ನಿಮ್ಮ ಭಾವನೇತ್ರದಲ್ಲಿ; ಇವೆಲ್ಲ ಶಿಲಾಮೂರ್ತಿ ನನ್ನ ಭಾವದಲ್ಲಿ. ನನ್ನ ಭಾವ ಮಬ್ಬಾಗಿದೆ. ಕತ್ತಲೆಯಲ್ಲಿ ಮಂಗಲ ಪವಿತ್ರ ಶಿವ ಶೋಭನಗಳು ಕಾಣುವುದಿಲ್ಲ. ನಿಮ್ಮ ಭಾವದ ನಯನ ಮಾಂಗಲ್ಯದ ಪ್ರಭೆಯಲ್ಲಿ ಗಂಗೆ ಹಂಪೆ ವಿರೂಪಾಕ್ಷರನ್ನು ಕಾಣುತ್ತಿದೆ, ಅವರವರ ಗುಣಧರ್ಮದಲ್ಲಿ. ಹಗಲು ರಾತ್ರಿ ಗಂಡನೊಡನೆ ಸಂಸಾರ ಮಾಡುತ್ತಿದ್ದ ಸಾಕ್ರೆಟಿಸ್‌ನ ಹೆಂಡತಿಗೆ, ಹೆಂಡತಿಯ ಭಾವಕ್ಕೆ ಗೋಚರವಾದ ಸಾಕ್ರೆಟಿಸ್ ಎಷ್ಟು? ಆತನ ಶಿಷ್ಯ ಪ್ಲೇಟೋನಿಗೆ ಕಂಡ ಸಾಕ್ರೆಟಿಸ್ ಮತ್ತೆ ಎಷ್ಟು? ತನ್ನ ಕತ್ತಲೆಯಲ್ಲಿ ಗಂಡನನ್ನು ಕಾಣದೆ, ದಾಂಪತ್ಯ ಜೀವನದ ವಿರಸವನ್ನೇ ಕುಡಿದು ಕುಡಿಯುತ್ತ ಸತ್ತಳು ಆ ಮಹಾಸತಿ! ಸಾಕ್ರೆಟಿಸ್‌ನನ್ನು ಕಂಡು ಭಾವದ ಹಗಲು ಹೊಗರೇರಿ, ತನ್ನ ಭಾವ ಬುದ್ಧಿಯನ್ನೆಲ್ಲ ಗುರುವಿಗರ್ಪಿಸಿ ಮರ್ತ್ಯದ ಮಣಿಹ ಪೂರೈಸಿ ಕೃತಕೃತ್ಯವಾದ ಪ್ಲೇಟೊ". ಇಂಥ ನುಡಿ ವಾಕ್ಯಗಳು ತುಂಬಿಕೊಂಡಿರುವ 'ಶೂನ್ಯ ಸಂಪಾದನೆಯ ಪರಾಮರ್ಶೆ' ಎಂಬ **ಪ್ರೊ. ಸಂ.ಶಿ. ಭೂಸನೂರ ಮಠ** ಅವರ ಕೃತಿಯನ್ನು ಕುರಿತು ಕಂಬಾರರು ಎದೆ ತುಂಬಿ ಮಾತಾಡಿದ್ದರು. ಅದರಲ್ಲೂ ಅವರ ಪ್ರಾರಂಭದ ಮೊದಲೆರಡು ಪೀರಿಯಡ್ ಗಳು ಇದಕ್ಕೆ ಮೀಸಲಾಗಿದ್ದುವು. ಇದಾದ ನಂತರ 'ಹೇಳತೇನ ಕೇಳ' ಕಾವ್ಯವನ್ನು ನಾವು ವಿದ್ಯಾರ್ಥಿಗಳು ಅವರಿಂದ ಹಾಡಿಸಿದ್ದೆವು ಮತ್ತು ಓದಿಸಿದ್ದೆವು. ಯಾಕೆಂದರೆ ಚಂದ್ರಶೇಖರ ಕಂಬಾರರು ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಕನ್ನಡ ವಿಭಾಗಕ್ಕೆ ಬಂದಾಗ ನಾನು ಕೊನೆಯ ಆನರ್ಸ್ ವಿದ್ಯಾರ್ಥಿಯಾಗಿದ್ದೆ. ಅವರು ಇಲ್ಲಿಯ ಕನ್ನಡ ವಿಭಾಗಕ್ಕೆ ಬರುತ್ತಿರುವುದು; ನಿಮ್ಮ ಅದೃಷ್ಟ ಎನ್ನುವ ರೀತಿಯಲ್ಲಿ ಡಾ॥ ಕೆ. ಮರುಳಸಿದ್ದಪ್ಪ ಮತ್ತು ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಹೇಳಿದ್ದರು. ಇದರಿಂದ ಕಂಬಾರರ 'ಹೇಳತೇನ ಕೇಳ' ಎಂಬುದನ್ನು ಮೊದಲೇ ಓದಿಕೊಳ್ಳಲು ಸಾಧ್ಯವಾಗಿತ್ತು. ಅವರ ಬಗ್ಗೆ ಸ್ವಾಭಾವಿಕವಾಗಿಯೇ ಕೆಲವು ಮಿಥ್‌ಗಳು ಸೃಷ್ಟಿಯಾಗಿದ್ದುವು. ಹಾಗೆಯೇ ಅಮೇರಿಕಾದಲ್ಲಿ ಎ.ಕೆ. ರಾಮಾನುಜನ್ ಅವರಂಥ ಮಹಾನ್ ವಿದ್ವಾಂಸರ ಜೊತೆ ಕೆಲಸ ಮಾಡಿದವರು; ಎಂಬುದು ಕಂಬಾರರನ್ನು ನಾವು ಬರಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿತ್ತು. ಬರಮಾಡಿಕೊಂಡಿದ್ದಕ್ಕೆ 'ಶೂನ್ಯ ಸಂಪಾದನೆಯ ಪರಾಮರ್ಶೆ' ಕೃತಿಯ ಮೂಲಕ, ತಾವು ವಿದ್ಯಾರ್ಥಿಗಳ ಮುಂದೆ ನಿಲ್ಲುವುದಕ್ಕೆ ಒಂದು ವೇದಿಕೆಯನ್ನು ನಿರ್ಮಾಣ ಮಾಡಿಕೊಂಡರು. ಅಷ್ಟೇ ಅಲ್ಲ; 'ಹೇಳತೇನ ಕೇಳ' ಎಂಬ ಹೊಸ ಅನುಭವವನ್ನು ನೀಡುವ ಕಾವ್ಯದ ಜೊತೆಗೆ; 'ಪರಾಮರ್ಶೆ' ಕೃತಿಯು ನನ್ನ ಓದಿನ ಗಂಭೀರತೆಗೆ ಬಾಗಿಲು ತೆರೆಯಿತು.

ಆ ಕಾಲಘಟ್ಟ ಎಷ್ಟು ವಿಚಿತ್ರವಾಗಿತ್ತೆಂದರೆ: ನವ್ಯದ ಮೂಲಕ ಹೊಸ ಸೃಷ್ಟಿ ಕ್ರಿಯೆಯನ್ನು ಹೇಗೆ ನೋಡಬೇಕು ಹಾಗೂ ಅದನ್ನು ನಮ್ಮ ಮನದೊಳಗೆ ಬಿಟ್ಟುಕೊಳ್ಳುವ ಕ್ರಮದ ಬಗ್ಗೆ ಜಿಜ್ಞಾಸೆ ದಟ್ಟವಾಗುತ್ತ ಹೋಗುತ್ತಿತ್ತು. ಇಂಥ ಸಮಯದಲ್ಲಿ ಕಾವ್ಯದಲ್ಲಾಗಲಿ, ಇತರೆ ಸಾಹಿತ್ಯ ಪ್ರಕಾರಗಳಲ್ಲಾಗಲೀ ಏನೇ ಹೊಸದು ಗೋಚರಿಸಿದರೂ; ಸಂಭ್ರಮದಿಂದ ಅಪ್ಪಿಕೊಳ್ಳುತ್ತಿದ್ದೆವು. ಈ ದೃಷ್ಟಿಯಿಂದಲೇ ಭೂಸನೂರ ಮಠರ ಕೃತಿ ನಾನು ಸದಾ ತೆರೆದು ನೋಡುವ ಕೃತಿಯಾಗಿರುವುದು. ಇಂದಿಗೂ ಕಂಬಾರರ ಮೇಲೆ ದಟ್ಟವಾಗಿ ಪ್ರಭಾವ ಬೀರಿರುವ ಎಂತೆಂಥದೋ ವಾಕ್ಯ ಪುಂಜಗಳು ಮುಖಾಮುಖಿಯಾಗುವುದು. "ನವಿಲ ತತ್ತಿಯನ್ನು ನಾನು ನೋಡಿಲ್ಲ. ನೀವು ನೋಡಿರಬಹುದು. ತತ್ತಿಯಲ್ಲಿ ರಸದಲ್ಲಿ ಗರಿಯಿಲ್ಲ, ತುರಾಯಿ ಇಲ್ಲ. ಕಾಲಿಲ್ಲ ಮೂಗಿಲ್ಲ ಪುಚ್ಚ ಇಲ್ಲ, ಬಣ್ಣಬಣ್ಣದ ಸಂತೆ ಒಳಗೆ ನೆರೆದಿಲ್ಲ, ನವಿಲ ಪ್ರಾಣಕಳೆ ಇದ್ದರೂ ಪ್ರಾಣ ಅಲ್ಲಿಲ್ಲ. ಆದರೆ ತತ್ತಿ ಬಲಿದು ಹಕ್ಕಿ ಹೊರಬಿದ್ದರೆ ಅದೆಂಥ ಅದ್ಭುತ ಸೃಷ್ಟಿ! ಬಣ್ಣ ಬಣ್ಣ ರೂಪಾಗಿ, ಪ್ರಾಣವಾಗಿ, ಗರಿಗೆದರಿ ಕುಣಿವ ನವಿಲು. ಏನು ಮಾಯಾಜಾಲ! ಯಾವ ಮಹೇಂದ್ರ ಜಾಲ? ನವಿಲು ಒಂದು ಪಿಂಡಾಂಡ, ವಿಶ್ವ ಪ್ರಪಂಚ ಬ್ರಹ್ಮಾಂಡ, ಅದು

ಬ್ರಹ್ಮನ ಬಹುದೊಡ್ಡ, ಅಳತೆಗೆಟ್ಟ ದೊಡ್ಡ ತತ್ತಿಯಂತೆ. ಇದು ಭಾರತದ ಅತಿ ಪುರಾತನ ದರ್ಶನ". ಇಂಥದ್ದೆಲ್ಲ ಓದಿಕೊಳ್ಳುವುದಕ್ಕೆ ಕೇಳಿಸಿಕೊಳ್ಳುವುದಕ್ಕೆ ಹಾಗೆಯೇ ಇದಕ್ಕೆ ಮೀರಿ ನೋಡುವುದಕ್ಕೆ; ಸೋಜಿಗ ಮತ್ತು ಸೌಂದರ್ಯ ಏಕಕಾಲದಲ್ಲಿ ಮಿಳಿತವಾಗಿರುತ್ತದೆ. ಆದ್ದರಿಂದಲೇ ಕಂಬಾರರಂಥ ದರ್ಶನದ ಕವಿಗೆ 'ದೇಸಿ' ಎಂಬುದು ಯಾವಾಗಲೂ ಸೋಜಿಗವಾಗಿ ಪುಳಕಗೊಂಡಿರುತ್ತದೆ. ಆಗ ಅವರು ನುಡಿಗಳ ಮೂಲಕ ಆಚರಿಸುವ ಒಂದೊಂದು ಕ್ರಿಯೆಯೂ ಸಂಭ್ರಮದಿಂದಲೇ ಕೂಡಿರುತ್ತದೆ. ಯಾಕೆಂದರೆ ಬಾಲ್ಯಕಾಲದಿಂದಲೂ ಕೇಳಿಸಿಕೊಂಡು ಬಂದವರು. ಸದಾ ಅವರ ಮನಸ್ಸನ್ನು ಪುಟಿದು ನಿಲ್ಲಿಸುವ ಕ್ರಿಯೆ ಹಿನ್ನೆಲೆಯಾಗಿ ಕೆಲಸ ಮಾಡುತ್ತಿರುತ್ತದೆ. ಸಾಮಾನ್ಯವಾಗಿ ಕಂಬಾರರು ಮಾತಾಡುವಾಗ ತಮ್ಮ ಮಾತುಗಳ ಓಘದಲ್ಲಿ 'ಎಂಥ ಅದ್ಭುತ ಗೊತ್ತಾ?' ಎಂಬ ಉದ್ಗಾರಗಳನ್ನು ಧ್ವನಿಪೂರ್ಣಗೊಳಿಸುತ್ತಿರುತ್ತಾರೆ. ಕುತೂಹಲ ಸೋಜಿಗ ಮತ್ತು ಸಂಭ್ರಮ ಅವರ ಒಟ್ಟು ಕಾವ್ಯದ ಸ್ಥಾಯಿಭಾವವಾಗಿರುವಂಥದ್ದು. ಇದನ್ನೇ ನನ್ನಂಥವರು ಮನಸ್ಸಿನಲ್ಲಿ ತುಂಬಿಕೊಂಡು ಯೋಚಿಸುವಾಗ; ಕಲಾವಿದನೊಬ್ಬನ ಬೆಳವಣಿಗೆಯಲ್ಲಿ ಕಾಲಘಟ್ಟವೊಂದು ಹೇಗೆ ತೀರ್ಮಾನದ ಸ್ಥಾನದಲ್ಲಿ ನಿಲ್ಲುತ್ತದೆಂದು ಚಕಿತಗೊಂಡಿದ್ದೇನೆ.

ನಾವು ಕಲಿಯುವ ನಾಲ್ಕಕ್ಷರದಿಂದ ಬದುಕಿನ ಎಂತೆಂಥ ಮರ್ಮಾಂತರಗಳನ್ನು ಅರಿಯಬಹುದು ಎಂಬುದರ ಬಗ್ಗೆ ದಿಗ್ಭ್ರಮೆಯಿಂದಲೇ ಸಂಭ್ರಮಿಸುತ್ತ ಬಂದವರು. ಕುಲಕಸುಬಾದ ಕಬ್ಬಿಣ ಕೆಲಸದ ಕರ್ಮಭೂಮಿಯ ಆಯಗಾರನಾಗಿ; ಅದು ಸೃಷ್ಟಿಸುವ ಸೂಕ್ಷ್ಮತೆಗಳನ್ನು ಹಾಗೂ ಹೀನಾಯಸ್ಥಿತಿಯನ್ನು ಅವಲೋಕಿಸಿಕೊಂಡವರು. ಅದರಲ್ಲೂ ಭಾರತದಂಥ ಜಾತಿ ವ್ಯವಸ್ಥೆಯ ಸಂದರ್ಭದಲ್ಲಿ ಒಂದು ಊರಿನಲ್ಲಿ ಏನೇನೋ ದಬ್ಬಾಳಿಕೆಗಳ ನಡುವೆ '**ಆಯಗಾರ**'ನ ಸಂಯಮಶೀಲ ದುಡಿಮೆ ಬಹಳ ವಿಚಿತ್ರವಾದದ್ದು. ಸೂಕ್ಷ್ಮಮತಿಯಾದವನು ಮಾತ್ರ ಅರಗಿಸಿಕೊಂಡು ಬದುಕಬಲ್ಲ. ಸದಾ ಕಬ್ಬಿಣದ ಕಾವಿನ ಪಾಕದಲ್ಲಿ ಒಂದೊಂದು ಆಯುಧವನ್ನು ನೆಲದ ಎದೆಯೊಳಕ್ಕೆ ಸಿದ್ಧಪಡಿಸಿಕೊಡುವುದಿದೆಯಲ್ಲ; ಅದು ಅಪೂರ್ವವಾದದ್ದು. ಎರಡು ತೋಳುಗಳನ್ನು ಇಕ್ಕಳ ಮತ್ತು ಸುತ್ತಿಗೆಯ ನಡುವೆ ಸಮನ್ವಯಗೊಳಿಸುವುದು ಎಷ್ಟು ಕಷ್ಟವೋ ಅಷ್ಟೇ ಅಪಾಯಕಾರಿಯಾದದ್ದು. ಆದರೆ ಪ್ರತಿಯೊಂದು ಕುಲಕಸುಬಿನ ಮುಂದೆ ಜಾಣತನಕ್ಕೆ ನಿಷ್ಠೆ ಲೇಪನವಾಗಿ ಕೆಲಸ ಮಾಡುತ್ತಿರುತ್ತದೆ. ಅದು ಕೇವಲ ವೃತ್ತಿಗೆ ಸಂಬಂಧಿಸಿದ್ದು ಮಾತ್ರವಾಗಿರುವುದಿಲ್ಲ. ವಿಚಿತ್ರ ಮನಸ್ಥಿತಿಗಳ ಜೊತೆಯಲ್ಲಿ ವ್ಯವಹರಿಸುವುದೂ ಆಗಿರುತ್ತದೆ. ಇಂದು ಆ '**ಆಯಗಾರ**' ಮನಸ್ಸುಗಳ ಹಿಂದೆ ಶಿಕ್ಷಣ ಬಂದು ಕೂಡಿಕೊಂಡಿದೆ. ಪ್ರಜಾಪ್ರಭುತ್ವದಿಂದ ಪ್ರತಿಯೊಂದು ಪುಟ್ಟ ಜಾತಿಗೂ ಎತ್ತರದ ಧ್ವನಿಯಲ್ಲಿ ಮಾತಾಡುವುದಕ್ಕೆ; ಹಾಗೆಯೇ ಅದನ್ನು ಧ್ವನಿಯಾಗಿ ಪರಿವರ್ತಿಸಿಕೊಳ್ಳುವುದಕ್ಕೆ ಶಕ್ತಿ ಬಂದಿದೆ. ಆದ್ದರಿಂದ ಕಂಬಾರರು ತಮ್ಮ ಮೂಲ ನೆಲೆಯಾದ 'ಶಿವಾಪುರ'ವನ್ನ ಒಟ್ಟು ಚಿಂತನಾ ಕ್ರಮದಲ್ಲಿ ತುಂಬಿಕೊಂಡು '**ನಾ ಹೇಳತೇನ ಕೇಳ**' ಎಂಬುದನ್ನು ಕಲಾತ್ಮಕವಾಗಿ ಹೇಳುವ ಕುಶಲತೆಯನ್ನು ರೂಢಿಸಿಕೊಂಡಿರುವುದು. ಅವರ ಮುಂದೆ ಕೂತರೆ, ಸಭೆ, ಸಮಾರಂಭಗಳಲ್ಲಿ ಭಾಗವಹಿಸಿದರೆ: ತಮ್ಮ ಬಾಲ್ಯಕಾಲದ ಚಕ್ರಾಧಿಪತ್ಯದ ರಾಜಧಾನಿ **ಶಿವಾಪುರ** ಅಲ್ಲಿ ಸಂಭ್ರಮಿಸಿರುತ್ತದೆ.

ಕಂಬಾರರಲ್ಲಿ ಇದನ್ನು ಅವರ ಕಾವ್ಯ, ನಾಟಕ, ಕಾದಂಬರಿ ಮತ್ತು ಇನ್ನಿತರ ಬರವಣಿಗೆಯಲ್ಲಿ ರೂಪ ಪಡೆದಿರುವುದರಿಂದ ನಮಗೆ ಅರಿಯುವುದು ಕಷ್ಟವಾಗುವುದಿಲ್ಲ. ಹಾಗೆಯೇ ಒಟ್ಟು ಪರಂಪರೆಯಿಂದ ದತ್ತವಾಗಿರುವ ಜನಪದ ಕಥಾಲೋಕ ಹತ್ತಾರು ಮಾರುವೇಷಗಳಲ್ಲಿ ಮೈ ತುಂಬಿ ನಿಲ್ಲುತ್ತದೆ. ಅವರ ವ್ಯಕ್ತಿತ್ವದಲ್ಲಿಯೇ '**ಪರ್‌ಫಾರ್ಮಿಂಗ್ ಪರ್ಸನಾಲಿಟಿ**' ಸದಾ ಗರಿಗೆದರಿಯೇ ನಿಂತಿರುತ್ತದೆ. ಕುದುರೆಯೇರಿ ತಮ್ಮ ಬಾಲ್ಯಕಾಲದ ಹಾಗೂ ಯೌವನದ ಪ್ರಾರಂಭದ ದಿನಗಳಲ್ಲಿ ಕಥೆಗಳಲ್ಲಿ ಬಯಲಾಟಗಳಲ್ಲಿ ಕಂಡ ರಾಜಕುಮಾರಿಯರನ್ನು ಹುಡುಕುವ

ಮನಸ್ಥಿತಿಯವರು. ಆದರೆ ಅದು **'ಎಲ್ಲಿದೆ ಶಿವಾಪುರ?'**ವಾಗಿಬಿಟ್ಟಿದೆ. ಈ ವಿಷಾದವೇ ಕಾವ್ಯದ ಧ್ವನಿಯಾಗಿರುವುದು. ಅಥವಾ ಅವರ ಒಟ್ಟು ಬರವಣಿಗೆಯ ಚೈತನ್ಯವಿರುವುದು. ತಮ್ಮ ಕನಸಿನ ಶಿವಾಪುರ ನನಸಾಗಿಯೇ ಉಳಿದುಬಿಟ್ಟಿದ್ದರೆ; ಒಬ್ಬ ಶ್ರೇಷ್ಠ ಕವಿಯಾಗಿ ದಕ್ಕುತ್ತಿರಲಿಲ್ಲವೇನೋ. ಲೇಖಕನಾದವನಿಗೆ ಮೂಲಾಧಾರವಾದದ್ದು ವಿಷಾದ ಮತ್ತು ಅತೃಪ್ತಿ. ಅತ್ಯಂತ ಸಂತೃಪ್ತ ಮನಸ್ಸು ಸೃಷ್ಟಿಕ್ರಿಯೆಗೆ ಪೀಡೆಯಾಗಿ ಅಡ್ಡವಾಗಿಬಿಡುವ ಕ್ಷಣಗಳೇ ಜಾಸ್ತಿ. ಈ ದೃಷ್ಟಿಯಿಂದ ಇಂದಿಗೂ ಕಂಬಾರರು ನಾ **'ಹೇಳತೇನ ಕೇಳ'** ಎಂಬುದು ಗಟ್ಟಿ ಧ್ವನಿಯಾದರೂ ಯಜಮಾನಿಕೆಯ ಗತ್ತಿನದಾದರೂ; ಅಲ್ಲಿ ತುಂಬಿರುವುದು ತಲ್ಲಣಗಳ ಮನಸ್ಥಿತಿಯೇ. ಹಾಗೆ ನೋಡಿದರೆ; ನಾವು ಅವರ ಪಾಠ ಕೇಳುವ ಪ್ರಾರಂಭದ ದಿನಗಳಲ್ಲಿಯೇ ಡಾ॥ ಕೆ. ಮರುಳಸಿದ್ದಪ್ಪನವರ ಕೊಠಡಿಯು ರಂಗಭೂಮಿ ಚಿಂತಕರ, ಸಾಹಿತ್ಯಪ್ರಿಯರ ಸಾರ್ವಜನಿಕ ಕೊಠಡಿಯಾಗಿ ಪರಿವರ್ತನೆಗೊಂಡಿತ್ತು. ಅಲ್ಲಿ 'ನಾರ್ಸಿಸಸ್', ಚಾಳೇಶ ಓದಿದರು. ಜೋಕುಮಾರಸ್ವಾಮಿ, ಸಂಕ್ರಾಂತಿ ಮತ್ತು ಈಡಿಪಸ್ ರೂಪುಗೊಳ್ಳಲು ಸಾಧ್ಯವಾಯಿತು. ಇದರಿಂದ ಬಯಲು ರಂಗಮಂದಿರದ ನಾಟಕೋತ್ಸವ 'ಸಾಂಸ್ಕೃತಿಕ' ರಂಗಭೂಮಿಯ ಇತಿಹಾಸವನ್ನೇ ಬರೆದಂತಾಯಿತು. ಬಿ.ವಿ. ಕಾರಂತರಂತೂ ಎಲ್ಲೆಲ್ಲಿಯೋ ಅಲೆದಾಡುತ್ತಿದ್ದವರು 'ಇಲ್ಲಿ' ಗಟ್ಟಿಯಾಗಿ ರಂಗಭೂಮಿಗಾಗಿ ನೆಲೆಯನ್ನು ಹುಡುಕಿಕೊಂಡರು. ಗಿರೀಶ್ ಕಾರ್ನಾಡರು ಬಂದು ಸೇರಿದರು. ಇಷ್ಟೆಲ್ಲ ಏನೇನೋ ಉತ್ಸವಗಳು, ಸಂಭ್ರಮಗಳು ನಡೆದರೂ ಕಂಬಾರರಲ್ಲಿ ಅಂತರಂಗದಲ್ಲಿ ಮನೆ ಮಾಡಿಕೊಂಡಿದ್ದ ಕವಿ ಮತ್ತು ನಾಟಕಕಾರ ನಾಪತ್ತೆಯಾಗಲಿಲ್ಲ. ಎಷ್ಟು ಸಾರ್ವಜನಿಕವಾದರೂ ಕೊನೆಗೂ ನಾನೊಬ್ಬ ಕವಿಯಾಗಿ, ನಾಟಕಕಾರನಾಗಿಯೇ ಇಲ್ಲಿ ಉಳಿಯಬೇಕಾದದ್ದು ಎಂಬುದನ್ನು ಗಟ್ಟಿಯಾಗಿ ನಂಬಿದವರು. ಯಾಕೆಂದರೆ ಅವರ ವ್ಯಕ್ತಿತ್ವದ ಸಂಭ್ರಮದ ಲೋಕವಿದ್ದುದೇ **'ಸಾಹಿತಿ'** ಎಂಬ ಶಿವಾಪುರದಲ್ಲಿ.

ಬಹಳ ಸ್ವಾರಸ್ಯಕರವಾದ ವಿಷಯವೆಂದರೆ : ಕಂಬಾರರು ಸಾಹಿತಿಯಾಗಿ, ಕವಿಯಾಗಿ ಎತ್ತರದ ನೆಲೆಯನ್ನು ತಲುಪಿದ ದಿನಗಳಲ್ಲಿ ತಮ್ಮ ಸುತ್ತಲೂ ನಡೆಯುತ್ತಿದ್ದ ನಾನಾ ರೀತಿಯ ಸಾಹಿತ್ಯಕ ವಾಗ್ವಾದಗಳಿಗೆ ಸ್ಪಂದಿಸಿದವರಲ್ಲ. ಒಂದು ರೀತಿಯಲ್ಲಿ ಗುಮಾನಿಯಿಂದ ನೋಡುತ್ತಲೇ ಅಂತರವನ್ನಿಟ್ಟುಕೊಂಡವರು. **'ಎಲ್ಲಿದೆ ಶಿವಾಪುರ?'** ಎಂದು ಕಾವ್ಯದಲ್ಲಿ ಹುಡುಕಾಟಕ್ಕೆ ತೊಡಗಿದವರು. ಆದರೆ ಇಲ್ಲಿಯ ಒಕ್ಕೂಟ, ಜಾತಿ ವಿನಾಶ, ಬಂಡಾಯ ಸಾಹಿತ್ಯ ಸಂಘಟನೆಗಳು ಕೊನೆಗೂ ಎಲ್ಲಿಗೆ ತಲುಪಬಹುದು? ಎಂದು ಸಾಹಿತ್ಯಕ ನೋಟದಲ್ಲಿ ನೋಡುತ್ತ ಬಂದವರು. **'ನಾನು ಏನು ಮಾಡಿದರೂ; ಉತ್ತರಿಸಿದರೂ'** ಅದು ಸಾಹಿತ್ಯಕವಾಗಿಯೇ ಕೊನೆಗೂ ಉಳಿಯಬೇಕು ಎಂಬುದು ಅವರ ಮನಸ್ಸಿನ ದಟ್ಟತೆಯಲ್ಲಿತ್ತು. ನವಿಲಿನ ತತ್ತಿಯಂತೆ ಒಂದೊಂದು ಶಬ್ದದಲ್ಲೂ ಜೀವ ಪಡೆದು ಏನೇನೋ ಚಿತ್ತರಿಸಲು ತಹತಹಿಸುತ್ತಿರುತ್ತದೆ. ಅವರೊಬ್ಬ ಕೇವಲ ಲೇಖಕ ಮಾತ್ರವಲ್ಲ; ಕವಿ, ನಾಟಕಕಾರ, ನಟ ಮತ್ತು ಹಾಡುಗಾರರು. ಈ ರೀತಿಯ ಬಹುಮುಖತೆಯನ್ನು ನಮ್ಮ ಹಿರಿಯ ಸಾಹಿತಿಗಳಲ್ಲಿ ಸ್ವಲ್ಪಮಟ್ಟಿಗೆ ಶಿವರಾಮ ಕಾರಂತರಲ್ಲಿ ಕಾಣಬಹುದಾಗಿತ್ತು. ಕಾರಂತರು ಗೆಜ್ಜೆ ಕಟ್ಟಿಕೊಂಡು ಕುಣಿದವರು. ಯಕ್ಷಗಾನದ ಒಳಸುಳಿಗಳನ್ನು ಕಾಣಲು ಹೊರಟವರು. ನಾವು ಎಷ್ಟೋ ಬಾರಿ ಮಾತಾಡಿಕೊಂಡದ್ದುಂಟು: ಕಂಬಾರರು ಕವಿಯಾಗದೆ ಪೂರ್ಣ ಪ್ರಮಾಣದ ನಾಟಕಕಾರರೇ ಆಗಿದ್ದರೆ: ಒಂದು ದೊಡ್ಡ ಪ್ರಮಾಣದ ನಾಟಕ ಕಂಪನಿಯನ್ನು ಕಟ್ಟಿಬಿಡುತ್ತಿದ್ದರೇನೋ. ಯಾಕೆಂದರೆ ಭಾಷೆ ಮತ್ತು ಸಂಭಾಷಣೆಯ ಜೊತೆ ಚಕ್ಕಂದವಾಡುವ ಕಲೆಗಾರಿಕೆ ಅವರ ವ್ಯಕ್ತಿತ್ವದಲ್ಲಿಯೇ ದಟ್ಟವಾಗಿದೆ. ಇದಕ್ಕೆ ಮುಖ್ಯ ಕಾರಣ: ಉತ್ತರ ಕರ್ನಾಟಕದ ಜನಜೀವನದ ಏಳುಬೀಳುಗಳನ್ನು ಸಾಂಸ್ಕೃತಿಕವಾಗಿ ಒಳಗೆ

ಬಿಟ್ಟುಕೊಂಡವರು. ಕವಿಯಾಗಿದ್ದರಿಂದ ಸ್ವಾಭಾವಿಕವಾಗಿಯೇ ಆವರಿಸಿಕೊಳ್ಳುವ ಸಂಕೋಚಗಳು ಕಾವ್ಯದ ಧ್ವನಿಯಾಗಿ ಸಂಕೇತಗಳಾಗುತ್ತವೆ. ಹಾಗೆಯೇ ಅವರ ಗದ್ಯ ಬರವಣಿಗೆಯಲ್ಲಿ ಒಂದು ರೀತಿಯಲ್ಲಿ ಕಾವ್ಯಾತ್ಮಕತೆಯನ್ನೇ ಧ್ವನಿಸುತ್ತಿರುವುದು. ಇದಕ್ಕೆ ಕಂಬಾರರ **'ಸಿಂಗಾರವ್ವ ಮತ್ತು ಅರಮನೆ'** ಮತ್ತು **'ಶಿಖರ ಸೂರ್ಯ'**ದಲ್ಲಿಯೂ ಎಷ್ಟೊಂದು ರೀತಿಯಲ್ಲಿ ಜೀವನದ ಬಿಸಿ ಬಸಿಯುತ್ತದೆ. ಸ್ವಲ್ಪಮಟ್ಟಿಗೆ ಕರಿಮಾಯಿಯಲ್ಲೂ ಕಾಣಬಹುದು. ಆದರೆ ಈ ಪ್ರಮಾಣದಲ್ಲಿ ಅಲ್ಲ. ನಮ್ಮ ಬಾಲ್ಯಕಾಲದ ಪ್ರಪಂಚ ಒಂದು ರೀತಿಯಲ್ಲಿ ಕಿರಿದಾಗಿದ್ದರೂ; ವಿಶಾಲಾರ್ಥದಲ್ಲಿ ವಿಶ್ವವ್ಯಾಪಕತೆಯನ್ನು ಪಡೆದಿರುತ್ತದೆ. ಅದರಲ್ಲೂ ಆಧುನಿಕ **'ಸೆನ್ಸಿಬಿಲಿಟಿಗಳು'** ಅನುಭವವನ್ನು ವ್ಯಾಪಕಾರ್ಥದ ಕಡೆಗೆ ಕರೆದೊಯ್ಯುತ್ತಲೇ ಇರುತ್ತದೆ. ಪ್ರತಿಕ್ಷಣವೂ ಜೊತೆಗೆಯೇ; ಹೀಗೆಲ್ಲ ಆಗಿ ಹೋಗಿದೆಯಲ್ಲ ಎಂಬ ತಳಮಳ ಭಾಷೆಯನ್ನು ಧ್ವನಿ ಮತ್ತು ವಿಷಾದದತ್ತ ಸೆಳೆದೊಯ್ಯುತ್ತಲೇ ಇರುತ್ತದೆ. ಈ ಕಾರಣಕ್ಕಾಗಿ **'ಸಿಂಗಾರವ್ವ ಮತ್ತು ಅರಮನೆ'** ನನಗೆ ತುಂಬ ಹತ್ತಿರವಾದ ಕಾದಂಬರಿ. ಎರಡು ಮೂರು ಬಾರಿ ಓದಿ ಸಂತೋಷಪಟ್ಟಿರುವ ಕಾದಂಬರಿ. ಅವರ ಕಾವ್ಯದ ರೀತಿಯಲ್ಲಿ.

ಹಾಗೆ ನೋಡಿದರೆ **'ಸಿಂಗಾರವ್ವ ಮತ್ತು ಅರಮನೆ'** ಪೂರ್ಣ ಆಕಾರ ಪಡೆಯುವ ಮುನ್ನ ಅದರ ಚರ್ಚೆಯನ್ನು ಗಮನಿಸಿದವನು. ಒಮ್ಮೆ ನನಗೆ ತುಂಬ ಪ್ರಿಯರಾದ ಕಥೆಗಾರ ಬಿ.ಸಿ. ದೇಸಾಯಿ ಬೆಂಗಳೂರಿಗೆ ಬಂದಿದ್ದರು. ಅವರಿಗೆ ಕಂಬಾರರೆಂದರೆ ಎಲ್ಲಿಲ್ಲದ ಅಭಿಮಾನ. ದೇಸಾಯಿಯವರ **'ಸಾವು ಮತ್ತು ಇತರ ಕಥೆಗಳು'** ಸಂಕಲನವಂತೂ ಸಾಕಷ್ಟು ಚರ್ಚೆಯಾದ ಕೃತಿ. 'ಸಾವು' ಕಥೆ ಶೂದ್ರದಲ್ಲಿ ಪ್ರಕಟವಾಗಿತ್ತು. ಬಿ.ಸಿ.ದೇಸಾಯಿ ತುಂಬ ವಿಚಿತ್ರವಾದ ಮನುಷ್ಯ. ತುಂಬ ಓದಿಕೊಂಡಿದ್ದವರು. ಪದ್ಮರಾಜ ದಂಡಾವತಿಯವರಿಂದ ಪರಿಚಯವಾಗಿದ್ದರು. ಕುಡಿತ ಮತ್ತು ಕಾಮದ ಬಗ್ಗೆ ಒಂದು ರೀತಿಯ ಅದಮ್ಯ ತಾದಾತ್ಮ್ಯತೆ. ಒಮ್ಮೊಮ್ಮೆ ಅದರಲ್ಲಿ ಮುಳುಗಿ ಹೋದವರಂತೆ ವಿಶ್ಲೇಷಣೆಗೆ ತೊಡಗುತ್ತಿದ್ದರು. ಪಶ್ಚಿಮದ ಬಹುಮುಖ್ಯ ಲೇಖಕರ ಒಟ್ಟು ಬರವಣಿಗೆಯನ್ನು ಬೊಗಸೆಯಲ್ಲಿಟ್ಟುಕೊಂಡು ಇವರು **'ಹೀಗೆ'** ಎಂದು ಮಾರ್ಮಿಕವಾಗಿ ಮಾತಾಡುತ್ತಿದ್ದರು. ಕಂಬಾರರಿಗೆ ಬರೆಯುವ ಅಗಾಧ ಶಕ್ತಿ ಇದೆ ಎಂದು 'ಸಿಂಗಾರೆವ್ವ...'ನನ್ನು ವ್ಯಾಖ್ಯಾನಿಸತೊಡಗಿದ್ದರು. ಆ ಒಟ್ಟು ವ್ಯಾಖ್ಯಾನವನ್ನು ರೆಕಾರ್ಡ್ ಮಾಡಿಕೊಂಡಿದ್ದರೂ; ಅದೇ ಒಂದು ಕೃತಿಯಾಗಿರುತ್ತಿತ್ತು. ದೇಸಾಯಿಯವರು ಬೆಂಗಳೂರಿಗೆ ಬಂದಾಗಲೆಲ್ಲ ಅವರನ್ನು ಭೇಟಿಯಾಗುವುದು ನಮಗೆ ಒಂದು ಸಂಭ್ರಮವಾಗಿರುತ್ತಿತ್ತು. ಒಮ್ಮೆ ಡಿ.ಆರ್.ನಾಗರಾಜ್ ಜೇರೆ ಭಾಗಿಯಾಗಿದ್ದ. ಡಿ.ಆರ್.ರೀತಿಯಲ್ಲಿ ಶಿಸ್ತುಬದ್ಧ ಆಲೋಚನ ಕ್ರಮ ದೇಸಾಯಿಯವರಿಗೆ ಇಲ್ಲದಿದ್ದರೂ; ಜೀವನವನ್ನು ನೋಡುವ ಕ್ರಮದಲ್ಲಿ ಅವರಿಗಿದ್ದ ಸೆಡಹು ಅಪೂರ್ವವಾದದ್ದು. ಹಾಗೆಯೇ ಸಾಹಿತ್ಯ ಮತ್ತು ರಾಜಕೀಯಕ್ಕೆ ಸಂಬಂಧಿಸಿದಂತೆ ಇರುವ ಆಂತರಿಕ ಬಾಂಧವ್ಯದ ಬಗ್ಗೆ ತುಂಬ ಒಲವನ್ನು ಹೊಂದಿದ್ದರು. ಪ್ರತಿಯೊಂದು ಸಮಾಜದ ಸ್ಥಿತ್ಯಂತರಗಳಿಗೆ ಸಂಬಂಧಿಸಿದಂತೆ ರಾಜಕೀಯ ನಿರ್ವಹಿಸುವ ಒಳನೋಟಗಳನ್ನು ಎಷ್ಟು ಬಿಡಿಬಿಡಿಯಾಗಿ ಮುಂದಿಡುತ್ತಿದ್ದರು. ಇದನ್ನು ಬರೆಯುವ ಕಾಲಕ್ಕೆ; ಅವರು ನಮ್ಮ ಮುಂದೆ ಕೂತು ಮಾತಾಡುತ್ತಿದ್ದಾರೆ ಎಂಬ ಭಾವನೆ ದಟ್ಟವಾಗುತ್ತದೆ. ಎಂಥವರ ಮೇಲೂ ಪ್ರಭಾವ ಬೀರುವ ವ್ಯಕ್ತಿತ್ವ ದೇಸಾಯಿಯವರದಾಗಿತ್ತು.

ಒಂದು ದೃಷ್ಟಿಯಿಂದ ಆ ಕಾಲಘಟ್ಟದಲ್ಲಿ 'ಸಿಂಗಾರವ್ವ...'ನನ್ನು ಓದಿದಿರಾ? ಎಂದು ಒಬ್ಬರಿಗೊಬ್ಬರು ಗೆಳೆಯರು ಕೇಳಿಕೊಳ್ಳುವ ರೀತಿಯಲ್ಲಿ ಅದು ಸುದ್ದಿಯಾಗಿತ್ತು. ಇದೊಂದು ಹೆಚ್ಚುಗಾರಿಕೆಯೂ ಹೌದು. ದೇಸಾಯಿಯವರು ಬೀರಿದ್ದ ಪ್ರಭಾವದ ಕಾರಣಕ್ಕಾಗಿಯೇ ಅವರನ್ನು ನೋಡಲು ಅವರ ಮನೆಗೆ ಹೋದೆ. ಜೊತೆಗೆ ಕಥೆಗಾರ ಕುಂದರನಾಡ ಪಾಟೀಲ ಅವರನ್ನು

ಕರೆದುಕೊಂಡು ಹೋದೆ. ಬೆಳಗಾಂನಲ್ಲಿ ವ್ಯವಸ್ಥೆ ಮಾಡಿದ್ದ ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮದಲ್ಲಿ ನಮ್ಮ ಲಂಕೇಶ್ ಅವರ ರೀತಿಯ ಬರಹಗಾರ ಬಾಲಚಂದ್ರ ನೇಮಾಡೆಯವರ ಭಾಷಣಕ್ಕೆ ಬಿ.ಸಿ. ದೇಸಾಯಿಯವರನ್ನು ಕರೆದುಕೊಂಡು ಬರೋಣವೆಂದು ಹೋದೆವು. ದೇಸಾಯಿಯವರ ಮನೆ ಬೆಳಗಾಂನ ಹೊರವಲಯದಲ್ಲಿತ್ತು. ಹೇಗೋ ಮನೆಯನ್ನು ಹುಡುಕಿಕೊಂಡು ಹೋದೆವು. ವಿಶಾಲವಾದ ಮನೆಯೆಂದು ಹೊರಗಿನಿಂದಲೇ ಗೊತ್ತಾಗುತ್ತಿತ್ತು. ಮನೆಯ ಬಾಗಿಲು ಸ್ವಲ್ಪವೇ ತೆರೆದಿತ್ತು. ಕರೆಗಂಟೆ ಶಿಥಿಲಗೊಂಡಿತ್ತು. ಮೆಲ್ಲಗೆ ಬಾಗಿಲು ತಳ್ಳಿದೆವು. ಕಿರ್ ಎಂಬ ಶಬ್ದ ಮಾಡಿತು. ಸ್ವಲ್ಪ ಒಳಕ್ಕೆ ಹೋದೆವು. ಮನೆ ಬಿಕೋ ಎನ್ನುತ್ತಿತ್ತು. ಯಾರ ಶಬ್ದವೂ ಇಲ್ಲ. ಸ್ವಲ್ಪ ಮುಂದೆ ಹೋಗಿ 'ದೇಸಾಯಿಯವರೇ' ಎಂದು ಕೂಗಿದೆವು. ಯಾರೋ ಹೆಣ್ಣು ಧ್ವನಿ ಹಾಂ ಎಂದ್ಹಾಗಾಯಿತು. ವಿಶಾಲವಾದ ಪಡಸಾಲೆಯ ಮೂಲೆಯಲ್ಲಿ ಹಳೆಯ ಮಂಚದ ಮೇಲೆ ಯಾರೋ ಮಲಗಿದ್ದರು. ಮತ್ತೊಮ್ಮೆ 'ದೇಸಾಯಿಯವರು ಇದ್ದಾರಾ?' ಎಂದು ಕೇಳಿದಾಗ ಅದೇ ವೇದನಾಪೂರ್ಣ ಧ್ವನಿ ತುಂಬ ಮೆಲು ಧ್ವನಿ. "ಅವರು ಮುಂಬಯಿಗೋ, ಕೊಲ್ಹಾಪುರಕ್ಕೋ ಹೋಗಿರಬಹುದು" ಎಂಬ ಅಸ್ಪಷ್ಟ ಮಾತು ಕೇಳಿಸಿತು. ಮುಂದೆ ನಮಗೆ ಮಾತಾಡಲು ಮನಸ್ಸು ಬರಲಿಲ್ಲ. ದೇಸಾಯಿಯವರ ಶ್ರೀಮತಿಯವರೇ ಇರಬಹುದು ಎಂದು ಊಹಿಸಿದೆವು. ಸುಮ್ಮನೆ ಹೊರಗೆ ಬಂದೆವು. ಬಾಗಿಲನ್ನು ಮುಂದಕ್ಕೆಳೆದುಕೊಂಡೆವು. ಅದೇ ಕೀರಲು ಶಬ್ದ. ಸ್ವಲ್ಪ ಹೊತ್ತು ಅಲ್ಲಿಯೇ ಜಗಲಿಯ ರೀತಿಯಲ್ಲಿದ್ದ ಕಟ್ಟೆಯ ಮೇಲೆ ಕೂತೆವು. ನನ್ನ ಮನಸ್ಸಿನ ತುಂಬ '**ಸಿಂಗಾರೆವ್ವ....**' ಕಾದಂಬರಿಯ ಮನೆಯೇ ಆವರಿಸಿಕೊಂಡಿತ್ತು. ನಾವಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಆ ನೋಟದಲ್ಲಿ ಆ ಕಾದಂಬರಿ ಮತ್ತು ದೇಸಾಯಿಯವರ ವ್ಯಕ್ತಿತ್ವದ ಪುಟಗಳು ತೇಲಾಡಿದಂತೆ ಇತ್ತು. ಗಟ್ಟಿಯಾಗಿ ಏನನ್ನೂ ಮಾತಾಡಿಕೊಳ್ಳಲಿಲ್ಲ. ಹೊರಗೆ ಬಂದೆವು. ಏನು ಕಾಮೆಂಟ್ ಮಾಡಲು ಮನಸ್ಸು ಬರಲಿಲ್ಲ. ಆದರೆ ಆ ಮನೆಯ ಹೆಣ್ಣಿನ ಕ್ಷೀಣ ಧ್ವನಿ ನಮ್ಮನ್ನು ಹಿಂಬಾಲಿಸುವಂತಿತ್ತು.

ಇದಾದ ಕೆಲವು ದಿವಸಗಳಿಗೆ ದೇಸಾಯಿಯವರಿಂದ ಪತ್ರ ಬಂತು: ಅವರ ಶ್ರೀಮತಿಯವರು ಕಾಲವಾಗಿದ್ದರು. ಮತ್ತೆರಡು ತಿಂಗಳಲ್ಲಿ ದೇಸಾಯಿಯವರ ಮಗನಿಂದ ಪತ್ರ ಬಂತು: ಅಪ್ಪ ತೀರಿಕೊಂಡರು ಎಂದು. ನಾನು ತಲ್ಲಣಗೊಂಡಿದ್ದೇ ಶ್ರದ್ಧಾಂಜಲಿಯಾಯಿತು.

2

ಕಂಬಾರರು ಉತ್ತರ ಕರ್ನಾಟಕದ ಉದ್ದಗಲಕ್ಕೂ ನೂರಾರು ಫ್ಯೂಡಲ್ ಕುಟುಂಬಗಳನ್ನು ಕಂಡವರು. ಅವು ಹೇಗೆ ಕುಸಿದು ಬೀಳುತ್ತ ಬಂದುವು ಬದಲಾಗುತ್ತಿರುವ ಸಮಾಜದಲ್ಲಿ ಎಂಬುದನ್ನು ತಮ್ಮ ಸೃಜನಶೀಲ ಮನಸ್ಸಿನ ಗ್ರಹಿಕೆಗೆ ಅನುಸಂಧಾನವಾಗಿಸಿಕೊಂಡವರು. ಹಾಗೆ ನೋಡಿದರೆ ತಮ್ಮ ಕಬ್ಬಿಣದ ಕುಲುಮೆಯಿಂದ ಹದಗೊಳ್ಳುತ್ತಿದ್ದ ಫ್ಯೂಡಲ್ ಕುಟುಂಬಗಳ ಆಯುಧಗಳೆಲ್ಲ ಮೂಲೆಗೆ ಬಿದ್ದು ತುಕ್ಕು ತುಕ್ಕಾಗಿ ಹೋದಂತಹವು. ಅದರ ಯಜಮಾನರೂ ಕೂಡ ಮಾನಸಿಕವಾಗಿ, ದೈಹಿಕವಾಗಿ ತುಕ್ಕುಗೊಂಡವರು. ಇದಕ್ಕೆಲ್ಲ ಲೇಖಕರು ಎಲ್ಲಿಯೂ ಸ್ಯಾಡಿಸ್ಟ್ ಆಗುವುದಿಲ್ಲ. ಆದರೆ ಇವೆಲ್ಲ ಸ್ವಾಭಾವಿಕವೇ? ಎಂಬ ವಿಷಾದಪೂರ್ಣ ಧ್ವನಿ ಇದೆ. ಆ ಧ್ವನಿಯಿಂದಲೇ '**ಹೇಳತೇನ ಕೇಳ**' ಎಂಬ ಧ್ವನಿಯೂ ಸಾಹಿತ್ಯದ ಮಾಮರದ ಮೇಲೆ ಕೂತು ಹಾಡುತ್ತಲೇ ಇದೆ. ಹಾಡಿಗೆ ಹಾಡು, ಕಥೆಗೆ ಕಥೆ ಸೇರುತ್ತಲೇ ಇದೆ. ಮಾತೆಲ್ಲ ಮೌನದಲ್ಲಿ ಮರ್ಮವಾಗುತ್ತಿದೆ.

'**ಎಲ್ಲಿದೆ ಶಿವಾಪುರ**' ಕವನ ಸಂಕಲನದಲ್ಲಿ ಕಂಬಾರರು ಹೀಗೆ ಬರೆಯುತ್ತಾರೆ: "ನಾನು ಹುಟ್ಟಿ ಬೆಳೆದ ಊರು ಘೋಡಗೇರಿ. ನಮ್ಮೂರ ಬಳಿಯ ಪಾಶ್ಚಾಪುರದಲ್ಲಿದ್ದ ಒಬ್ಬ ಮುಸ್ಲಿಂ ದೊರೆ ತನ್ನ ಕುದುರೆ ಕಟ್ಟುವುದಕ್ಕಾಗಿ ಕಟ್ಟಿಸಿದ ಕೇರಿ ಘೋಡಗೇರಿ.

ಈಗಿನ ಘೋಡಗೇರಿಯ ಪಶ್ಚಿಮದಲ್ಲಿ ಸುಮಾರು ಒಂದು ಮೈಲು ದೂರದಲ್ಲಿ ಹಿರಣ್ಯಕೇಶಿ ಮತ್ತು ಘಟಪ್ರಭಾನದಿಗಳು ಕೂಡುವ ಕೂಡಲಸಂಗಮವಿದೆ. ಅಲ್ಲಿ ಒಂದು ಊರಿತ್ತು. ಅದೇ ಶಿವಾಪುರ. ನಮ್ಮ ಪೂರ್ವಜರಿದ್ದದ್ದು ಈ ಊರಿನಲ್ಲಿ. ಆದರೆ ಮೇಲಿಂದ ಮೇಲೆ ಬರುವ ಪ್ರವಾಹದಿಂದಾಗಿ ಆ ಶಿವಾಪುರವನ್ನು ಬಿಟ್ಟು ಈಗಿನ ಘೋಡಗೇರಿಗೆ ಬಂದು ನೆಲೆ ನಿಂತರು. ಕುರುಬರ ಹಾಡಿನಲ್ಲಿ ಈ ಸಂಗತಿ ಇದೆ.

ಆದರೆ ನಾನು ಕಾವ್ಯದಲ್ಲಿ ಉಪಯೋಗಿಸುವುದು ಸಾಂಕೇತಿಕ ಶಿವಾಪುರವನ್ನು. ಅಂದಿನ ಕೂಡಲ ಸಂಗಮದ ಶಿವಾಪುರ ಈಗಿನ ಘೋಡಗೇರಿ, ಹಾಗೂ ಹಾವು ಕಟ್ಟಬೇಕೆಂದ ಕನಸಿನ ಶಿವಾಪುರ **ಈ ಮೂರು ಸೇರಿದ ಸಾಂಕೇತಿಕ ಶಿವಾಪುರದ ಶೋಧನೆ ನನ್ನ ಕವಿತೆ”** ಇದನ್ನು ಪ್ರಮಾಣೀಕರಿಸುವ ರೀತಿಯಲ್ಲಿ ಯು.ಆರ್. ಅನಂತಮೂರ್ತಿಯವರು ‘ಎಲ್ಲಿದೆ ಶಿವಾಪುರ’ ಸಂಕಲನಕ್ಕೆ ಕಂಬಾರರ ಕಾವ್ಯ ಎಂದು ಬರೆದಿರುವಲ್ಲಿ ಈ ಸಾಲುಗಳನ್ನು ಉದ್ಧರಿಸಲು ಬಯಸುವೆ: **“ಕಂಬಾರರು ಅಚ್ಚ ಕನ್ನಡವಾಗಿರುವ ಒಂದು ಸಣ್ಣ ಪ್ರದೇಶದ ಬಾಳುವ ಶಕ್ತಿಯನ್ನು ಬಿಂಬಿಸಬಲ್ಲ ಕವಿ. ನಮ್ಮೂರಿನ ಗಾಢವಾದ ಲೋಕಪ್ರಜ್ಞೆಯ ಕವಿ, ಜನರ ನಡುವಿನಿಂದ ಹುಟ್ಟಿಬಂದ, ಹಾಡುವ, ಕುಣಿಯುವ ಅಣಕಿಸುವ, ಅಪರೂಪದ ಕವಿ ಈ ಕಾಲದಲ್ಲಿ ಕಂಬಾರ ಒಬ್ಬರೇ. ತನ್ನ ಅಣಕದಿಂದ ದೇವರನ್ನೂ ಹೊರತುಪಡಿಸದವರು ಇವರು. ಊರಿನವರೇ ಆದ ಈ ದೇವರನ್ನು ಪ್ರೀತಿಸಬಲ್ಲವರೂ ಇವರು.”** ಅನಂತಮೂರ್ತಿಯವರ ಮೇಲಿನ ಅರ್ಥಪೂರ್ಣ ಅಭಿಪ್ರಾಯವನ್ನು ಒಪ್ಪಿಕೊಂಡು ಮುಂದುವರೆಸುವುದಾದರೆ; ಪ್ರತಿಯೊಬ್ಬ ಕವಿಗೂ, ಲೇಖಕನಿಗೂ ಬಾಲ್ಯಕಾಲದ ಪ್ರದೇಶ ಪುಟ್ಟದಾಗಿಯೇ ಇರುತ್ತದೆ. ಆದರೆ ಅದರ ಮೂಲಕ ಜಗತ್ತಿಗೆ ಹಿಗ್ಗಿಸಿಕೊಂಡು ನೋಡುವುದಿದೆಯಲ್ಲ ಅದು ಅತ್ಯಂತ ಚೇತೋಹಾರಿಯಾದದ್ದು. ಇದು ಕಂಬಾರರಲ್ಲಿ ತುಂಬ ಸ್ವಾಭಾವಿಕವಾಗಿಯೇ ಬಂದಿದೆ ಎಂದು ಹೇಳುವುದಕ್ಕಿಂತ; ಅದನ್ನು ಪ್ರಜ್ಞಾಪೂರ್ವಕವಾಗಿ ಅರ್ಥೈಸಿಕೊಳ್ಳುವುದು ಮುಖ್ಯವಾಗುತ್ತದೆ.

ಕವಿಯೊಬ್ಬ ಅಥವಾ ಕಲಾವಿದನೊಬ್ಬ ತನಗೆ ಇಷ್ಟೆಲ್ಲ ದಕ್ಕಿದೆಯಲ್ಲ ಎಂದು ಅದನ್ನು ಕಾಪಾಡಿಕೊಂಡು ಬರುತ್ತಲೇ; ಅವಕಾಶ ಸಿಕ್ಕಿದಾಗಲೆಲ್ಲ ರೂಪಕವಾಗಿ, ಸಂಕೇತವಾಗಿ ಭಾಷೆಯಲ್ಲಿ ಅಭಿವ್ಯಕ್ತಿಸುತ್ತ ಸಮೃದ್ಧಿಸುವುದಿದೆಯಲ್ಲ; ಹಾಗೆಯೇ ಆ ಸಮೃದ್ಧಿ ನಿರಂತರ ಮುದ್ರಣ ಮಾಧ್ಯಮದಲ್ಲಿ ಅಲಂಕಾರಗೊಂಡು ಪ್ರತಿಯೊಬ್ಬ ಓದುಗನಿಗೆ ಒಂದೊಂದು ರೀತಿಯಲ್ಲಿ ಅರ್ಥವ್ಯಾಪ್ತಿಗೆ ಮಣೆ ಹಾಕಿ ಹಿಡಿದು ಕೂರಿಸುವುದಿದೆಯಲ್ಲ; ಅದು ಎಂಥ ಸೋಜಿಗವಾದದ್ದು. ಒಂದು ದೃಷ್ಟಿಯಿಂದ ಕಂಬಾರರ **“ನಾದಮಯ ಶಬ್ದದಲಿ ಹೂ ಬಿಡುವ ಕನಸುಗಳ / ಹಾಡಬೇಕೋ ತಮ್ಮಾ ಹಾಡಬೇಕೋ”** ಧ್ವನಿಪೂರ್ಣ ಸಾಲುಗಳು ನನ್ನ ಮನಸ್ಸಿನಲ್ಲಿ ನಿರಂತರ ಗುನುಗುನಿಸುತ್ತಲೇ ಇರುತ್ತದೆ. ಅದರಲ್ಲೂ ಕವಿಯೊಬ್ಬ ಅಥವಾ ಕಲಾವಿದನೊಬ್ಬ ನಮ್ಮ ಕಾಲದವರೇ; ಇನ್ನು ಮುಂದೆ ಹೋಗಿ ನಮ್ಮ ಒಡನಾಡಿಗಳೇ ಆಗಿದ್ದಾಗ ಎಂಥ ಸಂಭ್ರಮದ ಸಂಗತಿ? ಮತ್ತೆ ಇದನ್ನು ಮುಂದುವರಿಸಿ ಹೇಳಬೇಕೆಂದರೆ: ಕಂಬಾರರಂಥವರು ಉತ್ತರಕರ್ನಾಟಕದ ಪಾರಂಪರಿಕ ಉಡುಗೆಯಲ್ಲಿ; ಪೇಟ, ಜುಬ್ಬಾ ಮತ್ತು ಕಚ್ಚೆಯಲ್ಲಿ ದೊಡ್ಡ ಗೊಂಬೆಯಂತೆ ಕಾಣಿಸಿಕೊಂಡು ಕಾಲಜ್ಞಾನಿಯಂತೆ ಕೈಬೀಸಿ **“ಆಕಾಶದಲಿ ಕೊನೆ ನಕ್ಷತ್ರ ಇರುವ ತನಕ / ಕನಸು ಇರತಾವಂತ ಹಾಡಬೇಕೋ॥”** ಎಂಬುದು ಪ್ರತಿಯೊಂದು ಜೀವರಾಶಿಯಲ್ಲೂ ಆಶಾವಾದವನ್ನು ತುಂಬುವ ನಾದಮಯತೆ ಮುಂದುವರಿಯುವ ಭಾಗವಾಗಿರುತ್ತದೆ. ಆದ್ದರಿಂದಲೇ ಕಷ್ಟವೋ ಸುಖವೋ ಹಲ್ಲು ಕಚ್ಚಿ ಬದುಕಲು ಪ್ರಯತ್ನಿಸುವುದು. ಇದನ್ನು ಹೀಗೆ ಬರೆಯುವ ಸಮಯದಲ್ಲಿ; ಒಂದು ವಾರ ಪೂರ್ತಿ ಕಂಬಾರರು ನಮ್ಮ ಜೊತೆಯಲ್ಲಿ ಉತ್ತರ ಕರ್ನಾಟಕದ ತಮ್ಮ ಜಾನಪದ ಉಡುಪಿನಲ್ಲಿಯೇ ಇದ್ದರು. ದಿನಕ್ಕೊಂದು

ಬಣ್ಣದ ಉಡುಪು, ಅದರಲ್ಲೂ ಪೇಟ. ನಾವು ನಮ್ಮ ಕೃತಕವಾದ ಪ್ಯಾಂಟು ಮತ್ತು ಷರ್ಟಿನಲ್ಲಿ ಓಡಾಡುತ್ತಿದ್ದೆವು. ಈಗಲೂ ಕಂಬಾರರು ಯಾವುದೇ ಸಭೆ ಸಮಾರಂಭಗಳಲ್ಲಿ ತಮ್ಮ ಪ್ರಾದೇಶಿಕ ಉಡುಪಿನಲ್ಲಿ ಕಾಣಿಸಿಕೊಂಡಾಗ ಸಾವಳಗಿ ಮಠದ ವಾರ್ಷಿಕ ಉತ್ಸವ ಮತ್ತು ಜಾತ್ರೆ ನೆನಪಿಗೆ ಬರುತ್ತದೆ. ಹಾಗೆಯೇ ಪ್ರತಿದಿವಸ ನೆನಪಿಸುವ ರೀತಿಯಲ್ಲಿ; ನನ್ನ ಓದಿನ ಮೇಜಿನ ಪಕ್ಕದಲ್ಲಿ ಮೂರು ಅಮೂಲ್ಯವಾದದ್ದಿವೆ. ಎಷ್ಟೋ ವರ್ಷಗಳ ಹಿಂದೆ ರಾಜಸ್ತಾನದಿಂದ ತಂದ ಬುದ್ಧನ ತೆಳು ಹಸಿರಿನ ಅಮೃತಶಿಲೆಯ ಪುಟ್ಟ ಮಂದಸ್ಮಿತ ವಿಗ್ರಹ, ಕಲ್ಕತ್ತೆಯ ಶಾಂತಿನಿಕೇತನದಿಂದ ತಂದ ಕಾಳಿಕಾದೇವಿಯ ಭಾವಚಿತ್ರ ಹಾಗೂ ಸಾವಳಗಿ ಮಠದ ಜಾತ್ರೆಯಿಂದ ತಂದ ಕುಣಿಕೆ. **ಭಾವನಾತ್ಮಕವಾಗಿ ಈ ಕುಣಿಕೆ ತುಂಬ ಹತ್ತಿರವಾದದ್ದು**. ನನ್ನ ಬಾಲ್ಯಕಾಲವನ್ನು ನೆನಪಿಸುವಂಥದ್ದು. ಗಾಡಿಗೆ ಮತ್ತು ನೇಗಿಲಿಗೆ ಎತ್ತುಗಳನ್ನು ಕಟ್ಟುವಾಗ ಅವು ನೊಗ ಬಿಟ್ಟು ಪಕ್ಕಕ್ಕೆ ಸರಿಯದಿರಲೆಂದು ಸ್ವಲ್ಪ ಸಡಿಲವಾಗಿ ಕುತ್ತಿಗೆಗೆ ಬಂಧಿಸಿಡುವಂಥದ್ದು. ಆದರೆ ಎಷ್ಟೋ ಮಂದಿ ಗೆಳೆಯರು ಮನೆಗೆ ಬಂದು ಕಾವ್ಯ ಕುರಿತು ಮಾತಾಡುವಾಗ 'ಕುಣಿಕೆ'ಯನ್ನು ವಿವರಿಸಿ ಹೇಳುವಾಗ, ಅವರಿಗೆ ಬದುಕಿನ ಅಥವಾ ಕಾವ್ಯದ ಸಂಕೇತವಾಗಿ ಇದನ್ನು ಅರ್ಥೈಸಿಕೊಳ್ಳುವರು. ಇರಲಿ, ಈ ಕುಣಿಕೆಯ ಮುಂದುವರಿಸಬಹುದಾದ ಭಾಗವನ್ನು ನಂತರ ಪ್ರಸ್ತಾಪಿಸುವೆ.

ನಾನು ಸಾವಳಗಿ ಮಠಕ್ಕೆ ಅರ್ಥಾತ್ ಕನ್ನಡದ ಅತ್ಯಂತ ಮಹತ್ವಪೂರ್ಣ ಕವಿ ಚಂದ್ರಶೇಖರ ಕಂಬಾರರ ಮಾನಸಿಕ ಚಕ್ರಾಧಿಪತ್ಯಕ್ಕೆ ಭೇಟಿ ಕೊಟ್ಟದ್ದು ಆಕಸ್ಮಿಕವೇನಲ್ಲ. ಇಲ್ಲಿ ನಾನು ಎಂಬುದನ್ನು ನಾವು ಎಂದು ತಿದ್ದಿಕೊಳ್ಳಲು ಬಯಸುವೆ. ಯಾಕೆಂದರೆ ಕಂಬಾರರಿಗೆ ತುಂಬ ಪ್ರಿಯರಾದ ನಾವು ಮೂರು ಜನ ತರಲೆಗಳು ಹೊರಟಿದ್ದು, ಕಂಬಾರರು ಸಾಮಾನ್ಯವಾಗಿ ನಮ್ಮನ್ನು ತರಲೆಗಳು ಅಥವಾ ಕತ್ತೆಗಳು ಎಂದು ಸಂಬೋಧಿಸಿರುವುದೇ ಜಾಸ್ತಿ. ಅದು ನಮಗೆ ಪ್ರಿಯವೂ ಕೂಡ. ಈ ತರಲೆಗಳಲ್ಲಿ ಡಿ.ಆರ್. ನಾಗರಾಜ್, ಭರತಾದ್ರಿ ಮತ್ತು ನಾನು. ಬಹಳಷ್ಟು ವರ್ಷ ಕಂಬಾರರು ಸಿಕ್ಕಿದಾಗಲೆಲ್ಲ, "ಏ ಕತ್ತೆಗಳಾ ಇಲ್ಲೇ ಸಾಯ್ತಾ ಇರ್ತೀರಿ, ಬನ್ರೋ ನಮ್ಮೂರ ಕಡೆ" ಎಂದು ಪ್ರೀತಿಯಿಂದ ಆಹ್ವಾನಿಸುತ್ತಿದ್ದರು. ನಾವೂ ಅಷ್ಟೇ 'ಸರ್, ನಾವು ನಿಮ್ಮೂರು ನೋಡಬೇಕು. ಯಾವಾಗ ಕರೆದುಕೊಂಡು ಹೋಗ್ತೀರಿ?' ಎಂಬ ಧ್ವನಿಯನ್ನು ಸಂಜೆಯ ಔತಣಕೂಟಗಳಲ್ಲಿ ಮುಂದಿಡುತ್ತಿದ್ದೆವು. ಇದಕ್ಕೆ ಗೆಳೆಯರಾದ ಡಾ॥ ಸಿದ್ಧಲಿಂಗಯ್ಯ ಮತ್ತು ಅಗ್ರಹಾರ ಕೃಷ್ಣಮೂರ್ತಿಯೂ ಸೇರಿಕೊಂಡಿದ್ದಾರೆ. ಕೊನೆಗೂ ಇದಕ್ಕೆ ಜೀವ ಬಂದದ್ದು: ಬಾಬರಿ ಮಸೀದಿಯನ್ನು ಕೆಡವಿದ ಸಾಂಸ್ಕೃತಿಕ ದುರಂತದ ನಂತರ. ಸಾವಳಗಿ ಮಠದಲ್ಲಿ ಹೇಗೆ ಎರಡು ಸಂಸ್ಕೃತಿಗಳು ನೂರಾರು ವರ್ಷಗಳಿಂದ ಜೀವ ತುಂಬಿಕೊಂಡು 'ಸಾಮರಸ್ಯ' ಎಂಬುದು ಒಂದು ಘೋಷಣೆಯಾಗದೆ, ಬದುಕಿನ ಸಂಬಂಧವಾಗಿದೆ ಎಂಬುದನ್ನು ಇಲ್ಲಿಯವರೆವಿಗೂ ಹೊತ್ತುಕೊಂಡು ಬಂದಿರುವಂಥದ್ದು. ಇದನ್ನೇ ಭಾವನಾತ್ಮಕವಾಗಿ ನೆಪ ಮಾಡಿಕೊಂಡು: ಕಂಬಾರರ ಮಾತೃಭೂಮಿಯನ್ನು ಹಾಗೂ ಅವರ ಮೇಲೆ ಗಾಢವಾಗಿ ಪ್ರಭಾವ ಬೀರಿರುವ ಸಾವಳಗಿ ಮಠವನ್ನು ನೋಡಲು ಹೊರಟಿದ್ದು. ನಾವು ಹೊರಡುವಾಗ ಡಾ॥ ಸಿದ್ಧಲಿಂಗಯ್ಯ ಹಾಗೂ ಅಗ್ರಹಾರ ಕಾರ್ಯನಿಮಿತ್ತ ತಪ್ಪಿಸಿಕೊಂಡರೂ ಆಗ ಅಗ್ರಹಾರನ ಸಾಹಿತ್ಯ ಅಕಾದೆಮಿಯ ಪ್ರಾದೇಶಿಕ ಕಛೇರಿ ಇದ್ದದ್ದು ಮದ್ರಾಸಿನಲ್ಲಿ. ಚೆನ್ನೈ ಎಂದು ಇನ್ನೂ ನಾಮಕರಣವನ್ನು ಪಡೆದಿರಲಿಲ್ಲ. ಸಿದ್ಧಲಿಂಗಯ್ಯನವರಂತೂ ವಿಧಾನಪರಿಷತ್ತಿನ ಸದಸ್ಯರಾಗಿ ತುಂಬಾ ಕ್ರಿಯಾಶೀಲರಾಗಿದ್ದ ಕಾಲ. ಕಂಬಾರರ "ಏ ಕತ್ತೆಗಳಾ ಏನ್ ಸಾಯ್ತೀರೋ ಇಲ್ಲಿ ಬನ್ರೋ" ಎಂಬ ಆಪ್ತವಾದ ಧ್ವನಿಯನ್ನು ಮುಂದಿಟ್ಟುಕೊಂಡು 'ಸಾಮರಸ್ಯದ ಸೆಲೆಗಳನ್ನು ಹುಡುಕಲು ಸಾವಳಗಿಯ ಕಡೆ ಹೊರಟೆವು. ಆ ಕಾಲಘಟ್ಟದಲ್ಲಿ ನಾವು ಸಾಕಷ್ಟು ಸಾಮರಸ್ಯದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು. ಡಿ.ಆರ್. ನಾಗರಾಜ್ ಮೈಮೇಲೆ ಭೂತ ಬಂದವನ

ರೀತಿಯಲ್ಲಿ ಕ್ರಿಯಾಶೀಲನಾಗಿದ್ದ. ಒಂದು ದೃಷ್ಟಿಯಿಂದ ಅವನ ವ್ಯಕ್ತಿತ್ವವೇ ಆ ರೀತಿಯದಾಗಿತ್ತು. ಆದ್ದರಿಂದಲೇ ಈಗಲೂ ಅವನ ಒಳಗುದಿಗಳು ಮತ್ತು ಒಳನೋಟಗಳು ಬರವಣಿಗೆಯಲ್ಲಿ ಫ್ರೆಷ್ ಅನ್ನಿಸುವುದು. ಪ್ರಕಟಣೆಗಳ ಜೊತೆಗೆ. ಅದರ ಮುಂದುವರಿದ ಭಾಗವಾಗಿ ಸಾವಳಗಿ ಮಠದ ಆವರಣದಲ್ಲಿ ಎರಡು ವಿಭಿನ್ನ ಧಾರ್ಮಿಕ ಸಂಪ್ರದಾಯಗಳು ತಲೆತಲಾಂತರಗಳಿಂದ ಹೇಗೆ ಅನನ್ಯತೆಯಿಂದ ಬದುಕುತ್ತ ಬಂದಿವೆ ಎಂಬುದು ಅಚ್ಚರಿಯ ಸಂಗತಿ. ಕಂಬಾರರು ಸದಾ ಹೇಳುತ್ತಿದ್ದ: **'ನೋಡ ಬನ್ರೋ'** ಎಂಬುದು ಧುತ್ತನೆ ಪ್ರತಿಮೆಯಾಗಿ ನಮ್ಮ ಮುಂದೆ ನಿಂತಾಗ; ನಾವು ಸಂಭ್ರಮದಿಂದ **'ಹೀಗು ಇರುವುದಿದೆಯಲ್ಲಾ'** ಎಂಬುದು ಆತ್ಮೀಯವಾಗತೊಡಗಿತ್ತು. ಒಂದು ವಾರ ಆ ಸಾವಳಗಿ ಮಠದಲ್ಲಿ ಸುತ್ತಾಡುತ್ತ ಒಂದು ರೀತಿಯ ಅವಿನಾಭಾವವನ್ನು ನಮ್ಮದಾಗಿಸಿಕೊಂಡಿದ್ದೆವು. ನನಗಂತೂ ಆ ಸಾವಳಗಿ ಮಠ ಮತ್ತು ಜಾತ್ರೆ ತುಂಬ ಆಪ್ತವಾಗಿ ಒಟ್ಟು ಬಾಲ್ಯಕಾಲದ ನೆನಪುಗಳ ನವಿಲುಗಳು ಗರಿಗೆದರಿ ಹಾಡುವ, ಕುಣಿಯುವ ರೀತಿಯಲ್ಲಿ ಚೇತೋಹಾರಿಯಾಗಿತ್ತು. ಕಂಬಾರರು ನಮ್ಮನ್ನು ಪ್ರತಿದಿವಸ ಯಾರ್‍ಯಾರಿಗೋ ಪರಿಚಯ ಮಾಡಿಕೊಡುತ್ತಿದ್ದರು. ಆ ಕಚ್ಚೆಪಂಚೆಯ ಮಾಸಲು ಬಿಳಿಯ ಬಣ್ಣ ಬಟ್ಟೆಗಳಲ್ಲಿ ವೈವಿಧ್ಯಮಯವಾದ ಗಾಂಧೀ ಟೋಪಿ ಹಾಗೂ ಪೇಟ. ಎಲ್ಲರ ಮುಖಗಳಲ್ಲಿ ಮುಗ್ಧ ನಗು. **ಅದರ ಜೊತೆಗೆ ನಮ್ಮೂರಿನ / ನಮ್ಮ ಕಡೆಯ ಒಬ್ಬ ಹೈದ ಎಷ್ಟು ಬೆಳೆದಿದ್ದಾನೆ. ಟೀವಿಗಳಲ್ಲಿ, ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುವನು. ಅಷ್ಟೇ ಏಕೆ ದೊಡ್ಡ ದೊಡ್ಡ ಅಧಿಕಾರಿಗಳ ಮತ್ತು ಮಂತ್ರಿಗಳ ಪಕ್ಕದಲ್ಲಿ ಕೂರುವನು ಎಂಬುದನ್ನು ಭಾವನಾತ್ಮಕತೆಯಿಂದ ವಿಜೃಂಭಿಸುತ್ತಿದ್ದವರು.** ಇದನ್ನು ಕಂಬಾರರು ನಮ್ಮ ಜೊತೆ ಖಾಸಗಿಯಾಗಿ ಕೂತಾಗ "ನೋಡ್ರೋ, ಈ ಪ್ರಾದೇಶಿಕತೆ, ಭಾಷೆ, ಜಾತಿ ಮತ್ತು ಧರ್ಮ ಹೇಗೆ ಕೆಲಸ ಮಾಡುತ್ತದೆ, ನನಗಂತೂ ಇದು ಯಾವಾಗಲೂ ಸೋಜಿಗ" ಎಂದು ಅವಧೂತರಂತೆ ಹೇಳುತ್ತಿದ್ದರು. ಒಂದು ದೃಷ್ಟಿಯಿಂದ ಈ ಧ್ವನಿ **'ಎಲ್ಲಿದೆ ಶಿವಾಪುರ?'** ಎಂಬುದನ್ನು ವಿಸ್ತರಿಸಿ ಕಾವ್ಯಾತ್ಮಕಗೊಳಿಸಿದಂತೆ ಕೇಳುತ್ತಿತ್ತು. ಆದ್ದರಿಂದಲೇ ಲಂಕೇಶ್ ಅವರ ಮುಂದೆ ನಾವೆಲ್ಲ ಸೇರಿದಾಗ; ಕಂಬಾರರು **'ಹೇಳತೇನ ಕೇಳ'** ಎಂಬುದನ್ನು ಮುಂದುವರೆಸಿ ಮಾತಾಡುವಾಗ ಎಂತೆಂಥ ಬಾಲ್ಯಕಾಲದ ಸೋಜಿಗಗಳನ್ನು ಮುಂದಿಡುತ್ತಿದ್ದರು. ಲಂಕೇಶ್ ಅವರಲ್ಲಿ ಎಲ್ಲರದನ್ನು ಕೇಳಿಸಿಕೊಳ್ಳುವ ಗುಣವಿದ್ದುದರಿಂದ (ಅಪರೂಪಕ್ಕೆ ಭಟ್ಟಂಗಿತನಕ್ಕೆ ಸಿಡಿಮಿಡಿಗೊಂಡರೂ) ನಮ್ಮ ಗ್ರಹಿಕೆಯೂ ವಿಸ್ತಾರವನ್ನು ಪಡೆಯುತ್ತಿತ್ತು. ಆದರೆ ಇಲ್ಲಿ ಸಾವಳಗಿಯಲ್ಲಿ ತಮ್ಮ ಬಾಲ್ಯಕಾಲದ ಬಾಂಧವರ ಮುಂದೆ ಎಷ್ಟೊಂದು ಸಂಕೋಚವನ್ನು ತುಂಬಿಕೊಳ್ಳುತ್ತಿದ್ದರು. ಇದು ಪ್ರತಿಯೊಬ್ಬ ಸೂಕ್ಷ್ಮ ಪ್ರಜ್ಞೆಯ ಸೃಜನಶೀಲ ಲೇಖಕನಿಗೆ ಎದುರಾಗಬಹುದು. ಯಾಕೆಂದರೆ ಕಾಲ ಮತ್ತು ಶಿಕ್ಷಣ ಪ್ರಧಾನ ಪಾತ್ರವನ್ನು ನಿರ್ವಹಿಸಿ ಅವ್ಯಕ್ತವಾದುದನ್ನು ಮುಂದಿಡುತ್ತಿರುತ್ತದೆ. ಇದನ್ನು ಲಂಕೇಶ್, ಅನಂತಮೂರ್ತಿ, ಚಿತ್ತಾಲ ಮತ್ತು ತೇಜಸ್ವಿ ಮುಂತಾದವರ ಕಥೆಗಳಲ್ಲಿ ದಟ್ಟವಾಗಿ ಮಡುಗಟ್ಟಿದ ರೀತಿಯಲ್ಲಿ ಗೋಚರಿಸುತ್ತದೆ. ಈ ದೃಷ್ಟಿಯಿಂದಲೇ ಅನಂತಮೂರ್ತಿಯಂಥವರು ಕಾಲಘಟ್ಟದ ಅಂತರದಲ್ಲಿ ಹಡೆವೆಂಕಟನಂಥ ಬಾಲ್ಯಕಾಲದ ಗೆಳೆಯನ ಮುಂದೆ ನಿಂತಾಗ, ಎಲ್ಲ ವಿಶ್ಲೇಷಣೆಗಳು ಸುಳ್ಳೇನೋ ಎಂದು ಗೊಂದಲದಿಂದ ನಿಂತುಬಿಡುವುದು. ಹಾಗೆ ನೋಡಿದರೆ; ಕಂಬಾರರು ಪರಿಚಯ ಮಾಡಿಕೊಡುತ್ತಿದ್ದ ಎಲ್ಲ ಪಾತ್ರಗಳು ಎಷ್ಟು ಮುಗ್ಧವೋ; ಅಷ್ಟೇ ಒಂದು ಏರುಪೇರು ಸಮಾಜದಲ್ಲಿ ಸೂಕ್ಷ್ಮ ಮನಸ್ಸುಗಳಿಗೆ ಸವಾಲೆಸೆದು ನಿಂತುಬಿಡುತ್ತಾರೆ. ಇಂಥದನ್ನೆಲ್ಲ ನಾವು ಕೇವಲ ಬೆಂಗಳೂರು ಮಾತ್ರವಲ್ಲ; ಆ ಸಾವಳಗಿಯಲ್ಲಿ ಕಂಬಾರರ ಪ್ರತಿದಿನದ 'ಉವಾಚ' ನನ್ನ ಮನದ ತುಂಬ ಎಷ್ಟು ಚಾರಿತ್ರಿಕವಾಗಿ ಉಳಿದುಬಿಟ್ಟಿದೆ. ನಾವು ಬೇಂದ್ರೆಯವರನ್ನು ಕಂಡವರು. ಅವರ ಬದುಕು ಮತ್ತು ಜೀವನಪ್ರೇಮವನ್ನು ಕಂಡವರು. ಹಾಗೆಯೇ ಅವರಷ್ಟೇ ಪಕ್ಕಾ ದೇಸಿ ಕವಿಯಾದ

ಕಂಬಾರರು ಕೆಳವರ್ಗದಿಂದ ಬಂದು ಸಂಕೋಚ ಮತ್ತು ಗುಮಾನಿಗಳೇ ಸ್ವಾಭಿಮಾನಕ್ಕೆ ಮೆಟ್ಟಿಲು ಕಟ್ಟಿಕೊಟ್ಟಿರುವಂಥದ್ದು. ಆದರೆ ತಮ್ಮ ಬಾಲ್ಯಕಾಲದ ಜನರೊಡನೆ ಅಕ್ಕರೆಯನ್ನು ತುಂಬಿಕೊಂಡವರು. ಇದನ್ನು ತುಂಬಿಕೊಂಡು ಆ ಸಾವಳಗಿ ಜನರ ಮಧ್ಯೆ ನಿಂತಾಗ; ಒಂದು ಚಾರಿತ್ರಿಕ ಘಟನೆ ನೆನಪಾಗುತ್ತದೆ. ಇದನ್ನು ಯಾಕೆ ಚಾರಿತ್ರಿಕ ಎಂದು ಹೇಳುತ್ತಿದ್ದೇನೆಂದರೆ: ಸಾಂಸ್ಕೃತಿಕವಾಗಿ ಕೆಲವು ಅನನ್ಯ ಪ್ರಶ್ನೆಗಳು ಏಕಕಾಲಕ್ಕೆ ನನ್ನ ಮುಂದೆ ಧುತ್ತನೆ ನಿಲ್ಲುವಂತಾದ್ದು. ಅದೇನೆಂದರೆ: ಒಮ್ಮೆ ಲಂಕೇಶ್ ಅವರ ಜೊತೆ ಕೂತು ಕಂಬಾರರೊಡನೆ ಮಾತಾಡುತ್ತಿರುವಾಗ; ನಾನು ಸ್ವಲ್ಪ ರೊಮಾಂಟಿಕ್ ಆಗಿಯೇ ಕಳೆದ ಹದಿನೆಂಟು ವರ್ಷಗಳಿಂದ ನನ್ನ ಬಂಧು ಬಾಂಧವರ ಮದುವೆ, ಗೃಹಪ್ರವೇಶ ಮತ್ತು ನಾಮಕರಣ ಮುಂತಾದವುಗಳಿಗೆ ಭಾಗಿಯಾಗಿಲ್ಲ ಎಂದೆ. ಅದಕ್ಕೆ ಕಂಬಾರರು ಸ್ವಲ್ಪ ಸಮಯ ವಕ್ರವಾಗಿ ನನ್ನ ಮುಖವನ್ನೇ ನೋಡುತ್ತ **'ಇವನೊಬ್ಬ ಮೂರ್ಖನಿರಬೇಕು'** ಎಂದು ತಿಳಿದು **"ನೀನು ದಡ್ಡ ಕಣೋ, ಶೂದ್ರದಂಥ ಸಾಹಿತ್ಯ ಪತ್ರಿಕೆಯನ್ನು ಬೇರೆ ತರುತ್ತಿದ್ದೀಯ. ನೀನು ಬಂಧು ಬಾಂಧವರ ಸಂಬಂಧಗಳನ್ನು ಕಳೆದುಕೊಂಡು ಅವರ ಆಂತರಿಕ ಒಳಗುದಿಗಳನ್ನು ಹೇಗೆ ಅರಿಯಬಲ್ಲೆ?** ಸಾಹಿತ್ಯದ ವಿದ್ಯಾರ್ಥಿಗೆ ಅದೇ ಮುಖ್ಯವಲ್ಲವೇ? ನೀನು ಹೊರಗಿನ ಸಂಪರ್ಕವನ್ನು ಎಷ್ಟೇ ಪಡೆದಿದ್ದರೂ; ಅದು ಒಂದು ಹಂತದಲ್ಲಿ ಮೇಲ್ಪದರದ ಅನುಭವವಾಗಿ ಉಳಿದುಬಿಡುತ್ತದೆ. **"ಹೇ ದಡ್ಡಾ ನಾನು ಕಂಬಾರ ಹೇಳ್ತಾ ಇದ್ದೀನಿ. ನಾಳೆಯಿಂದ ನಿನ್ನ ಕ್ಯಾರೆಕ್ಟರ್ ಬದಲಾಯಿಸಿಕೋ"** ಎಂದು ಸಿಟ್ಟು, ಅಭಿಮಾನ ಮತ್ತು ಪ್ರೀತಿಯಿಂದ ಹೇಳಿದಾಗ; ಕೆಲವು ಕ್ಷಣ ನಾನು ಗಾಬರಿಗೊಂಡವನಂತೆ ಅವರ ಮುಖವನ್ನೇ ನೋಡತೊಡಗಿದ್ದೆ. ಲಂಕೇಶ್ ಅವರು ಅದನ್ನು ಸರ್ಟಿಫೈ ಮಾಡುವಂತೆ: **"ಕಂಬಾರ ಮಾತು ನಿಜ ಶೂದ್ರ"** ಎಂದಿದ್ದರು.

ಅಂದು ರಾತ್ರಿ ಮನೆಗೆ ಬಂದವನು; ಜ್ಞಾನೋದಯವಾದಂತೆ ಸಂಭ್ರಮ ಪಟ್ಟಿದ್ದೆ. ಆದರೂ 'ಹದಿನೆಂಟು ವರ್ಷ' ಅಲ್ಲಿ ಏನೇನೋ ಕಳೆದುಕೊಂಡಾಗ; ತಾತ್ವಿಕವಾಗಿ ಅದು ನಿಜವಿರಬಹುದು ಅಥವಾ ಬೇರೆ ಬೇರೆ ವ್ಯಾಖ್ಯಾನಗಳಿಗೆ ಮನಸ್ಥಿತಿಯನ್ನು ಒಡ್ಡುಕೊಳ್ಳುವುದಿರಬಹುದು; ಎಷ್ಟೊಂದು ರೀತಿಯ ಜನಾಂಗದವರೊಡನೆ ಸಂಪರ್ಕ ಸಾಧ್ಯವಾಯಿತು. ಅವೆಲ್ಲ ಬಿಡಿ ಬಿಡಿ ಚಿತ್ರಗಳ ರೀತಿಯಲ್ಲಿ ಬದುಕಿನ ಮೂಲೆಯಲ್ಲಿ ಅವಿತುಕೊಂಡು; ಬಾಲ್ಯಕಾಲವನ್ನು ಹಾಗೂ ನಾನು ನನ್ನವರು ಎಂದರೆ ಏನು? ಕೊನೆಗೂ ಅವೆಲ್ಲ ಅನಾಥ ಪ್ರಜ್ಞೆಯ ರೀತಿಯಲ್ಲಿ ಕಾಡುವುದಿದೆಯಲ್ಲ; ಅದು ನಿಜವಾಗಿಯೂ ಮಾರ್ಮಿಕವಾಗಿಯೇ ಇರುತ್ತದೆ. ಹಾಗೆ ನೋಡಿದರೆ ಸಾವಳಗಿಯಲ್ಲಿದ್ದ ಆ ವಾರದಲ್ಲಿ ಒಂದು ಸಂಜೆ: ನಮ್ಮ ಮಾತುಕತೆಗೆ ಇದೇ ಮುಖ್ಯವಾಗಿತ್ತು. ನಾನು ಸ್ವಾಭಾವಿಕವಾಗಿ ಕಂಬಾರರು ಲಂಕೇಶ್ ಅವರ ಸಮ್ಮುಖದಲ್ಲಿ ಹೇಳಿದ್ದನ್ನು ಪ್ರಸ್ತಾಪಸಿದ್ದೆ. ಡಿ.ಆರ್. ನಾಗರಾಜ್ ತೀರ್ಪುಗಾರನ ಪೀಠದಲ್ಲಿ ಕೂತಿದ್ದ. ಭರತಾದ್ರಿ ನಮ್ಮ ಒಟ್ಟು ಮಾತುಗಳಿಗೆ ಸಂಪರ್ಕ ಸೇತುವೆಯಂತೆ ಪ್ರತಿಕ್ರಿಯಿಸಲು ತನ್ನೆಲ್ಲ ಆತ್ಮೀಯ ತುಂಟತನಗಳನ್ನೆಲ್ಲ ಪಕ್ಕಕ್ಕೆ ಸರಿಸಿ ಭಾಗಿಯಾಗಿದ್ದ. ಅಂದು ಕಂಬಾರರು ಒಂದು ದೃಷ್ಟಿಯಿಂದ; ಅಮೇರಿಕಾದಲ್ಲಿದ್ದ ದಿನಗಳನ್ನ ಉದಾಹರಣೆಗೆ ತೆಗೆದುಕೊಂಡು ವ್ಯಾಖ್ಯಾನಿಸುತ್ತ: ಅಲ್ಲಿಯ ಒಟ್ಟು ಘಟನೆಗಳು ಹಾಗೂ ಅಧ್ಯಯನ ಅರ್ಥಪೂರ್ಣ ಅನುಭವ ಮಾತ್ರ, ಆದರೆ ಶಿವಾಪುರ ಅಥವಾ ಘೋಡಗೇರಿ ರೀತಿಯಲ್ಲಿ ನಿರಂತರ ಸೆಳೆತವನ್ನು ಕಾಯ್ದಿಟ್ಟುಕೊಂಡಿರುವುದಿಲ್ಲ. ಈ ಸೆಳೆತ ಹೊಕ್ಕುಳಿನ ಸಂಬಂಧದ ರೀತಿಯದ್ದು. ಇದನ್ನೇ ಅಲ್ಲಿ ಎ.ಕೆ. ರಾಮಾನುಜನ್ ಅವರು ಮುಂದುವರೆಸಿ ಹೇಳುತ್ತಿದ್ದರು. ಹಾಗೆ ನೋಡಿದರೆ ನನ್ನ ಕಾವ್ಯ ಮತ್ತು ಇತರೆ ಬರವಣಿಗೆ ಶಿವಾಪುರ ಮತ್ತು ಘೋಡಗೇರಿ ನೆಲದ ಹೊಕ್ಕುಳ ಸಂಬಂಧದ್ದು ಎಂದು **'ಹೇಳತೇನ ಕೇಳ'** ಎಂದು ಮನದುಂಬಿ ಹೇಳುತ್ತಿದ್ದಾಗ; ಆ ಇಳಕಲ್ ಡ್ಯಾಮ್ ನ ಮನಮೋಹಕ ನೋಟ ಎಷ್ಟು ರಮಣೀಯವಾಗಿತ್ತು. ಆ ರಮಣೀಯತೆಗೆ

ಎಂಥ ಗಾಂಭೀರ್ಯ. ಚಂದ್ರನ ಬೆಳಕು ಡ್ಯಾಮ್‌ನ ನೀರಿನ ಮೇಲೆ ತೇಲಾಡುತ್ತಿದ್ದರೆ ಒಟ್ಟು ಕಂಬಾರರ ಮಾತನ್ನು ಹಾಗೂ ಅವರ ಕಾವ್ಯವನ್ನು ರೂಪಕದಲ್ಲಿ ತುಂಬಿಕೊಂಡಿದ್ದೆ. ಡಿ.ಆರ್. ನಾಗರಾಜನಂತೂ ನನ್ನ ಪಾಲಿಗೆ ಒಬ್ಬ ಸಂತನೇ ಆಗಿಬಿಟ್ಟಿದ್ದ. ಅಷ್ಟರಮಟ್ಟಿಗೆ ಅವನ ಒಟ್ಟು ಮಾತುಗಳು ರೂಪಕಗಳ ಹಾಗೂ ಸಂಕೇತಗಳ ನಡುವೆ ಅರ್ಥಗಳು ದಟ್ಟವಾಗತೊಡಗಿದ್ದವು. ಯಾಕೆಂದರೆ ಎಲ್ಲದಕ್ಕೂ ಒಂದು ಸಮರ್ಪಕವಾದ ಚೌಕಟ್ಟನ್ನು ನಿರ್ಮಿಸಿ ಮಾತು ಮುಂದುವರೆಯುವಂತೆ ಮಾಡಿಬಿಡುತ್ತಿದ್ದ. ಅವನಿಗೆ ಇಂಥದೇ ವಿಷಯ ಎಂದು ಬೇಕಾಗಿರಲಿಲ್ಲ. ಗ್ಯಾರಿ ಜುಕೋವ್ ನ 'ದಿ ಡ್ಯಾನ್ಸಿಂಗ್ ಊಲಿ ಮಾಸ್ಟರ್ಸ್' ಕೃತಿಯಿರಬಹುದು ಅಥವಾ ಜೆ.ಜಿ. ಫ್ರೇಜರ್ ನ 'ಎ ಸ್ಟಡಿ ಇನ್ ಮ್ಯಾಜಿಕ್ ಅಂಡ್ ರಿಲಿಜಿಯನ್' ಅಂಥ ಕೃತಿಗಳಿಂದ ಮೊದಲ್ಗೊಂಡು ಇತ್ತೀಚಿನ ಅತ್ಯಂತ ಪ್ರಮುಖವಾಗಿ ಸಾಹಿತ್ಯ, ರಾಜಕೀಯ ಮತ್ತು ಸಮಾಜಶಾಸ್ತ್ರ ಕೃತಿಯನ್ನು ಮುಂದಿಟ್ಟು ತನ್ನ ಸಮಕಾಲೀನ ಲೇಖಕರಿಗೆ ಹಾಗೂ ಚಿಂತಕರಿಗೆ ಅನ್ವಯಿಸಿ ವೇದಿಕೆ ನಿರ್ಮಾಣ ಮಾಡಿಬಿಡುತ್ತಿದ್ದ. ಅಂದು ಕಂಬಾರರ ಮಾತುಗಳಿಗೆ ವ್ಯಾಖ್ಯಾನವೇನೋ ಎನ್ನುವ ರೀತಿಯಲ್ಲಿ ಇದನ್ನೆಲ್ಲ ಮಂಡಿಸಿದ್ದ. ಹಾಗೆ ನೋಡಿದರೆ ಇದರ ಮಾರನೆಯ ದಿನ ಸಂಜೆಯೇ ರಾತ್ರಿ ಹತ್ತು ಗಂಟೆಯ ನಂತರದ ಕಾರ್ಯಕ್ರಮದಲ್ಲಿ ನಮಗೆಲ್ಲ ಸನ್ಮಾನ ವ್ಯವಸ್ಥೆ ಮಾಡಿದ್ದರು. ನಾವು ಅದು ಬೇಡವೆಂದು ಪ್ರತಿಭಟಿಸಲು ಹೋದಾಗ ಕಂಬಾರರು "ಕತ್ತೆಗಳಾ, ಬಾಯಿ ಮುಚ್ಚಿಕೊಂಡು ಗೌರವ ಸ್ವೀಕರಿಸಿ. ಅದಕ್ಕೆ ಬೇರೆ ಬೇರೆ ಅರ್ಥಗಳು ಕೊಡಲು ಹೋಗಬೇಡಿ. ಇದನ್ನು ಯಾವ ಪ್ರಭುತ್ವವಾಗಲಿ, ಬಂಡವಾಳಶಾಹಿಯಾಗಲಿ ಕೊಡುತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಜನರ ಮಧ್ಯೆ ಕೆಲಸ ಮಾಡುತ್ತಿರುವ ಒಬ್ಬ ಸ್ವಾಮೀಜಿ ವ್ಯವಸ್ಥೆ ಮಾಡಿರುವಂಥದ್ದು. ಅದರಲ್ಲೂ ನೀವು ಲೇಖಕರು ಎಂದು ತಿಳಿದು, ಆ ಮನಸ್ಥಿತಿ ಇಲ್ಲದಿದ್ದರೆ; ಇಲ್ಲಿ ಎರಡು ಭಿನ್ನ ಸಂಸ್ಕೃತಿಗಳು ಒಂದೇ ಕಾಂಪೌಂಡಿನಲ್ಲಿ ಸಾಮರಸ್ಯದ ಬೇರುಗಳು ಗಟ್ಟಿಗೊಳ್ಳಲು ಆಗುತ್ತಿರಲಿಲ್ಲ" ಎಂದು ಹೇಳಿದಾಗ ನಾವು ಸುಮ್ಮನೆ ಗೌರವವನ್ನು ಸ್ವೀಕರಿಸಿ 'ಇಂಥ ಮಾದರಿಗಳು ನಮಗೆ ಯಾಕೆ ಬೇಕಾಗಿದೆ' ಎಂದು ಮಾತಾಡಿದ್ದೆವು. ಕಂಬಾರರು ಥೇಟ್ ಉತ್ತರಕರ್ನಾಟಕದ ಗೌಡರ ರೀತಿಯಲ್ಲಿ ಬಣ್ಣದ ಆಸನದಲ್ಲಿ ಆಸೀನರಾಗಿ ನಮ್ಮ ಬಗ್ಗೆ ನಾಲ್ಕು ಮಾತು ಹೆಚ್ಚಿಗೆಯೇ ಮೆಚ್ಚಿಗೆಯ ಮಾತನ್ನು ಆಡಿದ್ದರು.

ಇಂಥದೇ ಮಹತ್ವಪೂರ್ಣ ರಾತ್ರಿಯನ್ನು ಇದರ ಹಿಂದಿನ ವರ್ಷ ಇಳಕಲ್‌ನಲ್ಲಿ ಕಳೆದಿದ್ದೆವು. ಅಂದು ಬೆಳಗಾಂನಲ್ಲಿ ನಡೆದ ಎರಡು ದಿನಗಳ ಅಂಬೇಡ್ಕರ್ ಕುರಿತ ಬೃಹತ್ ಸಮಾವೇಶವನ್ನು ಮುಗಿಸಿಕೊಂಡು ಇಲ್ಲಿ ಸೇರಿದ್ದೆವು. ಓಂಪ್ರಕಾಶ್ ಕಣಗಲಿಯವರು (ಹಿರಿಯ ರಾಜಕಾರಣಿ ಶಂಕರಾನಂದ ಅವರ ಮಗ) ಸಮಾವೇಶ ಚೆನ್ನಾಗಿ ಆಗಿದ್ದಕ್ಕೆ ಸಂಜೆಯ ಕಾರ್ಯಕ್ರಮವನ್ನು ಇಲ್ಲಿ ಏರ್ಪಡಿಸಿದ್ದರು. ಇದರಲ್ಲಿ ಲಂಕೇಶ್ ಅವರೂ ಭಾಗಿಯಾಗಬೇಕಾಗಿತ್ತು. ಯಾವುದೋ ಸಣ್ಣ ಕಾರಣಕ್ಕಾಗಿ ಅವರು ನಮ್ಮನ್ನು ಪ್ರತಿಭಟಿಸಿ; ಇದ್ದಕ್ಕಿದ್ದಂತೆ ಬೆಳಿಗ್ಗೆ ಆರು ಗಂಟೆಗೆ ಲಂಕೇಶ್ ಅವರೊಬ್ಬರೇ ಕಾರಿನಲ್ಲಿ ಬೆಂಗಳೂರಿನ ಕಡೆ ಓಡಿದ್ದರು. ಡಿ.ಆರ್. ನಾಗರಾಜ್, ಡಾ॥ ಸಿದ್ಧಲಿಂಗಯ್ಯ, ಬಸವರಾಜ ಅರಸ್, ಜನ್ನಿ, ಬಾನಂದೂರು ಕೆಂಪಯ್ಯ, ಅಪ್ಪಗೆರೆ ತಿಮ್ಮರಾಜು ಇನ್ನೂ ಯಾರ‍್ಯಾರೋ ಸೇರಿದ್ದೆವು. ಇಡೀ ರಾತ್ರಿ ಡ್ಯಾಮ್ ಮೇಲಿನ ಬೆಳದಿಂಗಳನ್ನು ಆಸ್ವಾದಿಸುತ್ತಾ; ಒಂದು ಸಾಂಸ್ಕೃತಿಕ ಉತ್ಸವದ ರೀತಿಯಲ್ಲಿ ಭಾಗಿಯಾಗಿದ್ದೆವು. ಬಾನಂದೂರು ಮತ್ತು ಅಪ್ಪಗೆರೆ ಸಮಾವೇಶಕ್ಕೆ ಹಾಗೂ ಈ ಡ್ಯಾಮ್ ಗೆ ನಮ್ಮ ಕೊಡುಗೆ ಎನ್ನುವ ರೀತಿಯಲ್ಲಿ ಮೈದುಂಬಿ ಹಾಡಿದ್ದರು. ಇಂಥ ಎಷ್ಟೊಂದು ರಿಮಾರ್ಕೆಬಲ್ ಸಂಜೆಗಳು!

ಎರಡು ದಿನ ಜಾತ್ರೆಯಲ್ಲಿ ಸುತ್ತಾಡಿದ್ದೆವು. ಕಳೆದ ಕಾಲವ ನೆನಪು ಮಾಡುವ ಜಾತ್ರೆ. ಎಲ್ಲಿ ನೋಡಿದರಲ್ಲಿ ಬಂಡಿಗಳ ಕೆಳಗೆ ಗುಡಿಸಲುಗಳ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡು

ಎತ್ತುಗಳನ್ನು ಮಾರುವ ಮತ್ತು ಕೊಳ್ಳುವ ದೊಡ್ಡ ದಂಧೆಯೇ ನಡೆಯುತ್ತಿರುತ್ತದೆ. ದಲ್ಲಾಳಿಗಳ ಕರಾಮತ್ತು ಎಷ್ಟೊಂದು? ಟವಲ್ಲಿನೊಳಗೆ ಅಥವಾ ಬೆಡ್ ಷೀಟ್ ನೊಳಗೆ ಇಬ್ಬರ ಕೈಗಳು ವ್ಯವಹಾರ ನಡೆಸುವ ಪರಿಯೇ ಕುತೂಹಲಕಾರಿಯಾದದ್ದು. ನನ್ನ ಬಾಲ್ಯಕಾಲದಲ್ಲಿ ಸುಮಾರು ಹದಿನೈದು ಇಪ್ಪತ್ತಕ್ಕಿಂತ ಹೆಚ್ಚಾಗಿ ಜಾತ್ರೆಗಳಲ್ಲಿ ಎತ್ತುಗಳ ಮಾರಾಟಕ್ಕಾಗಿ ನಾಲ್ಕೈದು ದಿನ ಚಳಿಯಲ್ಲಿ ನೆಲ್ಲು ಮತ್ತು ರಾಗಿಯ ಹುಲ್ಲಿನ ಮೇಲೆ ಗೋಣಿಚೀಲಗಳನ್ನು ಹಾಸಿ ಮಲಗುತ್ತಿದ್ದುದು. ಬೆಳಿಗ್ಗೆ ಎದ್ದಾಕ್ಷಣ ಎತ್ತುಗಳ ಮೈಯುಜ್ಜಿ ಮಿಣಮಿಣ ಮಿಂಚುವಂತೆ ಮಾಡುವುದು. ಮಾರಿದರೆ ಅವುಗಳನ್ನು ಬೀಳ್ಕೊಂಡು; ಅವುಗಳ ಕಣ್ಣೀರನ್ನು ಒರೆಸಿ, ನಾನು ಕಣ್ಣೀರು ಸುರಿಸಿ ಮನೆಗೆ ಬರುತ್ತಿದ್ದುದು.

ನಾವು ಜಾತ್ರೆಯನ್ನು ತುಂಬಾ ಸುತ್ತಾಡಿದೆವು. ಡಿ.ಆರ್. ನನ್ನನ್ನು 'ಶೂದ್ರ' ಎಂದು ಕರೆದದ್ದು ಕಂಡು ಸ್ವಲ್ಪ ಸಮಯ ಸುತ್ತಾಡುವಾಗ; ಮಹಿಳೆಯೊಬ್ಬರು ಮತ್ತು ಆಕೆಯ ಜೊತೆ ಇಬ್ಬರು ಕುಮಾರಿಯರಿದ್ದರು. ನನ್ನ ಬಳಿ ಬಂದು "ನೀವು ಶೂದ್ರ ಶ್ರೀನಿವಾಸ?" ಎಂದು ಕೇಳಿದರು. "ಹೌದು" ಎಂದೆ. ಹೀಗೆಯೇ ಪರಿಚಯವಾದರು. ಅವರು ದಾವಣಗೆರೆಯವರು. ಆ ಇಬ್ಬರು ಕುಮಾರಿಯರು ಆಕೆಯ ಮಕ್ಕಳು. ಪ್ರತಿ ವರ್ಷ ಇಲ್ಲಿಗೆ ಬಂದು ಹೋಗುತ್ತಿದ್ದರಂತೆ. ಅಷ್ಟರಲ್ಲಿ ಡಿ.ಆರ್. ಮತ್ತು ಭರತಾದ್ರಿ ಓಡಿಬಂದರು. ಅವರ ಕಣ್ತುಂಬ ತುಂಟತನ ತುಂಬಿ ತುಳುಕುತ್ತಿತ್ತು. ಎಲ್ಲಿ ವ್ಯಂಗ್ಯದ ಮಾತುಗಳನ್ನಾಡುವರೋ ಎಂದು ಗಾಬರಿಯಾಗಿತ್ತು. ಈ ಇಬ್ಬರು ತರಲೆಗಳನ್ನು ಆ ಹೆಣ್ಣುಮಕ್ಕಳಿಗೆ ಪರಿಚಯಿಸುವಾಗ 'ಎಂಥ ಅದ್ಭುತ' ಲೇಖಕರು ಎಂಬ ಪದಪ್ರಯೋಗವನ್ನು ಬಳಸಿದ್ದೆ. ಅವರು ಡಿ.ಆರ್. ನಾಗರಾಜ್ ಹೆಸರು ಕೇಳಿದ್ದರು. ನನ್ನ ಹೆಸರು ಗೊತ್ತು ಅವರಿಗೆ ಎನ್ನುವುದರಲ್ಲಿಯೇ ಡಿ.ಆರ್. ಪುಳಕಿತನಾಗಿದ್ದ. ಆಕೆ ತುಂಬಾ ಚೆನ್ನಾಗಿದ್ದರು. ಆಕೆಯ ಮಕ್ಕಳೂ ಅಷ್ಟೇ. ಆಕೆಯ ಎರಡನೆಯ ಮಗಳಂತೂ ಸುಶ್ರಾವ್ಯವಾಗಿ ಹಾಡುತ್ತಿದ್ದಳು. ನಮಗೆ ಲಂಕೇಶ್ ಅವರು ಚೆನ್ನಾಗಿ ಗೊತ್ತು ಎಂಬುದು ಗೊತ್ತಾದ ತಕ್ಷಣ ನಮ್ಮ ಬಗ್ಗೆ ಆಕೆ ಮತ್ತಷ್ಟು ಒಲವನ್ನು ತೋರಿಸಿದಳು. ಹೀಗೆ ಸುತ್ತಾಡುವಾಗ 'ಕುಣಿಕೆ' ನನ್ನ ಕಣ್ಣಿಗೆ ಬಿತ್ತು. ಅದನ್ನು ಕೈಗೆ ತೆಗೆದುಕೊಂಡು ಬೆಲೆ ಕೇಳಿದೆ. ಹೇಳಿದ. ಕಾಸು ಕೊಡಲು ಹೋದೆ. ಆಕೆ ನನ್ನ ಕೈಹಿಡಿದು ಇದು ನನ್ನ ನೆನಪಿಗೆ ಎಂದು ಒತ್ತಾಯ ಮಾಡಿ ತಾವೇ ಕಾಸು ಕೊಟ್ಟರು. ದೂರದಲ್ಲಿದ್ದ ನನ್ನ ತುಂಟ ಗೆಳೆಯರು ಆ ಸುಂದರ ಕುಣಿಕೆಯನ್ನು 'ಪಿಳಪಿಳ' ನೋಡತೊಡಗಿದರು. ಡಿ.ಆರ್. ನಾಗರಾಜ್ ನೇಯ್ಗೆ ಕುಟುಂಬದಿಂದ ಬಂದಿದ್ದರಿಂದ ಕುಣಿಕೆಯ ಬಗ್ಗೆ ಒಲವೂ ಇತ್ತು. ಯಾಕೆಂದರೆ ನಮ್ಮ ಮನೆಯಲ್ಲಿ 'ಕುಣಿಕೆ' ಬೇಕಾದಾಗ ನಾವು ನೇಯ್ಗೆಯವರ ಬಳಿಯೇ ಹೋಗುತ್ತಿದ್ದೆವು. ಯಾಕೆಂದರೆ ಮಗ್ಗಗಳಲ್ಲಿ ಕೆಲಸ ಮಾಡುವಾಗ ವೇಸ್ಟೇಜ್ ದಾರವನ್ನೆಲ್ಲ ಚೆನ್ನಾಗಿ ಹುರಿ ಮಾಡಿ ಬಿಗಿಯಾಗಿ 'ಕುಣಿಕೆ'ಗಳನ್ನು ಮಾಡಿಕೊಡುತ್ತಿದ್ದರು. ಡಿ.ಆರ್. ಕುಣಿಕೆಯನ್ನು ನೋಡಿ ಏನಾದರೂ ತುಂಟತನದ ಮಾತನ್ನಾಡುವನೆಂದು ಭಾವಿಸಿದ್ದೆ. ಆದರೆ ಅವನು ಈಗಾಗಲೇ ಆ ಹೆಣ್ಣುಮಕ್ಕಳ ಕಿವಿಯ ಮೇಲೆ ಅದ್ಭುತ ಲೇಖಕ ತಾನು ಎಂಬ ಧ್ವನಿ ಬಿದ್ದಿದ್ದರಿಂದ ಸೌಜನ್ಯಕ್ಕಾಗಿಯಾದರೂ ಡಿಗ್ನಿಫೈಡ್ ಆದ. ಯಾಕೆಂದರೆ ಸುಂದರವಾದ ಹೆಣ್ಣುಮಕ್ಕಳ ಮುಂದೆ ನಮ್ಮ 'ಓವರ್ ಪ್ರೊಜೆಕ್ಷನ್ಸ್' ಸ್ವಲ್ಪ ಜಾಸ್ತಿ ಇರುವುದು ಸ್ವಾಭಾವಿಕ. ಹಾಗೆ ನೋಡಿದರೆ ನಾವು ಹೀಗೆ ಎಲ್ಲೆಂದರಲ್ಲಿ ಸೇರಿದಾಗ ಸಾಹಿತ್ಯ, ರಾಜಕೀಯ ಮತ್ತು ಸಂಸ್ಕೃತಿ ಕುರಿತು ಮಾತ್ರವಲ್ಲ; ತುಂಟಾಟಕ್ಕೆ ಎತ್ತಿದಕೈಯವರಾಗಿದ್ದೆವು. ಅದರಲ್ಲೂ ಕಿ.ರಂ. ನಾಗರಾಜ್ ಹಾಗೂ ಡಾ॥ ಸಿದ್ಧಲಿಂಗಯ್ಯ ಸೇರಿದರಂತೂ ಎಂತೆಂಥ ಸಾಹಿತ್ಯಕ ಮತ್ತು ರಾಜಕೀಯ ಜೋಕ್‌ಗಳು ಸೇರಿಬಿಡುತ್ತಿದ್ದವು. ಇರಲಿ, ಜಾತ್ರೆಯಲ್ಲಿ ಸುತ್ತಾಡಿ ಒಂದು ಮೂಲೆಯಲ್ಲಿ ಹೋಗಿ ಕೂತೆವು. ಆಕೆ ತನ್ನ ಮಗಳಿಂದ ಒಂದಷ್ಟು ಅದ್ಭುತ ಭಾವಗೀತೆಗಳನ್ನು

ಹಾಡಿಸಿದಳು. ಮೂರು ಮಂದಿಯೂ ನಿರಾಡಂಬರ ಸುಂದರಿಯರು. ಅವರ ಸರಳತನ ಮತ್ತು ನಯವಾದ ಮಾತುಗಳಿಂದ ಮತ್ತಷ್ಟು ಸುಂದರವಾಗಿ ಕಾಣುತ್ತಿದ್ದರು. ಆಕೆಗೆ ತನ್ನ ಎರಡನೆಯ ಮಗಳನ್ನು ಲಂಕೇಶ್ ಅವರ ಮಗ ಅಜಿತ್‌ಗೆ ಕೊಡುವ ಆಸೆ ಇತ್ತು. ಒಂದು ರೀತಿಯಲ್ಲಿ ನನ್ನ ಮೇಲೆ ತುಂಬ ಒತ್ತಾಯ ತಂದಿದ್ದರು. ಆಕೆ ತನ್ನ ಮಗಳನ್ನು ಕರೆದುಕೊಂಡು ಬೆಂಗಳೂರು ಆಕಾಶವಾಣಿಯ ಭಾವಗೀತೆ ಸ್ಪರ್ಧೆಗೆ ಬರುವಳಿದ್ದಳು. ಲಂಕೇಶ್ ಅವರಿಗೆ ವಿಷಯ ತಿಳಿಸಿದೆ. ಅವರು ಒಂದು ಕ್ಷಣ ಸುಮ್ಮನಿದ್ದು: "ಶೂದ್ರ ಬೇಡ ಸುಮ್ಮನಿರು. ಆ ಹುಡುಗಿ ಎಷ್ಟೇ ಸುಂದರವಾಗಿರಲಿ ಮತ್ತು ಒಳ್ಳೆಯವಳಾಗಿರಲಿ ಹಾಡುವ ಹುಡುಗಿಯನ್ನು ತಂದುಕೊಳ್ಳುವುದು ಬೇಡ" ಎಂದರು. ನಾನು ಮುಂದುವರಿಸಲಿಲ್ಲ. ಆಕೆ ಬೆಂಗಳೂರಿಗೆ ಬಂದಾಗ ನಾನು ಭೇಟಿಯಾಗಲಿಲ್ಲ. ದೂರವಾಣಿಯಲ್ಲಿಯೇ "ಲಂಕೇಶ್ ಅವರು ಅಷ್ಟೊಂದು ಉತ್ಸಾಹ ತೋರಿಸಲಿಲ್ಲ. ಮುಂದುವರಿಯುವುದು ಬೇಡ" ಎಂದೆ. ಆಕೆ ಸೂಕ್ಷ್ಮಮತಿಯಾಗಿದ್ದರಿಂದ ಮತ್ತೆ ಒತ್ತಡ ತರಲಿಲ್ಲ.

ಒಂದು ದೃಷ್ಟಿಯಿಂದ ಸಂಜೆಯವರೆವಿಗೂ ಸುತ್ತಾಡಿದ್ದೆವು. ಏಳು ಗಂಟೆಯ ಸಮಯದಲ್ಲಿ ಮಠದ ಬಯಲಿನಲ್ಲಿ ಸುತ್ತಾಡುವಾಗ ಕಂಬಾರರಿಗೆ ದಾವಣಗೆರೆ ಹೆಣ್ಣುಮಕ್ಕಳ ಬಗ್ಗೆ ತಿಳಿಸಿದೆ. ಡಿ.ಆರ್. ಮತ್ತು ಭರತಾದ್ರಿ ಸ್ವಲ್ಪ ಉಪ್ಪು ಮತ್ತು ಖಾರ ಜಾಸ್ತಿಯೆ ಬೆರೆಸಿ ಹೇಳಿದರು. ಕಂಬಾರರು ನಗುತ್ತ "ಹೇ ಕತ್ತೆಗಳಾ ಹೆಚ್ಚು ಮುಂದುವರಿಯಬೇಡಿ" ಎಂದರು. ಲಂಕೇಶ್ ಅವರ ಬೀಗತನಕ್ಕೆ ಸಂಬಂಧಿಸಿದಂತೆ ಹೇಳಿದಾಗ ಗಹಗಹಿಸಿ ನಗುತ್ತ ಭೇಷ್ ಎಂದರು. ಆ ಭೇಷ್ ನ ಮುಂದುವರಿದ ಅರ್ಥವನ್ನು ನಾನು ಕೇಳಲು ಹೋಗಲಿಲ್ಲ. ಆದರೆ ಅವರು ಮೀಸೆ ಮರೆಯಲ್ಲಿ ನಗುವುದು ಮತ್ತು ಗಹಗಹಿಸಿ ನಗುವುದನ್ನು ನೋಡುವುದಕ್ಕೆ ಚೆನ್ನಾಗಿರುತ್ತದೆ. ಯಾಕೆಂದರೆ ಅವರು ನಿಜಜೀವನದಲ್ಲೂ ನಟನಂತೆ ಸಂಭ್ರಮಿಸುತ್ತಿರುತ್ತಾರೆ ಬಹಳಷ್ಟು ಬಾರಿ. ಆದ್ದರಿಂದಲೇ ಅವರ ಒಟ್ಟು ನಾಟಕಗಳು ನಟನೆಗೆ ಪೂರಕವಾದಂತಹವು. "ಬನ್ರೋ ಸ್ವಲ್ಪ ಹೊರಗೆ ಹೋಗಿ ಸುತ್ತಾಡಿ ಬರೋಣ. ನೀವಂತೂ ಜಾತ್ರೆಯೆಲ್ಲ ಸುತ್ತಾಡಿ ಗಬ್ಬೆಬ್ಬಿಸಿ ಬಂದಿದ್ದೀರಿ" ಎಂದರು ಸಹಜವಾಗಿ. ನಾವು ಅದಕ್ಕೆ ನಗುತ್ತ ಪ್ರತಿಕ್ರಿಯಿಸಲಿಲ್ಲ. ಹೀಗೆಯೇ ಹೊರಗೆ ಸ್ವಲ್ಪ ಸುತ್ತಾಡುವಾಗ ಇನ್ನೂ ಸ್ವಲ್ಪ ಮಂದ ಬೆಳಕಿತ್ತು. ನವಿಲುಗಳು ತಮ್ಮ ಸಂಭ್ರಮದ ನಾಟ್ಯ ಮುಗಿಸಿ ಗೂಡು ಸೇರಿರಲಿಲ್ಲ. ನೂರಾರು ಎಕರೆಗಳಲ್ಲಿ ನೀಲಗಿರಿ ಗಿಡಗಳು ಸೊಂಪಾಗಿ ಬೆಳೆಯುತ್ತಿದ್ದವು. ಆ ಪ್ರದೇಶದ ದೇಸಿ ಮರಗಿಡಗಳನ್ನೆಲ್ಲ ತಿಂದು ನೀರು ಕುಡಿದಂತೆ ಕಾಣುತ್ತಿದ್ದವು. ಬೆಳಿಗ್ಗೆ ಹೀಗೆ ಸುತ್ತಾಡುವಾಗ ಯಾರೋ ಕೇಳಿದ್ದಕ್ಕೆ ಹೇಳಿದ್ದರು: ಬೆಂಗಳೂರು ಮೂಲದ ಹೆಂಡದ ದೊರೆಗಳೊಬ್ಬರು ಹೀಗೆ ನೂರಾರು ಎಕರೆಯನ್ನು ಕೊಂಡಿದ್ದಾರಂಥೆ ಎಂದು. ಅದನ್ನು ತಿಳಿದು ಗಾಬರಿಯಾಗಿತ್ತು. ಇದನ್ನು ಪ್ರಸ್ತಾಪಿಸಿದಾಗ ಅಷ್ಟೇ ಕಣ್ರಯ್ಯ ಯಾರ್‍ಯಾರೋ ಬರ್‍ತಾರೆ, ನಿರ್ನಾಮ ಮಾಡಿ ಹೋಗುತ್ತಾರೆ ಎಂಬ ಧ್ವನಿಯ ಮುಂದೆ ಅವರದ್ದೇ ಕಾವ್ಯದ ಸಾಲುಗಳನ್ನು ಹೀಗೆ ಬರೆಯುವ ಕಾಲಕ್ಕೆ ದಾಖಲಿಸುತ್ತಿರುವೆ: "**ಏನಾಗಿದೆ ಶಿವನೆ ಈ ಗುಡಿಗೆ? / ಹುಲ್ಲು ಬೆಳೆದಿದೆ ಸೂರುಗಳ ಮ್ಯಾಲೆ! / ಗೆದ್ದಲು ಕಟ್ಟಿದೆ ಬಾಗಿಲುಗಳಿಗೆ! ಅಲೆ ಅಲೆ ಜೇಡ ಬಲೆ ಮೂಲೆಗಳಿಗೆ! / ಮಳೆ ಮೋಡಗಳಿಂದಾಗಿ ಬಾಡಿದ ಬೆಳಕಿನಲ್ಲಿ ಮೌನದ ಹೆಣ ಮಲಗಿದೆ!**" ಹಾಗೆ ನೋಡಿದರೆ ಈ ಕಾವ್ಯದ ಸಾಲುಗಳನ್ನು ಓದಿಕೊಂಡಾಗ. ಅಂದೇ ನಮ್ಮ ಮುಂದೆ ಹೇಳಿಬಿಡಬೇಕಾಗಿದ್ದ ಸಾಲುಗಳಿವು. ಆದರೆ ವಿಷಾದದಿಂದ ಅವರ ಮನಸ್ಸಿನಲ್ಲಿಯೇ ಮುಲುಗುಡುತ್ತ; ಮುಂದೆ '**ಎಲ್ಲಿದೆ ಶಿವಾಪುರ**'ದ ಸಂಕಲನದಲ್ಲಿ ಜಾಗ ಪಡೆಯಲು ಕಾದಿದ್ದವೇನೋ ಎಂಬ ಭಾವನೆ ಬಂದುಹೋಯಿತು. ಹೀಗೆ ಸುತ್ತಾಡುವಾಗ; ಅಲ್ಲಿಯೇ

ಎಲೆಯೆಲ್ಲ ಬಿದ್ದು ಹೊಸ ಚಿಗುರಿಗಾಗಿ ಕಾಯುತ್ತಿದ್ದ ಮರವದು. ಅದರಲ್ಲಿಯೇ ಕೂತ ಪಕ್ಷಿಗಳು. ಅಂಥ ಮರದ ಬುಡದಡಿ ಕೂತೆವು. ಕೈಬೀಸಿ ತಮ್ಮ ಬಾಲ್ಯದ ನೆನಪುಗಳನ್ನು ದಾಖಲು ಮಾಡಿದರು. **"ಈ ಸಾವಳಗಿ ಮಠದ ಬಗ್ಗೆ ನನಗೆ ಅವ್ಯಕ್ತ ಅನನ್ಯತೆ ಮೊದಲಿನಿಂದಲೂ ಆವರಿಸಿಕೊಂಡಿದೆ. ನೀವು ಬಂದಿದ್ದು ತುಂಬ ಒಳ್ಳೆಯದಾಯಿತು. ನಿನ್ನೆ ಸಂಜೆ ನೀವು ಸನ್ಮಾನ ಮಾಡಿಸಿಕೊಂಡು ಮಾತಾಡಿದ ಮಾತುಗಳನ್ನು ಇಂದು ಬೆಳಿಗ್ಗೆ ಸ್ವಾಮೀಜಿಯವರು ತುಂಬ ಆತ್ಮೀಯವಾಗಿ ಮೆಲುಕು ಹಾಕಿಕೊಂಡರು"** ಎಂದು ಎದ್ದರು, ಪಕ್ಷಿಯೊಂದು ನನ್ನ ಷರ್ಟಿನ ಮೇಲೆ ಗಲೀಜು ಮಾಡಿತು. ಅದಕ್ಕೆ ಕಂಬಾರರು ನಗುತ್ತ "ಈಗ ನೋಡು ನೀನು ನಿಜವಾದ ಶೂದ್ರ ಆದೆ" ಎಂದಾಗ; ನಾವೆಲ್ಲ ಎಂಜಾಯ್ ಮಾಡಿದ್ದೆವು. ನನಗೆ ಈಗಲೂ ಸಾವಳಗಿ ಮಠ, ಆ ಜಾತ್ರೆ, ಇಳಕಲ್ ಡ್ಯಾಮ್‌ನ ಆ ಸಂಜೆ, ಆ ಮರ ಮತ್ತು ಎದ್ದಾಗ ಪಕ್ಷಿಯೊಂದು ಗಲೀಜು ಮಾಡಿದ್ದು ಹಾಗೂ ಕಂಬಾರರ ಮಾತು ಎಲ್ಲವೂ ನನ್ನ ನೆನಪಿನ ಬೃಹತ್ ಫ್ರೇಮಿನಲ್ಲಿ ಆಪ್ತ ಕೊಲಾಜ್ ಗಳಾಗಿ ಆವರಿಸಿಕೊಂಡಿದೆ. ಹಾಗೆಯೇ **ಈ ಕಂಬಾರರಿಗೆ ಶಿವಾಪುರ ಮತ್ತು ಘೋಡಗೇರಿ ಬದುಕಿನುದ್ದಕ್ಕೂ ಬಾಲ್ಯಕಾಲದ ಚಿನ್ನದ ಗಣಿಯಿದ್ದಂತೆ ಎಷ್ಟು ಅಗೆದು ಎಕ್ಕಿ ತೆಗೆದರೂ ಮುಗಿಯದ ಸಂಪತ್ತು.**

ಮಾರನೆಯ ದಿನ ಸಾವಳಗಿಯನ್ನು ಬಿಟ್ಟೆವು ಸ್ವಾಮೀಜಿಯವರಿಗೆ ನಮಸ್ಕರಿಸಿ. ಕಂಬಾರರು ಅಂದು ಅಲ್ಲಿಯೇ ಇರಬೇಕಾಯಿತು. ನಮ್ಮ ಜೊತೆಯಲ್ಲಿ ಆ ದಾವಣಗೆರೆಯ ಪುಟ್ಟ ಕುಟುಂಬ ಬಂತು. ಗಾಡಿಯಲ್ಲಿ ದಾರಿ ಉದ್ದಕ್ಕೂ ಅಂತ್ಯಾಕ್ಷರದ ಹಾಡು ಮತ್ತು ಆ ಹುಡುಗಿಯ ಸುಮಧುರ ಭಾವಗೀತೆಗಳಿಗೆ ಕೊರತೆಯಿರಲಿಲ್ಲ. ಡಿ.ಆರ್. ಕೂಡ ಸ್ಫೂರ್ತಿ ತಂಬುಕೊಂಡು ನಾಲ್ಕೈದು ಜಾನಪದ ಗೀತೆಗಳನ್ನು ಹಾಡಿದ. ಚೆನ್ನಾಗಿಯೇ ಹಾಡಿದ. ದಾವಣಗೆರೆ ತಲುಪಿದಾಗ ಅವರ ಮನೆಗೆ ಹೋಗಿ ಟೀ ಕುಡಿದು ಹೊರಟೆವು. ಒಂದಷ್ಟು ದೂರ ನಮ್ಮ ಪ್ರಯಾಣ ಬಿಕೋ ಎನ್ನತೊಡಗಿತ್ತು; ಅವರು ಇಳಿದಿದ್ದರಿಂದ.

ಬೆಂಗಳೂರಿಗೆ ಬಂದ ಮೇಲೂ ತುಂಬ ಸಂಜೆಯ ಕಾರ್ಯಕ್ರಮಗಳಲ್ಲಿ ಸಾವಳಗಿಯ ಅನುಭವಗಳನ್ನು ಸ್ವಲ್ಪ ರಂಜಕವಾಗಿಯೇ ನೆನಪು ಮಾಡಿಕೊಂಡೆವು. ಹೀಗೆ ನೆನಪು ಮಾಡಿಕೊಳ್ಳುವ ಒಂದು ಸಂಜೆಯನ್ನು 'ಮಧುವನ್' ಹೋಟೆಲ್ಲಿನಲ್ಲಿ ಕಳೆದೆವು. ಆ ಹೋಟೆಲ್‌ನ ಒಂದು ಕೊಠಡಿಯನ್ನು ಮೈಸೂರು ಅನಂತಸ್ವಾಮಿಯವರು ತಮ್ಮ ಬದುಕಿನ ಕೊನೆಯ ದಿನಗಳವರೆವಿಗೂ ಉಳಿಸಿಕೊಂಡಿದ್ದರು. ಅಲ್ಲಿ ನಾವು ಒಂದಷ್ಟು ಸಂಜೆಗಳನ್ನು ಕಳೆದಿದ್ದರೂ; ಕಂಬಾರರು, ಅನಂತಸ್ವಾಮಿ, ಡಾ॥ ಸಿದ್ಧಲಿಂಗಯ್ಯ ಮತ್ತು ಡಿ.ಆರ್.ನಾಗರಾಜ್ ಹಾಗೂ ನಾನು ಸೇರಿ ನಡೆಸಿದ ಏಳೆಂಟು ಗಂಟೆಗಳ ಮಾತುಕತೆ ಮತ್ತು ಹಾಡುಗಳ ನಡುವೆ ಎಷ್ಟೊಂದು ರೀತಿಯ ಭಾವನಾತ್ಮಕತೆಯನ್ನು ನಮ್ಮದಾಗಿಸಿಕೊಂಡೆವು. ನನಗಂತೂ ಅದೊಂದು ಅತ್ಯಂತ ಸ್ಮರಣೀಯ ಸಂಜೆ. ಮೈಸೂರು ಅನಂತಸ್ವಾಮಿಯವರು ಕಾಳಿಂಗರಾವ್ ನಂತರ ಎಷ್ಟು ದೊಡ್ಡ ಕಲಾವಿದರೋ ಅಷ್ಟೇ ಮುಗ್ಧ ವ್ಯಕ್ತಿ. ಒದೊಂದು ಭಾವಗೀತೆ ಹಾಡುವಾಗಲೂ; ಅದಕ್ಕೆ ಯಾವ ರೀತಿಯ ಸ್ವರ ಪ್ರಸ್ತಾರ ಎಂಬುದನ್ನು ವಿವರಿಸಿ ಹಾಡುತ್ತಿದ್ದರು. ಮಧ್ಯೆ ಮಧ್ಯೆ ನಿಲ್ಲಿಸಿ ಈಗ ನಿಮ್ಮ ಭಾವಲೋಕಕ್ಕೆ ಯಾವ ರೀತಿಯ ಧಕ್ಕೆಯಾಗಿದೆ ತಿಳಿಸಿ ಎಂದು ಕೇಳುತ್ತಿದ್ದರು. ಹೀಗೆ ಕೇಳುತ್ತಲೇ ತಮ್ಮ ಗುರುವಿಗಿಂತ ಎತ್ತರದ ಸ್ಥಾನದಲ್ಲಿ ನಿಲ್ಲುವ ಕಾಳಿಂಗರಾವ್ ಅವರನ್ನು ನೆನಪು ಮಾಡಿಕೊಳ್ಳುತ್ತಿದ್ದರು: "ಆ ಮಹಾನುಭಾವನದ್ದು ಓತಪ್ರೋತ ಆಲಾಪನೆಯುದ್ದಲ್ಲ. ಆದರೆ ಎಲ್ಲ ಧ್ವನಿತರಂಗಗಳನ್ನು, ಭಾವತರಂಗಗಳನ್ನು ಕಟ್ ಕಟ್ ಮಾಡಿ ಹಾಡುವ ವೈಖರಿ ಅಪರೂಪದ್ದು. ಆತನದ್ದು ತುಂಬ ದೊಡ್ಡ ಕ್ಲಾಸಿಕಲ್ ಪರಂಪರೆ. ಆ ರೀತಿಯಲ್ಲಿ ಆಡಂಬರ ಮತ್ತು ಅಬ್ಬರವಿಲ್ಲದೆ ಹಾಡುತ್ತಿದ್ದ ಮತ್ತೊಬ್ಬ ಕಲಾವಿದ ನಮ್ಮ ನಡುವೆ ಬರಲಿಲ್ಲ" ಎಂದರು.

ಕಂಬಾರರು ತಮ್ಮ ಕಾವ್ಯರಚನೆ ಮತ್ತು ಅದನ್ನ ಹಾಡುವ ಅದರ ಮ್ಯೂಸಿಕ್‌ನ ಧ್ವನಿಪೂರ್ಣತೆ ಬಗ್ಗೆ ಪ್ರಸ್ತಾಪಿಸಿದರು. ಅನಂತಸ್ವಾಮಿಯವರು ತಮ್ಮ ಸ್ಮರಣೀಯ ಬೈಠಕ್ಕನ್ನ ರಾತ್ರಿ ಹನ್ನೊಂದೂವರೆಯವರೆವಿಗೂ ಮುಂದುವರೆಸಿದರು. ನಂತರ ನಮಗೆಲ್ಲ ನಮಸ್ಕರಿಸಿ ಹೋದರು. ನಾವು ಮುಂದುವರೆಸಿದೆವು. ಹನ್ನೆರಡೂವರೆಗೆ ಡಿ.ಆರ್. ಮತ್ತು ಸಿದ್ಧಲಿಂಗಯ್ಯ ಮೆಲ್ಲಗೆ ಅಲ್ಲಿಂದ ಕಳಚಿಕೊಂಡರು. ಮತ್ತೊಂದು ಗಂಟೆ ನಮ್ಮ ಮಾತು ಮುಂದುವರೆಯಿತು. ಅಲ್ಲಿ ಪ್ರೀತಿ, ಪ್ರೇಮ, ಕಾವ್ಯ ಹಾಗೂ ಹೆಣ್ಣುಗಂಡಿನ ಸಂಬಂಧ ಕುರಿತು ಏನೇನೋ ಮಾತಾಡಿದೆವು. ಒಂದು ದೃಷ್ಟಿಯಿಂದ ಕಂಬಾರರ 'ಗೆಳತಿಗೆ' ಕವನವನ್ನು ಓದಿಕೊಳ್ಳುವಾಗಲೆಲ್ಲ 'ಮಧುವನ್' ಹೋಟೆಲ್‌ನಲ್ಲಿ ಕೊರಡಿಯ ಮಾತುಕತೆ ನೆನಪಿಗೆ ಬರುತ್ತದೆ. ಹಾಗೆಯೇ ಈ ಕವನವನ್ನಿಟ್ಟುಕೊಂಡು ಗೋಪಾಲಕೃಷ್ಣ ಅಡಿಗರ **ಹೆಣ್ಣು-1, ಹೆಣ್ಣು-2, ಒಲವು ಮತ್ತು ಚಿಂತಾಮಣಿಯಲ್ಲಿ ಕಂಡ ಮುಖ** ಕವನಗಳನ್ನು ವಿಶ್ಲೇಷಿಸಿಕೊಂಡಿದ್ದೇನೆ. ಗೆಳೆಯ ಕವಿಮಿತ್ರರಾದ ರುದ್ರೇಶ್ವರಸ್ವಾಮಿಯವರು ಕಂಬಾರರನ್ನು ಕುರಿತು ಕವನ ರಚಿಸಿಕೊಂಡು ಬಂದಾಗ; ಈ ಮೇಲಿನ ಕುರಿತ ಕವನಗಳಲ್ಲಿಯ ಪ್ರೀತಿ ಪ್ರೇಮದ ಜೀವನ ನಿಷ್ಠೆಯ ತಾದಾತ್ಮ್ಯವನ್ನು ಕುರಿತು ಅವಲೋಕಿಸಿಕೊಂಡಿದ್ದೇನೆ. ಮತ್ತು ಅವರಿಗೆ ಈ ಕವನಗಳ ಕೆಲವು ಸಾಲುಗಳನ್ನು ಓದಿ ಹೇಳಿದ್ದೇನೆ. ಯಾಕೆಂದರೆ ಸ್ವಾಮಿಯವರು ಕಾವ್ಯಪ್ರೇಮಿ.

ಕೆಲವು ತಿಂಗಳುಗಳ ಹಿಂದೆ ಬೆಂಗಳೂರಿನ ಕೆ.ವಿ.ಸುಬ್ಬಣ್ಣನವರ ಆಪ್ತ ಬಳಗದಲ್ಲಿ ಕಂಬಾರರ 'ಸಂಗೀತ' ಚಿತ್ರವನ್ನು ನೋಡಿದೆ. ಅವರ ಕುಟುಂಬದವರೂ ಇದ್ದರು. ಹಿಂದೆ ಲಂಕೇಶ್ ಅವರ ಜೊತೆ ನೋಡಿದ ಚಿತ್ರ, ಆದರೆ ಈಗ ಮತ್ತಷ್ಟು ಕವಿಯೊಬ್ಬನ ಬೇರೊಂದು ಹುಡುಕಾಟದ ಫ್ರೆಷ್ ಚಿತ್ರ ಅನ್ನಿಸಿತು. ಅದನ್ನು **'ಗೆಳತಿಗೆ'** ಕವನದ ಈ ಕೆಳಗಿನ ಸಾಲುಗಳನ್ನು ಚಿತ್ರಭಾಷೆ ಜೊತೆಗಿಟ್ಟು ಅನುವಾದಿಸುತ್ತ ಹೋದೆ:

"ನನಗಾಗಿ ಒಂದಷ್ಟು ಆಯುಷ್ಯವನ್ನು
ಇಟ್ಟಿದ್ದರೆ ಬಾ ಇತ್ತ.
ಬದುಕುವುದಕ್ಕೆ ಏನು ಬೇಕು?
ಒಂದಷ್ಟು ಭ್ರಮೆಗಳು, ಅಷ್ಟಿಷ್ಟು ಕನಸುಗಳು!
ತರುಣ ಕನಸುಗಳುಂಟು, ಹಸಿ ಭ್ರಮೆ ನೂರುಂಟು
ಮೈಚಳಿ ಬಿಟ್ಟು ಮುದಿ ಮರವೂ ಚಿಗುರಲುಂಟು!
ಕೂಡುವುದಕೆ ಪಡೆವುದಕೆ ಇನ್ನೂ ಇದೆ ಅಷ್ಟಿಷ್ಟು
ಕ್ಷಿತಿಜವನ್ನು ಎತ್ತಿಹಿಡಿಯಲು ಇಷ್ಟು ಸಾಕು"

ಈ ಸಾಲುಗಳ ತಾತ್ಪರ್ಯವನ್ನಿಟ್ಟುಕೊಂಡೇ 'ಸಂಗೀತ'ದ ಬಗ್ಗೆ ಮಾತಾಡಿದ್ದೆ. ಮುಂದುವರಿದು ಪ್ರತಿಯೊಬ್ಬ ಸೃಜನಶೀಲ ವ್ಯಕ್ತಿ ಒಟ್ಟು ತನ್ನ ಶ್ರೀಮಂತ ಅನುಭವವನ್ನು ಎಲ್ಲೆಲ್ಲೋ ಇನ್‌ವೆಸ್ಟ್ ಮಾಡಿ ಅದರ ಫಲಿತಾಂಶವನ್ನು ಪಡೆಯಲು ಬಯಸುವನು. ಅದರ ಅರ್ಥ ವಿವಿಧ ಕ್ಯಾನ್‌ವಾಸ್‌ಗಳಲ್ಲಿ ತನ್ನ ನಾರ್ಸಿಸಸ್ ಕಾಂಪ್ಲೆಕ್ಸ್ ಗಳನ್ನು ಅರ್ಪಿಸಿಕೊಳ್ಳುವುದು. ಇದು ಅವರವರಿಗೆ ಬದುಕಿನ ಅನಿವಾರ್ಯವಾಗಿಯೂ ಇರುತ್ತದೆ. ಇದಕ್ಕೆ ಜಗತ್ತಿನ ದೊಡ್ಡ ದೊಡ್ಡ ಚಿಂತಕರು ಮತ್ತು ಲೇಖಕರೇ ಸಾಕ್ಷಿ. ಈಗಂತೂ ಆದ್ಯತೆಗಳು ಮನಸ್ಸಿನ ಮುಂದೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಆಯ್ಕೆಗೆ ಎಷ್ಟೊಂದು ತೊಡಕುಗಳಿವೆ. ಹಾಗೆಯೇ ವ್ಯಾಪಾರೀಕರಣದ ವಿಚಿತ್ರ ಪ್ರಯೋಗಗಳಲ್ಲಿ ಇದು ನನ್ನ ಸೃಷ್ಟಿ ಎಂದು ಹೇಳುವುದಕ್ಕೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಮೊನ್ನೆ ಯಾವುದೋ ಸಭೆಯಲ್ಲಿ ಪ್ರಸ್ತಾಪಿಸುತ್ತಿದ್ದೆ: ನಿಜವಾದ ಹೂವುಗಳಿಗಿಂತ

ಪ್ಲಾಸ್ಟಿಕ್ ಹೂವುಗಳು ಇಂದು ಮಾರುಕಟ್ಟೆಯಲ್ಲಿ ಯಥೇಚ್ಛವಾಗಿ ಅಲಂಕೃತಗೊಂಡಿರುತ್ತವೆ. ಇಲ್ಲಿ ಆಯ್ಕೆಯ ದೃಷ್ಟಿಯನ್ನೇ ಮಂಕುಮಾಡಿಬಿಡುತ್ತವೆ. ಆದ್ದರಿಂದಲೇ ನಮ್ಮ ಬಹುಪಾಲು ಗಟ್ಟಿ ಬರಹಗಾರರು 'ದೇಸಿ' ಪರಿಕಲ್ಪನೆಗೆ ಹಿಂದಿರುಗಿ ಹೋಗುತ್ತಲೇ; ಅಲ್ಲಿ ನಿಂತು ತಮ್ಮ ಮುಂದೆ ಏನಾಗುತ್ತಿದೆ ಎಂದು ಅವಲೋಕಿಸಿಕೊಳ್ಳುವುದು. ಹೀಗೆ ಅವಲೋಕಿಸಿಕೊಂಡಾಗ ಮಾತ್ರ **'ದೇವಭಾಷೆ'** ಕವಿತೆಯ ಈ ಸಾಲುಗಳು ಹುಟ್ಟಲು ಸಾಧ್ಯ: "ಇನ್ನು ಇತಿಹಾಸದ **ಬುಕ್ಕಿಗಿಲ್ಲದ / ಶಾನುಭೋಗರ ಲೆಕ್ಕಕ್ಕಿಲ್ಲದ / ಹೊಗಳುಭಟ್ಟರ ಪರಾಕಿಗಿಲ್ಲದ / ದೇವರೆಷ್ಟೋ ಇವೆ!** / ಕವಿ ಇಷ್ಟನ್ನೇ ಹೇಳಿ ಮುಗಿಸುವುದಿಲ್ಲ. ಆದರೆ **"ಬಿಡ್ರಿ, ಇದು ಎಷ್ಟೆಂದರೂ ದೇವಭಾಷೆಯ ವ್ಯವಹಾರ; / ನಿಶ್ಶಬ್ದಕ್ಕೆ ಅರ್ಥ ಬಳಿಯುವ ಕೆಲಸ"** ಎಂದು ಮಾರ್ಮಿಕವಾಗಿ ಷರಾ ಎಳೆದು ಬಿಡುತ್ತಾರೆ. ಇಂಥದನ್ನು ಸೃಜನಶೀಲ ಮನಸ್ಸು ಮಾತ್ರ ಹೇಳಲು ಸಾಧ್ಯ. ನಮ್ಮ ಜನಮಾನಸದಲ್ಲಿ ಈ ರೀತಿಯ ಆಪ್ತವಾದ ನುಡಿಗಳಿಂದಲೇ; ಪ್ರವಾದಿಯ 'ಅಸ್ಮಿತೆ'ಗಳು ದಟ್ಟವಾಗಿ ಬೇರು ಬಿಟ್ಟಿರುವುದು. **ಕವಿ, ಲೇಖಕ, ಕಲಾವಿದ** ಇಂಥ ವಿಶಿಷ್ಟ ಶಬ್ದಪುಂಜಗಳಿಗೆ ಎಲ್ಲಿಲ್ಲದ ಮಾನ್ಯತೆ ಇರುವುದು. ಯಾಕೆಂದರೆ ಇವರ ಹುಡುಕಾಟ ನಿರಂತರವಾದದ್ದು. ಅತೃಪ್ತಿಯ ಮುಂದೆ ನಿಲ್ಲುವ **'ಇದು ಇನ್ನೂ ಸಾಲದು'** ಎಂಬ ಪರಿಕಲ್ಪನೆ ಅಥವಾ **ಅರಿವಿನ ಹುಡುಕಾಟಕ್ಕೆ** ತೊಡಗುವುದಿದೆಯಲ್ಲ ಅದನ್ನ ಹೀಗೆಯೇ ಎಂದು ಹೇಳುವುದು ಕಷ್ಟ. ಇದನ್ನು ಬರೆಯುವ ಕಾಲಕ್ಕೆ ನನಗೆ ಪ್ರಿಯರಾದ ಪ್ರೊ. ಬಿ.ಸಿ. ರಾಮಚಂದ್ರಶರ್ಮ ಮತ್ತು ಪ್ರೊ. ಎ.ಕೆ. ರಾಮಾನುಜನ್ ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆ. (ಈಗಾಗಲೇ ಸಾಕಷ್ಟು ಬಾರಿ ಕೇಳಿಸಿಕೊಂಡಿದ್ದರೂ) ಇದು ಅಮೇರಿಕಾದಲ್ಲಿ ನಡೆದ ದೀರ್ಘ ಮಾತುಕತೆ. ಆ ಮಾತುಕತೆಯಿಂದ ಏನೇನೋ ಇಲ್ಲಿ ದಾಖಲು ಮಾಡಬಹುದು. ಆದರೆ **'ಮೈನೆರೆಯುವಾಟ'** ಎಂಬುದು ಅವರ ಕವನದಲ್ಲಿ ಎಷ್ಟು ಗಂಭೀರವಾಗಿ ಅರ್ಥದ ಸಾಪೇಕ್ಷತೆಯನ್ನು ಪಡೆದು ಇಡೀ ಒಂದು ಜೀವನದ **'ರೂಪಕ'**ವಾಗಿ ನಿಂತುಬಿಡುತ್ತದೆ. ರೆಕಾರ್ಡರ್ ಆಫ್ ಮಾಡಿ ಯೋಚಿಸುತ್ತ ಹೋದೆ. ಯೋಚಿಸಿದಂತೆಲ್ಲ **'ಮಿಥ್ ಆಫ್** ಸಿಸಿಪಸ್'ನ ದೊಡ್ಡ ಬಂಡೆಯಂತೆ ಧುತ್ತನೆ ನನ್ನ ಮನಸ್ಸಿನ ಮುಂದೆ ನಿಂತು ಬಿಟ್ಟಿತ್ತು. ಆಗ ಅರ್ಥೈಸಿಕೊಳ್ಳುವುದಕ್ಕೆ ಆ ಬಂಡೆಯನ್ನು ಮೇಲೆ ತಳ್ಳುವುದಿರಲಿ; ಇದ್ದಲ್ಲಿಯೇ ರೌಂಡ್ ಹಾಕುತ್ತ ಇದಕ್ಕೆ ಈ ಅರ್ಥ ಎಂದು ವಿವರಿಸಿಕೊಳ್ಳಲು ಹೋದಾಗಲೂ; ಹಿಂದೆ ಹೊಳೆದ ಅರ್ಥಗಳು ಹುಸಿಯಾಗಿರುತ್ತದೆ. ಈ ದೃಷ್ಟಿಯಿಂದ ನಮ್ಮ ಎಲ್ಲ ದೊಡ್ಡ ಲೇಖಕರನ್ನು ಗ್ರಹಿಸಿಕೊಂಡಿದ್ದೇನೆ ಎಂದು ಯಾವ ಧೈರ್ಯದಿಂದ ಹೇಳಿಕೊಳ್ಳಲಿ? ಕಾವ್ಯದ ದೃಷ್ಟಿಯಿಂದ ಬೇಂದ್ರೆ, ಕುವೆಂಪು, ಗೋಪಾಲಕೃಷ್ಣ ಅಡಿಗ, ಗಂಗಾಧರ ಚಿತ್ತಾಲ ಮತ್ತು ಕಂಬಾರರು ಯಾವಾಗಲೂ **ಮುಖಾಮುಖಿ**ಯಾಗುತ್ತಲೇ ಇದ್ದಾರೆ. ಈ **ಮುಖಾಮುಖಿ** ತನವೂ ಬಹಳ ಮುಖ್ಯ. ಯಾಕೆಂದರೆ ನಿರ್ದಿಷ್ಟ ವಸ್ತುವನ್ನು ಕುರಿತಂತೆ ಇನ್ನೂ ಲವಲವಿಕೆಯನ್ನು ಉಳಿಸಿರುತ್ತದೆ.

ಇನ್ನು ಕಂಬಾರರನ್ನು ಕುರಿತಂತೆ ನೆನಪು ಸಾಕಷ್ಟು ಚೆಲ್ಲಾಪಿಲ್ಲಿಯಾಗಿದೆ. ಅವೆಲ್ಲ ಒಂದು ಆರ್ಡರ್ ನಲ್ಲಿ ನನ್ನ ಮನಸ್ಸಿಗೆ ಎಟುಕುತ್ತಿಲ್ಲ. ಆದರೂ ಕಳೆದ ನಾಲ್ಕೈದು ದಶಕಗಳಿಂದ ಒಂದಷ್ಟು ಮಹತ್ವಪೂರ್ಣ ಲೇಖಕರು, ಚಿಂತಕರು ನಡೆದಾಡಿದ ಜಾಡಿನಲ್ಲಿ ನಾನು ಓಡಾಡಿದ್ದೇನೆ ಎಂಬುದು ಸಂತೋಷದ ವಿಷಯ. ಹಾಗೆಯೇ ಅವರೆಲ್ಲರ ದೊಡ್ಡತನ ಮತ್ತು ತಿಕ್ಕಲುತನಗಳನ್ನು ಕಂಡು 'ಹೌ ಬ್ಯೂಟಿಫುಲ್' ಎಂದು ಉದ್ಗಾರಗಳನ್ನೆಳೆದುಕೊಳ್ಳಲು ಸಾಧ್ಯವಾಗಿದೆ. ಕೊನೆಗೂ ಅವರನ್ನು ಮತ್ತೆ ಮತ್ತೆ ಓದಲು ಆ ಕಡೆ ದಬ್ಬುವುದಿದೆಯಲ್ಲ; ಅದೇ 'ಹಾಯ್' ಅನ್ನಿಸುವಂಥದ್ದು. ಹೀಗೆ **'ಹಾಯ್'**ಗಳನ್ನು ಭಿನ್ನ ಭಿನ್ನ ರೂಪಗಳಲ್ಲಿ ತುಂಬಿಕೊಂಡವರು ಸಾವಿರಾರು ಮಂದಿ ಇರಬಹುದು. ಇವರನ್ನೆಲ್ಲ ಪ್ರತಿನಿಧಿಸುವಂತೆ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಸರ್ಕಾರ ಗೌರವಿಸಿತು, ಅದರಲ್ಲೂ ಕೆಲಸದ ದಿವಸ ಸೋಮವಾರ ಬೆಳಿಗ್ಗೆ ಹನ್ನೊಂದು

ಗಂಟೆಗೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಎಷ್ಟೊಂದು ಮಂದಿ ಸೇರಿದ್ದರು. ಅಷ್ಟೊಂದು ಮಂದಿಯನ್ನು ನಾನು ಎಂದೂ ನೋಡಿರಲಿಲ್ಲ. ಅವರೆಲ್ಲ ನಮ್ಮ ಕಾಲದ ಒಬ್ಬ ದೊಡ್ಡ ಲೇಖಕ ಏನೋ ಮಾತಾಡಬಹುದು ಎಂದು ಮಾತುಗಳ ಹಸಿವಿನಿಂದ ಬಂದಿದ್ದರು ಅನ್ನಿಸುತ್ತದೆ. ಆದರೆ ಕಂಬಾರರು ಪ್ರಭುತ್ವದ ವಕ್ತಾರರನ್ನು ಕಂಡು ರೋಮಾಂಚಿತರಾದರು. ಕನ್ನಡ ಭಾಷೆಯ ಬಗ್ಗೆ ಮಾತಾಡಿದರು. ಅನಂತಮೂರ್ತಿಯವರೂ ಅಷ್ಟೇ. ಹೀಗೆ ಎಷ್ಟೋ ವರ್ಷಗಳಿಂದ ವೇದಿಕೆ ಸಿಕ್ಕಿದಾಗಲೆಲ್ಲ ನಮ್ಮ ಹಿರಿಯರು ಕನ್ನಡದ ಬಗ್ಗೆ ಮಾತಾಡುತ್ತ ಬಂದಿದ್ದಾರೆ. ಆದರೆ ಆ ತೇರಿಗೆ ಏನೂ ಆಗಿಲ್ಲ. ಹಾಗೆಯೇ ಸುಂದರವಾಗಿ ಅಲಂಕೃತಗೊಂಡು ನಿಂತಿದೆ. ಗಾಬರಿ ಯಾಕೆ? ಇಷ್ಟಾದರೂ ನಾವು ಎಲ್ಲ ಕ್ರೈಸೀಸ್‌ಗಳನ್ನು ದಾಟಿ ಇಲ್ಲಿಯವರೆವಿಗೆ ಜನಮನದಲ್ಲಿ ಲೇಖಕರಾಗಿ ಉಳಿದಿದ್ದೇವೆ, ಮುಂದುವರಿದಿದ್ದೇವೆ ಎಂಬುದನ್ನು ಯೋಚಿಸಿಯೇ ಇರುವುದಿಲ್ಲ. ಹೌದು ಪ್ರಭುತ್ವ ಇರುತ್ತದೆ. ಅದು ಸಾಪೇಕ್ಷವಾಗಿ ಅಲ್ಲ. ಪ್ರಶ್ನಾರ್ಹವಾಗಿ ಉಳಿದಿರುತ್ತದೆ. ಕೊನೆಗೂ ಪ್ರಜಾಪ್ರಭುತ್ವದ ಚಲನಶೀಲತೆ ಎಂದರೆ ಇದೇನೆ. ಯಾಕೆಂದರೆ ಒಂಟಿಯಾಗಿ ಕೂಗುತ್ತ ಹೋಗುವುದಲ್ಲ; ಅದಕ್ಕೆ ಮತ್ತಷ್ಟು ಧ್ವನಿಯ ಧ್ಯಾನ ಸೇರಿದಾಗ ಮಾತ್ರ ಸಿಂಹಾಸನ ಬೆದರುವುದು. ಇಲ್ಲದಿದ್ದರೆ 'ವ್ಯಂಗ್ಯ' ಸ್ಥಾಯಿಯಾಗಿಬಿಡುತ್ತದೆ. ಗಾಂಧೀಜಿಯಂಥವರು ಇಂಥ 'ವ್ಯಂಗ್ಯ'ವನ್ನು ದಾಟಿದವರು. ಒಂಟಿ ಸಲಗದಂತೆ ಎಂದೂ ಕೂಗಾಡಲು ಹೋಗಲಿಲ್ಲ. ಧ್ವನಿಯನ್ನು **ಕನ್‌ಸಾಲಿಡೇಟ್** ಮಾಡುತ್ತ ಹೋದರು. ಅರ್ಥಾತ್ ಘನೀಕರಿಸುತ್ತ ಹೋದರು. ಆದ್ದರಿಂದ ಅವರು ನಮಗೆ **'ಗಾಂಧೀಜಿ'**ಯಾಗಿ ಕಾಣುವುದು.

ಕೊನೆಗೂ ಈ ಲೇಖನವನ್ನು **'ಕನ್ನಡಿಯ ನೋಡಿಕೊ'** ಕವಿತೆಯ ಕೆಲವು ಸಾಲುಗಳ ಮೂಲಕ ಮುಗಿಸಲು ಬಯಸುವೆ: **'ಕನ್ನಡಿಯ ನೋಡಿಕೊ / ತಂತಾನೆ ನಗುವ / ತನ್ನ ಬಿಟ್ಟು ಇನ್ನಿಲ್ಲವೆಂದು ನಂಬುವ / ಪ್ರೇಮಿನ ಕನ್ನಡಿಯೇ ವಿಶ್ವ / ಆ ವಿಶ್ವಕೆ ನಾನೇ ದೊರೆ ಗುರು ದೇವರೆಂದು / ನಂಬುವ, ತನಗೆ ತಾನೇ ಪ್ರಮಾಣವೆಂದು ಸಾರುವಯ್ಯನ ಕಂಡೆಯಾ?"** ಈ ಸಾಲುಗಳು ಮತ್ತೆ ನನ್ನನ್ನು ಅವರ ನಾರ್ಸಿಸಸ್ ನಾಟಕದ ಓದಿಗೆ ಕರೆದೊಯ್ಯುತ್ತದೆ. ಇದರ ಜೊತೆಗೆ ಕಂಬಾರರ ಒಟ್ಟು ಓದು ನನ್ನೊಳಗೆ ಆಪ್ತವಾದ ಸಂವೇದನೆ ಬಿಟ್ಟು ಹೋಗಲು ಸಾಧ್ಯ. ಆಗ ನಿಜದ ನೆಲೆಗೆ ಕೊನೆಗೂ ನಿರಂತರತೆ ತಂದುಕೊಡುವುದು ಶ್ರೇಷ್ಠ ಸಾಹಿತ್ಯ ಮಾತ್ರ. ಅಂಥವರ ಗುಂಪಿನ ಪರಂಪರೆಯಲ್ಲಿ ಡಾ॥ ಚಂದ್ರಶೇಖರ ಕಂಬಾರರು ಸೇರಿಕೊಂಡರು ಎಂಬುದು; ಮತ್ತೊಮ್ಮೆ ಅವರ ಒಟ್ಟು ಸಾಹಿತ್ಯದ ಮರು ಓದಿಗೆ ಹೋದಂತೆ. ಆ ಮರು ಓದು ಸಾಹಿತ್ಯ ಪರಂಪರೆಗೆ ಸೇರಿದ್ದು, ಸೂಕ್ಷ್ಮತೆಗಳನ್ನು ವಿಸ್ತರಿಸುವಂಥದ್ದು. ಹಾಗೆಯೇ ಈ ಲೇಖನದ ಪ್ರಾರಂಭದಲ್ಲಿ ಕಂಬಾರರ ಡಿ.ಆರ್. ನಾಗರಾಜ್ ಕುರಿತ ಕವನದ ಕೆಲವು ಸಾಲುಗಳನ್ನು ದಾಖಲಿಸಿದ್ದೇನೆ.. ಅದು ನನಗೆ ತುಂಬ ಪ್ರಿಯವಾದ ಕವನ.

8/12/2011

●

ಶ್ರದ್ಧಾಂಜಲಿ:

ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರೊ. ದಾಸೇಗೌಡ ಅವರು ನಿಧನರಾದರು.
ಪ್ರೊ. ಗೌಡರು ಬದುಕಿನುದ್ದಕ್ಕೂ ನಾನಾ ಕ್ಷೇತ್ರಗಳಲ್ಲಿ ತುಂಬ
ಕ್ರಿಯಾಶೀಲರಾಗಿದ್ದವರು. ಇತ್ತೀಚಿನ ವರ್ಷಗಳಲ್ಲಿ
ಬೆಂಗಳೂರಿನ ಗಾಂಧಿಭವನಕ್ಕೆ ಮತ್ತು ಅಲ್ಲಿಯ ಚಟುವಟಿಕೆಗಳಿಗೆ ಹೊಸ
ಆಕಾರವನ್ನು ಕೊಟ್ಟು; ಎಲ್ಲರನ್ನು ಒಳಗೊಳ್ಳುವಂತೆ ಮಾಡಿದವರು. 1985ರಲ್ಲಿ
ಭಾರತ–ಚೀನಾ ಮೈತ್ರಿ ಕೂಟದಿಂದ ನಾವು ಚೀನಾಗೆ ನಿಯೋಗವಾದಾಗ
ಅದರ ನಾಯಕರಾಗಿ ಪ್ರೊ. ಗೌಡ ಅವರು ತುಂಬ ಚೆನ್ನಾಗಿ
ಮಾರ್ಗದರ್ಶನ ನೀಡಿದರು.
ಅವರ ನಿಧನಕ್ಕೆ 'ಶೂದ್ರ' ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

ಪ್ರೊ. ಕೆ.ನ. ಶಿವತೀರ್ಥನ್ ಅವರು ನಮ್ಮ ಸಾಹಿತ್ಯ ಸಂದರ್ಭದ ವರ್ಣರಂಜಿತ
ವ್ಯಕ್ತಿಯಾಗಿದ್ದರು. ಕವಿಯಾಗಿ, ಲೇಖಕರಾಗಿ, ಅಧ್ಯಾಪಕರಾಗಿ ತಮ್ಮ ಅಸ್ತಿತ್ವವನ್ನು
ಪ್ರಾಮಾಣಿಕವಾಗಿ ಕಂಡುಕೊಂಡವರು. ಎಷ್ಟೋ ವರ್ಷ ಲಂಕೇಶ್ ಅವರ
ಜೊತೆ ಇಷ್ಟೀಟಿನ ಗೆಳೆಯರಾಗಿದ್ದವರು. ಶಿವತೀರ್ಥನ್ ಅವರು ತುಂಟತನ
ಮತ್ತು ಹಾಸ್ಯವನ್ನು ಹದವಾಗಿ ಬೆರೆಸಿ ಲವಲವಿಕೆಯನ್ನು ತುಂಬುತ್ತಿದ್ದವರು.
ಇಂಥ ಗೆಳೆಯರು ಇತ್ತೀಚೆಗೆ ಮೈಸೂರಿನಲ್ಲಿ ನಿಧನರಾದರು.
'ಶೂದ್ರ' ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವುದು.

L/NP/KRNU/72, NO.M(2)PRB 211/73-74

SHUDRA

ಬಿಡಿ ಪ್ರತಿ : ರೂ. 50/

Pauline Borghese Bonaparte (Canova)

ಕೃಪೆ : ವ್ಯಾಟಿಕನ್ ಮ್ಯೂಸಿಯಂ, ರೋಮ್

"ಎಷ್ಟೋ ವರ್ಷಗಳಿಗೊಬ್ಬಳು ಕ್ಲಿಯೋಪಾತ್ರ
ಸೃಷ್ಟಿ ಅಪರೂಪಕ್ಕೆ ನಡೆಸುವ ಸಂಚು
ಅನಿಸುವುದು ನನಗೆ ಕೆಲವೊಮ್ಮೆ ಸೌಂದರ್ಯವೆಂದರೆ
ನಮ್ಮ ನಿರಾಶೆಗಳು ತಲಪುವ ತೀವ್ರತೆಯ ಅಂಚು"

– ಕೆ.ವಿ. ತಿರುಮಲೇಶ್

(ಮೂನ್ ಮೂನ್ ಸೇನ್ ಕವನದ ಸಾಲುಗಳು)

ಸಮಕಾಲೀನ ಬದುಕಿನ ಸಂವಾದಕ್ಕಾಗಿ
ನಾವು ನೀವು ಮಾತಾಡುವ ಮತ್ತು ಚರ್ಚಿಸುವ ಧ್ವನಿಗಾಗಿ

ವಾರ್ಷಿಕ ಚಂದಾ	: 200–00 ರೂ.	ಎರಡು ವರ್ಷಕ್ಕೆ	: 400–00 ರೂ.
ನಾಲ್ಕು ವರ್ಷಕ್ಕೆ	: 800–00 ರೂ.	ಆಜೀವ ಚಂದಾ	: 1,500–00 ರೂ.

ಪ್ರಕಾಶಕರು ಮತ್ತು ಸಂಪಾದಕರು : ಶೂದ್ರ ಶ್ರೀನಿವಾಸ್
'ಕಾವಿಮನೆ', ಅಣ್ಣಯ್ಯ ರೆಡ್ಡಿ ಬಡಾವಣೆ, ಜೆ.ಪಿ.ನಗರ 6ನೇ ಹಂತ
ಬೆಂಗಳೂರು – 560 078. ದೂರವಾಣಿ : 22451762